ಬುಧವಾರ, ಮಾರ್ಚ್ 23, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಭಿನಂದನೆ

ಮುಂಬೈನಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ 'ಭುವನ ಸುಂದರಿ' ಹರ್ನಾಜ್ ಕೌರ್ ಸಂಧು

MINISTER WHITE®

ಜಗವೇ ಮೆಚ್ಚಿದ ಬಂಗಾರದ ಮನುಷ್ಯ

ನಗುಮೊಗದ ರಾಜಕುಮಾರ ಸರಳತೆಯ ರಾಯಭಾರಿ
ಕೋಟ್ಯಾಂತರ ಅಭಿಮಾನಿಗಳ ಹೃದಯಸಾಮ್ರಾಟ
ನೀವು ಮಿನಿಸ್ಟರ್ ವೈಟ್ ಜೊತೆ ಕೈಜೋಡಿಸಿದ್ದು ನಮ್ಮ ಹೆಮ್ಮೆ
ನೀವು ಅಗಲಿಲ್ಲ ನಮ್ಮಲ್ಲಿ ಅಡಗಿದ್ದೀರಿ ನೀವು ನೀಡಿ ಹೋದ
ಸ್ಫೂರ್ತಿಯೊಂದಿಗೆ ಹೆಜ್ಜೆ ಹಾಕುತ್ತಿದ್ದೇವೆ ಎಂದೆಂದಿಗೂ ನಿಮ್ಮ
ನೆನಪಿನಲ್ಲೇ ಮಿನಿಸ್ಟರ್ ವೈಟ್

ಅಪ್ಪು ಅಜರಾಮರ

ಮಿನಿಸ್ಟರ್ ವೈಟ್®

ಪಂಚೆಗಳು & ಶರ್ಟ್‌ಗಳು

A QUALITY PRODUCT FROM

OTTO®

For Trade Enquiry: Sunil Naik +91 9008924004

Corporate Office: No. 30, 1st Floor, Bazullah Road, T. Nagar, Chennai 600 017
Phone: +91 44 4095 3333 **E-mail:** info@ministerwhite.com **Web:** www.ministerwhite.com

ಬಿಡಿಎ ಅಕ್ರಮ: ಭ್ರಷ್ಟಾಚಾರ ನಿಗ್ರಹ ದಳ ತನಿಖಾ ತಂಡದಿಂದ ದಾಳಿ– ದಾಖಲೆಗಳು ವಶಕ್ಕೆ

ದಲ್ಲಾಳಿಗಳ ಬಳಿ ಅಪಾರ ಆಸ್ತಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರಿಗಳಿಗೆ ಲಂಚದ ಆಮಿಷವೊಡ್ಡಿ ಮತ್ತು ಪ್ರಭಾವ ಬೀರಿ ಸರ್ಕಾರಿ ಕೆಲಸಗಳಲ್ಲಿ ಹಸ್ತಕ್ಷೇಪ ನಡೆಸುತ್ತಿರುವ ಆರೋಪದ ಮೇಲೆ ಒಂಬತ್ತು ಮಂದಿ ಖಾಸಗಿ ಮಧ್ಯವರ್ತಿಗಳಿಗೆ ಸಂಬಂಧಿಸಿದ 11 ಸ್ಥಳಗಳ ಮೇಲೆ ಮಂಗಳವಾರ ದಾಳಿಮಾಡಿ ಶೋಧ ನಡೆಸಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ಅಪಾರ ಪ್ರಮಾಣದ ಆಸ್ತಿಯನ್ನು ಪತ್ತೆಮಾಡಿದೆ.

ಬಿಡಿಎ ಅಧಿಕಾರಿಗಳು ಮತ್ತು ಸಿಬ್ಬಂದಿ ಜತೆ ನಿಕಟ ನಂಟು ಹೊಂದಿರುವ ಚಾಮರಾಜಪೇಟೆಯ ಬಿ.ಎನ್. ರಘು, ಆರ್.ಟಿ. ನಗರದ ಮನೋರಾಯನಪಾಳ್ಯದ ಮೋಹನ್, ದೊಮ್ಮಲೂರಿನ ಮನೋಜ್, ಮಲ್ಲತ್ತಹಳ್ಳಿಯ ಕೆನಗುಂಟೆ ಮುನಿರತ್ನ ಅಲಿಯಾಸ್ ರತ್ನವೇಲು, ರಾಜರಾಜೇಶ್ವರಿನಗರದ ತೇಜು ಅಲಿಯಾಸ್ ತೇಜಸ್ವಿ, ಮುದ್ದಿನಪಾಳ್ಯದ ಕೆ.ಜಿ. ವೃತ್ತದ ಅಶ್ವತ್ಥ್, ಚಾಮುಂಡೇಶ್ವರಿ ನಗರ ಬಿಡಿಎ ಬಡಾವಣೆಯ ರಾಮ ಮತ್ತು ಲಕ್ಷ್ಮಣ ಹಾಗೂ ಮುದ್ದಿನಪಾಳ್ಯದ ಚಿಕ್ಕಹನುಮಯ್ಯ ಅವರ ಮನೆ, ಕಚೇರಿಗಳಲ್ಲಿ ಇಡೀ ದಿನ ಶೋಧ ನಡೆಸಲಾಗಿದೆ.

2021ರ ನವೆಂಬರ್ 19ರಿಂದ 23ರವರೆಗೆ ಬಿಡಿಎ ಕಚೇರಿಗಳಲ್ಲಿ ಶೋಧ ನಡೆಸಿದ್ದ ಎಸಿಬಿ ಅಧಿಕಾರಿಗಳು, ನೂರಾರು ಕೋಟಿ ರೂಪಾಯಿ ಮೊತ್ತದ ಅಕ್ರಮಗಳು ನಡೆದಿರುವುದನ್ನು ಪತ್ತೆಮಾಡಿದ್ದರು. ಈ ಸಂಬಂಧ ಬಿಡಿಎ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಹಲವು ಎಫ್‌ಐಆರ್‌ಗಳನ್ನು ದಾಖಲಿಸಿದ್ದರು. ಈ ಪ್ರಕರಣಗಳ ತನಿಖೆಯ ಭಾಗವಾಗಿ ಮಧ್ಯವರ್ತಿಗಳ ಮನೆ, ಕಚೇರಿಗಳ ಮೇಲೆ ದಾಳಿ ಮಾಡಲಾಗಿದೆ.

ಭಾರಿ ಪ್ರಮಾಣದ ಆಸ್ತಿ ಪತ್ತೆ: ‘ಈ ಖಾಸಗಿ ವ್ಯಕ್ತಿಗಳ ಬಳಿ ಭಾರಿ ಪ್ರಮಾಣದ ಸ್ಥಿರಾಸ್ತಿ, ಚಿನ್ನಾಭರಣ, ಐಷಾರಾಮಿ ಕಾರುಗಳು, ಬ್ಯಾಂಕ್ ಠೇವಣಿ, ಹೂಡಿಕೆ ಪತ್ತೆಯಾಗಿದೆ. ಆರೋಪಿಗಳು ಸರ್ಕಾರಿ ಕೆಲಸಗಳಲ್ಲಿ ಹಸ್ತಕ್ಷೇಪ ಮಾಡಿ, ಭ್ರಷ್ಟಾಚಾರ ನಡೆಸಿ ಅಕ್ರಮವಾಗಿ ಸಂಪತ್ತು ಗಳಿಸಿರುವುದು ಶೋಧನೆಯಲ್ಲಿ ಪತ್ತೆಯಾಗಿದೆ’ ಎಂದು ಎಸಿಬಿ ತಿಳಿಸಿದೆ.



ಬೆಂಗಳೂರಿನಲ್ಲಿ ಎಸಿಬಿ ದಾಳಿಗೆ ಒಳಗಾದ ಬಿಡಿಎ ಮಧ್ಯವರ್ತಿ ಮುನಿರತ್ನ ಅವರ ಐಷಾರಾಮಿ ಮನೆಯ ಒಳಾಂಗಣ

4.9 ಕೆ.ಜಿ. ಚಿನ್ನ ವಶ

ಆರ್.ಟಿ. ನಗರದ ಮೋಹನ್ ಮನೆಯಲ್ಲಿ 4.96 ಕೆ.ಜಿ. ಚಿನ್ನ, 15.02 ಕೆ.ಜಿ. ಬೆಳ್ಳಿ ಹಾಗೂ 61.9 ಗ್ರಾಂ. ತೂಕದ ವಜ್ರದ ಆಭರಣಗಳನ್ನು ಎಸಿಬಿ ವಶಪಡಿಸಿಕೊಂಡಿದೆ.

ದೊಮ್ಮಲೂರಿನ ಮನೋಜ್ ಮನೆಯಲ್ಲಿ 20ಕ್ಕೂ ಹೆಚ್ಚು ದುಬಾರಿ ವಾಚ್‌ಗಳು, ವಿವಿಧ ಬ್ರ್ಯಾಂಡ್‌ಗಳ ಹತ್ತಾರು ದುಬಾರಿ ಕನ್ನಡಕಗಳ ಸಂಗ್ರಹ ಪತ್ತೆಯಾಗಿದೆ. ಕೆನಗುಂಟೆಯ ಮುನಿರತ್ನ ಅಲಿಯಾಸ್ ರತ್ನವೇಲು ಮನೆಯಲ್ಲಿ ಐಷಾರಾಮಿ ಈಜುಕೊಳ, ಜಿಮ್, ಹೋಂ ಥಿಯೇಟರ್ ಇರುವುದನ್ನು ತನಿಖಾ ತಂಡ ಪತ್ತೆಮಾಡಿದೆ.

ಚಾಮರಾಜಪೇಟೆಯಲ್ಲಿರುವ ಬಿಡಿಎ ಮಧ್ಯವರ್ತಿ ಬಿ.ಎನ್. ರಘು ಅವರ ಮನೆ –ಪ್ರಜಾವಾಣಿ ಚಿತ್ರ

ಕೆಲವರ ಬಳಿ ಹತ್ತಾರು ನಿವೇಶನಗಳು ಇವೆ. ಕೆಲವರು ಕೋಟ್ಯಂತರ ರೂಪಾಯಿ ವೆಚ್ಚಮಾಡಿ ಐಷಾರಾಮಿ ಮನೆಗಳನ್ನು ನಿರ್ಮಿಸಿದ್ದಾರೆ. ಕೆಲವು ಮನೆಗಳಲ್ಲಿ ಐಷಾರಾಮಿ ಈಜುಕೊಳ, ಜಿಮ್, ಹೋಂ ಥಿಯೇಟರ್, ಬಾರ್ ಕೊಠಡಿಗಳು ಇವೆ. ಆರೋಪಿಗಳಲ್ಲಿ ಕೆಲವರು ರಿಯಲ್ ಎಸ್ಟೇಟ್ ಚಟುವಟಿಕೆಯಲ್ಲಿ ಬೃಹತ್ ಪ್ರಮಾಣದ ಹೂಡಿಕೆ ಮಾಡಿರುವ ದಾಖಲೆಗಳೂ ಸಿಕ್ಕಿವೆ ಎಂದು ಮೂಲಗಳು ಹೇಳಿವೆ.

ದಾಖಲೆ ವಶ: ಆರೋಪಿಗಳು ಬಿಡಿಎ ನಿವೇಶನ ಹಂಚಿಕೆ, ಬಿಡಿಎ ಬಡಾವಣೆಗಳಿಗೆ ಸ್ವಾಧೀನಪಡಿಸಿಕೊಂಡ ಜಮೀನುಗಳ ಮಾಲೀಕರಿಗೆ ಪರಿಹಾರ ವಿತರಣೆ, ಸ್ವಾಧೀನಕ್ಕೆ ಗುರುತಿಸಿದ ಜಮೀನುಗಳನ್ನು ಡಿನೋಟಿಫೈ ಮಾಡುವುದು, ಬದಲಿ ನಿವೇಶನ ಹಂಚಿಕೆ, ಕಟ್ಟಡ ನಕ್ಷೆ ಅನುಮೋದನೆ ಸೇರಿದಂತೆ ಸರ್ಕಾರಿ ಕೆಲಸಗಳಲ್ಲಿ ಹಸ್ತಕ್ಷೇಪ ನಡೆಸಿರುವುದನ್ನು ತನಿಖಾ ತಂಡ ಪತ್ತೆಮಾಡಿದೆ.

ಕೆಲವರು ಬಿಡಿಎ ಕಚೇರಿಯ ಆಸುಪಾಸಿನಲ್ಲೇ ಕಚೇರಿಗಳನ್ನೂ ಹೊಂದಿದ್ದರು. ಅಲ್ಲಿಯೂ ಶೋಧ ನಡೆಸಲಾಗಿದೆ. ಬಿಡಿಎಗೆ ಸಂಬಂಧಿಸಿದ ಕಡತಗಳನ್ನು ಈ ಕಚೇರಿಗಳಿಂದ ವಶಕ್ಕೆ ಪಡೆಯಲಾಗಿದೆ.

ಎಸಿಬಿಯ ಕೇಂದ್ರ ಕಚೇರಿ ಎಸ್‌ಪಿ ಉಮಾ ಪ್ರಶಾಂತ್ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದರು. ಬೆಂಗಳೂರು ನಗರ ವಿಭಾಗದ ಡಿವೈಎಸ್‌ಪಿಗಳು, ಇನ್‌ಸ್ಪೆಕ್ಟರ್‌ಗಳು ಸೇರಿದಂತೆ 100ಕ್ಕೂ ಹೆಚ್ಚು ಅಧಿಕಾರಿಗಳು, ಸಿಬ್ಬಂದಿ ಶೋಧದಲ್ಲಿ ಪಾಲ್ಗೊಂಡಿದ್ದರು.

ಮನೋಜ್ ಅವರ ನಿವಾಸದಲ್ಲಿ ಬೆಲೆ ಬಾಳುವ ವಾಚ್‌ಗಳ ಸಂಗ್ರಹ

ಬಿಡಿಎ ದಲ್ಲಾಳಿ ಆರ್.ಟಿ. ನಗರದ ನಿವಾಸಿ ಮೋಹನ್ ಮನೆಯಲ್ಲಿ ಪತ್ತೆಯಾಗಿರುವ ಚಿನ್ನ, ಬೆಳ್ಳಿ ಮತ್ತು ವಜ್ರದ ಆಭರಣಗಳು

ಅಶ್ವತ್ಥ್ ಅವರ ನಿವಾಸದಲ್ಲಿ ಪತ್ತೆಯಾಗಿರುವ ಐಷಾರಾಮಿ ಕಾರುಗಳು

ಮನೋಜ್ ಅವರ ನಿವಾಸದಲ್ಲಿ ದುಬಾರಿ ಬೆಲೆಯ ಕನ್ನಡಕಗಳ ಸಂಗ್ರಹ

ಸುದ್ದಿ 2 ನಿಮಿಷ

ಐಟಿ ದಾಳಿ: ₹3,000 ಕೋಟಿ ಲೆಕ್ಕರಹಿತ ನಗದು ವಹಿವಾಟು ಪತ್ತೆ

ನವದೆಹಲಿ (ಪಿಟಿಐ): ರಿಯಲ್ ಎಸ್ಟೇಟ್ ಸಂಸ್ಥೆಯಾದ ಓಮೆಕ್ಸ್ ಕಂಪನಿಯು ಗ್ರಾಹಕರಿಂದ ₹3,000 ಕೋಟಿಗೂ ಹೆಚ್ಚಿನ ಮೊತ್ತದ ಲೆಕ್ಕರಹಿತ ನಗದು ವಹಿವಾಟಿನಲ್ಲಿ ತೊಡಗಿದೆ ಎಂಬುದಕ್ಕೆ ಆದಾಯ ತೆರಿಗೆ ಇಲಾಖೆ ಸಾಕ್ಷ್ಯ ಸಂಗ್ರಹಿಸಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಉತ್ತರ ಭಾರತದಲ್ಲಿ ಹೆಚ್ಚಾಗಿ ವ್ಯವಹಾರ ನಡೆಸುತ್ತಿರುವ ಓಮೆಕ್ಸ್ ಕಂಪನಿಯ ದೆಹಲಿ, ಚಂಡೀಗಡ, ಲೂಧಿಯಾನ, ಲಖನೌ ಮತ್ತು ಇಂದೋರ್‌ನಲ್ಲಿರುವ 45ಕ್ಕೂ ಹೆಚ್ಚು ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಇದೇ ಮಾರ್ಚ್ 14 ರಂದು ದಾಳಿ ನಡೆಸಿದಾಗ ಲೆಕ್ಕರಹಿತ ವಹಿವಾಟು ನಡೆಸಿರುವುದು ಪತ್ತೆಯಾಗಿದೆ ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಹೇಳಿದೆ.

‘ದಾಳಿ ಸಂದರ್ಭದಲ್ಲಿ ದಾಖಲೆಗಳಿಲ್ಲದ, ಲೆಕ್ಕರಹಿತ ₹25 ಕೋಟಿ ನಗದು ಮತ್ತು ₹ 5 ಕೋಟಿ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ. 11 ಲಾಕರ್‌ಗಳನ್ನು ತಡೆಹಿಡಿಯಲಾಗಿದೆ. ಹಲವು ದಾಖಲೆಗಳನ್ನು ವಶಪಡಿಸಿ ಕೊಳ್ಳಲಾಗಿದ್ದು, 10 ವರ್ಷಗಳಿಂದ ಗ್ರಾಹಕರಿಂದ ನಗದು ಪಡೆದಿರುವ ಬಗ್ಗೆ ರಶೀದಿಗಳನ್ನು ಸಹ ವಶಕ್ಕೆ ಪಡೆದಿದ್ದು, ಹಲವು ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ. ₹ 3,000 ಕೋಟಿಗೂ ಹೆಚ್ಚಿನ ಮೊತ್ತದ ಲೆಕ್ಕರಹಿತ ನಗದು ವಹಿವಾಟಿನಲ್ಲಿ ತೊಡಗಿರುವುದು ಪತ್ತೆಯಾಗಿದೆ’ ಎಂದು ಸಿಬಿಡಿಟಿ ಹೊರಡಿಸಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಉದ್ಧವ್ ಠಾಕ್ರೆ ಬಾಮೈದನಿಗೆ ಸೇರಿದ ಆಸ್ತಿ ಜಪ್ತಿ – ಇ.ಡಿ

ಮುಂಬೈ: ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಬಾಮೈದುನ ಶ್ರೀಧರ್ ಪತಂಕರ್ ಅವರ ಉದ್ಯಮಕ್ಕೆ ಸಂಬಂಧಿಸಿದ ಆಸ್ತಿಯನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಶ್ರೀಧರ ಪತಂಕರ್ ಅವರು ಉದ್ಧವ್ ಠಾಕ್ರೆ ಅವರ ಪತ್ನಿ ರಶ್ಮಿ ಅವರ ತಮ್ಮ. ಈ ಮೂಲಕ ಜಾರಿನಿರ್ದೇಶನಾಲಯವು ಮುಖ್ಯಮಂತ್ರಿ ಅವರಿಗೆ ಇರಿಸು ಮುರಿಸು ಉಂಟು ಮಾಡಲು ಯತ್ನಿಸುತ್ತಿದೆ ಎಂದು ಈ ಬೆಳವಣಿಗೆಯನ್ನು ವಿಶ್ಲೇಷಿಸಲಾಗಿದೆ.

‘ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳಾದ ಎನ್‌ಐಎ, ಸಿಬಿಐ,ಇಡಿ ಮತ್ತು ಆದಾಯ ತೆರಿಗೆ ಇಲಾಖೆಯ ಮೂಲಕ ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲು ಯತ್ನಿಸುತ್ತಿದೆ. ಪೂರ್ಣ ಮಾಹಿತಿ ಪಡೆದ ಬಳಿಕವೇ ಈ ಬಗ್ಗೆ ಪ್ರತಿಕ್ರಿಯಿಸುತ್ತೇನೆ’ ಎಂದು ಠಾಕ್ರೆ ಪುತ್ರ, ಸಚಿವ ಆದಿತ್ಯ ಹೇಳಿದ್ದಾರೆ.

ಇಡಿ ಅಧಿಕಾರಿಗಳು ಈ ಹಿಂದೆ ಪುಷ್ಪಕ್ ಗ್ರೂಪ್‌ನ ಭಾಗವಾದ ಪುಷ್ಪಕ್ ಬುಲಿಯನ್ ಸಂಸ್ಥೆಗೆ ಸೇರಿದ್ದ 6.45 ಕೋಟಿ ಮೌಲ್ಯದ ಆಸ್ತಿ ಜಪ್ತಿ ಮಾಡಿತ್ತು. ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ ತನಿಖೆ ನಡೆಸುತ್ತಿದೆ.

ರಿಪ್ಪನ್‌ಪೇಟೆ ಸಮೀಪದ ಹೊಂಬುಜ ಜೈನ ಮಠದಲ್ಲಿ ಭಗವಾನ್ ಪಾರ್ಶ್ವನಾಥ ಸ್ವಾಮಿ ಹಾಗೂ ಮಹಾಮಾತೆ ಪದ್ಮಾವತಿ ಅಮ್ಮನವರ ಮಹಾ ರಥೋತ್ಸವ ಕಾರ್ಯಕ್ರಮಕ್ಕೆ ಮಠದ ಪೀಠಾಧಿಕಾರಿ ಡಾ.ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಚಾಲನೆ ನೀಡಿದರು

ಹೊಂಬುಜ ವಾರ್ಷಿಕ ಜಾತ್ರಾ ಮಹೋತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ರಿಪ್ಪನ್‌ಪೇಟೆ: ಸಮೀಪದ ಹೊಂಬುಜ ಜೈನ ಮಠದಲ್ಲಿ ಭಗವಾನ್ ಪಾರ್ಶ್ವನಾಥ ಸ್ವಾಮಿ ಹಾಗೂ ಮಹಾಮಾತೆ ಪದ್ಮಾವತಿ ಅಮ್ಮನವರ ಮಹಾ ರಥೋತ್ಸವ ಕಾರ್ಯಕ್ರಮಕ್ಕೆ ಮಠದ ಪೀಠಾಧಿಕಾರಿ ಡಾ.ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ವಿಧ್ಯುಕ್ತವಾಗಿ ಧ್ವಜಾರೋಹಣದೊಂದಿಗೆ ಚಾಲನೆ ನೀಡಿದರು. ಸಂಜೆ ನಾಗವಾಹನ ಉತ್ಸವ ಜರುಗಿತು.

ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಬಂದು ಪೂಜೆ ಹಾಗೂ ಉತ್ಸವದಲ್ಲಿ ಪಾಲ್ಗೊಂಡಿದ್ದರು.

ಮಠದ ಪೀಠಾಧಿಕಾರಿಗಳ ಸಾನ್ನಿಧ್ಯದಲ್ಲಿ ಮಾರ್ಚ್ 23ರಂದು ಸಿಂಹವಾಹನೋತ್ಸವ, 24ರಂದು 6ಕ್ಕೆ ಧಾರ್ಮಿಕ ಸಭೆ ‘ಸಿದ್ಧಾಂತಕೀರ್ತಿ’ ಪ್ರಶಸ್ತಿ ಪ್ರದಾನ’ ಸಮಾರಂಭ ಹಾಗೂ ರಾತ್ರಿ 8ಕ್ಕೆ ಬೆಳ್ಳಿ ಪುಷ್ಪ ರಥೋತ್ಸವ ನಡೆಯಲಿದೆ. 25ರಂದು ಮೂಲಾ ನಕ್ಷತ್ರದಲ್ಲಿ ಮಹಾರಥೋತ್ಸವ, 26ರಂದು ಭಗವಾನ್ ಪಾರ್ಶ್ವನಾಥ ಸ್ವಾಮಿಗೆ 108 ಕಲಶಗಳ ಮಹಾಭಿಷೇಕ, ಸಂಘ ಪೂಜೆ ನಡೆಯಲಿದೆ. 27ರಂದು ಕುಂಕುಮೋತ್ಸವ, ಧ್ವಜಾವರೋಹಣದೊಂದಿಗೆ ಜಾತ್ರಾ ಮಹೋತ್ಸವ ಸಂಪನ್ನಗೊಳ್ಳಲಿದೆ.

ಟಿಎಂಸಿ ಸ್ಥಳೀಯ ಮುಖಂಡನ ಹತ್ಯೆಯ ಬಳಿಕ ನಡೆದ ಘಟನೆ; ಮನೆಗಳು ಬೆಂಕಿಗಾಹುತಿ

ಪಶ್ಚಿಮ ಬಂಗಾಳ: ಎಂಟು ಜನರ ಸಜೀವ ದಹನ

ರಾಮ್‌ಪುರಹಾಟ್ / ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಬಿರ್‌ಭೂಮ್ ಜಿಲ್ಲೆಯ ರಾಮ್‌ಪುರಹಾಟ್ ಎಂಬಲ್ಲಿ ಮಂಗಳವಾರ ನಸುಕಿನಲ್ಲಿ ಮನೆಗಳಿಗೆ ಬೆಂಕಿಹತ್ತಿ ಇಬ್ಬರು ಮಕ್ಕಳು ಸೇರಿದಂತೆ ಎಂಟು ಜನರು ಜೀವಂತವಾಗಿ ಸುಟ್ಟುಹೋಗಿದ್ದಾರೆ. ಘಟನೆ ಸಂಬಂಧ 11 ಜನರನ್ನು ಬಂಧಿಸಲಾಗಿದೆ.

ಈ ಘಟನೆಗೆ ಕೆಲವೇ ಗಂಟೆಗಳ ಮುನ್ನ, ಸ್ಥಳೀಯ ಪಂಚಾಯಿತಿ ಮುಖಂಡನ ಹತ್ಯೆಯಾಗಿತ್ತು ಎಂದು ಡಿಜಿಪಿ ಮನೋಜ್ ಮಾಳವೀಯ ಅವರು ಹೇಳಿದ್ದಾರೆ. ಪಂಚಾಯಿತಿ ಮುಖಂಡ ಟಿಎಂಸಿ ಪಕ್ಷದವರು. ಟಿಎಂಸಿಯ ಎರಡು ಗುಂಪುಗಳ ನಡುವಣ ದ್ವೇಷವೇ ಘಟನೆಗೆ ಕಾರಣ ಎನ್ನಲಾಗುತ್ತಿದೆ. ಆದರೆ, ಇದನ್ನು ಪೊಲೀಸರು ದೃಢಪಡಿಸಿಲ್ಲ.

ಸಜೀವ ದಹನ ಪ್ರಕರಣವು ರಾಜಕೀಯ ವಾಕ್ಸಮರಕ್ಕೂ ಕಾರಣವಾಗಿದೆ. ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕು ಎಂದು ಬಿಜೆಪಿ ಆಗ್ರಹಿಸಿದೆ. ಇದು ಪಕ್ಷದ ವರ್ಚಸ್ಸಿಗೆ ಮಸಿ ಬಳಿಯುವ ಯತ್ನ ಎಂದು ಟಿಎಂಸಿ ಹೇಳಿದೆ.

ಘಟನೆಯು ಅತ್ಯಂತ ಘೋರ ಎಂದು ಪಶ್ಚಿಮ ಬಂಗಾಳ ರಾಜ್ಯಪಾಲ ಜಗದೀಪ್ ಧನಕರ್ ಹೇಳಿದ್ದಾರೆ. ರಾಜ್ಯವು ಹಿಂಸಾಚಾರ ಮತ್ತು ಕಾನೂನುರಹಿತತೆ ಸಂಸ್ಕೃತಿಯ ಹಿಡಿತದಲ್ಲಿದೆ ಎಂದಿದ್ದಾರೆ.

ಪಶ್ಚಿಮ ಬಂಗಾಳದ ರಾಮ್‌ಪುರಹಾಟ್ ಸಮೀಪ ಬೆಂಕಿಯಿಂದ ಸುಟ್ಟು ಕರಕಲಾಗಿರುವ ಮನೆಗಳು –ಪಿಟಿಐ ಚಿತ್ರ

ಅನಪೇಕ್ಷಿತ ಹೇಳಿಕೆಗಳನ್ನು ನೀಡಬೇಡಿ ಎಂದು ರಾಜ್ಯಪಾಲರನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೇಳಿಕೊಂಡಿದ್ದಾರೆ. ರಾಜ್ಯ ಸರ್ಕಾರವನ್ನು ಟೀಕಿಸಲು ಇತರ ರಾಜಕೀಯ ಪಕ್ಷಗಳಿಗೆ ಬೆಂಬಲ ನೀಡುವಂತಹ ರಾಜಕೀಯ ಧಾಟಿಯು ರಾಜ್ಯಪಾಲರ ಮಾತಿನಲ್ಲಿ ಇದೆ ಎಂದಿದ್ದಾರೆ.

ಬೆಂಕಿಗೆ ಆಹುತಿಯಾದ ಮನೆಗಳಿಂದ ಸುಟ್ಟು ಕರಕಲಾಗದ ಏಳು ಶವಗಳನ್ನು ಹೊರತೆಗೆಯಲಾಗಿದ್ದು, ಗಾಯಗೊಂಡ ಮತ್ತೊಬ್ಬ ವ್ಯಕ್ತಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ. ಘಟನೆಯಲ್ಲಿ ಮತ್ತಿಬ್ಬರು ಗಾಯಗೊಂಡಿದ್ದಾರೆ.

‘ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ಗ್ರಾಮದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ. ಮನೆಗಳಿಗೆ ಹೇಗೆ ಬೆಂಕಿ ಬಿತ್ತು ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಪಂಚಾಯಿತಿ ಮುಖಂಡನ ಹತ್ಯೆಗೂ, ಇದಕ್ಕೂ ಸಂಬಂಧವಿದೆಯೇ ಎಂಬ ಆಯಾಮದಲ್ಲಿ ತನಿಖೆ ನಡೆಯುತ್ತಿದೆ. ವೈಯಕ್ತಿಕ ದ್ವೇಷದಿಂದ ಕೊಲೆ ನಡೆದಿರಬಹುದು’ ಎಂದು ಅವರು ಹೇಳಿದ್ದಾರೆ.

> ರಾಜ್ಯದ ಕಾನೂನು ಸುವ್ಯವಸ್ಥೆ ಮೇಲೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಯಾವುದೇ ನಿಯಂತ್ರಣ ಇಲ್ಲ ಎಂಬುದನ್ನು ಈ ಘಟನೆ ಸಾಬೀತುಪಡಿಸಿದೆ
>
> **ಜೆ.ಪಿ. ನಡ್ಡಾ,** ಬಿಜೆಪಿ ಅಧ್ಯಕ್ಷ

> ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಪಕ್ಷದ ಗೂಂಡಾಗಳಿಂದ ರಾಜ್ಯದ ಹಲವು ಜನರು ನಿರ್ದಯವಾಗಿ ಹತ್ಯೆಗೀಡಾಗುತ್ತಿರುವುದು ಖಂಡನೀಯ
>
> **ಮೊಹಮ್ಮದ್ ಸಲೀಂ**
> ಸಿಪಿಎಂ ಕಾರ್ಯದರ್ಶಿ

ಸೋಮವಾರ ರಾತ್ರಿ 8.30ರ ವೇಳೆಗೆ ಬರ್ಶಾಲ್ ಗ್ರಾಮದ ಪಂಚಾಯಿತಿ ಉಪಾಧ್ಯಕ್ಷ ಭದು ಶೇಕ್ ಎಂಬುವರ ಕೊಲೆಯಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ಈ ಹತ್ಯೆ ನಡೆದ ಸ್ವಲ್ಪ ಸಮಯದಲ್ಲೇ ರಾಮ್‌ಪುರಹಾಟ್ ಪಟ್ಟಣದ ಹೊರವಲಯದ ಬೋಗತಿಯು ಗ್ರಾಮದ ಎಂಟು ಮನೆಗಳಿಗೆ ಬೆಂಕಿ ಬಿದ್ದಿತ್ತು. ಕೊಲೆಗೆ ಪ್ರತೀಕಾರವಾಗಿ ಮನೆಗಳಿಗೆ ಬೆಂಕಿಹಚ್ಚಲಾಗಿದೆ ಎಂದು ಕೆಲವರು ಹೇಳಿದ್ದಾರೆ.

ರಾಮ್‌ಪುರಹಾಟ್ ಪೊಲೀಸ್ ಠಾಣೆಯ ಉಸ್ತುವಾರಿ ಪೊಲೀಸ್ ಅಧಿಕಾರಿಯನ್ನು ಅಮಾನತು ಮಾಡಲಾಗಿದೆ. ಸಿಐಡಿ ಎಡಿಜಿ ಗ್ಯಾನವಂತ್ ಸಿಂಗ್ ಅವರ ನೇತೃತ್ವದ ತನಿಖಾ ತಂಡವನ್ನು ಸರ್ಕಾರ ರಚಿಸಿದೆ. ಘಟನೆಯ ಪರಿಶೀಲನೆ ನಡೆಸಲು ಮೂವರು ಶಾಸಕರ ಸಮಿತಿಯೊಂದನ್ನು ಟಿಎಂಸಿ ಸ್ಥಳಕ್ಕೆ ಕಳುಹಿಸಿದೆ.

ಈ ಘಟನೆಯು ರಾಜಕೀಯ ಪಕ್ಷಗಳ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ. ಘಟನೆಯ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ಅಪರಾಧಿಗಳಿಗೆ ಪ್ರೋತ್ಸಾಹ ನೀಡುತ್ತಿರುವ, ರಾಜ್ಯದ ಜನರ ರಕ್ಷಣೆಯಲ್ಲಿ ವಿಫಲವಾಗಿರುವ ಮಮತಾ ಬ್ಯಾನರ್ಜಿ ಅವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಒತ್ತಾಯಿಸಿದ್ದಾರೆ.

ಪ್ರತಿಪಕ್ಷಗಳ ಆರೋಪವನ್ನು ತಳ್ಳಿಹಾಕಿರುವ ಟಿಎಂಸಿ ಪ್ರಧಾನ ಕಾರ್ಯದರ್ಶಿ ಕುನಾಲ್ ಘೋಷ್, ‘ಮನೆಗಳಿಗೆ ಬೆಂಕಿ ಹತ್ತಿದ ಘಟನೆ ಆಕಸ್ಮಿಕ. ಆಡಳಿತವು ಪರಿಸ್ಥಿತಿಯನ್ನು ನಿಭಾಯಿಸುತ್ತಿದೆ’ ಎಂದಿದ್ದಾರೆ.

ಬಿಜೆಪಿ ಸದಸ್ಯರಿಂದ ಸಭಾತ್ಯಾಗ

ಎಂಟು ಜನರ ಸಜೀವ ದಹನ ಘಟನೆಯ ಕುರಿತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸದನದಲ್ಲಿ ಹೇಳಿಕೆ ನೀಡಬೇಕು ಎಂದು ಆಗ್ರಹಿಸಿ ಬಿಜೆಪಿ ಸದಸ್ಯರು ಮಂಗಳವಾರ ಸಭಾತ್ಯಾಗ ಮಾಡಿದರು.

ಬಿಜೆಪಿ ಶಾಸಕ ಶಂಕರ್ ಘೋಷ್ ಅವರು ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಮುಂದಾದರು. ಆದರೆ ಪಟ್ಟಿಯಲ್ಲಿ ಈ ವಿಷಯ ಇಲ್ಲ ಎಂಬ ಕಾರಣ ನೀಡಿ ಸ್ಪೀಕರ್ ಅವರು ಮಾತನಾಡಲು ಅವಕಾಶ ನೀಡಲಿಲ್ಲ. ಧಿಕ್ಕಾರ ಕೂಗುತ್ತಾ 40 ಶಾಸಕರು ಸದನದಿಂದ ಹೊರನಡೆದರು.

ಕಳೆದ ವರ್ಷ ರಾಜ್ಯ ವಿಧಾನಸಭಾ ಚುನಾವಣೆ ಘೋಷಣೆಯಾದ ನಂತರ ರಾಜಕೀಯ ಹತ್ಯೆಗಳು ನಡೆಯುತ್ತಿವೆ ಎಂದು ಘೋಷ್ ಅವರು ಸದನದ ಹೊರಗೆ ಹೇಳಿದರು. ಆಡಳಿತ ಪಕ್ಷದ ಸದಸ್ಯರ ಹತ್ಯೆಯಾದಾಗಲೂ ಮುಖ್ಯಮಂತ್ರಿ ಹಾಗೂ ಪೊಲೀಸ್ ಇಲಾಖೆ ಮೌನ ವಹಿಸಿದ್ದು ಏಕೆ ಎಂದು ಅವರು ಪ್ರಶ್ನಿಸಿದ್ದಾರೆ.

ಮುಸ್ಲಿಂ ಮಹಿಳೆಯರ ಕುರಿತು ವ್ಯಂಗ್ಯವಾಡಿದ್ದ ವಾಗ್ಮಿ

ಹಿರೇಮಗಳೂರು ಕಣ್ಣನ್ ಹೇಳಿಕೆಗೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಹಿರೇಮಗಳೂರು ಕಣ್ಣನ್

ಮೈಸೂರು: ರಂಗಾಯಣದಲ್ಲಿ ಇತ್ತೀಚೆಗೆ ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಸಮಾರೋಪ ಕಾರ್ಯಕ್ರಮದಲ್ಲಿ ವಾಗ್ಮಿ ಹಿರೇಮಗಳೂರು ಕಣ್ಣನ್ ಅವರು, ಹಿಜಾಬ್ ನಿಷೇಧವನ್ನ ನೆಪವಾಗಿಸಿಕೊಂಡು ಮುಸ್ಲಿಂ ಮಹಿಳೆಯರ ಬಗ್ಗೆ ಆಡಿದ್ದ ಮಾತುಗಳು ಫೇಸ್‌ಬುಕ್‌ನಲ್ಲಿ ಚರ್ಚೆಗೆ ಗ್ರಾಸವಾಗಿದ್ದು, ಲೇಖಕರು, ವಿಮರ್ಶಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬಾರಿಯ ರಂಗೋತ್ಸವದ ಎಲ್ಲ ಕಾರ್ಯಕ್ರಮಗಳು ‘ತಾಯಿ’ ಪರಿಕಲ್ಪನೆಯಡಿ ನಡೆದಿತ್ತು. ‘ತಾಯಿ ವಿಷಯವನ್ನಾಧರಿಸಿ ರೂಪಿಸಲಾದ ರಂಗೋತ್ಸವದಲ್ಲಿ ಹೆಣ್ಣಿನ ಬಗ್ಗೆ ಈ ರೀತಿಯ ಮಾತುಗಳನ್ನಾಡಿದ್ದು ಹೇಗೆ’ ಎಂದು ಹಲವರು ಪ್ರಶ್ನಿಸಿದ್ದಾರೆ.

‘....ಎಂದು ತುಚ್ಛವಾಗಿ ಮಾತನಾಡುವ ಈ ನೀಚ ತಾನು ಪೂಜೆ ಮಾಡುವ ಕೋದಂಡರಾಮ ದೇವಾಲಯದಲ್ಲಿ ರಾಮನ ಜೊತೆ ನಿಂತಿರುವ ಸೀತೆಯನ್ನು ಯಾವ ದೃಷ್ಟಿಯಿಂದ ನೋಡುತ್ತಿರಬಹುದು?’ ಎಂದು ಶಶಿಧರ ಹೆಮ್ಮಾಡಿ ಪ್ರಶ್ನಿಸಿದ್ದಾರೆ.

‘ಕಣ್ಣನ್ ಅವರು, ಹಿಜಾಬ್ ಹಾಕಿಕೊಂಡು ಕಾಲೇಜಿಗೆ ಬರುವ ಹೆಣ್ಣು ಮಕ್ಕಳ ಬಗ್ಗೆ ತುಚ್ಛವಾದ ಶಬ್ದ ಬಳಸಿದ ಬಗ್ಗೆ ಓದಿದೆ. ಅವರಿಗೂ ಹೆಣ್ಣು ಮಕ್ಕಳು ಇರಬೇಕು. ಪ್ರಶ್ನೆಯೆಂದರೆ, ಎಲ್ಲಿಂದ ಹುಟ್ಟುತ್ತಿದೆ ಈ ಅಮಾನುಷ ಕಿಲುಬು, ಕ್ಷುದ್ರತೆ? ಕಲೆ ನುಡಿಯನ್ನು ಸಂವೇದನಶೀಲಗೊಳಿಸಬೇಕು. ಬದಲಿಗೆ ಮಲಿನಗೊಳಿಸುತ್ತಿದೆ’ ಎಂದು ವಿಮರ್ಶಕ ರಹಮತ್ ತರೀಕೆರೆ ವಿಷಾದಿಸಿದ್ದಾರೆ.

ಅನಿರ್ದಿಷ್ಟಾವಧಿ ಉಪವಾಸ– ಪ್ರಸನ್ನ: ‘ಇದು ಸಭ್ಯತೆಯ ಪ್ರಶ್ನೆ, ರಂಗ-ಧರ್ಮದ ಪ್ರಶ್ನೆ. ಶ್ರೀಯುತರು ಬಾಯಿತಪ್ಪಿ ಮರ್ಯಾದೆ ಮೀರಿ ಮಾತನ್ನಾಡಿದ್ದಾರೆ. ಅವರನ್ನು ನಾವು ಕ್ಷಮಿಸಿಬಿಡೋಣ. ಆದರೆ, ನಾನು ರಂಗಭೂಮಿಯ ಮರ್ಯಾದೆ ಉಳಿಸಲು ಮಾರ್ಚ್ 27ರಿಂದ ನಗರದಲ್ಲಿ ಅನಿರ್ದಿಷ್ಟ ಅವಧಿಯ ಉಪವಾಸ ನಡೆಸುವೆ’ ಎಂದು ರಂಗಕರ್ಮಿ ಪ್ರಸನ್ನ ಹೇಳಿದ್ದಾರೆ.

‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಅವರು, ‘ರಂಗಭೂಮಿಯ ಮರ್ಯಾದೆ ಉಳಿಸಲು ಹಾಗೂ ರಂಗಸಂಸ್ಥೆಗಳ ಸ್ವಾಯತ್ತತೆಗೆ ಆಗ್ರಹಿಸಿ ಉಪವಾಸ ಕೈಗೊಳ್ಳುತ್ತಿದ್ದೇನೆ. ಇದು ಯಾರ ಪರವೂ ಅಲ್ಲ, ಯಾರ ವಿರುದ್ಧವೂ ಅಲ್ಲ’ ಎಂದು ಹೇಳಿದರು.

‘ರಂಗಸ್ಥಳವೆಂಬುದು ರಂಗಕರ್ಮಿಗಳು, ಪ್ರೇಕ್ಷಕರಿಗೆ ಪವಿತ್ರವಾದದ್ದು. ಅಲ್ಲಿ ನಿಂತು ಪ್ರದರ್ಶನದ ಮರ್ಯಾದೆ ಮೀರದಂತೆ ಒಳಿತಿನ ಮಾತು, ಕೆಡುಕಿನ ಮಾತು, ಬೈಗುಳದ ಮಾತು, ಅಸಭ್ಯ ಮಾತು ಎಲ್ಲವನ್ನೂ ಆಡುತ್ತೇವೆ. ಎದುರಿಗೆ ಒಟ್ಟಾಗಿ ಕುಳಿತಿರುವ ಪ್ರೇಕ್ಷಕರ ಒಗ್ಗಟ್ಟು ಮುರಿಯಬಾರದೆಂಬುದೇ ನಾಟಕ ಹಾಗೂ ಸಮಾಜದ ಮರ್ಯಾದೆ’ ಎಂದಿದ್ದಾರೆ.

ಕಣ್ಣನ್ ಏನು ಹೇಳಿದ್ದರು?

ಮೈಸೂರಿನ ರಂಗಾಯಣದಲ್ಲಿ ಭಾನುವಾರ, ಬಹುರೂಪಿ ರಂಗೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತಾ ಕಣ್ಣನ್ ಅವರು, ‘ಹಿಜಾಬ್ ವಿಚಾರದಲ್ಲಿ ಹೈಕೋರ್ಟ್ ತೀರ್ಪು ನೀಡಿದೆ. ಶಾಲಾ– ಕಾಲೇಜುಗಳಿಂದ ಹಿಜಾಬ್ ಹೊರಟುಹೋಗಿದೆ. ಇನ್ಮುಂದೆ ಶಾಲೆಗೆ ಹ್ಯಾಗೆ ಬರಬೇಕು ಎಂದು ಹೇಳಬೇಕು; ಮುಖ ಮುಚ್ಕೊಂಡು ಬರಬೇಡ, ... ಮುಚ್ಕೊಂಡು ಬಾ. ಏನು ಭಯಾ ರೀ ಮಾತಾಡೋಕೆ? ಡಾಕ್ಟ್ರ ಹತ್ರ ಹೋದ್ರೆ ಎಲ್ಲ ಬಿಚ್ಚಿ ತೋರಿಸ್ತೀರಿ. ಮಾತಾಡಕೆ ಯಾಕೆ ಹೆದರಬೇಕು?’ ಎಂದಿದ್ದರು.

‘ಯಾರೊಬ್ಬರೂ ಮಾತನಾಡಿಸದಿರುವುದು ನ್ಯಾಯವೇ?’

‘ಬಹಿಷ್ಕಾರ ಹಾಕಿಲ್ಲ, ನಮಗೆ ಅವರು ಬೇಕಿಲ್ಲ’

• ಕೆ.ಎಸ್.ಗಿರೀಶ

ಮೈಸೂರು: ನಂಜನಗೂಡು ತಾಲ್ಲೂಕಿನ ತಗಡೂರು ಪಂಚಾಯಿತಿಗೆ ಸೇರಿದ ಕೊಂತಯ್ಯನಹುಂಡಿಯಲ್ಲಿ ಬಹಿಷ್ಕಾರ ಎಂಬ ಪದ ಕೇಳಿದೊಡನೆ ಜನ ಮಾತನಾಡಲು ಹಿಂಜರಿಯುತ್ತಾರೆ. ಕಿರಿಯರು ಹಿರಿಯರತ್ತ ಕೈತೋರಿದರೆ, ಹೆಂಗಸರು, ‘ಇದು ಗಂಡಸರ ವಿಷಯ’ ಎನ್ನುತ್ತಾರೆ. ಯಾರನ್ನೇ ಕೇಳಿದರೂ, ‘ಬಹಿಷ್ಕಾರದ ಬಗ್ಗೆ ಗೊತ್ತಿಲ್ಲ. ನಮಗೆ ಆ ಮೂವರು ಮಾತ್ರ ಬೇಡ’ ಎಂದು ಖಚಿತ ದನಿಯಲ್ಲಿ ಹೇಳುತ್ತಾರೆ.

ಆದರೆ, ದಿವಂಗತ ಕಾಳಪ್ಪನವರ ಪುತ್ರರಾದ ಮಹದೇವಪ್ಪ, ಗುರುಮಲ್ಲಪ್ಪ ಹಾಗೂ ಪರಶಿವಪ್ಪ, ‘ನಮ್ಮ ಜಾತಿಯವರೇ (ಲಿಂಗಾಯತರು) ಬಹಿಷ್ಕರಿಸಿದ್ದಾರೆ. ನಮ್ಮನ್ನು ಎಲ್ಲರೊಂದಿಗೆ ಬೆರೆಯಲು ಬಿಡಿ’ ಎಂದು ಕೈ ಮುಗಿಯುತ್ತಾರೆ.

‘ಬಹಿಷ್ಕಾರ’ ದೂರಿನ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಮಂಗಳವಾರ ಭೇಟಿ ನೀಡಿದ ‘ಪ್ರಜಾವಾಣಿ’ಗೆ ಕಂಡು ಬಂದ ದೃಶ್ಯಗಳಿವು.

‘ಮೂರನೇ ತರಗತಿಯಲ್ಲಿರುವ ನನ್ನ ಮೊಮ್ಮಗ ನಂದನ್‌ಗೆ ಅವನ ಸ್ನೇಹಿತರು ಶಾಲೆಗೆ ಬರಬೇಡ ಎಂದು ಹೇಳಿ ಹಲ್ಲೆ ನಡೆಸಿ, ತಲೆಗೆ ಗಾಯ ಮಾಡಿದ್ದಾರೆ. ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದೇವೆ. ನಮಗೆ ಭಯವಾಗುತ್ತಿದೆ’ ಎಂದು ಗುರುಮಲ್ಲಪ್ಪ ಆತಂಕ ವ್ಯಕ್ತಪಡಿಸಿದರು.

ನಂಜನಗೂಡಿನ ಕೊಂತಯ್ಯನಹುಂಡಿಯಲ್ಲಿ ಬಹಿಷ್ಕಾರಕ್ಕೆ ಒಳಗಾಗಿದ್ದೇವೆ ಎಂದು ಆರೋಪಿಸಿರುವ ಸಹೋದರರಾದ ಪರಶಿವಪ್ಪ, ಗುರುಮಲ್ಲಪ್ಪ ಹಾಗೂ ಮಹದೇವಪ್ಪ

‘2016ರಲ್ಲಿ ನಿಯಮದಂತೆ ರಸ್ತೆ ಮಾಡದೇ ನನ್ನ ಜಮೀನಿನಲ್ಲಿದ್ದ 4 ತೆಂಗಿನಮರ ಹಾಗೂ ಹುಣಸೆಮರಗಳನ್ನು ಕತ್ತರಿಸಿದರು. ಆಗ ಪಂಚಾಯಿತಿ ಸದಸ್ಯರೂ ಸೇರಿದಂತೆ 8 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದೆ. ನ್ಯಾಯಾಲಯವೂ ವಿಚಾರಣೆಗೆ ಅಂಗೀಕರಿಸಿದೆ. ಈಗ ಪ್ರಕರಣ ವಾಪಸ್ ತೆಗೆದುಕೊಳ್ಳಬೇಕು ಎಂದು ಒತ್ತಡ ಹೇರಿ ಬಹಿಷ್ಕರಿಸಿದ್ದಾರೆ. ನಮ್ಮೊಡನೆ ಮಾತನಾಡುವವರಿಗೆ ₹ 3 ಸಾವಿರದಿಂದ ₹ 30 ಸಾವಿರದವರೆಗೆ ದಂಡ ವಿಧಿಸುವ ಬೆದರಿಕೆಯನ್ನೂ ಹಾಕಿದ್ದಾರೆ’ ಎಂದು ದೂರಿದರು.

ಗುರುಮಲ್ಲಪ್ಪ ಪುತ್ರ ದೊರೆಸ್ವಾಮಿ ಮಾತನಾಡಿ, ‘ಜನ ನಮ್ಮ ಕಡೆಗೆ ನೋಡುತ್ತಿಲ್ಲ. ಪೊಲೀಸರು ಹೇಳಿದರೆ ಮಾತ್ರ ದಿನಸಿ ಕೊಡುತ್ತಾರೆ. ಇಲ್ಲದಿದ್ದರೆ, ಇದ್ದರೂ ಇಲ್ಲ ಎನ್ನುತ್ತಾರೆ. ಇಪ್ಪತ್ತೆರಡು ದಿನದಿಂದ ಯಾರೊಬ್ಬರೂ ಮಾತನಾಡಿಲ್ಲ. ಹಾಲು, ಮೊಸರು ಕೊಡುತ್ತಿಲ್ಲ. ತೋಟಗಳಲ್ಲಿ ಕೆಲಸ ಮಾಡಲು ಜನರೂ ಬರುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಪೊಲೀಸರು ಸಾಕ್ಷಿ ಕೇಳುತ್ತಾರೆ!: ‘ಬಹಿಷ್ಕರಿಸಿದ್ದಾರೆಂಬುದಕ್ಕೆ ಸಾಕ್ಷಿ ಕೊಡಿ ಎಂದು ಪೊಲೀಸರು ಕೇಳುತ್ತಾರೆ. ಮಾತನ್ನೇ ಆಡದ ಮಂದಿ ನಮ್ಮ ಪರವಾಗಿ ಸಾಕ್ಷಿ ಹೇಳುತ್ತಾರೆಯೇ? ಮಾರ್ಚ್ 19ರಂದು ಜಿಲ್ಲಾಧಿಕಾರಿಗೆ ದೂರು ಕೊಟ್ಟಿದ್ದೇವೆ. ಸಂಧಾನ ಸಭೆ ಇನ್ನೂ ನಡೆದಿಲ್ಲ’ ಎಂದೂ ದೊರೆಸ್ವಾಮಿ ಅಸಹಾಯಕತೆ ವ್ಯಕ್ತಪಡಿಸಿದರು.

‘ಗುರುಮಲ್ಲಪ್ಪ ದಾಖಲಿಸಿರುವ ಪ್ರಕರಣದಲ್ಲಿ ಪಂಚಾಯಿತಿಯ ಕೆಲವು ಸದಸ್ಯರೇ ಆರೋಪಿಗಳಾಗಿರುವುದರಿಂದ, ಅವರ ಒತ್ತಡಕ್ಕೆ ಮಣಿದು ಗ್ರಾಮಸ್ಥರು ಬಹಿಷ್ಕಾರದ ತೀರ್ಮಾನ ಕೈಗೊಂಡಿದ್ದಾರೆ’ ಎಂದು ಗ್ರಾಮಸ್ಥರೊಬ್ಬರು ತಿಳಿಸಿದರು.

ಮತ್ತೊಬ್ಬ ಗ್ರಾಮಸ್ಥ ಮರಿಸ್ವಾಮಿ ಪ್ರತಿಕ್ರಿಯಿಸಿ, ‘ಗುರುಮಲ್ಲಪ್ಪ ಹಾಗೂ ಅವರ ಕುಟುಂಬದವರಿಗೆ ಬಹಿಷ್ಕಾರ ಹಾಕಿಲ್ಲ. ಗ್ರಾಮಸ್ಥರೇ ಅವರ ವರ್ತನೆಯಿಂದ ಬೇಸರಗೊಂಡು ಮಾತನಾಡಿಸುತ್ತಿಲ್ಲ ಅಷ್ಟೇ’ ಎಂದರು.

ಬಹಿಷ್ಕರಿಸಿರುವ ಆರೋಪಕ್ಕೆ ಗುರಿಯಾಗಿರುವ ಗೌಡಿಕೆ ಪುಟ್ಟಸ್ವಾಮಿ, ಮರಿಸ್ವಾಮಿ, ಪುಟ್ಟಬುದ್ದಿ, ಗುರುಸ್ವಾಮಿ ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ಮುಖ್ಯಾಂಶಗಳು

- ಗ್ರಾಮದಲ್ಲಿರುವುದು ಲಿಂಗಾಯತ ಸಮುದಾಯ ಮಾತ್ರ
- ಒಂದೇ ಸಮುದಾಯದಲ್ಲಿ ಮೂವರ ವಿರುದ್ಧ ಬಹಿಷ್ಕಾರ
- ನ್ಯಾಯಾಲಯದಲ್ಲಿರುವ ಪ್ರಕರಣ ವಾಪಸ್ ತೆಗೆದುಕೊಳ್ಳಲು ಒತ್ತಡದ ತಂತ್ರ

> ಸ್ಥಳ ಪರಿಶೀಲನೆ ನಡೆಸಿ, ಶಾಂತಿ ಸಭೆ ನಡೆಸಲು ಪೊಲೀಸರಿಗೆ ಸೂಚಿಸಲಾಗಿದೆ
>
> **ಆರ್.ಚೇತನ್**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಇಂದು ವಿಚಾರಣೆ

‘ಬಹಿಷ್ಕಾರ ಪ್ರಕರಣ ಕುರಿತು ಗ್ರಾಮಕ್ಕೆ ಮಾರ್ಚ್ 23ರಂದು ಭೇಟಿ ನೀಡಿ ವಿಚಾರಣೆ ನಡೆಸುವೆ’ ಎಂದು ನಂಜನಗೂಡು ತಹಶೀಲ್ದಾರ್ ಶಿವಮೂರ್ತಿ ತಿಳಿಸಿದರು.

‘ಮೂರೂ ಕುಟುಂಬಕ್ಕೆ ನೀರು, ವಿದ್ಯುತ್ ಸೇರಿದಂತೆ ಮೂಲಸೌಕರ್ಯಗಳೆಲ್ಲವೂ ಅಬಾಧಿತವಾಗಿ ಸಿಗುತ್ತಿದೆ. ಬಹಿಷ್ಕರಿಸಿದ್ದಾರೆಂಬುದಕ್ಕೆ ಆಧಾರಗಳಿಲ್ಲ’ ಎಂದೂ ಹೇಳಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಟೆಲಿಕಾಂ ಕಂಪನಿಗಳ ಸೇವಾ ದರ ಇಳಿಕೆಯಾಗಲು ಶುರುವಾದಾಗ ಡ್ಯೂಯೆಲ್ ಸಿಮ್ ಬಳಕೆ ಶುರು ಮಾಡಿಕೊಳ್ಳಬಹುದು. ಅಲ್ಲಿಯವರೆಗೆ, 'ಏಕಸಿಮ್ ವ್ರತಸ್ಥ'ರಾದರೆ ಉತ್ತಮ!

ಆಳ-ಅಗಲ
ಕಾಳಿ ಕಣಿವೆಯಲ್ಲಿ ಆಕ್ರೋಶದ ಕಿಡಿ
ಕಾಪು: ಜಾತ್ರೆಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ 5
'ಕಾಫಿ ಬೆಳೆಗಾರರಿಗೂ ಉಚಿತ ವಿದ್ಯುತ್' 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,989 ▲	17,315 ▲	₹53,080 (ಬೆಂಗಳೂರು) ▲	₹69,400 (ಬೆಂಗಳೂರು) ▼	76.18

'60 ಕಿ.ಮೀ ಪರಿಮಿತಿಗೆ ಒಂದೇ ಟೋಲ್'

ನವದೆಹಲಿ (ಪಿಟಿಐ): 'ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರತಿ 60 ಕಿ.ಮೀ ಮಿತಿಯಲ್ಲಿ ಒಂದು ಟೋಲ್ ಪ್ಲಾಜಾ ಕಾರ್ಯನಿರ್ವಹಿಸಲಿದೆ. ಹೆಚ್ಚುವರಿ ಇದ್ದಲ್ಲಿ ಮುಂದಿನ ಮೂರು ತಿಂಗಳಲ್ಲಿ ಅವುಗಳನ್ನು ತೆಗೆಯಲಾಗುವುದು' ಎಂದು ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. 10

ಒಳ ಪುಟಗಳು

ಅಂದು ರಾಜ್, ಇಂದು ಪುನೀತ್ 6
ಬೆಲೆ ಏರಿಕೆ ವಿರುದ್ಧ ಪ್ರತಿಪಕ್ಷಗಳ ಆಕ್ರೋಶ: ಕಲಾಪ ಬಹಿಷ್ಕಾರ 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬೆಂಗಳೂರಿನಲ್ಲಿ ಪೆಟ್ರೋಲ್, ಡೀಸೆಲ್ ದರ ಲೀಟರ್‌ಗೆ ತಲಾ ₹1.64 ಏರಿಕೆ

ಎಲ್‌ಪಿಜಿ: ₹50 ನೆಗೆತ

ನವದೆಹಲಿ (ಪಿಟಿಐ/ರಾಯಿಟರ್ಸ್): ಪೆಟ್ರೋಲ್, ಡೀಸೆಲ್ ಮತ್ತು ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಮಂಗಳವಾರ ಹೆಚ್ಚಿಸಲಾಗಿದೆ. 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆ ₹ 50 ಜಾಸ್ತಿಯಾಗಿದೆ. ಪೆಟ್ರೋಲ್, ಡೀಸೆಲ್ ಬೆಲೆ ದೆಹಲಿಯಲ್ಲಿ ಲೀಟರಿಗೆ ತಲಾ 80 ಪೈಸೆ ಏರಿಕೆ ಆಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯು ಲೀಟರ್‌ಗೆ ತಲಾ 84 ಪೈಸೆಯಷ್ಟು ಆಗಿದೆ.

ಇದಲ್ಲದೆ ಬುಧವಾರದಿಂದ ಜಾರಿಗೆ ಬರುವಂತೆ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಮತ್ತೆ ಲೀಟರ್‌ಗೆ ತಲಾ 80ಪೈಸೆ ಹೆಚ್ಚಿಸಲಾಗಿದೆ ಎಂದು ಇಂಡಿಯನ್ ಆಯಿಲ್ ಕಂಪನಿ ತಿಳಿಸಿದೆ. ಹೀಗಾಗಿ ಲೀಟರ್‌ಗೆ ಒಟ್ಟು ₹1.64 ಏರಿಕೆ ಆದಂತಾಗಿದೆ. ಪರಿಷ್ಕರಣೆ ಬಳಿಕ ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 102.26, ಡೀಸೆಲ್ ದರವು ಲೀಟರಿಗೆ ₹ 86.58 ಆಗಿದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಐದು ರಾಜ್ಯಗಳ ವಿಧಾನ ಸಭಾ ಚುನಾವಣೆ ಹತ್ತಿರವಾದಾಗಿನಿಂದ ಇಂಧನ ದರ ಬದಲಾವಣೆ ಮಾಡಿರಲಿಲ್ಲ. ಈಗಿನ ಬೆಲೆ ಏರಿಕೆಯಿಂದಾಗಿ ಹಣದುಬ್ಬರ ಪ್ರಮಾಣವು ಮತ್ತಷ್ಟು ಜಾಸ್ತಿ ಆಗಬಹುದು ಎಂಬ ಆತಂಕ ವ್ಯಕ್ತವಾಗಿದೆ. ರಾಜ್ಯದಿಂದ ರಾಜ್ಯಕ್ಕೆ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಮೌಲ್ಯವರ್ಧಿತ ತೆರಿಗೆ ಹಾಗೂ ಸಾಗಣೆ ವೆಚ್ಚ ಆಧರಿಸಿ ತೈಲ ಬೆಲೆಯಲ್ಲಿ ಬದಲಾವಣೆ ಇರುತ್ತದೆ.

ಎಲ್‌ಪಿಜಿ ಸಿಲಿಂಡರ್ ಬೆಲೆಯು 2021ರ ಜುಲೈನಿಂದ ಅಕ್ಟೋಬರ್ 6ರ ನಡುವಿನ ಅವಧಿಯಲ್ಲಿ ₹ 90 ಹೆಚ್ಚಳವಾಗಿತ್ತು. ಕೇಂದ್ರ ಸರ್ಕಾರವು ಎಲ್‌ಪಿಜಿ ಸಿಲಿಂಡರ್‌ಗೆ ಬಹುತೇಕ ನಗರಗಳ ಗ್ರಾಹಕರಿಗೆ ಸಬ್ಸಿಡಿ ನೀಡುತ್ತಿಲ್ಲ. 2014ರಲ್ಲಿ ಎಲ್‌ಪಿಜಿ ಸಿಲಿಂಡರ್ ಮಾರುಕಟ್ಟೆ ದರವು ₹ 1,241ಕ್ಕೆ ಏರಿಕೆ ಆಗಿತ್ತು. ಆದರೆ, ಆಗ ಸಬ್ಸಿಡಿ ಸಿಲಿಂಡರ್ ಹೊಂದಿರುವವರಿಗೆ ಪ್ರತಿ ಸಿಲಿಂಡರ್‌ಗೆ ₹ 600ರಷ್ಟು ಸಬ್ಸಿಡಿ ಸಿಗುತ್ತಿತ್ತು. ಈಗ ಪ್ರತಿ ಸಿಲಿಂಡರ್‌ಗೆ ₹ 952 (ಬೆಂಗಳೂರಿನ ದರ) ಪಾವತಿಸಬೇಕಿದೆ. ಸಬ್ಸಿಡಿ ಇಲ್ಲವಾಗಿರುವ ಕಾರಣ ಇದು ಎಲ್‌ಪಿಜಿ ಸಿಲಿಂಡರ್‌ಗೆ ಪಾವತಿಸಬೇಕಿರುವ ಇದುವರೆಗಿನ ಗರಿಷ್ಠ ದರ.

12ನೇ ಪುಟ ನೋಡಿ
ಇನ್ನೊಂದು ಸುದ್ದಿ 12

ಎಲ್‌ಪಿಜಿ ಸಿಲಿಂಡರ್ ದರ ಏರಿಕೆಯ ಹಾದಿ

2021	ಜುಲೈ	₹ 25
	ಆಗಸ್ಟ್	₹ 25
	ಸೆಪ್ಟೆಂಬರ್	₹ 25
	ಅಕ್ಟೋಬರ್	₹ 15
2022	ಮಾರ್ಚ್	₹ 50

(14.2 ಕೆ.ಜಿ. ತೂಕದ ಸಿಲಿಂಡರ್ ಬೆಲೆಯಲ್ಲಿ ಆದ ಹೆಚ್ಚಳ)

ಅಂಕಿ-ಅಂಶಗಳು

81.5 ಡಾಲರ್
ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ನಿಲ್ಲಿಸಿದಾಗ ಇದ್ದ ಕಚ್ಚಾ ತೈಲ ಬೆಲೆ

113.8 ಡಾಲರ್
ಮಂಗಳವಾರದ ಕಚ್ಚಾ ತೈಲ ಬೆಲೆ

'ನಷ್ಟ ಸರಿದೂಗಿಸಲು ದರ ಏರಿಕೆ'

ನವದೆಹಲಿ: ಕಚ್ಚಾ ತೈಲದ ಬೆಲೆ ಹೆಚ್ಚಾಗಿದ್ದರೂ, ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚಿಸದೆ ಇದ್ದುದರಿಂದ ಆಗಿರುವ ನಷ್ಟವನ್ನು ಸರಿದೂಗಿಸಿಕೊಳ್ಳಬೇಕು ಎಂದಾದರೆ ಈ ಎರಡು ತೈಲೋತ್ಪನ್ನಗಳ ಬೆಲೆಯನ್ನು ಲೀಟರಿಗೆ ₹ 25 ಹೆಚ್ಚಿಸಬೇಕಾಗುತ್ತದೆ ಎಂದು ಉದ್ಯಮದ ಮೂಲಗಳು ಹೇಳಿವೆ. ಆದರೆ ತೈಲ ಮಾರಾಟ ಕಂಪನಿಗಳು ಬೆಲೆ ಏರಿಕೆಯನ್ನು ಒಂದೇ ಬಾರಿಗೆ ಮಾಡುವುದಿಲ್ಲ, ದಿನಕ್ಕೆ ₹ 1ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಬೆಲೆ ಹೆಚ್ಚಳ ಆಗಬಹುದು ಎನ್ನಲಾಗಿದೆ.

> ಬಿಜೆಪಿ ನೇತೃತ್ವದ ಸರ್ಕಾರದಿಂದ ಜನರಿಗೆ ಇನ್ನೊಂದು ಕೊಡುಗೆ ಬಂದಿದೆ. ಚುನಾವಣೆ ಮುಗಿದಿದೆ. ಹಣದುಬ್ಬರ ಶುರುವಾಗಿದೆ
> **ಅಖಿಲೇಶ್ ಯಾದವ್,** ಎಸ್‌ಪಿ ಅಧ್ಯಕ್ಷ

> ಭಾರತದಲ್ಲಿ ದ್ವೇಷ ಬಿತ್ತುವ ಸಿನಿಮಾಗಳಿಗೆ ತೆರಿಗೆ ವಿನಾಯಿತಿ ಇದೆ. ಬಡವರ ಹಸಿವಿಗೆ ತೆರಿಗೆ ಇದೆ
> **ಸಾಕೇತ ಗೋಖಲೆ**
> ಟಿಎಂಸಿ ವಕ್ತಾರ

ಸಚಿವ ಸೋಮಣ್ಣಗೆ ಸಮನ್ಸ್

ಬೆಂಗಳೂರು: 'ಆದಾಯಕ್ಕೆ ಮೀರಿದ ಆಸ್ತಿ ಗಳಿಕೆ ಮತ್ತು ಭ್ರಷ್ಟಾಚಾರ ನಡೆಸಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣದಲ್ಲಿ ಜನಪ್ರತಿನಿಧಿಗಳ ಕೋರ್ಟ್‌ಗೆ ಖುದ್ದು ಹಾಜರಾಗಲು ವಸತಿ ಸಚಿವ ವಿ. ಸೋಮಣ್ಣ ಅವರಿಗೆ ವಿಶೇಷ ನ್ಯಾಯಾಲಯ ಸಮನ್ಸ್ ಜಾರಿಗೊಳಿಸಿದೆ.

'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ'ದ ನ್ಯಾಯಾಧೀಶ ಬಿ. ಜಯಂತ್ ಕುಮಾರ್ (ಸಿಸಿಎಚ್-91) ಈ ಕುರಿತಂತೆ ಆದೇಶಿಸಿದ್ದು, ಸೋಮಣ್ಣ, ಏಪ್ರಿಲ್ 16ರಂದು ನ್ಯಾಯಾಲಯಕ್ಕೆ ಖುದ್ದು ಹಾಜರಾಗುವಂತೆ ಸಮನ್ಸ್ ಜಾರಿಗೊಳಿಸಿದ್ದಾರೆ.

ಇದೇ ವೇಳೆ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಡಿವೈಎಸ್‌ಪಿ ಸಲ್ಲಿಸಿರುವ ವರದಿಯನ್ನು ನ್ಯಾಯಾಧೀಶರು ತಿರಸ್ಕರಿಸಿದ್ದು, 'ಸೋಮಣ್ಣ ಮತ್ತು ಅವರ ಕುಟುಂಬದ ಸದಸ್ಯರ ಆದಾಯ ಮೂಲಗಳು ದಿನೇ ದಿನೇ ಹೇಗೆ ವೃದ್ಧಿಯಾಯಿತು ಎಂಬ ಬಗ್ಗೆ ಸೂಕ್ತ ತನಿಖೆ ನಡೆದಿಲ್ಲ. ಎಲ್ಲವನ್ನೂ ಮುಚ್ಚಿಡಲಾಗಿದೆ' ಎಂಬ ಆರೋಪವನ್ನು ಪುರಸ್ಕರಿಸಿದ್ದಾರೆ. ಆರೋಪಿಯು ನ್ಯಾಯಾಲಯಕ್ಕೆ ಖುದ್ದು ಹಾಜರಾಗುವಂತೆಯೂ ನಿರ್ದೇಶಿಸಿದ್ದಾರೆ.

4ನೇ ಪುಟ ನೋಡಿ

ಮೇಕೆದಾಟು: ತಮಿಳುನಾಡು ನಿಲುವಿನ ವಿರುದ್ಧದ ನಿರ್ಣಯಕ್ಕೆ ಒಮ್ಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಯೋಜನೆ ವಿರೋಧಿಸಿ ತಮಿಳುನಾಡು ವಿಧಾನಸಭೆ ಕೈಗೊಂಡಿರುವ ನಿರ್ಣಯವನ್ನು ವಿವಿಧ ಪಕ್ಷಗಳ ನಾಯಕರು ಪಕ್ಷ ಭೇದ ಮರೆತು ಖಂಡಿಸಿದ್ದು, ಮೇಕೆದಾಟು ಯೋಜನೆಗೆ ಅಡ್ಡಿ ಮಾಡುತ್ತಿರುವ ತಮಿಳುನಾಡಿನ ವಿರುದ್ಧ ಬುಧವಾರ (ಮಾ.23) ವಿಧಾನ ಮಂಡಲದ ಉಭಯಸದನಗಳಲ್ಲಿ ನಿರ್ಣಯ ಅಂಗೀಕರಿಸಲು ನಿರ್ಧರಿಸಲಾಯಿತು.

ಈ ವಿಷಯ ಕರ್ನಾಟಕ ವಿಧಾನಮಂಡಲದ ಉಭಯ ಸದನಗಳಲ್ಲಿ ಮಂಗಳವಾರ ಪ್ರಸ್ತಾಪವಾಯಿತು.

ಶೂನ್ಯವೇಳೆಯಲ್ಲಿ ಮಾತನಾಡಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಕಾಂಗ್ರೆಸ್‌ನ ಎಚ್.ಕೆ.ಪಾಟೀಲ ಮತ್ತು ಬಿಜೆಪಿಯ ಬಿ.ಎಸ್.ಯಡಿಯೂರಪ್ಪ ಅವರು ತಮಿಳುನಾಡಿನ ಧೋರಣೆಯನ್ನು ಕಟುವಾಗಿ ಟೀಕಿಸಿದರು.

4ನೇ ಪುಟ ನೋಡಿ



ಪರಸ್ಪರ ಅಂತರ ಕಾಯ್ದುಕೊಳ್ಳಿ

ಹಿಂದೂಪುರ–ಪೆನುಕೊಂಡ ರೈಲು ಸಂಚಾರ ವ್ಯತ್ಯಯ

ಬೆಂಗಳೂರು: 'ನೈರುತ್ಯ ರೈಲ್ವೆಯ ಯಲಹಂಕ– ಪೆನುಕೊಂಡ ವಿಭಾಗದ ಮಾರ್ಗದಲ್ಲಿ ದ್ವಿಪಥಗೊಳಿಸುವಿಕೆ, ವಿದ್ಯುದ್ದೀಕರಣ ಕೆಲಸ ಕೈಗೆತ್ತಿಕೊಂಡಿರುವುದರಿಂದ ಮಾ.29ರವರೆಗೆ ಈ ಮಾರ್ಗದ ರೈಲುಗಳ ಸಂಚಾರದಲ್ಲಿ ವ್ಯತ್ಯಯವಾಗಲಿದೆ' ಎಂದು ನೈರುತ್ಯ ರೈಲ್ವೆಯ ಪ್ರಯಾಣಿಕರ ಸೌಕರ್ಯಗಳ ವಿಭಾಗದ ಮುಖ್ಯ ವಾಣಿಜ್ಯ ವ್ಯವಸ್ಥಾಪಕ ಅನುಪ್ ದಯಾನಂದ ಸಾಧು ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,'ಯಲಹಂಕದಿಂದ ಹಿಂದೂಪುರದವರೆಗೆ ಈಗಾಗಲೇ ಕೆಲಸಗಳು ಪೂರ್ಣಗೊಂಡಿವೆ. ಈಗ ಹಿಂದೂಪುರದಿಂದ ಪೆನುಕೊಂಡವರೆಗೆ ಸುಮಾರು 37 ಕಿ.ಮೀವರೆಗೆ ದ್ವಿಪಥಗೊಳಿಸುವಿಕೆ ಹಾಗೂ ವಿದ್ಯುದ್ದೀಕರಣ ಕೆಲಸಗಳನ್ನು ಆರಂಭಿಸಿದ್ದೇವೆ' ಎಂದರು.

'ನಿಗದಿತ ಅವಧಿಯವರೆಗೆ ಈ ಮಾರ್ಗದಲ್ಲಿ ರೈಲುಗಳ ಸಂಚಾರವನ್ನು ಭಾಗಶಃ ರದ್ದು ಮಾಡಲಾಗಿದೆ. ಕೆಲ ರೈಲು ಸಂಚಾರ ಪೂರ್ಣವಾಗಿ ರದ್ದು ಮಾಡಲಾಗಿದ್ದು, ಪ್ರಯಾಣಿಕರಿಗೆ ಅಡಚಣೆಯಾಗದಂತೆ ಪರ್ಯಾಯ ರೈಲುಗಳ ಸೇವೆಯೊಂದಿಗೆ ಬದಲಿ ಮಾರ್ಗಗಳನ್ನೂ ಸೂಚಿಸಲಾಗಿದೆ' ಎಂದು ಹೇಳಿದರು.

ಶಿಕ್ಷಕರ ನೇಮಕ: ಸಾಹಿತಿ ಬರಗೂರು ರಾಮಚಂದ್ರಪ್ಪ ಒತ್ತಾಯ

ಕನ್ನಡ ಹುದ್ದೆಗೆ ಪ್ರತ್ಯೇಕ ಅರ್ಜಿ ಆಹ್ವಾನಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಶಿಕ್ಷಣ ಇಲಾಖೆಯು 6ರಿಂದ 8ನೇ ತರಗತಿಗಳ ಬೋಧನೆಗಾಗಿ 15 ಸಾವಿರ ಪದವೀಧರ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯಡಿ ಕನ್ನಡ ಅಧ್ಯಾಪಕರಿಗೆ ಅವಕಾಶ ಕಲ್ಪಿಸದಿರುವುದು ಅಚ್ಚರಿಯ ಸಂಗತಿ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದ್ದಾರೆ.

ಈ ಸಂಬಂಧ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಪತ್ರ ಬರೆದಿರುವ ಅವರು,'ಇಂಗ್ಲಿಷ್, ಗಣಿತ, ಸಮಾಜ ವಿಜ್ಞಾನ ಮತ್ತು ಜೀವ ವಿಜ್ಞಾನ ವಿಷಯಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಇಲ್ಲಿ ಕನ್ನಡ ವಿಷಯವನ್ನೇ ಸೇರಿಸಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಬರಗೂರು ರಾಮಚಂದ್ರಪ್ಪ

'ಈ ಹಿಂದೆ ಸಮಾಜ ವಿಜ್ಞಾನ ಅಧ್ಯಾಪಕರಿಗೇ ಕನ್ನಡ ಬೋಧಿಸಲು ಹೇಳಲಾಗಿತ್ತು ಎಂದು ತಿಳಿದುಬಂದಿದೆ. ಇದು ನಿಜವಾಗಿದ್ದರೆ ಅನ್ಯಾಯ. ಐಚ್ಛಿಕ ಇಂಗ್ಲಿಷ್ ಮತ್ತು ಸಾಹಿತ್ಯದಲ್ಲಿ ಪದವಿ ಪೂರೈಸಿದವರಿಗೆ ಮಾತ್ರ ಇಂಗ್ಲಿಷ್ ಬೋಧನೆಗೆ ಅರ್ಜಿ ಹಾಕಲು ಹೇಳ ಲಾಗಿದೆ. ಕನ್ನಡ ವಿಷಯಕ್ಕೂ ಕನ್ನಡ ಮತ್ತು ಸಾಹಿತ್ಯವನ್ನು ಐಚ್ಛಿಕವಾಗಿ ಅಧ್ಯಯನ ಮಾಡಿದವರಿಗೆ ಮಾತ್ರವೇ ಅರ್ಹರೆಂದು ಪರಿ ಗಣಿಸಿ, ಅರ್ಜಿ ಆ ಹ್ವಾನಿಸಬೇಕಿತ್ತು. ಆದರೆ, ಪ್ರಕಟಣೆ ಯಲ್ಲಿ ಕನ್ನಡ ಅಧ್ಯಾಪಕ ಹುದ್ದೆಗಳ ಪ್ರಸ್ತಾವವೇ ಇಲ್ಲ' ಎಂದು ದೂರಿದ್ದಾರೆ.

'ಕನ್ನಡ ಬೋಧನೆಗೆ ಕನ್ನಡ ಪದವೀಧರರ ಅಗತ್ಯವಿಲ್ಲವೆಂದು ತಿಳಿದಿದ್ದರೆ ಇದು ಕನ್ನಡಕ್ಕೆ ಮತ್ತು ಕನ್ನಡ ಪದವೀಧರರಿಗೆ ಮಾಡಿದ ಅನ್ಯಾಯ. ಇದು ಐಚ್ಛಿಕ ಕನ್ನಡ ಪದವೀಧರರನ್ನು ಹುದ್ದೆಯ ಅವಕಾಶದಿಂದ ವಂಚಿಸಿದಂತೆ' ಎಂದಿದ್ದಾರೆ.

'ಈ ಅನ್ಯಾಯವನ್ನು ಸರ್ಕಾರ ಮತ್ತು ಶಿಕ್ಷಣ ಇಲಾಖೆ ಕೂಡಲೇ ಸರಿಪಡಿಸಬೇಕು. ಕನ್ನಡ ಅಧ್ಯಾಪಕರ ಹುದ್ದೆಗಳಿಗೆ ಪ್ರತ್ಯೇಕವಾದ ಅರ್ಜಿ ಆಹ್ವಾನಿಸಬೇಕು. ಕನ್ನಡ ವಿಷಯವನ್ನು ಐಚ್ಛಿಕ ಕನ್ನಡ ಪದವೀಧರ ಅರ್ಹ ಅಭ್ಯರ್ಥಿಗಳಿಗೇ ಬೋಧಿಸಬೇಕು' ಎಂದು ಹೇಳಿದ್ದಾರೆ.

ನ್ಯಾಯಾಂಗ-ಅರೆ ನ್ಯಾಯಿಕ ಸಂಸ್ಥೆಗಳಲ್ಲಿ ಕನ್ನಡಕ್ಕೆ ಕುತ್ತು: ಕ್ರಮಕ್ಕೆ ಮನವಿ

ಬೆಂಗಳೂರು: 'ರಾಜ್ಯದ ನ್ಯಾಯಾಂಗ ಮತ್ತು ಅರೆ ನ್ಯಾಯಿಕ ಸಂಸ್ಥೆಗಳಲ್ಲಿನ ನಾಮಫಲಕಗಳು ಕಡ್ಡಾಯವಾಗಿ ಕನ್ನಡ ಪದಗಳಲ್ಲಿಯೇ ಇರಬೇಕು ಮತ್ತು ಇಂಗ್ಲಿಷ್‌ನಲ್ಲಿರುವ ಫಲಕಗಳನ್ನು ಸೂಕ್ತ ರೀತಿಯಲ್ಲಿ ಕನ್ನಡಕ್ಕೆ ಅನುವಾದ ಮಾಡಿ ಹಾಕಲು ಕ್ರಮ ಕೈಗೊಳ್ಳಬೇಕು' ಎಂದು ಹೈಕೋರ್ಟ್ ವಕೀಲ ಧರಣೇಶ್ ಎನ್.ಕೃಷ್ಣಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಮನವಿ ಮಾಡಿದ್ದಾರೆ.

ಈ ಕುರಿತಂತೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಅವರಿಗೆ ಎರಡು ಪುಟಗಳ ಪತ್ರ ಬರೆದಿರುವ ಅವರು, 'ತಾಯಿ ಭಾಷೆ ಉಳಿದರೆ ಮಾತ್ರ ಈ ನಾಡಿನ ಜನಸಾಮಾನ್ಯ ಮತ್ತು ಆತನಲ್ಲಿನ ಅಂತಃಸತ್ವ ಉಳಿಯಲು ಸಾಧ್ಯ' ಎಂದು ಹೇಳಿದ್ದಾರೆ.

ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಖಂಡಿಸಿ ಬೆಂಗಳೂರು ನಗರ ಕಾಂಗ್ರೆಸ್ ಪ್ರಚಾರ ಸಮಿತಿ ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸಿದರು. ಮುಖಂಡರಾದ ಎಸ್. ಮನೋಹರ್, ಜಿ.ಜನಾರ್ಧನ್, ಎ.ಆನಂದ್, ಎಲ್.ಜಯಸಿಂಹ, ಪ್ರಕಾಶ್, ಪರಿಸರ ರಾಮಕೃಷ್ಣ, ಚಂದ್ರು, ವೆಂಕಟೇಶ್ ಆದಿ, ಪುಟ್ಟರಾಜು, ಮಾರನ್ ಮಂಜುನಾಥ್ ಇದ್ದರು.

'ಬಿಜೆಪಿ ಆಡಳಿತದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಬಿಜೆಪಿ ಸರ್ಕಾರದಲ್ಲಿ ಭ್ರಷ್ಟಾಚಾರ ಅವ್ಯಾಹತವಾಗಿ ನಡೆಯುತ್ತಿದೆ. ಸಚಿವರು, ಶಾಸಕರು ಹಾಗೂ ಅಧಿಕಾರಿಗಳು ಸಾರ್ವಜನಿಕರ ಹಣ ಲೂಟಿ ಮಾಡುತ್ತಿದ್ದರೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಯಾವುದೇ ತನಿಖೆಗೂ ಆದೇಶಿಸದೆ ಮೌನಕ್ಕೆ ಶರಣಾಗಿದ್ದಾರೆ. ಆ ಮೂಲಕ ಭ್ರಷ್ಟಾಚಾರಕ್ಕೆ ಪರೋಕ್ಷ ಬೆಂಬಲ ನೀಡುತ್ತಿದ್ದಾರೆ' ಎಂದು ಬೆಂಗಳೂರು ನಗರ ಕಾಂಗ್ರೆಸ್ ಪ್ರಚಾರ ಸಮಿತಿ ದೂರಿದೆ.

ಬಿಜೆಪಿ ಭ್ರಷ್ಟಾಚಾರ ಖಂಡಿಸಿ ಮಂಗಳವಾರ ಪ್ರತಿಭಟನೆ ನಡೆಸಿದ ಸಮಿತಿಯ ಸದಸ್ಯರು, 'ಬಿಜೆಪಿ ಸರ್ಕಾರದ ಕರ್ಮಕಾಂಡ ನಿತ್ಯವೂ ಬಯಲಾಗುತ್ತಿದೆ. ಇದನ್ನು ಮರೆಮಾಚಲು 'ಕಾಶ್ಮೀರ್ ಫೈಲ್ಸ್' ಚಲನಚಿತ್ರ ನೋಡುವ ನಾಟಕವಾಡುತ್ತಿದ್ದಾರೆ. ಬಿಜೆಪಿಯದ್ದು '40 ಪರ್ಸೆಂಟ್ ಸರ್ಕಾರ' ಎಂಬುದು ಈಗ ಜನರಿಗೂ ಮನವರಿಕೆಯಾಗುತ್ತಿದೆ' ಎಂದು ಕಿಡಿಕಾರಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಆರ್. ಶೆಟ್ಟಿ ಅವರು ಕಾರ್ಯಕ್ರಮದಲ್ಲಿ ವಿದ್ಯುತ್ ಚಾಲಿತ ವಾಹನ ವೀಕ್ಷಿಸಿದರು.

'ಇ.ವಿ. ಕ್ಷೇತ್ರದಲ್ಲಿ ಸಂಶೋಧನೆ ಅಗತ್ಯ'

ಬೆಂಗಳೂರು: 'ವಾಹನಗಳಿಂದ ವಿಷಕಾರಿ ಅನಿಲ ಹೊರಸೂಸುವುದನ್ನು ಕಡಿಮೆ ಮಾಡಲು ನಾವು ವಿದ್ಯುತ್ ಚಾಲಿತ ವಾಹನಗಳ ಮೊರೆಹೋಗಬೇಕಿದೆ. ವಿದ್ಯುತ್ ಚಾಲಿತ ವಾಹನಗಳನ್ನು ಜನಸ್ನೇಹಿಯಾಗಿಸಲು ಹೊಸ ಸಂಶೋಧನೆಗಳು ಆಗಬೇಕಿದೆ' ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎನ್.ಆರ್. ಶೆಟ್ಟಿ ಹೇಳಿದರು.

ನಗರದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 'ಶಕ್ತಿಇವಾಹ್ – ವಿದ್ಯುತ್ ವಾಹನಗಳ ಸಾಮರ್ಥ್ಯವರ್ಧನೆ' ಕುರಿತ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

'2030ರ ಹೊತ್ತಿಗೆ ದೇಶದಲ್ಲಿ ಮಾರಾಟವಾಗುವ ಹೊಸ ವಾಹನಗಳ ಒಟ್ಟು ಪ್ರಮಾಣದಲ್ಲಿ ಶೇಕಡ 30ರಷ್ಟು ಇ.ವಿ.ಗಳು ಇರಬೇಕು ಎಂಬ ಬಯಕೆಯನ್ನು ಕೇಂದ್ರ ಸರ್ಕಾರ ಹೊಂದಿದೆ. ಆದರೆ, ಇ.ವಿ. ತಯಾರಿಕೆಗೆ ಬೇಕಿರುವ ಆಮದು ಉಪಕರಣಗಳ ಬೆಲೆ ದುಬಾರಿ ಆಗಿದೆ. ಈ ಸಮಸ್ಯೆ ಪರಿಹರಿಸಲು ಸ್ಥಳೀಯ ಉತ್ಪಾದಕರಿಗೆ ಪ್ರೋತ್ಸಾಹ ಬೇಕು' ಎಂದು ಹೇಳಿದರು.

ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಉಪಾಧ್ಯಕ್ಷ ಡಾ. ಶಂಕರ್ ವೇಣುಗೋಪಾಲ್, ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಚ್.ಸಿ. ನಾಗರಾಜ್ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪಾಸ್‌ಪೋರ್ಟ್ ನವೀಕರಣಕ್ಕೆ ನಿರ್ದೇಶನ

ಬೆಂಗಳೂರು: ಕ್ರಿಮಿನಲ್ ಪ್ರಕರಣ ವಿಚಾರಣೆಗೆ ಬಾಕಿ ಇದೆ ಎಂಬ ಕಾರಣಕ್ಕೆ ಮಹಿಳೆಯೊಬ್ಬರ ಪಾಸ್‌ಪೋರ್ಟ್ ನವೀಕರಿಸಲು ನಿರಾಕರಿಸಿ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ (ಆರ್‌ಪಿಒ) ನೀಡಿದ್ದ ಹಿಂಬರಹವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಕುರಿತಂತೆ ಬೆಂಗಳೂರಿನ ಕಸ್ತೂರಿ ರಾಜುಪೇಟ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದ್ದು, 'ಪಾಸ್‌ಪೋರ್ಟ್ ನವೀಕರಣ ಕೋರಿ ಮಹಿಳೆ ಸಲ್ಲಿಸಿರುವ ಮನವಿಯನ್ನು ಆರು ವಾರಗಳ ಒಳಗೆ ಪರಿಗಣಿಸಿ' ಎಂದು ಆರ್‌ಪಿಒಗೆ ನಿರ್ದೇಶಿಸಿದೆ.

'ನವೀಕರಿಸಿದ ಪಾಸ್‌ಪೋರ್ಟ್ ವಿತರಿಸಿದರೂ ಅಥವಾ ವಿತರಿಸದೇ ಇದ್ದರೂ ಸಂಬಂಧಪಟ್ಟ ವಿಚಾರಣಾ ನ್ಯಾಯಾಲಯದ ಅನುಮತಿ ಇಲ್ಲದೆ ಅರ್ಜಿದಾರ ಮಹಿಳೆಯು ವಿದೇಶ ಪ್ರಯಾಣ ಮಾಡುವಂತಿಲ್ಲ' ಎಂದು ನ್ಯಾಯಪೀಠ ಇದೇ ವೇಳೆ ಸ್ಪಷ್ಟಪಡಿಸಿದೆ.

'ಕ್ರಿಮಿನಲ್ ಪ್ರಕ್ರಿಯೆಗಳಿಗೆ ತಡೆ ಆದೇಶ ಇಲ್ಲದೇ ಇದ್ದಾಗ ಮಾತ್ರವೇ ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ತಮ್ಮ ಕೆಲಸ ಮಾಡಲು ಸ್ವತಂತ್ರರಾಗಿರುತ್ತಾರೆ. ಆದರೆ, ಹೈಕೋರ್ಟ್ ತಡೆ ನೀಡಿದ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯದ ಅನುಮತಿ ತರುವಂತೆ ಸೂಚಿಸುವುದು ಜನರಿಂದ ಅಸಾಧ್ಯವಾದ ಕಾರ್ಯವನ್ನು ಮಾಡಿಸಿದಂತಾಗುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಸರ್ಜಾಪುರ ಸುತ್ತಮುತ್ತ ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ಕೇಂದ್ರದಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ 23ರಂದು ಸರ್ಜಾಪುರ ಉಪಕೇಂದ್ರದ ವ್ಯಾಪ್ತಿಯಲ್ಲಿ ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ. ವ್ಯತ್ಯಯವಾಗುವ ಸ್ಥಳಗಳು: ಸರ್ಜಾಪುರ, ಹಂದೇನಹಳ್ಳಿ, ಬಿದರಗುಪ್ಪೆ, ಯಮರೆ, ನೆರಿಗಾ, ದೊಮ್ಮಸಂದ್ರ, ಬಿಲ್ಲಾಪುರ ಮತ್ತು ಸುತ್ತಲಿನ ಗ್ರಾಮಗಳು.

ಇ ಟೆಂಡರ್ ಪ್ರಕಟಣೆ

BTDCR 41/2021-22 ದಿನಾಂಕ : 19.03.2022

ಕೋಲಾರ ಜಿಲ್ಲೆ, ಕೆಜಿಎಫ್ ತಾಲ್ಲೂಕು, ಬಂಗಾರು ತಿರುಪತಿ (ಗುಟ್ಟಹಳ್ಳಿ) ಶ್ರೀ ವೆಂಕಟರಮಣಸ್ವಾಮಿ ದೇವಾಲಯದ ಮೂಲ ದೇವರಿಗೆ ಬೆಳ್ಳಿ ವಜ್ರಾಂಗಿ ಕವಚವನ್ನು ಮಾಡಬೇಕಾಗಿರುವುದರಿಂದ ವಜ್ರಾಂಗಿ ವಿನ್ಯಾಸದ ಬಗ್ಗೆ ಖುದ್ದು ದೇವಾಲಯಕ್ಕೆ ಬೇಟಿ ನೀಡಿ ನಂತರ ಇಚ್ಛೆ ಉಳ್ಳವರು ಸದರಿ ಟೆಂಡರ್‌ನಲ್ಲಿ ಈ ಕೆಳಕಂಡ ಷರುತ್ತುಗಳಿಗೆ ಒಳಪಟ್ಟು ಇ–ಪ್ರೊಕ್ಯೂರ್ ಮೆಂಟ್ ಮುಖಾಂತರ ಇ –ಟೆಂಡರ್ ಭಾಗವಹಿಸಿ ತಮ್ಮ ಧರಪಟ್ಟಿಗಳನ್ನು ಸಲ್ಲಿಸತಕ್ಕದ್ದು. ಟೆಂಡರ್‌ನಲ್ಲಿ ಭಾಗವಹಿಸುವವರು ಇ–ಆಡಳಿತ ಸಚಿವಾಲಯದ ವೆಬ್‌ಸೈಟ್ www.eproc.karnataka.gov.in ನ ಮೂಲಕ ಮಾತ್ರ ವಿವರಗಳ ವೀಕ್ಷಣೆ ಮತ್ತು ಅರ್ಜಿಗಳನ್ನು ಸಲ್ಲಿಸಬಹುದು ಇಚ್ಛೆ ಉಳವರು ಈ ಕೆಳಕಂಡ ಷರುತ್ತಗಳಿಗೆ ಒಳಪಟ್ಟು ಇ–ಪ್ರೊಕ್ಯೂರ್ ಮೆಂಟ್ ಮುಖಾಂತರಾ ಇ–ಟೆಂಡರ್‌ನಲ್ಲಿ ಭಾಗವಹಿಸಿ ಹಕ್ಕನ್ನು ಪಡೆಯಬಹುದು

Tender Schedule :

Tender Reference No	BTD CR: 41/2021-22
Last Date & Time for receipt of tenders	05.04.2022 upto 17.00 hr
Date & Time for Opening of Technical Bid	07.04.2022 upto 11.00 hr
Date & Time for Opening for Financial Bids	08.04.2022 upto 11.00 hr

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ವೆಂಕಟರಮಣಸ್ವಾಮಿ ದೇವಾಲಯ, ಬಂಗಾರು ತಿರುಪತಿ, ಕೆಜಿಎಫ್ ತಾಲ್ಲೂಕು

ಷೆಡ್ಯೂಲ್ ಫಾರಂ – ಎ
ಸಾರ್ವಜನಿಕ ಘೋಷಣೆ

(ಭಾರತೀಯ ಇನ್ಸಾಲ್ವನ್ಸಿ ಮತ್ತು ಬ್ಯಾಂಕ್‌ರಪ್ಸಿ ಮಂಡಳಿ
(ವಾಲಂಟರಿ ಲಿಕ್ವಿಡೇಶನ್ ಪ್ರಾಸೆಸ್) ನಿಯಮಾವಳಿಗಳು, 2017ರ ನಿಯಮ 14)

ವಿಷ್ಟೆಲಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್‌ನ ಪಾಲುದಾರರ ಗಮನಕ್ಕೆ

1.	ಸಾಂಸ್ಥಿಕ ವ್ಯಕ್ತಿಯ ಹೆಸರು	ವಿಷ್ಟೆಲಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್
2.	ಸಾಂಸ್ಥಿಕ ವ್ಯಕ್ತಿಯ ಸಂಸ್ಥಾಪನ ದಿನಾಂಕ	29/05/2014
3.	ಸಾಂಸ್ಥಿಕ ವ್ಯಕ್ತಿಯು ಸಂಸ್ಥಾಪನೆ/ನೋಂದಣಿ ಪಡೆದುಕೊಂಡಿರುವ ಪ್ರಾಧಿಕಾರ	ಕಂಪನಿಗಳ ಕಾಯ್ದೆ, 2013ರ ಅಡಿಯಲ್ಲಿ ಕಂಪನಿಗಳ ರಜಿಸ್ಟ್ರಾರ್, ಬೆಂಗಳೂರು
4.	ಸಾಂಸ್ಥಿಕ ವ್ಯಕ್ತಿಯ ಕಾರ್ಪೊರೇಟ್ ಗುರುತಿನ ಸಂಖ್ಯೆ/ಸೀಮಿತ ಹೊಣೆಗಾರಿಕೆ ಗುರುತಿನ ಸಂಖ್ಯೆ	U72200KA2014PTC074643
5.	ಸಾಂಸ್ಥಿಕ ವ್ಯಕ್ತಿಯ ನೋಂದಾಯಿತ ಕಚೇರಿಯ ಮತ್ತು ಪ್ರಧಾನ ಕಚೇರಿಯ (ಯಾವುದಾದರು ಇದ್ದಲ್ಲಿ) ವಿಳಾಸ	ಬ್ರಿಗೇಡ್ ಸೌಥ್ ಪರೇಡ್, 2ನೇ ಮಹಡಿ, ನಂ. 10, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು, ಕರ್ನಾಟಕ 560001
6.	ಸಾಂಸ್ಥಿಕ ವ್ಯಕ್ತಿಯ ಲಿಕ್ವಿಡೇಶನ್ ಆರಂಭಿಕ ದಿನಾಂಕ	21ನೇ ಮಾರ್ಚ್ 2022
7.	ಲಿಕ್ವಿಡೇಟರ್‌ರವರ ಹೆಸರು, ವಿಳಾಸ, ಇಮೇಲ್ ವಿಳಾಸ, ದೂರವಾಣಿ ಸಂಖ್ಯೆ ಮತ್ತು ನೋಂದಣಿ ಸಂಖ್ಯೆ	ವಿ. ಶಂಕರ್, ಇಮೇಲ್: 1981shanky@gmail.com, ವಿಳಾಸ: 303, ಬ್ಲಾಕ್–ಎ, ಲೆಜೆಂಡ್ ಕಮರ್ಷಿಯಲ್ ಕಾಂಪ್ಲೆಕ್ಸ್, 3–4–770 & 136, ಐಸಿಐಸಿಐ ಬ್ಯಾಂಕ್, ಕೇಶವ ಮೆಡಿಕಲ್ಸ್ ಮೇಲ್ಭಾಗ, ಬರ್ಕತ್‌ಪುರ, ಹೈದರಾಬಾದ್–27. ಐಬಿಬಿಐ ನೋಂ. ಸಂ.: ಐಬಿಬಿಐ/ಐಪಿಎ–002/ಐಪಿ–ಎನ್00145/2017–18/10436
8.	ಕ್ಲೇಮ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ	20ನೇ ಏಪ್ರಿಲ್ 2022 ರಂದು ಸಂಜೆ 5:00 ಗಂಟೆಯೊಳಗೆ (ಐಎಸ್‌ಟಿ)

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ವಿಷ್ಟೆಲಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು, 21ನೇ ಮಾರ್ಚ್, 2022 ರಂದು ತನ್ನ ವಾಲಂಟರಿ ಲಿಕ್ವಿಡೇಶನ್ ಪ್ರಕ್ರಿಯೆಯನ್ನು ಆರಂಭಿಸಿದೆ. ಆದ್ದರಿಂದ ಈ ಮೂಲಕ ವಿಷ್ಟೆಲಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್‌ನ ಪಾಲುದಾರರು, ಮೇಲಿನ ಕಾಲಂ ನಂ.7 ರಲ್ಲಿ ನೀಡಲಾಗಿರುವ ಲಿಕ್ವಿಡೇಟರ್‌ರ ವಿಳಾಸದಲ್ಲಿರುವ ಲಿಕ್ವಿಡೇಟರ್‌ರವರಿಗೆ ತಂತಮ್ಮ ಕ್ಲೇಮ್ ಪುರಾವೆಗಳನ್ನು 20ನೇ ಏಪ್ರಿಲ್, 2022 ರಂದು ಸಂಜೆ 5:00 ಗಂಟೆಯೊಳಗೆ (ಐಎಸ್‌ಟಿ) ಸಲ್ಲಿಸಬೇಕೆಂದು ಈ ಮೂಲಕ ಕರೆ ನೀಡಲಾಗಿದೆ. ಫೈನಾನ್ಶಿಯಲ್ ಕ್ರೆಡಿಟರ್ಸ್ ತಮ್ಮ ಕ್ಲೇಮ್ ಪುರಾವೆಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಮಾತ್ರ ಸಲ್ಲಿಸತಕ್ಕದ್ದು. ಇನ್ನಿತರ ಎಲ್ಲಾ ಪಾಲುದಾರರು ಖುದ್ದಾಗಿ, ಅಂಚೆ ಮೂಲಕ ಅಥವಾ ವಿದ್ಯುನ್ಮಾನ ವಿಧಾನದ ಮುಖಾಂತರ ತಮ್ಮ ಕ್ಲೇಮ್ ಪುರಾವೆಗಳನ್ನು ಸಲ್ಲಿಸಬಹುದಾಗಿರುತ್ತದೆ.
ಸತ್ಯಕ್ಕೆ ದೂರವಾದ ಅಥವಾ ದಿಕ್ಕು ತಪ್ಪಿಸುವ ಕ್ಲೇಮ್ ಪುರಾವೆಗಳು ಸಲ್ಲಿಕೆಯಾದಲ್ಲಿ ಜುಲ್ಮಾನೆಗಳನ್ನು ಎದುರಿಸಬೇಕಾಗುತದೆ.
ದಿನಾಂಕ: 21.03.2022
ಸ್ಥಳ: ಹೈದರಾಬಾದ್
ಲಿಕ್ವಿಡೇಟರ್‌ರವರ ಹೆಸರು ಮತ್ತು ಸಹಿ
ವಿ.ಶಂಕರ್

ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಕೋಲಾರ ಜಿಲ್ಲೆ. ದೂರವಾಣಿ: 08067912388
ಇ–ಮೇಲ್: jointdirector.kolar@gmail.com

ಇ–ಟೆಂಡರ್ ಪ್ರಕಟಣೆ

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸಲಾಗುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಿಗೆ ಪುಸ್ತಕಗಳನ್ನು ಸರಬರಾಜು ಮಾಡುವ ಬಗ್ಗೆ

ಕೋಲಾರ ಜಿಲ್ಲೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸಲಾಗುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪುಸ್ತಕಗಳನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. (https://eproc.karnataka.gov.in) (1) ಟೆಂಡರ್ ಪ್ರಕಟಣೆ ಸಂಖ್ಯೆ: JD/SWD/KLR/BOOKS-TENDER/HOA/CR- / 2021-22, Date: 19.03.2022. (2) ಟೆಂಡರ್ ಮೊತ್ತ: ರೂ.26.75 ಲಕ್ಷಗಳು. (3) ಟೆಂಡರ್ ಕರೆದ ದಿನಾಂಕ (ಇ–ಪೋರ್ಟಲ್): 19.03.2022. (4) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 07.04.2022, 5.30 ಗಂಟೆಗೆ. (5) ಪ್ರಿ–ಬಿಡ್ ಸಭೆ ದಿನಾಂಕ & ಸಮಯ ಮತ್ತು ಸ್ಥಳ: 23.03.2022, 11.30 ಗಂಟೆಗೆ. ಜಂಟಿ ನಿರ್ದೇಶಕರ ಕಛೇರಿ ಸಮಾಜ ಕಲ್ಯಾಣ ಇಲಾಖೆ, ಕೋಲಾರ ಜಿಲ್ಲೆ. (6) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ಸಮಯ: 11.04.2022, 11.00 ಗಂಟೆಗೆ. (7) ಆರ್ಥಿಕ ಲಕೋಟೆ ತೆರೆಯುವ ದಿನಾಂಕ & ಸಮಯ: 12.04.2022, 11.00 ಗಂಟೆಗೆ. (8) ಇಎಂಡಿ ಮೊತ್ತ: ರೂ.40,125/-. (9) ಸಂಪರ್ಕಿಸುವ ವಿಳಾಸ: ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಡಾ|| ಬಿ.ಆರ್.ಅಂಬೇಡ್ಕರ್ ಭವನ, ಶ್ರೀನಿವಾಸಪುರ ರಸ್ತೆ, ಕೋಲಾರ, ದೂ: 080–67912388 ಇ–ಮೇಲ್: jointdirector.kolar@gmail.com

ಸಹಿ/- ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೋಲಾರ ಜಿಲ್ಲೆ
ವಾಸಾಸಂಇ/ಕೋಲಾರ/ಆರ್.ಒ.ಸಂಖ್ಯೆ454/ಎಂ.ಸಿ.ಎ/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಿಶೇಷ ಆಯುಕ್ತರು (ಕಲ್ಯಾಣ) ರವರ ಕಚೇರಿ, ಬೆಂಗಳೂರು

ಸಂಖ್ಯೆ: ಕ.ಅ/ಕೇಂಕ/ಪಿಆರ್/844/2021–22

ಸಾರ್ವಜನಿಕ ಪ್ರಕಟಣೆ

2021–22ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪಾಲಿಕೆ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ವಿಶೇಷ ಚೇತನರು ಹಾಗೂ ಸಾಮಾನ್ಯ ವರ್ಗ, ಟ್ರಾನ್ಸ್‌ಜೆಂಡರ್ಸ್ ಸಮುದಾಯದ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

	ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು 24.10%
ಕ್ರ. ಸಂ	**ಪಾಲಿಕೆಯ ಗ್ರೂಪ್–ಡಿ ನೌಕರರ/ಗ್ಯಾಂಗ್‌ಮೆನ್‌ಗಳ ಮತ್ತು ತೋಟಗಾರಿಕೆ ಮಾಲಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ (ಪಿ.ಕೋಡ್–0224)**
1.	ಪಾಲಿಕೆಯ ಖಾಯಂ / ಗುತ್ತಿಗೆ ಪೌರಕಾರ್ಮಿಕರು / ಸಫಾಯಿ ಕರ್ಮಚಾರಿಗಳು ಹಾಗೂ ಪಾಲಿಕೆಯ ವತಿಯಿಂದ ಈಗಾಗಲೇ ಗುರುತಿಸಿರುವ ಮ್ಯಾನ್ಯೂಯಲ್ ಸ್ಕ್ಯಾವೆಂಜರ್ಸ್‌ಗಳ ಕುಟುಂಬದ ಒಬ್ಬ ಮಗ ಅಥವಾ ಮಗಳಿಗೆ ಮಾತ್ರ ಸರ್ಕಾರಿ ಅಥವಾ ಖಾಸಗಿ ಶಾಲಾ/ಕಾಲೇಜುಗಳಲ್ಲಿ 1ನೇ ತರಗತಿಯಿಂದ ಪದವಿವರೆಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಶುಲ್ಕ ಮರುಪಾವತಿ (ಪಾವತಿಸಿರುವ ಬೋಧನಾ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಮೊತ್ತ ಗರಿಷ್ಟ ರೂ.50,000/–ಮೀರದಂತೆ) (ಮೇಲ್ಕಂಡ ನೌಕರರಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ)
	ಪಾಲಿಕೆ ಪೌರಕಾರ್ಮಿಕರಿಗೆ ಆರೋಗ್ಯ ಕಾರ್ಯಕ್ರಮ, ಪಿ–3820
1.	ವೈದ್ಯಕೀಯ ಸಹಾಯ, ಗಂಭೀರ ಸ್ವರೂಪ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಆರ್ಥಿಕ ಸಹಾಯಧನ.
	ಖಾಯಂ / ಗುತ್ತಿಗೆ ಪೌರಕಾರ್ಮಿಕರಿಗೆ ಕಲ್ಯಾಣ ಕಾರ್ಯಕ್ರಮಗಳು ಈ ಕೆಳಕಂಡ ಕಾರ್ಯಕ್ರಮಗಳನ್ನು ಪೌರಕಾರ್ಮಿಕರ ಕುಟುಂಬ ವರ್ಗದವರಿಗೆ ಸೌಲಭ್ಯಗಳನ್ನು ಒದಗಿಸುವುದು. ಪಿ–3831
1.	ಬ್ಯೂಟಿ ಪಾರ್ಲರ್ ತರಬೇತಿ ವೃತ್ತಿ ಪ್ರಾರಂಭಿಸಲು ಗರಿಷ್ಠ ರೂ. 25,000/– ಧನಸಹಾಯ
2.	ಫ್ಯಾಷನ್ ಡಿಸೈನಿಂಗ್ ತರಬೇತಿ ವೃತ್ತಿ ಪ್ರಾರಂಭಿಸಲು ಗರಿಷ್ಠ ರೂ.50,000/– ಧನಸಹಾಯ
3.	ರಾಜ್ಯ, ರಾಷ್ಟ್ರೀಯ ಅಥವಾ ಅಂತರ ರಾಷ್ಟ್ರೀಯ ಮಟ್ಟದ ಕ್ರೀಡೆ/ಕಲೆ/ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಧನ ಸಹಾಯ. ಅರ್ಹ ಅಂಗವಿಕಲರಿಗೆ ಆದ್ಯತೆ ನೀಡುವುದು.
	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಡಿ ಗ್ರೂಪ್ ನೌಕರರಿಗೆ ಸಹಾಯ ಧನ (ಖಾಯಂ ಚಾಲಕರು ಹಾಗೂ ಹೊರ ಗುತ್ತಿಗೆ ನೌಕರರು) ಪಿ–3313
1.	ಪಾಲಿಕೆಯ ಗ್ರೂಪ್–ಡಿ ನೌಕರರ/ಚಾಲಕರು ಒಬ್ಬ ಮಗ ಅಥವಾ ಮಗಳಿಗೆ ಮಾತ್ರ ಸರ್ಕಾರಿ ಅಥವಾ ಖಾಸಗಿ ಶಾಲಾ/ಕಾಲೇಜುಗಳಲ್ಲಿ 1ನೇ ತರಗತಿಯಿಂದ ಪದವಿವರೆಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಶುಲ್ಕ ಮರುಪಾವತಿ (ಪಾವತಿಸಿರುವ ಬೋಧನಾ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಮೊತ್ತ ಗರಿಷ್ಟ ರೂ.50,000/–ಮೀರದಂತೆ) (ಮೇಲ್ಕಂಡ ನೌಕರರಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ)
	ಪೌರಕಾರ್ಮಿಕರಿಗೆ ವೈಯಕ್ತಿಕ ಮನೆ ನಿರ್ಮಾಣ, ಪಿ–3821
	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಆರೋಗ್ಯ ಕಾರ್ಯಕ್ರಮ, ಪಿ–3822
1.	ವೈದ್ಯಕೀಯ ಸಹಾಯ, ಗಂಭೀರ ಸ್ವರೂಪ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಆರ್ಥಿಕ ಸಹಾಯಧನ.
	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೈಕ್ಷಣಿಕ ಕಾರ್ಯಕ್ರಮ, ಪಿ ಕೋಡ್–3823
1.	ಸರ್ಕಾರಿ ಅಥವಾ ಖಾಸಗಿ ಶಾಲಾ/ಕಾಲೇಜುಗಳಲ್ಲಿ 1ನೇ ತರಗತಿಯಿಂದ ಪದವಿವರೆಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಶುಲ್ಕ ಮರುಪಾವತಿ (ಪಾವತಿಸಿರುವ ಬೋಧನಾ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಮೊತ್ತ ಗರಿಷ್ಟ ರೂ.50,000/–ಮೀರದಂತೆ)
	ಪಾಲಿಕೆ ವ್ಯಾಪ್ತಿಯ ರುದ್ರಭೂಮಿ/ಸ್ಮಶಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ/ಪಂಗಡದವರಿಗೆ ಮನೆ ನಿರ್ಮಾಣ, ಪಿ–3629
	ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದ ಕಲ್ಯಾಣ ಕಾರ್ಯಕ್ರಮಗಳು
	ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರಿಗೆ ಆರೋಗ್ಯ ಕಾರ್ಯಕ್ರಮ, ಪಿ–3826
1.	ವೈದ್ಯಕೀಯ ಸಹಾಯ, ಗಂಭೀರ ಸ್ವರೂಪ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಆರ್ಥಿಕ ಸಹಾಯಧನ.
	ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರಿಗೆ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ, ಪಿ–3827
1.	ಪಾಲಿಕೆಯ ಗ್ರೂಪ್–ಡಿ ನೌಕರರ/ಗ್ಯಾಂಗ್ ಮ್ಯಾನ್ ಮತ್ತು ತೋಟಗಾರಿಕೆ ಮಾಲಿಗಳ ಕುಟುಂಬದ ಒಬ್ಬ ಮಗ ಅಥವಾ ಮಗಳಿಗೆ ಮಾತ್ರ ಮತ್ತು ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳಿಗೆ ಸರ್ಕಾರಿ ಅಥವಾ ಖಾಸಗಿ ಶಾಲಾ/ಕಾಲೇಜುಗಳಲ್ಲಿ 1ನೇ ತರಗತಿಯಿಂದ ಪದವಿವರೆಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಶುಲ್ಕ ಮರುಪಾವತಿ (ಪಾವತಿಸಿರುವ ಬೋಧನಾ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಮೊತ್ತ ಗರಿಷ್ಟ ರೂ.50,000/–ಮೀರದಂತೆ) (ಮೇಲ್ಕಂಡ ನೌಕರರಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ)
	ವಿಶೇಷ ಚೇತನರು ಹಾಗೂ ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು:–
	ದಿವ್ಯಾಂಗ ವ್ಯಕ್ತಿಗಳಿಗೆ ತ್ರಿಚಕ್ರವಾಹನ ವಿತರಣೆ, ಪಿ–3620
	ವಿಶೇಷ ಚೇತನದವರಿಗೆ ಆರೋಗ್ಯ ಕಾರ್ಯಕ್ರಮ, ಪಿ–3830
1.	ಕೃತಕ ಅಂಗ ಜೋಡಣೆಗೆ ಸಹಾಯಧನ
2.	ಅಂಗವಿಕಲರ ಹಕ್ಕುಗಳ ಕಾಯ್ದೆ 2016ರ ಅನ್ವಯ ಗುರುತಿಸಿರುವ 21 ಅಂಗವೈಕಲ್ಯಗಳನ್ನು ಸರಿಪಡಿಸುವ ಸಲುವಾಗಿ ನಡೆಸುವ ಶಸ್ತ್ರ ಚಿಕಿತ್ಸೆಗೆ ಗರಿಷ್ಠ ರೂ.50,000/–ಗಳ ವರೆಗೆ ಧನಸಹಾಯ
3.	ದೈಹಿಕ ವ್ಯಾಯಾಮ (Physiotheropy) ಮತ್ತು ಮಾತಿನ ವ್ಯಾಯಾಮಕ್ಕೆ (Speechtheropy) ಕ್ಕಾಗಿ ಸಹಾಯ ಧನ
	ವಿಶೇಷ ಚೇತನದವರಿಗೆ ಶೈಕ್ಷಣಿಕ ಕಾರ್ಯಕ್ರಮ, ಪಿ–3831
1.	ಸರ್ಕಾರಿ ಅಥವಾ ಖಾಸಗಿ ಶಾಲಾ/ಕಾಲೇಜುಗಳಲ್ಲಿ 1ನೇ ತರಗತಿಯಿಂದ ಪದವಿವರೆಗೆ ವ್ಯಾಸಂಗ ಮಾಡುತ್ತಿರುವ ವಿಶೇಷಚೇತನ ವಿದ್ಯಾರ್ಥಿಗಳಿಗೆ ಹಾಗೂ ವಿಶೇಷ ಚೇತನರ ಕುಟುಂಬದ ಒಬ್ಬ ಮಗ ಅಥವಾ ಮಗಳಿಗೆ ಶುಲ್ಕ ಮರುಪಾವತಿ (ಪಾವತಿಸಿರುವ ಬೋಧನಾ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಮೊತ್ತ ಗರಿಷ್ಟ ರೂ.50,000/–ಮೀರದಂತೆ)
2.	ಬುದ್ಧಿಮಾಂದ್ಯ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ಸಹಾಯ
3.	ಶೇ.45 ಕ್ಕಿಂತ ಹೆಚ್ಚು ವಿಕಲತೆ ಹೊಂದಿರುವ ಪೋಷಕರ ಮಕ್ಕಳಿಗೆ ಹಾಗೂ ವಿಶೇಷ ಚೇತನರ ಔಪಚಾರಿಕ ಹಾಗೂ ಅನೌಪಚಾರಿಕ (Formal & Nonformal) ಶಿಕ್ಷಣಕ್ಕಾಗಿ ಗರಿಷ್ಠ ರೂ.50,000/–ಗಳ ಆರ್ಥಿಕ ಸಹಾಯ.
	ವಿಶೇಷ ಚೇತನದವರಿಗೆ ಆರ್ಥಿಕ ಸಹಾಯ, ಪಿ–3831
1.	ಚಿಲ್ಲರೆ ಅಂಗಡಿ, ಪೋನ್ ಬೂತ್, ಸಂಗೀತ ಸಾಧನ, ತಳ್ಳುವ ಗಾಡಿ, ಹೊಲಿಗೆ ಯಂತ್ರ ಇತ್ಯಾದಿಗಳನ್ನು ಒದಗಿಸುವುದು.
2.	ಬ್ಯೂಟಿ ಪಾರ್ಲರ್ ವೃತ್ತಿ ಪ್ರಾರಂಭಿಸಲು ಧನಸಹಾಯ ಗರಿಷ್ಟ ರೂ.25,000/–
3.	ಫ್ಯಾಷನ್ ಡಿಸೈನಿಂಗ್ ವೃತ್ತಿ ಪ್ರಾರಂಭಿಸಲು ಗರಿಷ್ಠ 50,000/– ಧನಸಹಾಯ
4.	ಸಣ್ಣ ಉದ್ದಿಮೆದಾರರಿಗೆ ಸಹಾಯ ಧನ
	ಆರ್ಥಿಕವಾಗಿ ಹಿಂದುಳಿದ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು
	ಆರ್ಥಿಕವಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಸಹಾಯಧನ, ಪಿ–2975
	ಯೋಜನೆಗಳನ್ನು ಪಡೆಯಲು ಅಭ್ಯರ್ಥಿಗೆ ಇರಬೇಕಾದ ಅರ್ಹತೆಗಳು ಹಾಗೂ ಮಾನದಂಡಗಳು:–
1.	ಅರ್ಜಿದಾರರು ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಫಲಾನುಭವಿಗಳಿಗೆ ಮಾತ್ರ
2.	ಈ ಸಾಲಿನ ಎಲ್ಲಾ ಕಾರ್ಯಕ್ರಮಗಳ ಪೈಕಿ ಒಂದು ಕುಟುಂಬದಲ್ಲಿ ಯಾವುದಾದರೂ ಒಂದು ಯೋಜನೆಗೆ ಒಬ್ಬರು ಮಾತ್ರ ಅರ್ಹರಾಗಿರುತ್ತಾರೆ.
3.	ಆರ್ಥಿಕ ಮತ್ತು ಇತರೆ ಕಾರ್ಯಕ್ರಮಗಳ ಯೋಜನೆಗೆ ನಿಗಧಿಪಡಿಸಿರುವ ಅಭ್ಯರ್ಥಿಗಳ ವಯೋಮಿತಿ ಪರಿಶಿಷ್ಟ ಜಾತಿ / ಪಂಗಡದವರಿಗೆ / ಹಿಂದುಳಿದ ಅಲ್ಪ ಸಂಖ್ಯಾತ ವರ್ಗದವರಿಗೆ ಕನಿಷ್ಟ 18 ವರ್ಷಗಳು ಶೈಕ್ಷಣಿಕ ಕಾರ್ಯಕ್ರಮಗಳಿಗೆ ಕನಿಷ್ಠ 15 ವರ್ಷ, (ಪೌರಕಾರ್ಮಿಕರನ್ನು ಹೊರತುಪಡಿಸಿ)
4.	ಪರಿಶಿಷ್ಟ ಜಾತಿ / ಪಂಗಡದವರು / ಹಿಂದುಳಿದ ಅಲ್ಪ ಸಂಖ್ಯಾತ ವರ್ಗದವರಿಗೆ ತಹಸೀಲ್ದಾರ್ ರವರಿಂದ ಗಣಕೀಕೃತ ಜಾತಿ ಪ್ರಮಾಣ ಪತ್ರ ಹಾಗೂ ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು. ಸಾಮಾನ್ಯ ಸೌಲಭ್ಯಗಳಿಗೆ ರೂ. 1.00 ಲಕ್ಷಗಳ ಹಾಗೂ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಸೌಲಭ್ಯಗಳನ್ನು ಪಡೆಯಲು ರೂ. 2.00 ಲಕ್ಷಗಳ ಮೀರದೆ ವಾರ್ಷಿಕ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. (ವಿದ್ಯಾಭ್ಯಾಸಕ್ಕೆ ಎಲ್ಲಾ ಅಭ್ಯರ್ಥಿಯ ಹೆಸರಿನಲ್ಲಿ ಪರಿಶಿಷ್ಟ ಜಾತಿ / ಪಂಗಡ / ಹಿಂದುಳಿದ ಅಲ್ಪ ಸಂಖ್ಯಾತ ವರ್ಗದವರ ಆದಾಯ ಪ್ರಮಾಣ ಪತ್ರವಿರಬೇಕು)
5.	ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗೆ ಪಾಲಿಕೆಯ ಸಿಬ್ಬಂದಿಗಳಿಗೆ (ಪೌರಕಾರ್ಮಿಕರು, ನಾಲ್ಕನೇ ದರ್ಜೆ ನೌಕರರು ಮತ್ತು ಚಾಲಕರಿಗೆ ಸಂಬಂಧಿಸಿದಂತೆ) ಸದರಿಯವರ ಕಾರ್ಯನಿರ್ವಹಿಸುತ್ತಿರುವ ಕಛೇರಿಯ ಬಟವಾಡೆ ಅಧಿಕಾರಿಯವರಿಂದ ಅವಲಂಬಿತರ ದೃಢೀಕರಣ ಪತ್ರ ಮತ್ತು ವಾರ್ಷಿಕ ವೇತನ ಪ್ರಮಾಣ ಪತ್ರವನ್ನು ಸಲ್ಲಿಸುವುದು)
6.	ಅರ್ಜಿದಾರರು ವಯೋಮಿತಿ ದೃಢೀಕರಿಸಲು ಎಸ್.ಎಸ್.ಎಲ್.ಸಿ. ಅಂಕಪಟ್ಟಿ / ಶಾಲಾ–ಕಾಲೇಜಿನ ವರ್ಗಾವಣೆ ಪ್ರಮಾಣ ಪತ್ರ / ಜನನ ಪ್ರಮಾಣ ಪತ್ರದ ಪ್ರತಿ ಲಗತ್ತಿಸಬೇಕು.
7.	ಅಭ್ಯರ್ಥಿಗಳು ಅರ್ಜಿಯೊಂದಿಗೆ 3 ಇತ್ತೀಚಿನ ಭಾವಚಿತ್ರ, ಯೋಜನೆಗೆ ನಿಗಧಿಪಡಿಸಿದ ವಿದ್ಯಾರ್ಹತೆಯ ದಾಖಲೆಗಳು, ವಾಸಸ್ಥಳ ದೃಢೀಕರಣ ಪತ್ರಗಳಾದ ಮತದಾರರ ಗುರುತಿನ ಚೀಟಿ / ಪಡಿತರ ಚೀಟಿ / ಅಡಿಗೆ ಅನಿಲ ರಸೀದಿ / ಪರವಾನಿಗೆ ಪ್ರತಿಯನ್ನು ಸಲ್ಲಿಸಬೇಕು.
8.	ಅಭ್ಯರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸಿರುವ ಎಲ್ಲಾ ದಾಖಲೆಗಳನ್ನು (ಜೆರಾಕ್ಸ್ ಪ್ರತಿಗಳನ್ನು) ಗೆಜೆಟೆಡ್ ಅಧಿಕಾರಿಯಿಂದ ಅಥವಾ ನೋಟರಿಯವರಿಂದ ದೃಢೀಕರಿಸಿ ಸಲ್ಲಿಸಬೇಕು.
9.	ಆರ್ಥಿಕ ಸಹಾಯ ಕೋರಿ ಸಲ್ಲಿಸುವ ಅರ್ಜಿದಾರರು ಈ ಹಿಂದೆ ಸರ್ಕಾರ / ಸರ್ಕಾರೇತರ ಸಂಸ್ಥೆಗಳಿಂದ ಉಚಿತವಾಗಿ / ಸಾಲದ ಮುಖಾಂತರ ಇಂತಹ ಯಾವುದೇ / ಸವಲತ್ತುಗಳನ್ನು ಪಡೆದಿಲ್ಲವೆಂದು ರೂ. 20/–ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
10.	ವಿವಿಧ ತರಬೇತಿಗೆ ಆಯ್ಕೆಯಾಗುವ ಅಭ್ಯರ್ಥಿಗಳನ್ನು ತರಬೇತಿ ನೀಡುವ ಸಂಸ್ಥೆಗಳಿಗೆ ಪ್ರಾಯೋಜಿಸಲಾಗುವುದು.
11.	ಮೇಲ್ಕಂಡಂತೆ ಆಯೋಜಿಸಿರುವ ಕಲ್ಯಾಣ ಕಾರ್ಯಕ್ರಮಗಳಿಗೆ / ಯೋಜನೆಗಳಿಗೆ ಪಾಲಿಕೆಯು ಹೊರಡಿಸಿರುವ ಮಾರ್ಗಸೂಚಿಗಳ ಮಾನದಂಡಗಳನ್ವಯ ಫಲಾನುಭವಿಗಳನ್ನು ಆಯ್ಕೆ ಮಾಡುವುದರಿಂದ ಸೌಲಭ್ಯಗಳನ್ನು ಪಡೆಯಲು ಹೆಚ್ಚಿನ ದಾಖಲಾತಿಗಳನ್ನು ಸಲ್ಲಿಸುವ ಬಗ್ಗೆ ವಲಯದ ಕಲ್ಯಾಣ ವಿಭಾಗಕ್ಕೆ ಸಂಪರ್ಕಿಸಿ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡು ಅರ್ಜಿಯನ್ನು ಸಲ್ಲಿಸುವುದು.
12.	ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ / ಪಾಲಿಕೆಯು ಆಗಿಂದ್ದಾಗೆ ಸುತ್ತೋಲೆ / ಮಾರ್ಗಸೂಚಿಗಳಿಗೆ ಅನುಗುಣವಾಗಿ ಅಭ್ಯರ್ಥಿಗಳ ಆಯ್ಕೆ ಮಾಡಲಾಗುವುದು.

ಅರ್ಜಿ ಸಲ್ಲಿಸಲು ಇಚ್ಛಿಸುವವರು ಪಾಲಿಕೆಯ ಅಂತರ್ಜಾಲವಾದ https://site.bbmp.gov.in/department websites/welfare/welfareactivities.html ಇಲ್ಲಿ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿ ವಲಯದ ಕಚೇರಿಗೆ ಸಲ್ಲಿಸಬಹುದಾಗಿರುತ್ತದೆ ಅಥವಾ ವಲಯಗಳ ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣ) ರವರ ಕಚೇರಿಯಿಂದ ಅರ್ಜಿಯನ್ನು ಪಡೆದು ಪತ್ರಿಕಾ ಪ್ರಕಟಣೆ ದಿನಾಂಕದಿಂದ 30 ದಿನಗಳ ಒಳಗೆ ಭರ್ತಿ ಮಾಡಿ, ಎಲ್ಲಾ ದಾಖಲಾತಿಗಳೊಂದಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕೇಂದ್ರ ಕಚೇರಿಯ ಇ–ಮೇಲ್ ವಿಳಾಸ: welfarebbmp@gmail.com ಗೆ ಸಂಪರ್ಕಿಸುವುದು ಮತ್ತು ವಲಯದ ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣ) ರವರ ಕಚೇರಿಗೆ ಭೇಟಿ ಮಾಡತಕ್ಕದ್ದು.

ಸಹಿ/–
ಉಪ ಆಯುಕ್ತರು (ಕಲ್ಯಾಣ)

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಾಣಿಜ್ಯ ಚಟುವಟಿಕೆ ಬಿರುಸು • ನಿತ್ಯವೂ ಕಿರಿಕಿರಿ • ಎಚ್‌ಎಸ್‌ಆರ್ ನಿವಾಸಿಗಳ ಆಕ್ರೋಶ

ವಸತಿ ಪ್ರದೇಶದಲ್ಲಿ ವಾಣಿಜ್ಯ ಮಳಿಗೆ

• ಲಿಂಗರಾಜು

ವಾಣಿಜ್ಯ ಮಳಿಗೆಗಳಿಂದಾಗಿ ಹೆಚ್ಚುತ್ತಿರುವ ಸಂಚಾರ ದಟ್ಟಣೆ ಹಾಗೂ ವಾಹನ ನಿಲುಗಡೆ ಸಮಸ್ಯೆ

ಬೊಮ್ಮನಹಳ್ಳಿ: ನಗರದ ಎಚ್‌ಎಸ್‌ಆರ್ ಬಡಾವಣೆಯ ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಮಳಿಗೆಗಳು ಹೆಚ್ಚುತ್ತಿದ್ದು, ನೆಮ್ಮದಿಯಿಂದ ವಾಸ ಮಾಡಲಾಗುತ್ತಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

ಎಚ್‌ಎಸ್‌ಆರ್ ಬಡಾವಣೆಯಲ್ಲಿ ಭೂಮಿಯ ಬೆಲೆ ಗಗನ ಮುಟ್ಟಿದೆ. ಇದರಿಂದಾಗಿ ಇಡೀ ಬಡಾವಣೆ ವಾಣಿಜ್ಯ ಕೇಂದ್ರವಾಗಿ ಬದಲಾಗುತ್ತಿದ್ದು, ನೆಮ್ಮದಿಯ ವಾಸಕ್ಕೆ ಮನೆ ಕಟ್ಟಿಕೊಂಡಿರುವವರು ನಿತ್ಯವೂ ಕಿರಿಕಿರಿ ಅನುಭವಿಸುವಂತಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಬಡಾವಣೆಯ 5, 9, 14, 24 ಮತ್ತು 27ನೇ ಮುಖ್ಯ ರಸ್ತೆಗಳು ಹಾಗೂ 17 ಮತ್ತು 22ನೇ ಅಡ್ಡರಸ್ತೆಗಳಲ್ಲಿ ವಾಣಿಜ್ಯ ಚಟುವಟಿಕೆಗೆ ಅಧಿಕೃತ ಅನುಮತಿ ನೀಡಲಾಗಿದೆ. ಆದರೆ, ಇದನ್ನು ಮೀರಿ ಬಹುತೇಕ ಎಲ್ಲ ರಸ್ತೆಗಳಲ್ಲೂ ವಾಣಿಜ್ಯ ಮಳಿಗೆಗಳು ತಲೆ ಎತ್ತಿವೆ ಎಂದು ನಿವಾಸಿಗಳು ದೂರಿದ್ದಾರೆ. ಉದಾಹರಣೆಗೆ 16ನೇ ಅಡ್ಡರಸ್ತೆಯಲ್ಲಿ ಮೂರು ನರ್ಸರಿ ಶಾಲೆಗಳಿವೆ. ಇದಕ್ಕೆ ಅನುಮತಿ ಸಿಕ್ಕಿದ್ದಾದರೂ ಹೇಗೆ? ಎಂದು ನಿವಾಸಿಗಳು ಪ್ರಶ್ನಿಸುತ್ತಾರೆ.

'ಕೆಲವೆಡೆ ಪೇಯಿಂಗ್ ಗೆಸ್ಟ್ ಕಟ್ಟಡಕ್ಕೆ (ಪಿ.ಜಿ) ಉದ್ದೇಶಕ್ಕೆಂದು ಅನುಮತಿ ಪಡೆದು, ಇತರೆ ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ. ಅನುಮತಿ ಸಿಗುವುದಿಲ್ಲ ಎಂಬ ಕಾರಣಕ್ಕಾಗಿ ಇಂತಹ ಕಳ್ಳ ಮಾರ್ಗಗಳನ್ನು ಕಂಡುಕೊಂಡಿದ್ದಾರೆ' ಎಂದು ಹೆಸರೇಳಲಿಚ್ಛಿಸದ ನಿವಾಸಿಯೊಬ್ಬರು ಹೇಳಿದರು.

'ನಮ್ಮ ರಸ್ತೆಯಲ್ಲಿ ಐಟಿ ಕಂಪನಿ, ಬೇಕರಿ, ಬಟ್ಟೆ ಷೋರೂಂ ಅನೇಕ ದೊಡ್ಡ ಮಳಿಗೆಗಳಿವೆ. ಇಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಿಕೊಳ್ಳದಿರುವುದರಿಂದ, ಮನೆ ಮುಂದೆ ಪಾರ್ಕಿಂಗ್ ಮಾಡಿ ಹೋಗುತ್ತಾರೆ. ಮನೆ ಎದುರು ಗುಂಪುಗೂಡಿ ಸಿಗರೇಟ್ ಸೇದುತ್ತಾ ಕಿರುಚಾಡುತ್ತಾರೆ. ಇದರಿಂದ ನಮ್ಮ ನೆಮ್ಮದಿ ಹಾಳಾಗಿದೆ' ಎಂದು ಸ್ಥಳೀಯ ನಿವಾಸಿ ಅಂಕಣ್ಣರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು.

'ಬಡಾವಣೆಯಲ್ಲಿ ಪಿ.ಜಿ ಕಟ್ಟಡಗಳ ಹಾವಳಿ ಹೆಚ್ಚುತ್ತಿದೆ. ಅಕ್ಕಪಕ್ಕದ ಬಡಾವಣೆಗಳನ್ನು ಅಭಿವೃದ್ಧಿಪಡಿಸಿದ್ದಲ್ಲಿ ಇಲ್ಲಿನ ಒತ್ತಡ ಕಡಿಮೆ ಮಾಡಿ ವಾಣಿಜ್ಯ ವ್ಯವಹಾರವನ್ನು ವಿಸ್ತರಿಸಲು ಸಾಧ್ಯವಿದೆ. ಆದರೂ ಈ ಬಗ್ಗೆ ಅಧಿಕಾರಿಗಳು ತಲೆ ಕೆಡಿಸಿಕೊಳ್ಳುತ್ತಿಲ್ಲ' ಎನ್ನುತ್ತಾರೆ ನಿವಾಸಿ ಅನಿಲ್ ರೆಡ್ಡಿ.

'ವಸತಿಗೆ ಮೀಸಲಾದ ರಸ್ತೆಗಳಲ್ಲಿ ವಾಣಿಜ್ಯ ಚಟುವಟಿಕೆ ಹೆಚ್ಚುತ್ತಿರುವ ಬಗ್ಗೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಒಕ್ಕೂಟದ ಸಭೆಯಲ್ಲಿ ಅನೇಕ ಬಾರಿ ಚರ್ಚೆಯಾಗಿದೆ. ಈ ಬಗ್ಗೆ ಅಧಿಕಾರಿಗಳ ಗಮನಕ್ಕೂ ತರಲಾಗಿದೆ. ಇನ್ನಾದರೂ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗುವ ಅವಶ್ಯಕತೆ ಇದೆ' ಎನ್ನುತ್ತಾರೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಒಕ್ಕೂಟದ ಕಾರ್ಯದರ್ಶಿ ಎಚ್.ಇ.ಚಂದ್ರಶೇಖರ್.

'40 ಅಡಿ ರಸ್ತೆ ಇರುವ ಕಡೆ ವಾಣಿಜ್ಯ ಉದ್ದೇಶಕ್ಕೆ ವಾಣಿಜ್ಯ ಪರವಾನಗಿ ನೀಡಲು ಬಿಬಿಎಂಪಿ ಮಾರ್ಗದರ್ಶಿ ಸೂತ್ರಗಳಲ್ಲಿ ಅವಕಾಶವಿದೆ. ಆದಾಗ್ಯೂ ಎರಡು ವರ್ಷಗಳಿಂದ ಪಬ್, ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಅನುಮತಿ ನೀಡುತ್ತಿಲ್ಲ. ಜೊತೆಗೆ ಪರವಾನಗಿ ನೀಡುವಾಗ ಅಕ್ಕಪಕ್ಕದ ನಿವಾಸಿಗಳಿಂದ ಎನ್‌ಒಸಿ ಪಡೆಯುವುದನ್ನು ಕಡ್ಡಾಯ ಮಾಡಲಾಗಿದೆ. ನಿವಾಸಿಗಳಿಂದ ಆಕ್ಷೇಪ ಬಂದ ಕಡೆ ಪರವಾನಗಿ ರದ್ದು ಮಾಡಿದ್ದೇವೆ' ಎನ್ನುತ್ತಾರೆ ಬಿಬಿಎಂಪಿ ಬೊಮ್ಮನಹಳ್ಳಿ ವಲಯ ಆರೋಗ್ಯ ವೈದ್ಯಾಧಿಕಾರಿ ನಾಗೇಂದ್ರ.

ಬೊಮ್ಮನಹಳ್ಳಿ ಕ್ಷೇತ್ರ: 26ರಂದು ಜನಸ್ಪಂದನ

ಜನಸ್ಪಂದನ
ಸಿಟಿಜನ್ಸ್ ಫಾರ್ ಚೇಂಜ್

ಬೆಂಗಳೂರು: ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ 'ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ವತಿಯಿಂದ ಇದೇ 26ರಂದು ಜೆ.ಪಿ.ನಗರ ಆರನೇ ಹಂತದ ಗಣೇಶ ದೇವಸ್ಥಾನ ಮೈದಾನದಲ್ಲಿ 'ಜನಸ್ಪಂದನ' ಕಾರ್ಯಕ್ರಮ ಏರ್ಪಡಿಸಲಾಗಿದೆ.

ಶಾಸಕ ಎಂ.ಸತೀಶ ರೆಡ್ಡಿ, ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಈ ಕ್ಷೇತ್ರದ ನಿವಾಸಿಗಳು ಸ್ಥಳೀಯ ಸಮಸ್ಯೆಗಳನ್ನು ನೇರವಾಗಿ ಶಾಸಕರ ಹಾಗೂ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬಹುದು.

ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದ ಸ್ಥಳ: ಗಣೇಶ ಮೈದಾನ, 186, ಪುಟ್ಟೇನಹಳ್ಳಿ ರಸ್ತೆ, ಕೆ.ಆರ್.ಬಡಾವಣೆ, ಜೆ.ಪಿ.ನಗರ ಆರನೇ ಹಂತ, ಬೆಂಗಳೂರು–78

ಸಂಪರ್ಕ: 9448528998

'ಹೊಸೂರಿನವರೆಗೂ ಮೆಟ್ರೊ ವಿಸ್ತರಿಸಿ'

ಮುಖ್ಯಮಂತ್ರಿಗೆ ಕೃಷ್ಣಗಿರಿ ಸಂಸದ ಚೆಲ್ಲಕುಮಾರ್ ಮನವಿ

ಪ್ರಜಾವಾಣಿ ವಾರ್ತೆ

ಚೆಲ್ಲಕುಮಾರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಇದ್ದಾರೆ

ಬೆಂಗಳೂರು: 'ಮೆಟ್ರೊ ರೈಲು ಸಂಪರ್ಕವನ್ನು ಬೆಂಗಳೂರಿನಿಂದ ತಮಿಳುನಾಡಿನ ಹೊಸೂರಿನವರೆಗೂ ವಿಸ್ತರಿಸಿ' ಎಂದು ಕೃಷ್ಣಗಿರಿ ಲೋಕಸಭಾ ಕ್ಷೇತ್ರದ ಸಂಸದ ಡಾ.ಎ.ಚೆಲ್ಲಕುಮಾರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದ್ದಾರೆ.

'ಹೊಸೂರು ನಗರವು ಕರ್ನಾಟಕ ಮತ್ತು ತಮಿಳುನಾಡು ನಡುವಣ ಹೆಬ್ಬಾಗಿಲೆನಿಸಿದೆ. 3 ಸಾವಿರಕ್ಕೂ ಅಧಿಕ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳು ಹಾಗೂ ಬೃಹತ್ ಕೈಗಾರಿಕೆಗಳನ್ನು ಹೊಂದಿದೆ. ಈ ಕೈಗಾರಿಕೆಗಳಲ್ಲಿ ಕರ್ನಾಟಕ ಮತ್ತು ತಮಿಳುನಾಡಿನ ಲಕ್ಷಾಂತರ ಮಂದಿ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಮೆಟ್ರೊ ಸಂಪರ್ಕ ವಿಸ್ತರಿಸಿ. ಇದರಿಂದ ಎರಡು ರಾಜ್ಯಗಳ ಆರ್ಥಿಕ ಪ್ರಗತಿಗೆ ಅನುಕೂಲವಾಗುತ್ತದೆ' ಎಂದು ತಿಳಿಸಿದ್ದಾರೆ.

'ಹೊಸೂರಿನಲ್ಲಿರುವ ಕೈಗಾರಿಕೆಗಳ ಬಹುತೇಕ ಕಚೇರಿಗಳು ಬೆಂಗಳೂರಿನಲ್ಲಿವೆ. ಎಲೆಕ್ಟ್ರಾನಿಕ್ ಸಿಟಿ, ಬೊಮ್ಮಸಂದ್ರ ಹಾಗೂ ಅತ್ತಿಬೆಲೆಯಲ್ಲಿರುವ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಬಹುತೇಕರು ಹೊಸೂರಿನ ಆಸುಪಾಸಿ ನಲ್ಲಿ ನೆಲೆಸಿದ್ದಾರೆ. ಪ್ರತಿನಿತ್ಯ ಸಾವಿರಾರು ಕಾರ್ಮಿಕರು ಈ ಮಾರ್ಗದಲ್ಲಿ ಸಂಚರಿಸುವುದರಿಂದ ಸಂಚಾರ ದಟ್ಟಣೆ ಸಮಸ್ಯೆಯೂ ಹೆಚ್ಚುತ್ತಿದೆ. ಮೆಟ್ರೊ ರೈಲು ಸಂಪರ್ಕ ಕಲ್ಪಿಸಿದರೆ ಸಂಚಾರ ಸಮಸ್ಯೆ ಯೂ ನೀಗಲಿದ್ದು, ಕಾರ್ಮಿಕರ ಸುಗಮ ಸಂಚಾರಕ್ಕೂ ಅನುವು ಮಾಡಿಕೊಟ್ಟಂತಾಗುತ್ತದೆ' ಎಂದು ಅವರು ಹೇಳಿದ್ದಾರೆ.

'ಎಲೆಕ್ಟ್ರಾನಿಕ್ ಸಿಟಿ ಹಾಗೂ ಬೊಮ್ಮಸಂದ್ರದವರೆಗೂ ಮೆಟ್ರೊ ಸಂಪರ್ಕ ಕಲ್ಪಿಸಲಾಗಿದ್ದು ಅದರ ಕಾಮಗಾರಿ ಪ್ರಗತಿಯಲ್ಲಿದೆ. ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಿಂದ ಹೊಸೂರು ಕೇವಲ 20 ಕಿ.ಮೀ.ದೂರದಲ್ಲಿದೆ. ಮೆಟ್ರೊ ಮಾರ್ಗ ವಿಸ್ತರಿಸಿದರೆ ಬಿಎಂಆರ್‌ಸಿಎಲ್‌ಗೂ ಲಾಭವಾಗುತ್ತದೆ. ಗಾಜಿಯಾಬಾದ್–ಗ್ರೇಟರ್ ನೋಯ್ಡಾ ಹಾಗೂ ಹರಿಯಾಣದ ಗುರುಗ್ರಾಮ ಮತ್ತು ನವದೆಹಲಿ ನಡುವೆ ಅಲ್ಲಿನ ಸರ್ಕಾರಗಳು ಮೆಟ್ರೊ ಸಂಪರ್ಕ ಕಲ್ಪಿಸಿವೆ. ಅದೇ ಮಾದರಿಯನ್ನು ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳು ಅನುಸರಿಸಬೇಕು' ಎಂದು ಮನವಿ ಮಾಡಿದ್ದಾರೆ.

ಗಾಳಿ ಸಹಿತ ಮಳೆ: ಉರುಳಿದ ಮರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹಲವೆಡೆ ಮಂಗಳವಾರವೂ ಗಾಳಿ ಸಹಿತ ಜೋರು ಮಳೆ ಸುರಿಯಿತು. ಮೂರು ಕಡೆಗಳಲ್ಲಿ ಮರಗಳು ಉರುಳಿಬಿದ್ದಿದ್ದವು.

ಬಂಗಾಳ ಕೊಲ್ಲಿಯಲ್ಲಿ ಬೀಸುತ್ತಿರುವ ಚಂಡಮಾರುತದಿಂದಾಗಿ ನಾಲ್ಕು ದಿನಗಳಿಂದ ನಗರದಲ್ಲಿ ಬಿಡುವು ಕೊಡುತ್ತ ಮಳೆಯಾಗುತ್ತಿದೆ.

ಮಂಗಳವಾರ ಬೆಳಿಗ್ಗೆ ಬಿಸಿಲು ಕಾಣಿಸಿಕೊಂಡರೂ, ನಂತರ ತಂಪು ಗಾಳಿ ಬೀಸುತ್ತಿತ್ತು. ಹಲವೆಡೆ ಮಧ್ಯಾಹ್ನ ಹಾಗೂ ಸಂಜೆ ಜೋರು ಗಾಳಿ ಸಹಿತ ಮಳೆ ಆಯಿತು. ಮಳೆಯಿಂದಾಗಿ ಪ್ರಮುಖ ರಸ್ತೆಗಳಲ್ಲಿ ನೀರು ಹರಿಯಿತು. ಕೆಲವೆಡೆ ನೀರಿನಲ್ಲೇ ಪಾದಚಾರಿಗಳು ನಡೆದುಕೊಂಡು ಹೋದ ದೃಶ್ಯಗಳು ಕಂಡುಬಂದವು.

ಮೆಜೆಸ್ಟಿಕ್, ಗಾಂಧಿನಗರ, ಚಿಕ್ಕಪೇಟೆ, ಕಲಾಸಿಪಾಳ್ಯ, ಸಿಟಿ ಮಾರ್ಕೆಟ್, ಶಿವಾಜಿನಗರ, ಅಶೋಕ ನಗರ, ಕೋರಮಂಗಲ, ಮಡಿವಾಳ, ಜಯನಗರ, ಬಸವನಗುಡಿ, ಬನಶಂಕರಿ, ಹನುಮಂತನಗರ, ಗಿರಿನಗರ, ಕೆಂಗೇರಿ, ರಾಜರಾಜೇಶ್ವರಿನಗರ, ದೀಪಾಂಜಲಿನಗರ, ವಿಜಯನಗರ, ರಾಜಾಜಿನಗರ, ಯಶವಂತಪುರ, ಪೀಣ್ಯ, ಮಲ್ಲೇಶ್ವರ, ಶೇಷಾದ್ರಿಪುರ, ವಿದ್ಯಾರಣ್ಯಪುರ, ದೊಡ್ಡಬೊಮ್ಮಸಂದ್ರ ಸೇರಿ ಹಲವೆಡೆ ಮಳೆ ಸುರಿಯಿತು.

ಬಹುತೇಕ ಕಡೆ ಕಾಲುವೆಯಲ್ಲಿ ಹೂಳು ತುಂಬಿಕೊಂಡಿತ್ತು. ಹೀಗಾಗಿ, ನೀರು ರಸ್ತೆ ಮೇಲೆ ಹರಿಯಿತು. ಕೆಲವೆಡೆ ಬಿಬಿಎಂಪಿ ಸಿಬ್ಬಂದಿ ಹಾಗೂ ಸಂಚಾರ ಪೊಲೀಸರು, ಕಾಲುವೆಯಲ್ಲಿದ್ದ ಹೂಳು ತೆಗೆದು ನೀರು ಹರಿದು ಹೋಗುವಂತೆ ಮಾಡಿದರು.

ಸಂಜೆ ವೇಳೆಯಲ್ಲೇ ಮಳೆ ಜೋರಾಗಿತ್ತು. ಕೆಲಸ ಮುಗಿಸಿ ಮನೆಗೆ ಹೊರಟಿದ್ದ ಕೆಲ ಸಾರ್ವಜನಿಕರು ಪರಿತಪಿಸಿದರು. ಮೆಜೆಸ್ಟಿಕ್ ರೈಲ್ವೆ ಕೆಳಸೇತುವೆ ಹಾಗೂ ಓಕಳಿಪುರ ಕೆಳಸೇತುವೆಯಲ್ಲಿ ನೀರು ಹರಿದಿದ್ದರಿಂದ, ವಾಹನಗಳು ನಿಧಾನಗತಿಯಲ್ಲಿ ಸಂಚರಿಸಿದವು. ದಟ್ಟಣೆಯೂ ಉಂಟಾಗಿತ್ತು.

ಉರುಳಿದ ಮರ: 'ಜೋರು ಗಾಳಿಯಿಂದಾಗಿ ಹಂಪಿನಗರ ಬಳಿಯ ಆರ್.ಪಿ.ಸಿ ಬಡಾವಣೆ, ಅತ್ತಿಗುಪ್ಪೆ ಸಮೀಪದ ಬಿ.ಸಿ.ಸಿ ಬಡಾವಣೆ ಹಾಗೂ ಗಿರಿನಗರದಲ್ಲಿ ಮರಗಳು ಉರುಳಿಬಿದ್ದಿದ್ದು, ಅವುಗಳ ತೆರವು ಕಾರ್ಯಾಚರಣೆ ನಡೆಯುತ್ತಿದೆ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ವೇತನ ಹೆಚ್ಚಳ

ಬೆಂಗಳೂರು: ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿರುವ ಪದವಿ ಮತ್ತು ಕ್ರೀಡಾ ತರಬೇತಿಯಲ್ಲಿ ಡಿಪ್ಲೊಮಾ ಪಡೆದ ತರಬೇತುದಾರರಿಗೆ ನೀಡುವ ವೇತನವನ್ನು₹47,952ಕ್ಕೆ, ಪದವೀಧರರಲ್ಲದ ತರಬೇತುದಾರರಿಗೆ ಇದ್ದ ₹31,050 ವೇತನವನ್ನು ₹37,260ಕ್ಕೆ ಹೆಚ್ಚಿಸಲಾಗಿದೆ.

ನಾಳೆ ಪಿಂಚಣಿ ಅದಾಲತ್

ಬೆಂಗಳೂರು: ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ–ಋಣ ನಿರ್ವಹಣೆ ನಿರ್ದೇಶನಾಲಯವು ನಿವೃತ್ತ ರಾಜ್ಯ ಸರ್ಕಾರಿ ನೌಕರರ 'ಪಿಂಚಣಿ ಅದಾಲತ್' ಅನ್ನು ಮಾ.24ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30ರವರೆಗೆ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಚೇರಿಯ ವಿಡಿಯೊ ಕಾನ್ಫರೆನ್ಸ್ ಮೂಲಕ ಏರ್ಪಡಿಸಿದೆ.

ಪಿಂಚಣಿದಾರರು ತಮ್ಮ ಪಿಂಚಣಿ ಸಂಬಂಧಿತ ಕೊಂದುಕೊರತೆಗಳಿದ್ದರೆ, ಕಚೇರಿ ವಿಳಾಸಕ್ಕೆ ಅಥವಾ ಇಮೇಲ್ aditrslblrn@gmail.com ವಿಳಾಸಕ್ಕೆ ತಲುಪಿಸಿ, ಅದಾಲತ್‌ನಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ:ಸಹಾಯಕ ನಿರ್ದೇಶಕರ ಕಚೇರಿ, ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ–ಋಣ ನಿರ್ವಹಣೆ, ಬೆಂಗಳೂರು ಉತ್ತರ ಮತ್ತು ದಕ್ಷಿಣ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬಿ.ಆರ್.ಅಂಬೇಡ್ಕರ್ ವೀದಿ. **ಸಂಪರ್ಕ:** 080-22868349

SBI ಭಾರತೀಯ ಸ್ಟೇಟ್ ಬ್ಯಾಂಕ್

ಕಛೇರಿ ಆಡಳಿತ ವಿಭಾಗ, ಭಾರತೀಯ ಸ್ಟೇಟ್ ಬ್ಯಾಂಕ್ ವಿಭಾಗ ಸ್ಥಳೀಯ ಪ್ರಧಾನ ಕಛೇರಿ, ನವೀನ ಅನೆಕ್ಸ ಕಟ್ಟಡ, ನಂ.65, ಸಂತ ಮಾರ್ಕರ ರಸ್ತೆ, ಬೆಂಗಳೂರು –560001 ದೂರವಾಣಿ ಸಂಖ್ಯೆ : 080–24943866/ 4120

ಕೊರಿಯರ್ ಸೇವೆಗಳ ನೇಮಕ

ಭಾರತೀಯ ಸ್ಟೇಟ್ ಬ್ಯಾಂಕ್ ತನ್ನ ದಾಖಲೆಗಳನ್ನು ಕರ್ನಾಟಕ ರಾಜ್ಯ ಮತ್ತು ಭಾರತದ ಇತರ ಭಾಗಗಳಲ್ಲಿನ ವಿವಿಧ ಶಾಖೆ/ಕಛೇರಿಗಳಿಗೆ ಸಾಗಿಸಲು ಮತ್ತು ತಲುಪಿಸಲು ಬೆಂಗಳೂರು ಕರ್ನಾಟಕದಿಂದ ಕಾರ್ಯನಿರ್ವಹಿಸುತಿರುವ ಕೊರಿಯರ್ ಏಜೆನ್ಸಿಯ ಸೇವೆಗಳನ್ನು ನೇಮಿಸಿಕೊಳ್ಳಲು ಉದ್ದೇಶಿಸಿದೆ. ಆಸಕ್ತ ಕೊರಿಯರ್ ಏಜೆನ್ಸಿಗಳು ನಿಗದಿತ ನಮೂನೆಯ ಪ್ರಕಾರ ಅರ್ಜಿಯನ್ನು ಸಲ್ಲಿಸಬಹುದು. ಅರ್ಜಿ ನಮೂನೆಗಳನ್ನು ಸಹಾಯಕ ಪ್ರಧಾನ ವ್ಯವಸ್ಥಾಪಕರು (ಕಆವಿ) ಕಛೇರಿಯಲ್ಲಿ ಮೇಲೆ ತಿಳಿಸಿದ ವಿಳಾಸದಿಂದ ಪಡೆಯಬಹುದು. ಅಥವಾ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಲು www.sbi.co.in/procurementnews ಗೆ ಲಾಗ್ ಆನ್ ಮಾಡಬಹುದು. ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ಮೇಲೆ ತಿಳಿಸಿದ ವಿಳಾಸದಲ್ಲಿ 07 ನೇ ಏಪ್ರಿಲ್ 2022 ರ ಒಳಗೆ ಸಲ್ಲಿಸಬೇಕು.

ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು
(ಕಛೇರಿ ಆಡಳಿತ ವಿಭಾಗ)

ಮೀಸಲಾತಿ ಪರಾಮರ್ಶೆ: ನ್ಯಾ.ಸುಭಾಷ್ ಅಡಿ ಸಮಿತಿ ರಚನೆ

ಮಧ್ಯಂತರ ತಡೆಗೆ ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 2–ಎಗೆ ಪಂಚಮಸಾಲಿ ಸೇರ್ಪಡೆ ವಿರೋಧಿಸಿದ ಅರ್ಜಿ
- ವಿಭಾಗೀಯ ನ್ಯಾಯಪೀಠಕ್ಕೆ ಅರ್ಜಿ ವರ್ಗಾವಣೆ
- ಉನ್ನತ ಸಮಿತಿಯ ಪರಿಶೀಲನಾ ಅಂಶಗಳ ಬಗ್ಗೆ ತಕರಾರು

ಬೆಂಗಳೂರು: 'ವಿವಿಧ ಸಮುದಾಯಗಳ ಮೀಸಲಾತಿ ಪರಾಮರ್ಶೆ ನಡೆಸಲು, ರಾಜ್ಯ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಅಡಿ ನೇತೃತ್ವದಲ್ಲಿ ರಚಿಸಲಾಗಿರುವ ಮೂವರು ಸದಸ್ಯರ ಉನ್ನತ ಮಟ್ಟದ ಸಮಿತಿಯ ಕಾರ್ಯಾದೇಶಕ್ಕೆ ತಡೆ ನೀಡಬೇಕು ಎಂಬ ಅರ್ಜಿಯ ವಿಚಾರಣೆಯನ್ನು ವಿಭಾಗೀಯ ನ್ಯಾಯಪೀಠದಲ್ಲೇ ನಡೆಯುವುದು ಸೂಕ್ತ' ಎಂದು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ'ದ ಅಧ್ಯಕ್ಷ ರಾಮಚಂದ್ರಪ್ಪ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಯಾವುದೇ ಮಧ್ಯಂತರ ಆದೇಶ ನೀಡಲು ನಿರಾಕರಿಸಿದ್ದು, 'ಈ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿಗಳ ಮುಂದೆ ಮಂಡಿಸಿ' ಎಂದು ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶಿಸಿದ್ದಾರೆ.

ರಾಜ್ಯದ ವಿವಿಧ ಸಮುದಾಯಗಳ ಮೀಸಲು ಪರಿಶೀಲನೆಗೆ ಸುಭಾಷ್ ಅಡಿ ನೇತೃತ್ವದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತ ಕುಮಾರ್ ಹಾಗೂ ಎಂ. ಆರ್.ಕಾಂಬ್ಳೆ ಅವರನ್ನು ಸದಸ್ಯರನ್ನಾಗಿ, ರಾಜ್ಯ ಸರ್ಕಾರ 2021ರ ಜುಲೈ 1ರಂದು ಆದೇಶ ಹೊರಡಿಸಿತ್ತು. ಈ ಆದೇಶದ ಅನುಸಾರ ಸಮಿತಿಯು ಪರಾಮರ್ಶೆ ನಡೆಸಬೇಕಾದ ಮಾನದಂಡಗಳು ಈ ರೀತಿ ಇದ್ದವು.

- ಈಗ 3–ಬಿ ಅಡಿಯಲ್ಲಿ ಇರುವ ಪಂಚಮಸಾಲಿ ಲಿಂಗಾಯತ ಉಪ ಪಂಗಡವನ್ನು 2–ಎ ವ್ಯಾಪ್ತಿಗೆ ಸೇರ್ಪಡೆ ಮಾಡ ಬಹುದೇ? ಒಂದು ವೇಳೆ ಮಾಡುವುದಾದರೆ ಯಾವ ಸನ್ನಿವೇಶದಲ್ಲಿ ಮಾಡಬೇಕು?
- ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಆಯೋಗದ ವರದಿ ಅನುಷ್ಠಾನಕ್ಕಾಗಿ ಯಾವ ಮಾರ್ಗೋಪಾಯ ಅಥವಾ ವಿಧಾನಗಳನ್ನು ಅನುಸರಿಸಬಹುದು?
- ಕುರುಬ ಜಾತಿಯನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಲು ಮಾರ್ಗೋಪಾಯ ಸೂಚಿಸಬಹುದು.
- ವೀರಶೈವ ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯವನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರ್ಪಡೆ ಮಾಡಲು ಇರುವ ಮಾರ್ಗಗಳೇನು? ಈ ಪರಿಶೀಲನಾ ಅಂಶಗಳ ಅನುಸಾರ ನೇಮಕಗೊಂಡಿರುವ ಉನ್ನತ ಮಟ್ಟದ ಸಮಿತಿಯ ರಚನೆ ಕಾನೂನು ಬಾಹಿರ. ಆದ್ದರಿಂದ, ಈ ಸಮಿತಿ ಕಾರ್ಯ ನಿರ್ವಹಿಸದಂತೆ ತಡೆ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದರು.
- ಅರ್ಜಿದಾರರ ಪರ ಹಿರಿಯ ವಕೀಲ ರವಿವರ್ಮ ಕುಮಾರ್ ಮತ್ತು ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ಹಾಗೂ ಸರ್ಕಾರಿ ವಕೀಲ ಎಂ.ವಿನೋದ್ ಕುಮಾರ್ ಹಾಜರಾಗಿದ್ದರು.

ಅರ್ಜಿದಾರ ಒಕ್ಕೂಟಕ್ಕೆ ಆಗಿರುವ ಬಾಧೆಯೇನು?

ಅರ್ಜಿಗೆ ಸಂಬಂಧಿಸಿದಂತೆ ಏಕಸದಸ್ಯ ನ್ಯಾಯಪೀಠ ಮಂಗಳವಾರ ತನ್ನ ಆದೇಶವನ್ನು ಪ್ರಕಟಿಸಿದೆ.

'ಈ ರಿಟ್ ಅರ್ಜಿಯನ್ನು, 'ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ'ದ ಅಧ್ಯಕ್ಷರು ಸಲ್ಲಿಸಿದ್ದಾರೆ. ಸರ್ಕಾರದ ಆದೇಶದಿಂದ ಒಕ್ಕೂಟಕ್ಕೆ ಏನಾದರೂ ಬಾಧೆಯಾಗಿದೆಯೇ ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ' ಎಂದು ನ್ಯಾಯಪೀಠ ಹೇಳಿದೆ.

ಅಂತೆಯೇ, 'ಪಂಚಮಸಾಲಿ ಲಿಂಗಾಯತ ಸಮುದಾಯವನ್ನು 2–ಎಗೆ ಸೇರ್ಪಡೆ ಮಾಡಬಾರದು ಎಂಬ ಆಕ್ಷೇಪಣೆಯ ಈ ರಿಟ್ ಅರ್ಜಿಯ ಕೋರಿಕೆ ವಿಚಾರಣೆಗೆ ಯೋಗ್ಯವೇ ಎಂಬುದನ್ನು ವಿಭಾಗೀಯ ನ್ಯಾಯಪೀಠವೇ ಇತ್ಯರ್ಥಪಡಿಸುವುದು ಸೂಕ್ತ' ಎಂದು ನ್ಯಾಯಮೂರ್ತಿಗಳು ಅಭಿಪ್ರಾಯಪಟ್ಟಿದ್ದಾರೆ.

ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಚ್.ಸಿ.ಕೃಷ್ಣ ಅವರು ರಾಜ್ಯ ಸರ್ಕಾರ ನೀಡುವ 2021ನೇ ಸಾಲಿನ 'ಸಹಕಾರ ರತ್ನ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕೆಂಗೇರಿಯಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಪ್ರಶಸ್ತಿ ಸ್ವೀಕರಿಸಿದರು.

ವಿಮಾನ ಸಂಚಾರ: ಕೋವಿಡ್ ನಿಯಮಾವಳಿ ಸಡಿಲಿಕೆ

ನವದೆಹಲಿ(ಪಿಟಿಐ): ಕೋವಿಡ್ ನಿಯಮಾವಳಿಗಳನ್ನು ನಾಗರಿಕ ವಿಮಾನಯಾನ ಸಚಿವಾಲಯವು ಸಡಿಲಿಸಿದ್ದು, ವಿಮಾನಗಳ ಕ್ಯಾಬಿನ್ ಸಿಬ್ಬಂದಿ ಪಿಪಿಇ ಕಿಟ್ ಧರಿಸುವ ಅಗತ್ಯವಿಲ್ಲ. ವೈದ್ಯಕೀಯ ತುರ್ತು ಪರಿಸ್ಥಿತಿಗಾಗಿ ಅಂತರಾಷ್ಟ್ರೀಯ ವಿಮಾನಗಳಲ್ಲಿ ವಿಮಾನಯಾನ ಸಂಸ್ಥೆಗಳು ಮೂರು ಆಸನಗಳನ್ನು ಖಾಲಿ ಇಡಬೇಕಾಗಿಲ್ಲ ಎಂದು ತಿಳಿಸಿದೆ.

ವಿಮಾನಗಳ ಸಂಚಾರ ಕಾರ್ಯಾಚರಣೆಯನ್ನು ಸುಗಮವಾಗಿ ನಡೆಸಲು ಅನುಕೂಲವಾಗುವಂತೆ ಈ ಸಡಿಲಿಕೆಯನ್ನು ಮಾಡಲಾಗಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ಮಾರ್ಚ್ 21 ರಂದು ಹೊರಡಿಸಿರುವ ಆದೇಶದಲ್ಲಿ ತಿಳಿಸಿದೆ. ವಿಮಾನ ನಿಲ್ದಾಣಗಳಲ್ಲಿನ ಭದ್ರತಾ ಸಿಬ್ಬಂದಿ ಪ್ರಯಾಣಿಕರ ತಪಾಸಣೆಯನ್ನು ಪುನರಾರಂಭಿಸಬಹುದು ಎಂದು ಹೇಳಿದೆ.

ಜನವರಿ ನಂತರ ಭಾರತದಲ್ಲಿ ವಿಮಾನಯಾನ ಮಾರುಕಟ್ಟೆಯಲ್ಲಿ ಚೇತರಿಕೆ ಕಂಡುಬಂದಿದೆ. ಫೆಬ್ರುವರಿಯಲ್ಲಿ ದೇಶದಲ್ಲಿ ಸುಮಾರು 76.96 ಲಕ್ಷ ಪ್ರಯಾಣಿಕರು ವಿಮಾನದಲ್ಲಿ ಪ್ರಯಾಣಿಸಿದ್ದಾರೆ. ಜನವರಿಗಿಂತ ಶೇ 20 ರಷ್ಟು ಹೆಚ್ಚು ಮಂದಿ ಪ್ರಯಾಣಿಸಿದ್ದಾರೆ.

ಪ್ರಯಾಣಿಕರಿಗೆ ಹಾಗೂ ಸಿಬ್ಬಂದಿಗೆ ಉಸಿರಾಟದ ಸಮಸ್ಯೆ ಉಂಟಾದಾಗ ಬಳಸಲು ವಿಮಾನಯಾನ ಸಂಸ್ಥೆಗಳು ಕೆಲವು ಹೆಚ್ಚುವರಿ ಪಿಪಿಇ ಕಿಟ್‌ಗಳು, ಸ್ಯಾನಿಟೈಸರ್ ಮತ್ತು N-95 ಮುಖಗವಸುಗಳನ್ನು ಹೊಂದಿರಬೇಕು ಎಂದು ಸಚಿವಾಲಯ ತಿಳಿಸಿದೆ.

2021ರ ಅಕ್ಟೋಬರ್ 18 ರಿಂದಲೇ ದೇಶದಲ್ಲಿ ವಿಮಾನ ಸಂಚಾರ ಆರಂಭಗೊಂಡಿದೆ. 2022ರ ಮಾರ್ಚ್ 27 ರಿಂದ ಅಂತರರಾಷ್ಟ್ರೀಯ ವಿಮಾನ ಸಂಚಾರ ಪುನರ್ ಆರಂಭವಾಗಲಿದೆ.

ನಗರದಲ್ಲಿ ಇಂದು

ಗಡಿ ಭದ್ರತಾ ಪಡೆಯ ಕಾನ್‌ಸ್ಟೆಬಲ್‌ಗಳಿಂದ ಪರೇಡ್:ಸ್ಥಳ–ಗಡಿ ಭದ್ರತಾ ಪಡೆಯ ಎಸ್‌ಟಿಸಿ ಕೇಂದ್ರ, ಯಲಹಂಕ, ಬೆಳಿಗ್ಗೆ 7.50

ರಷ್ಯಾ–ಉಕ್ರೇನ್ ಯುದ್ಧ ನಿಲ್ಲಲು ಹಾಗೂ ಶಾಂತಿ ಸ್ಥಾಪನೆಗಾಗಿ ರುದ್ರಹೋಮ:ಆಯೋಜನೆ–ಭಾರತ ಏಕತಾ ಪ್ರತಿಷ್ಠಾನ, ಸ್ಥಳ–ವರಸಿದ್ಧಿ ವಿನಾಯಕಸ್ವಾಮಿ ದೇವಸ್ಥಾನ, ವಾಟರ್ ಟ್ಯಾಂಕ್ ಹತ್ತಿರ, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 10ರಿಂದ

'ನಮ್ಮ ಸಂವಿಧಾನ–ನಮ್ಮ ಹೆಮ್ಮೆ' ಪುಸ್ತಕ ಬಿಡುಗಡೆ:ವಿಧಾನಸಭಾ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಸ್ಥಳ–ಕೊಠಡಿ ಸಂಖ್ಯೆ-106, ಮೊದಲನೇ ಮಹಡಿ, ವಿಧಾನಸೌಧ, ಬೆಳಿಗ್ಗೆ 10.30

ಜನ ಪರ್ಯಾಯ ಬಜೆಟ್ ಅಧಿವೇಶನ:ಬೆಳಿಗ್ಗೆ 10.30ಕ್ಕೆ 'ಎಸ್‌ಸಿಪಿ–ಟಿಎಸ್‌ಪಿ ಅನುದಾನ ಮತ್ತು ಯೋಜನೆ ಜಾರಿ' ಕುರಿತು ಗೋಷ್ಠಿ–ಚಂದ್ರಪೂಜಾರಿ, ಲಕ್ಷ್ಮೀನಾರಾಯಣ ನಾಗವಾರ, ಗೋಪಾಲಕೃಷ್ಣ ಅರಳಹಳ್ಳಿ, ಗುರುಪ್ರಸಾದ್ ಕೆರಗೋಡು, 'ಮಹಿಳಾ ಸಮೂಹದ ಸಂಕಷ್ಟಗಳು–ಕರುಳಿಲ್ಲದ ಸರ್ಕಾರಗಳು' ಗೋಷ್ಠಿ–ಕೆ.ಎಸ್.ವಿಮಲಾ, ನಿರ್ಮಲ, ಲೀಲಾವತಿ, ಶಿಲ್ಪಾ ಪ್ರಸಾದ್, ಇಂದಿರಾ ಕೃಷ್ಣಪ್ಪ, ಮಧ್ಯಾಹ್ನ 2.30ಕ್ಕೆ ಸಮಾರೋಪ: ಅತಿಥಿಗಳು–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಅಧ್ಯಕ್ಷತೆ–ಜಿ.ಸಿ. ಬಯ್ಯಾರೆಡ್ಡಿ, ಭಾಗವಹಿಸುವವರು–ಮಾವಳ್ಳಿ ಶಂಕರ್, ಬಡಗಲಪುರ ನಾಗೇಂದ್ರ, ಗೌರಮ್ಮ, ಎಚ್.ವಿ.ದಿವಾಕರ್, ಆಯೋಜನೆ–ಸಂಯುಕ್ತ ಹೋರಾಟ–ಕರ್ನಾಟಕ, ಸ್ಥಳ–ಸ್ವಾತಂತ್ರ್ಯ ಉದ್ಯಾನ

ಎಂ.ಗೋವಿಂದ ಪೈ ಅವರ ಜನ್ಮದಿನ ಹಾಗೂ ಬಹುಮಾನ ವಿತರಣೆ:ಉದ್ಘಾಟನೆ–ನಾ.ದಾಮೋದರ ಶೆಟ್ಟಿ, ಅಧ್ಯಕ್ಷತೆ–ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಉಪನ್ಯಾಸ–ಸುಂ. ಕಂ.ಗೋವರ್ಧನ, ಆಯೋಜನೆ–ಕನ್ನಡ ಸಂಘರ್ಷ ಸಮಿತಿ, ಸ್ಥಳ–ಬಿಎಂಶ್ರೀ ಕಲಾಭವನ, ಎನ್.ಆರ್.ಕಾಲೊನಿ, ಸಂಜೆ 5

'ನಾರಾಯಣವರ್ಮ' ಪ್ರವಚನ: ಉಡುಪಿಯ ಅದಮಾರು ಮಠದ ವಿಶ್ವಪ್ರಿಯ ತೀರ್ಥ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ–ಉಡುಪಿ ಶ್ರೀಪಲಿಮಾರು ಮಠ, ಸಂಪಿಗೆ ರಸ್ತೆ, ಮಲ್ಲೇಶ್ವರ, (ಮಾ.29ರವರೆಗೆ ಪ್ರತಿದಿನ ಸಂಜೆ 6ರಿಂದ 7 ಗಂಟೆಯವರೆಗೆ ಕಾರ್ಯಕ್ರಮ)



ವಿಶ್ವಪ್ರಿಯ ತೀರ್ಥ ಶ್ರೀಪಾದಂಗಳವರು

'ರಾಮಮನೋಹರ ಲೋಹಿಯಾ ಪ್ರಶಸ್ತಿ' ಪ್ರದಾನ:ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಪುರಸ್ಕೃತರು–ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಅತಿಥಿಗಳು–ಆನಂದ ಕುಮಾರ್, ಬಿ.ಆರ್.ಪಾಟೀಲ, ಎಂ.ಪಿ.ನಾಡಗೌಡ, ವಸುಂಧರಾ ಭೂಪತಿ, ಅಧ್ಯಕ್ಷತೆ–ಬಿ.ಎಲ್.ಶಂಕರ್, ಆಯೋಜನೆ–ಭಾರತ ಯಾತ್ರಾ ಕೇಂದ್ರ, ರಾಮಮನೋಹರ ಲೋಹಿಯಾ ವಿಚಾರ ವೇದಿಕೆ, ಸ್ಥಳ–ಕರ್ನಾಟಕ ಚಿತ್ರಕಲಾ ಪರಿಷತ್ತು, ಸಂಜೆ 5.30

ರಂಗ ಮಿಲನೋತ್ಸವ: ಉಮಾ ಮಹೇಶ್ವರ ಎನ್.ಕೆ. ಅವರಿಗೆ 'ಮೇಕಪ್ ನಾಣಿ ಪ್ರಶಸ್ತಿ' ಪ್ರದಾನ, ಅತಿಥಿಗಳು–ಬಿ.ವಿ. ರಾಜಾರಾಮ್, ಸುಧಾ ಬೆಳವಾಡಿ, 'ದಹನ' ನಾಟಕ ಪ್ರದರ್ಶನ–ರಂಗಮಂಥನ, ಸ್ಥಳ–ಸೇವಾ ಸದನ, ಮಲ್ಲೇಶ್ವರ, ಸಂಜೆ 6.30

'ವಿಶ್ವ ಹವಾಮಾನ ದಿನ'ದ ಅಂಗವಾಗಿ ತರಹೇವಾರಿ ಹವಾಮಾನ ಉಪಕರಣಗಳ ಪ್ರದರ್ಶನ: ಆಯೋಜನೆ–ಹವಾಮಾನ ಇಲಾಖೆ, ಸ್ಥಳ–ಹವಾಮಾನ ಕೇಂದ್ರ, ಅರಮನೆ ರಸ್ತೆ, ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ

'ವೆಲ್‌ಕಮ್ ಜಾನಕಿ ಜಿಂಗಾನಿಯಾ!' ನಾಟಕ ಪ್ರದರ್ಶನ:ನಿರ್ದೇಶನ–ಸುರೇಶ ಆನಗಳ್ಳಿ, ಆಯೋಜನೆ–ಅನೇಕಾ, ಸ್ಥಳ–ರಂಗಶಂಕರ, ಸಂಜೆ 7.30

ವೆಲ್‌ಕಮ್ ಜಾನಕಿ ಜಿಂಗಾನಿಯಾ ನಾಟಕ

॥ಓಂ ಶ್ರೀ ಮಂಜುನಾಥಾಯ ನಮಃ॥

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ.)
ಧರ್ಮಸ್ಥಳ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ರಾಜ್ಯಾದ್ಯಂತ "ನಮ್ಮೂರು ನಮ್ಮ ಕೆರೆ" ಕಾರ್ಯಕ್ರಮದ ಮೂಲಕ ಕೆರೆಗಳ ಪುನಶ್ಚೇತನ ಕಾರ್ಯ ಜಾರಿಯಲ್ಲಿದೆ.

ಜನ ಸಹಭಾಗಿತ್ವದಲ್ಲಿ ಇದುವರೆಗೆ **387** ಕೆರೆಗಳಿಗೆ ಕಾಯಕಲ್ಪ ನೀಡಲಾಗಿದೆ, ಇದರಿಂದಾಗಿ ಕೆರೆಗಳಲ್ಲಿ **760.16 ಕೋಟಿ** ಗ್ಯಾಲನ್ ನೀರಿನ ಸಂಗ್ರಹಣೆಯ ಪ್ರಮಾಣವನ್ನು ಹೆಚ್ಚಿಸಲಾಗಿದೆ.

ಕೆರೆ ಪುನಶ್ಚೇತನದ ಕಾರ್ಯಗಳಿಗಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ರೂ. 30.00 ಕೋಟಿ ಮೊತ್ತ ವಿನಿಯೋಗಿಸಲಾಗಿದೆ. ರೂ. 26.51 ಕೋಟಿ ಮೊತ್ತದ ಹೂಳು ಸಾಗಾಟಕ್ಕೆ ಸ್ಥಳೀಯರ ಸಹಭಾಗಿತ್ವ ಪಡೆಯಲಾಗಿದೆ.

ಕರ್ನಾಟಕ ಸರಕಾರದ **'ಕೆರೆ ಸಂಜೀವಿನಿ'** ಕಾರ್ಯಕ್ರಮದಂತೆ ಯೋಜನೆಯ ಸಹಭಾಗಿತ್ವದಲ್ಲಿ **65 ಕೆರೆಗಳ** ಪುನಶ್ಚೇತನ ನಡೆಸಲಾಗಿದೆ. ಇದಕ್ಕಾಗಿ ಕರ್ನಾಟಕ ಸರಕಾರದ ರೂ. 5.80 ಕೋಟಿ ಅನುದಾನ ವಿನಿಯೋಗಿಸಲಾಗಿದೆ.

ವಿಶ್ವ ಜಲದಿನದ ಶುಭಾಶಯಗಳು

ಕೆರೆಗಳನ್ನು ಗಂಗೆಯೆಂದು ಪೂಜಿಸುತ್ತೇವೆ. ಇದು ನಮ್ಮ ಸಂಸ್ಕೃತಿ, ಅವುಗಳನ್ನು ಸಂರಕ್ಷಿಸೋಣ.
– ಡಾ। ಡಿ. ವೀರೇಂದ್ರ ಹೆಗ್ಗಡೆಯವರು

ಹೂಳೆತ್ತಿದ ಕೆರೆಯಿಂದ ಸುತ್ತ ಹಳ್ಳಿಯ ದನ ಕರುಗಳಿಗೆ ಅನುಕೂಲಕರವಾಗಿದ್ದಲ್ಲದೆ, ಮರುಜೀವ ಪಡೆದ ಕೊಳವೆ ಬಾವಿಗಳಿಂದ ಬರಡಾದ ಹೊಲಗಳು ಹಸಿರಿನಿಂದ ಕಂಗೊಳಿಸುತ್ತಿವೆ.
– ಚನ್ನಬಸಪ್ಪ ಭೀಮರಾಯ ತೇಲಿ, ವಿಜಯಪುರ

ಧರ್ಮಸ್ಥಳದ ಕೆರೆ ಪುನಶ್ಚೇತನ ಕಾರ್ಯದಿಂದ ನಮ್ಮೂರಿನ ಸಾವಿರ ಕುಟುಂಬಗಳಿಗೆ ಶಾಶ್ವತ ಕುಡಿಯುವ ನೀರು ಸಿಗುತ್ತಿದೆ.
– ಪುಟ್ಟರಾಜು ಬೆಂಚೆ, ಶಿರಾ

ನಾಡಿನ ಸಮಸ್ತ ಜಲಯೋಧರಿಗೆ ಅಭಿನಂದನೆಗಳು

(ಡಾ. ಎಲ್.ಹೆಚ್. ಮಂಜುನಾಥ್)
ಕಾರ್ಯನಿರ್ವಾಹಕ ನಿರ್ದೇಶಕರು

'ಸಿಎಸ್‌ಆರ್ ನಿಧಿ ಬಳಕೆಗೆ ನೀತಿ'

ಬೆಂಗಳೂರು: ರಾಜ್ಯ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಬಳಕೆಗೆ ನೀತಿ ರೂಪಿಸಲಾಗುವುದು ಎಂದು ಸಾರ್ವಜನಿಕ ಉದ್ದಿಮೆಗಳ ಖಾತೆ ಸಚಿವ ಎಂ.ಟಿ.ಬಿ.ನಾಗರಾಜ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಅವರು, 'ಕಂಪನಿ ಕಾಯ್ದೆಯ ಸೆಕ್ಷನ್ 135ರ ಪ್ರಕಾರ ಎಲ್ಲ ಉದ್ದಿಮೆಗಳೂ ತಮ್ಮ ಲಾಭಾಂಶದ ಶೇಕಡ 2ರಷ್ಟನ್ನು ಸಿಎಸ್‌ಆರ್ ನಿಧಿಯ ರೂಪದಲ್ಲಿ ಸಾರ್ವಜನಿಕ ಕೆಲಸಗಳಿಗೆ ಬಳಸಬೇಕು. ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು ಈ ಮೊತ್ತವನ್ನು ಹೇಗೆ ಬಳಸಬೇಕೆಂಬ ನೀತಿ ಇಲ್ಲ. ಇದರಿಂದಾಗಿ ಸಿಎಸ್‌ಆರ್ ನಿಧಿ ಬಳಕೆಯಲ್ಲಿ ಕೆಲವು ಸಮಸ್ಯೆಗಳಿವೆ' ಎಂದರು. 'ಸ್ಥಳೀಯ ಆಡಳಿತ ಸಂಸ್ಥೆಗಳು ಮತ್ತು ಆಯಾ ಪ್ರದೇಶದ ನಾಗರಿಕರ ಬೇಡಿಕೆಗಳನ್ನು ಆಧರಿಸಿ ಸಿಎಸ್‌ಆರ್ ನಿಧಿ ಬಳಸುವುದನ್ನು ಕಡ್ಡಾಯಗೊಳಿಸಲಾಗುವುದು' ಎಂದು ತಿಳಿಸಿದರು.

10 ಎಚ್‌ಪಿವರೆಗಿನ ಪಂಪ್‌ಸೆಟ್ • ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಕಾಫಿ ಬೆಳೆಗಾರರಿಗೂ ಉಚಿತ ವಿದ್ಯುತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹತ್ತು ಎಚ್‌ಪಿ ಪಂಪ್ ಸೆಟ್‌ವರೆಗಿನ ಕಾಫಿ ಬೆಳೆಗಾರರಿಗೆ ಉಚಿತ ವಿದ್ಯುತ್ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಶೂನ್ಯವೇಳೆಯಲ್ಲಿ ಬಿಜೆಪಿಯ ಅಪ್ಪಚ್ಚು ರಂಜನ್ ಈ ವಿಷಯ ಪ್ರಸ್ತಾಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ಅವರು 'ಹತ್ತು ಎಚ್‌ಪಿ ಪಂಪ್‌ಸೆಟ್‌ವರೆಗೆ ಸೀಮಿತವಾಗಿ ಕಾಫಿ ಬೆಳೆಗಾರರಿಗೆ ಉಚಿತ ವಿದ್ಯುತ್ ನೀಡಲು ನಮಗೆ ತಕರಾರು ಇಲ್ಲ. ಇದರಿಂದ ದುರುಪಯೋಗ ಆಗಬಾರದು. ಆದ್ದರಿಂದ ಕೆಲವು ನಿಬಂಧನೆಗಳನ್ನು ವಿಧಿಸಲಾಗುವುದು. ಅದನ್ನು ಒಪ್ಪಿಕೊಳ್ಳಬೇಕು' ಎಂದು ಅವರು ತಿಳಿಸಿದರು.

ರೈತರಿಗೆ ಉಚಿತ ವಿದ್ಯುತ್ ನೀಡುತ್ತಿರುವುದರಿಂದ ಸರ್ಕಾರದ ಮೇಲೆ ₹14 ಸಾವಿರ ಕೋಟಿಯಷ್ಟು ಹೊರೆ ಇದೆ. ಬಡ ರೈತರಿಗೆಂದು 2008ರಲ್ಲಿ ಸಬ್ಸಿಡಿ ಯೋಜನೆ ಘೋಷಣೆ ಮಾಡಲಾಗಿತ್ತು. ಕಾಫಿ ಬೆಳೆಯುವವರು ಸ್ಥಿತಿವಂತರಿರುತ್ತಾರೆ ಎಂಬ ಕಾರಣಕ್ಕೆ ಆಗ ಸೇರಿಸಿರಲಿಲ್ಲ ಎಂದರು.

ಶಾಸಕರಾದ ಎ.ಟಿ.ರಾಮಸ್ವಾಮಿ, ಸಿ.ಟಿ.ರವಿ. ಎಚ್‌.ಕೆ.ಕುಮಾರಸ್ವಾಮಿ. ಎಂ.ಪಿ. ಕುಮಾರಸ್ವಾಮಿ, ಕೆ.ಜೆ.ಬೋಪಯ್ಯ ಅವರೂ ವಿದ್ಯುತ್ ಸಬ್ಸಿಡಿಗಾಗಿ ಒತ್ತಾಯಿಸಿದರು.

ಸುನಿಲ್ ತುರ್ತುಸಭೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಘೋಷಣೆ ಹೊರಡಿಸಿದ ಬೆನ್ನಲ್ಲೇ ಇಂಧನ ಸಚಿವ ವಿ.ಸುನಿಲ್ ಕುಮಾರ್ ಇಲಾಖೆ ಅಧಿಕಾರಿಗಳ ಸಭೆ ನಡೆಸಿ, ಈ ಯೋಜನೆ ವ್ಯಾಪ್ತಿಗೆ ಬರುವ ಫಲಾನುಭವಿ ರೈತರ ಸಂಖ್ಯೆಯ ಮಾಹಿತಿ ಪಡೆದರು. ರಾಜ್ಯದಲ್ಲಿ ಹತ್ತು ಎಚ್‌ಪಿ ಪಂಪ್‌ಸೆಟ್ ಹೊಂದಿರುವ 15 ಸಾವಿರ ಬೆಳೆಗಾರರು ಇದ್ದಾರೆ. ಇವರೆಲ್ಲರನ್ನೂ ಯೋಜನಾ ವ್ಯಾಪ್ತಿಗೆ ಸೇರಿಸಲಾಗುವುದು. ಇದಕ್ಕಾಗಿ ಶೀಘ್ರವೇ ಆದೇಶ ಹೊರಡಿಸುವಂತೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಾಲೆ ದುರಸ್ತಿಗೆ ಸಹಕರಿಸದ ರೈತರು

ಮಂಡ್ಯ ಜಿಲ್ಲೆಯಲ್ಲಿ ವಿಶ್ವೇಶ್ವರಯ್ಯ ನಾಲಾ ಜಾಲದ 2 ನೇ ಹಂತದ ದುರಸ್ತಿ ಕಾಮಗಾರಿಗಳನ್ನು ನಡೆಸಲು ರೈತರು ಸಹಕರಿಸುತ್ತಿಲ್ಲ ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಈ ನಾಲೆ ದುರಸ್ತಿಗೆ ಒಂದು ವರ್ಷ ನೀರು ನಿಲ್ಲಿಸಬೇಕಾಗುತ್ತದೆ. ಈ ಭಾಗದ ರೈತರು ಒಂದು ವರ್ಷದ ಮಟ್ಟಿಗೆ ತ್ಯಾಗಕ್ಕೆ ಸಿದ್ಧರಾದರೆ ಕಾಮಗಾರಿ ನಡೆಸಬಹುದು. ಆದರೆ, ರೈತರು ಒಪ್ಪುತ್ತಿಲ್ಲ. ಈ ಕಾಮಗಾರಿ ನಡೆಸಲು ₹300 ಕೋಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಗುತ್ತಿಗೆದಾರರು ಸ್ಥಳಕ್ಕೆ ಹೋದರೆ ಕಾಮಗಾರಿಗೆ ಅವಕಾಶ ನೀಡುತ್ತಿಲ್ಲ ಎಂದು ಹೇಳಿದರು.

ಸ್ಥಳೀಯ ಜನಪ್ರತಿನಿಧಿಗಳು ರೈತರ ಮನವೊಲಿಸಬೇಕು. ವಿಧಾನಸಭೆಯಲ್ಲಿ ಶಾಸಕರು ಸರಿಪಡಿಸಿಕೊಡಿ ಎನ್ನುತ್ತಾರೆ. ಅಲ್ಲಿ ಕಾಮಗಾರಿ ಮಾಡಲು ಬಿಡುವುದಿಲ್ಲ. ಈ ರೀತಿ ಆದರೆ ಕಷ್ಟವಾಗುತ್ತದೆ ಎಂದು ಜೆಡಿಎಸ್‌ನ ಡಿ.ಸಿ.ತಮ್ಮಣ್ಣ ಅವರ ಪ್ರಶ್ನೆಗೆ ಉತ್ತರಿಸಿದರು.

ಸಕಲೇಶಪುರಕ್ಕೆ ಕಿಂಡಿ ಅಣೆಕಟ್ಟೆ

ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನಲ್ಲಿ ಕಿಂಡಿ ಅಣೆಕಟ್ಟೆ ಕಟ್ಟಲು ತಾಂತ್ರಿಕವಾಗಿ ಶಕ್ಯವಾಗಿರುವ ಸೂಕ್ತ ಸ್ಥಳಗಳನ್ನು ಗುರುತಿಸಲು ಕ್ರಮ ತೆಗೆದುಕೊಳ್ಳುವುದಾಗಿ ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಭರವಸೆ ನೀಡಿದರು.

ಸಕಲೇಶಪುರದಲ್ಲಿ ಕಿಂಡಿ ಅಣೆಕಟ್ಟು ಮಾಡುವುದರಿಂದ ಅರಣ್ಯ ಪ್ರದೇಶ ನೀರಿನಲ್ಲಿ ಮುಳುಗಬಹುದು. ಅಲ್ಲದೆ ಆಳವೂ ಹೆಚ್ಚಾಗಿದೆ. ಈ ಬಗ್ಗೆ ಸಮೀಕ್ಷೆ ನಡೆಸಲಾಗಿದೆ. ಆದರೂ ಕ್ಷೇತ್ರದ ಶಾಸಕರ ಬೇಡಿಕೆಯನ್ನು ತಳ್ಳಿ ಹಾಕಲು ಆಗುವುದಿಲ್ಲ. ಇದಕ್ಕೆ ಸುಮಾರು ₹8 ಕೋಟಿ ಬೇಕಾಗುತ್ತದೆ. ನಿಮ್ಮ ಬೇಡಿಕೆ ಈಡೇರಿಸುತ್ತೇವೆ ಎಂದು ಹೇಳಿದರು.

ಸುದ್ದಿ 2 ನಿಮಿಷ

'ಮೀಸಲಾತಿ ನಿಗದಿಗೆ ಸಮಿತಿ'

ಬೆಂಗಳೂರು: ರಾಜ್ಯದ 58 ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ನಿಗದಿಯಲ್ಲಿನ ತೊಡಕುಗಳ ನಿವಾರಣೆಗೆ ಸಮಿತಿಯೊಂದನ್ನು ನೇಮಿಸಲಾಗುವುದು ಎಂದು ಪೌರಾಡಳಿತ ಸಚಿವ ಎಂ.ಟಿ.ಬಿ. ನಾಗರಾಜು ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ಕೆ. ರಾಥೋಡ್ ಮತ್ತು ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಪ್ರಶ್ನೆಗಳಿಗೆ ಮಂಗಳವಾರ ಉತ್ತರಿಸಿದ ಅವರು, 'ಈಗಾಗಲೇ ಚುನಾವಣೆ ನಡೆದಿರುವ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷರ ಹುದ್ದೆಗಳಿಗೆ ಮೀಸಲಾತಿ ನಿಗದಿಗೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಕೆಲವು ಪ್ರಕರಣಗಳಿವೆ. ಆದರೆ, ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನೀಡಿರುವ ಆದೇಶದಿಂದ ಈಗ ಮೀಸಲಾತಿ ನಿಗದಿಗೆ ತೊಡಕಾಗಿದೆ' ಎಂದರು.

ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ಮುನ್ನ ಕೆಲವು ಪ್ರಕ್ರಿಯೆ ನಡೆಸುವಂತೆ ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶದಲ್ಲಿನ ಚುನಾವಣೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಸುಪ್ರೀಂಕೋರ್ಟ್ ಆದೇಶಿಸಿದೆ. ಅದನ್ನು ಪಾಲಿಸಲು ಸರ್ಕಾರ ಸಿದ್ಧತೆ ನಡೆಸಿದೆ. ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿಯಲ್ಲೂ ಕಾನೂನು ಸಮಸ್ಯೆ ಎದುರಾಗದಂತೆ ಎಚ್ಚರ ವಹಿಸಲಾಗುವುದು ಎಂದರು. ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, 'ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗದಂತೆ ಸರ್ಕಾರ ಎಚ್ಚರ ವಹಿಸಲಿದೆ'ಎಂದರು.

3 ವರ್ಷಗಳಲ್ಲಿ 571 ಬಾಲ್ಯ ವಿವಾಹ

ಬೆಂಗಳೂರು: ರಾಜ್ಯದಲ್ಲಿ 2018–19ರಿಂದ 2020–21ರವರೆಗಿನ ಮೂರು ವರ್ಷಗಳ ಅವಧಿಯಲ್ಲಿ 571 ಬಾಲ್ಯ ವಿವಾಹ ಪ್ರಕರಣಗಳು ನಡೆದಿವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ಉಪ ನಾಯಕ ಕೆ. ಗೋವಿಂದರಾಜ್ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಸಚಿವರು, '2018–19ರಲ್ಲಿ 119, 2019–20ರಲ್ಲಿ 156 ಮತ್ತು 2020–21ರಲ್ಲಿ 296 ಬಾಲ್ಯ ವಿವಾಹ ಪ್ರಕರಣಗಳು ವರದಿಯಾಗಿವೆ. 417 ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ರಾಷ್ಟ್ರೀಯ ಅಪರಾಧ ಪ್ರಕರಣಗಳ ಬ್ಯೂರೊ (ಎನ್‌ಸಿಆರ್‌ಬಿ) ವರದಿ ಪ್ರಕಾರ, ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಬಾಲ್ಯ ವಿವಾಹ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ' ಎಂದರು.

ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಅತ್ಯಧಿಕ ಅಂದರೆ 59 ಬಾಲ್ಯ ವಿವಾಹಗಳು ನಡೆದಿವೆ. ರಾಮನಗರ ಜಿಲ್ಲೆಯಲ್ಲಿ 51, ಹಾಸನ ಜಿಲ್ಲೆಯಲ್ಲಿ 42, ಮೈಸೂರು ಜಿಲ್ಲೆಯಲ್ಲಿ 38, ಬೆಳಗಾವಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ತಲಾ 37 ಬಾಲ್ಯ ವಿವಾಹಗಳು ನಡೆದಿರುವುದು ವರದಿಯಾಗಿದೆ. ಉಡುಪಿ ಜಿಲ್ಲೆಯಲ್ಲಿ ಮೂರು ವರ್ಷಗಳಲ್ಲಿ ಯಾವುದೇ ಪ್ರಕರಣ ವರದಿಯಾಗಿಲ್ಲ ಎಂದು ಸಚಿವರು ವಿವರ ನಿಡಿದರು.

ಮಾತುಕತೆ

ವಿಧಾನ ಪರಿಷತ್ತಿನಲ್ಲಿ ಮಂಗಳವಾರ ನಡೆದ ಕಲಾಪದ ವೇಳೆ ಸಾರಿಗೆ ಸಚಿವ ಬಿ.ಶ್ರೀರಾಮುಲು ಮತ್ತು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಚರ್ಚೆಯಲ್ಲಿ ತೊಡಗಿದ್ದರು. ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್ ಅವರು ಇದ್ದರು

–ಪ್ರಜಾವಾಣಿ ಚಿತ್ರ

ಕಾಲ್ಪನಿಕ ವೇತನ ಬಡ್ತಿ: ಉನ್ನತಮಟ್ಟದ ಸಭೆಯ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುದಾನಿತ ಶಿಕ್ಷಣ ಸಂಸ್ಥೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಸೇವೆಗೆ ಸೇರಿದ ದಿನಾಂಕದಿಂದಲೇ ಸೇವಾ ಸೌಲಭ್ಯಗಳನ್ನು (ಕಾಲ್ಪನಿಕ ವೇತನ ಬಡ್ತಿ) ಒದಗಿಸಲು ಇರುವ ತೊಡಕುಗಳನ್ನು ನಿವಾರಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಉನ್ನತಮಟ್ಟದ ಸಭೆ ನಡೆಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಭರವಸೆ ನೀಡಿದರು.

ವಿಧಾನಪರಿಷತ್‌ನಲ್ಲಿ ಮಂಗಳವಾರ ನಿಯಮ 330ರ ಅಡಿಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಸರ್ಕಾರದ ಮುಖ್ಯ ಸಚೇತಕ ವೈ.ಎ.ನಾರಾಯಣ ಸ್ವಾಮಿ, ಬಿಜೆಪಿಯ ಎಸ್‌.ವಿ. ಸಂಕನೂರ, ಶಶೀಲ್ ನಮೋಶಿ, ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ, ಮರಿತಿಬ್ಬೇಗೌಡ, ಎಸ್‌.ಎಲ್‌. ಭೋಜೇಗೌಡ, ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ಕಾಲ್ಪನಿಕ ವೇತನ ಬಡ್ತಿ ಸಮಸ್ಯೆ ಇತ್ಯರ್ಥಪಡಿಸುವಂತೆ ಆಗ್ರಹಿಸಿದರು.

ಉತ್ತರ ನೀಡಿದ ಸಚಿವರು, '25,000 ನೌಕರರಿಗೆ ಕಾಲ್ಪನಿಕ ವೇತನ ಬಡ್ತಿ ನೀಡಬೇಕಾಗುತ್ತದೆ. ಇದಕ್ಕಾಗಿ ವಾರ್ಷಿಕ ₹ 351 ಕೋಟಿ ಆರ್ಥಿಕ ಹೊರೆ ಬೀಳುತ್ತದೆ. ಹಿಂಬಾಕಿ ಸೇರಿದಂತೆ ₹ 3,083 ಕೋಟಿ ಬೇಕಾಗುತ್ತದೆ. ಈ ವಿಷಯಕ್ಕೆ ಸಂಬಂಧಿಸಿದ ಪ್ರಕರಣ ಹೈಕೋರ್ಟ್‌ನಲ್ಲಿದೆ. ಅಲ್ಲಿ ಇತ್ಯರ್ಥವಾದ ಬಳಿಕ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಅಧಿಕಾರಿಗಳು ಸರ್ಕಾರವನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ₹ 3,083 ಕೋಟಿ ಅಗತ್ಯವಿಲ್ಲ. ಯಾರೊಬ್ಬರೂ ಹಿಂಬಾಕಿ ಕೇಳುವುದಿಲ್ಲ. ₹ 351 ಕೋಟಿಯಲ್ಲೇ ವಿಷಯ ಇತ್ಯರ್ಥವಾಗುತ್ತದೆ. ತಕ್ಷಣ ನಿರ್ಧಾರ ಪ್ರಕಟಿಸಬೇಕು' ಎಂದು ಸದಸ್ಯರು ಪಟ್ಟುಹಿಡಿದರು.

ಮುಖ್ಯಮಂತ್ರಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನ ಪರಿಷತ್‌ನ ಶಿಕ್ಷಕರ ಕ್ಷೇತ್ರ ಪ್ರತಿನಿಧಿಗಳು, ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ಪ್ರತಿನಿಧಿಗಳ ಜತೆ ಉನ್ನತಮಟ್ಟದ ಸಭೆ ನಡೆಸಲಾಗುವುದು. ಅಲ್ಲಿಯೇ ಸಮಸ್ಯೆ ಇತ್ಯರ್ಥಕ್ಕೆ ಪ್ರಯತ್ನಿಸಲಾಗುವುದು ಎಂದರು. ಇದನ್ನು ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಬೆಂಬಲಿಸಿದರು.

ಮೇಕೆದಾಟು: ನಿರ್ಣಯಕ್ಕೆ ಒಮ್ಮತ

ಒಂದನೇ ಪುಟದಿಂದ

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ನಾಡಿನ ನೆಲ, ಜಲ, ಭಾಷೆ ಮತ್ತು ಗಡಿ ರಕ್ಷಣೆಯ ವಿಚಾರದಲ್ಲಿ ಎಲ್ಲ ರಾಜಕೀಯ ಪಕ್ಷಗಳ ನಿಲುವು ಒಂದೇ. ತಮಿಳುನಾಡು ವಿರುದ್ಧ ವಿಧಾನಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳುವ ಮೊದಲು ಕಾನೂನು ತಜ್ಞರ ಜತೆ ಮಾತುಕತೆ ನಡೆಸುತ್ತೇನೆ. ನಾಳೆಯೇ ನಿರ್ಣಯ ಮಂಡಿಸುತ್ತೇನೆ' ಎಂದರು.

'ತಮಿಳುನಾಡು ವಿಧಾನಸಭೆಯ ನಿರ್ಣಯ ರಾಜ್ಯದ ಹಕ್ಕಿನ ಮೇಲೆ ನಡೆಸಿರುವ ಗದಾ ಪ್ರಹಾರ. ಇದು ಒಕ್ಕೂಟ ವ್ಯವಸ್ಥೆಯ ಆಶಯಕ್ಕೆ ವಿರುದ್ಧವೂ ಹೌದು. ಮೇಕೆದಾಟು ಯೋಜನೆ ಜಾರಿ ಮಾಡಿಯೇ ತೀರುತ್ತೇವೆ. ತಮಿಳುನಾಡು ಕೂಡ ಕಾವೇರಿ ನೀರು ಬಳಸಿ ಸಾಕಷ್ಟು ಯೋಜನೆಗಳನ್ನು ರಾಜ್ಯದ ಗಮನಕ್ಕೆ ತರದೇ, ಕೇಂದ್ರದ ಒಪ್ಪಿಗೆ ಪಡೆಯದೇ ಕೈಗೊಂಡಿದೆ' ಎಂದರು.

'ನಮ್ಮ ಪಾಲಿಗೆ ಬಂದ ನೀರನ್ನು ಸದ್ಬಳಕೆ ಮಾಡಲು ಮೇಕೆದಾಟು ಯೋಜನೆ ರೂಪಿಸಲಾಗಿದೆ. ಬೆಂಗಳೂರು ನಗರದ ಜನರ ಕುಡಿಯುವ ಉದ್ದೇಶಕ್ಕಾಗಿ ಈ ನೀರನ್ನು ಬಳಸುತ್ತಿದ್ದೇವೆ. ಚೆನ್ನೈನಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಆದಾಗ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ರಾಜ್ಯಗಳು ಸೇರಿ ತೆಲುಗು ಗಂಗಾ ಯೋಜನೆಯ ಮೂಲಕ ಅಲ್ಲಿಗೆ ನೀರು ಒದಗಿಸಲಾಯಿತು. ರಾಜ್ಯದ ಕೃಷ್ಣಾ ನದಿಯಿಂದ ನೀರಿನ ಪಾಲು ತೆಲುಗು ಗಂಗಾಗೆ ನೀಡಿದ್ದೇವೆ. ಈಗ ಅವರು ನಮ್ಮ ಯೋಜನೆಗೆ ಅಡ್ಡಿ ಮಾಡುತ್ತಿದ್ದಾರೆ' ಎಂದು ಬೊಮ್ಮಾಯಿ ಹರಿಹಾಯ್ದರು.

ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಎಚ್‌.ಕೆ.ಪಾಟೀಲ ಅವರು, 'ಯಾವ ರಾಜ್ಯಕ್ಕೆ ನೀರಿನ ಪಾಲು ಎಷ್ಟು ಎಂಬುದನ್ನು ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಹಂಚಿಕೆ ಮಾಡಿದೆ. ಹಾಗಿದ್ದರೂ ಮೇಕೆದಾಟು ವಿರುದ್ಧ ತಮಿಳುನಾಡು ವಿಧಾನಸಭೆ ನಿರ್ಣಯ ಕೈಗೊಳ್ಳುವ ಮೂಲಕ ನಮ್ಮ ಅಭಿವೃದ್ಧಿ ಯೋಜನೆಗೆ ಅಡ್ಡಗಾಲು ಹಾಕಿದೆ. ಈ ನೀರಿನ ಬಳಕೆ ನಮ್ಮ ನ್ಯಾಯೋಚಿತ ಹಕ್ಕು' ಎಂದು ಪ್ರತಿಪಾದಿಸಿದರು.

ಪರಿಷತ್‌ನಲ್ಲೂ ಪ್ರಸ್ತಾಪ: ವಿಧಾನ ಪರಿಷತ್‌ನಲ್ಲಿ ಈ ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, 'ಮೇಕೆದಾಟು ಯೋಜನೆ ವಿರೋಧಿಸಿ ತಮಿಳುನಾಡು ವಿಧಾನಮಂಡಲ ನಿರ್ಣಯ ಅಂಗೀಕರಿಸಿದೆ. ನಾವು ಸಲ್ಲಿಸಿರುವ ವಿಸ್ತೃತ ಯೋಜನಾ ವರದಿಗೆ ಒಪ್ಪಿಗೆ ನೀಡುವಂತೆ ಆಗ್ರಹಿಸಿ ಇಲ್ಲಿಯೂ ನಿರ್ಣಯ ಅಂಗೀಕರಿಸಬೇಕು' ಎಂದು ಒತ್ತಾಯಿಸಿದರು.

ಸರ್ಕಾರ ನಿರ್ಣಯ ಮಂಡಿಸದಿದ್ದರೆ ತಾವೇ ಮಂಡನೆ ಮಾಡುವುದಾಗಿ ಹರಿಪ್ರಸಾದ್ ಹೇಳಿದರು. ಕಾನೂನು ತಜ್ಞರ ಜತೆ ಸಮಾಲೋಚನೆ ನಡೆಸಿದ ಬಳಿಕ ಸರ್ಕಾರವೇ ನಿರ್ಣಯ ಮಂಡಿಸಲಿದೆ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಭರವಸೆ ನೀಡಿದರು.

ಇಚ್ಛಾಶಕ್ತಿ ಪ್ರದರ್ಶಿಸಿ: ಎಚ್‌.ಡಿ. ಕುಮಾರಸ್ವಾಮಿ

ಮೇಕೆದಾಟು ವಿಷಯದಲ್ಲಿ ಸೋಮವಾರ ತಮಿಳುನಾಡು ವಿಧಾನಸಭೆಯಲ್ಲಿ ಕೈಗೊಂಡಿರುವ ನಿರ್ಣಯಕ್ಕೂ ಮತ್ತು ರಾಜ್ಯಕ್ಕೂ ಸಂಬಂಧವಿಲ್ಲ. ಮೇಕೆದಾಟು ವಿಚಾರದಲ್ಲಿ ರಾಜ್ಯ ಸರ್ಕಾರ ಇಚ್ಛಾಶಕ್ತಿ ಪ್ರದರ್ಶನ ಮಾಡಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು

ಮೇಕೆದಾಟು ಯೋಜನೆಯನ್ನು ವಿರೋಧ ಮಾಡುವ ಯಾವುದೇ ಹಕ್ಕು ತಮಿಳುನಾಡಿಗೆ ಇಲ್ಲ. ನಮಗೆ ಪರಿಸರ ವಿಷಯಲ್ಲಿ ಮಾತ್ರ ಒಪ್ಪಿಗೆ ಬಾಕಿ ಇದೆ. ತಮಿಳುನಾಡಿನ ನಾಯಕರು ವಿಧಾನಸಭೆಯಲ್ಲಿ ಮಾಡಿಕೊಂಡಿರುವ ನಿರ್ಣಯಕ್ಕೂ ಕರ್ನಾಟಕಕ್ಕೂ ಯಾವುದೇ ಸಂಬಂಧವಿಲ್ಲ. ಸರ್ಕಾರ ಬದ್ಧತೆ ತೋರಿಸಬೇಕು. ಎಲ್ಲವೂ ಸರ್ಕಾರದ ಕೈಯಲ್ಲಿದೆ ಎಂದರು.

ಈ ಯೋಜನೆಯನ್ನು ಹೇಗೆ ಕಾರ್ಯಗತ ಮಾಡಬೇಕು ಎಂದು ಮಾಜಿ ಪ್ರಧಾನಿ ದೇವೇಗೌಡರು ಸರ್ಕಾರಕ್ಕೆ ಸಲಹೆ ನೀಡಿದ್ದಾರೆ. ಅದೇ ಪ್ರಕಾರ ಎರಡು ಹಂತಗಳಲ್ಲಿ ಕಾರ್ಯಗತ ಮಾಡುವುದು ಸೂಕ್ತ ಎಂದು ಅವರು ಹೇಳಿದರು.

ಕಾನೂನಾತ್ಮಕ ಹಕ್ಕಿಲ್ಲ: ಸಿದ್ದರಾಮಯ್ಯ

ತಮಿಳುನಾಡು ಸರ್ಕಾರ ಮತ್ತು ರಾಜಕೀಯ ಪಕ್ಷಗಳು ಮೇಕೆದಾಟು ಯೋಜನೆಗೆ ಅಡ್ಡಗಾಲು ಹಾಕಲು ಕಾನೂನು ಬಾಹಿರ ನಿರ್ಣಯ ಮಾಡಿದ್ದಾರೆ. ಈ ರೀತಿ ನಿರ್ಣಯ ತೆಗೆದುಕೊಳ್ಳಲು ಅಲ್ಲಿನ ವಿಧಾನಸಭೆಗೆ ಕಾನೂನಾತ್ಮಕ ಹಕ್ಕಿಲ್ಲ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರು ಮತ್ತು ಸುತ್ತಮುತ್ತಲಿನ ನಗರಗಳಿಗೆ ಕುಡಿಯುವ ನೀರು ಮತ್ತು 400 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಯೋಜನೆ ಇದಾಗಿದೆ. ಇದು ನಮ್ಮ ರಾಜ್ಯದ ಗಡಿಯೊಳಗೆ ಬರುತ್ತದೆ. 2018ರ ಫೆಬ್ರುವರಿ 16 ರಂದು ಸುಪ್ರೀಂಕೋರ್ಟ್ ಅಂತಿಮ ಆದೇಶ ಬಂದಿದೆ. ಈ ಆದೇಶವನ್ನು ಎರಡೂ ರಾಜ್ಯಗಳು ಒಪ್ಪಿಕೊಂಡಿವೆ. ವಾಡಿಕೆಯಂತೆ ಮಳೆಯಾದ ಸಹಜ ವರ್ಷದಲ್ಲಿ 177.25 ಟಿಎಂಸಿ ಅಡಿ ನೀರನ್ನು ಬಿಳಿಗೊಂಡ್ಲುವಿನಿಂದ ತಮಿಳುನಾಡಿಗೆ ಬಿಡಬೇಕು ಎಂದು ತೀರ್ಪು ಹೇಳಿದೆ. ಈ ನೀರು ಪಡೆದುಕೊಳ್ಳುವುದು ಮಾತ್ರ ತಮಿಳುನಾಡಿಗಿರುವ ಹಕ್ಕು. ಸುಪ್ರೀಂಕೋರ್ಟ್ ತೀರ್ಪಿನ ಬಳಿಕ ತಮಿಳುನಾಡಿಗೆ 582 ಟಿಎಂಸಿ ಅಡಿ ನೀರು ಹೆಚ್ಚುವರಿಯಾಗಿ ಹರಿದು ಹೋಗಿದೆ ಎಂದು ಹೇಳಿದರು.

> ಕಾವೇರಿ ನೀರಿನ ವಿಷಯವನ್ನು ತಮಿಳುನಾಡು ರಾಜಕೀಯ ದಾಳವಾಗಿ ನಿರಂತರವಾಗಿ ಬಳಸುತ್ತಲೇ ಬಂದಿದೆ. ಸುಪ್ರೀಂಕೋರ್ಟ್‌ನಲ್ಲಿ ವಿವಾದ ಬಗೆ ಹರಿದರೂ ನೀರಿನ ತಂಟೆ ನಿಲ್ಲಿಸಿಲ್ಲ
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> ಕೇಂದ್ರ ಪರಿಸರ ಇಲಾಖೆಯ ಅನುಮತಿ ಪಡೆಯಲು ಮುಖ್ಯಮಂತ್ರಿ ಪ್ರಯತ್ನ ನಡೆಸಲಿ. ಕೇಂದ್ರ ಜಲಶಕ್ತಿ ಸಚಿವ ಮತ್ತು ಪ್ರಧಾನಿಯವರನ್ನು ಬೊಮ್ಮಾಯಿ ಭೇಟಿ ಮಾಡಲಿ
>
> **ಬಿ.ಎಸ್. ಯಡಿಯೂರಪ್ಪ,** ಬಿಜೆಪಿ ಶಾಸಕ

'ತೃತೀಯ ಲಿಂಗಿಗಳಿಗೆ ಮೀಸಲಾತಿ ಜಾರಿಗೆ ಸುತ್ತೋಲೆ'

ಬೆಂಗಳೂರು: ಸರ್ಕಾರದ ವಿವಿಧ ಹುದ್ದೆಗಳಲ್ಲಿ ತೃತೀಯ ಲಿಂಗಿಗಳಿಗೆ ಶೇಕಡ 1ರಷ್ಟು ಮೀಸಲಾತಿ ಕಲ್ಪಿಸುವ ರಾಜ್ಯ ಸರ್ಕಾರದ ತೀರ್ಮಾನವನ್ನು ಸಮರ್ಪಕವಾಗಿ ಜಾರಿಗೊಳಿಸಲು ಮುಖ್ಯ ಕಾರ್ಯದರ್ಶಿಯವರ ಮೂಲಕ ಸುತ್ತೋಲೆ ಹೊರಡಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಭಾರತಿ ಶೆಟ್ಟಿ ಪ್ರಶ್ನೆಗೆ ಮಂಗಳವಾರ ಅವರು ಉತ್ತರಿಸಿದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪಿಯು ವಿದ್ಯಾರ್ಥಿಗಳಿಗಾಗಿ ಆನ್‌ಲೈನ್ ಬೋಧನಾ ಸರಣಿ

ಗಣಿತಶಾಸ್ತ್ರ ಟಿಪ್ಸ್

ಮಂದಾರ್ ಹುಕ್ಕೇರಿ, ಗಣಿತಶಾಸ್ತ್ರ ಉಪನ್ಯಾಸಕರು, ಕಲಬುರಗಿ

ಸಂಜೆ 4 ರಿಂದ 6 ರವರೆಗೆ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9, ಸಂಪಾದಕೀಯ: ಬೆಳಿಗ್ಗೆ 9.30, ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಪ್ರಜಾವಾಣಿ ಕನ್ನಡ ಧ್ವನಿ

'ಸೌತೆಕಾಯಿಗೊಂದು, ಬದನೆಗೊಂದು ವಿ.ವಿ ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಗ ಜಿಲ್ಲೆಗೊಂದು ವಿಶ್ವವಿದ್ಯಾಲಯ ಮಾಡುತ್ತಿದ್ದಾರೆ. ಮುಂದೆ ತಾಲ್ಲೂಕಿಗೊಂದು ಮಾಡಲಿ, ನಂತರ ಸೌತೆಕಾಯಿ, ಬದನೆಕಾಯಿ, ಮೆಣಸಿನ ಕಾಯಿ, ಕೊತ್ತಂಬರಿ ಸೊಪ್ಪು ಮತ್ತು ಕರಿಬೇವು ಸೊಪ್ಪಿಗೂ ವಿಶ್ವವಿದ್ಯಾಲಯಗಳನ್ನು ಮಾಡಲಿ' ಎಂದು ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್ ಅವರು ವ್ಯಂಗ್ಯವಾಡಿದರು.

ವಿಧಾನಸಭೆಯಲ್ಲಿ ಮಂಗಳವಾರ ಇಲಾಖೆಗಳ ಬೇಡಿಕೆ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈ ವಿಶ್ವವಿದ್ಯಾಲಯಗಳಿಗೆ ಕುಲಪತಿಗಳಾಗಲು ಬಹಳ ಜನ ಕಾದು ಕುಳಿತಿದ್ದಾರೆ ಎಂದರು.

'ಕೃಷಿ ವಿಶ್ವವಿದ್ಯಾಲಯಗಳಲ್ಲಿ ಏನು ಸಂಶೋಧನೆ ಮಾಡುತ್ತಿದ್ದಾರೆ. ರಾಜ್ಯದ ಸಾವಿರಾರು ಕೃಷಿ ಭೂಮಿಯಲ್ಲಿ ಬಳ್ಳಾರಿ ಜಾಲಿ ವ್ಯಾಪಿಸಿದೆ. ಕೆರೆಗಳಿಗೂ ಕಳೆಗಳು ಆವರಿಸಿವೆ. ಹೊಲಗಳ ಬದಿಯಲ್ಲಿ ಬೇಲಿಗಾಗಿ ಬಳಸುವ ಕತ್ತಾಳೆಯ ಅಭಿವೃದ್ಧಿಪಡಿಸುವ ಬಗ್ಗೆ ಕೃಷಿ ವಿಜ್ಞಾನಿಗಳು ಸಂಶೋಧನೆ ನಡೆಸಿದ್ದಾರಾ? ಪಾರ್ಥೇನಿಯಂ ತಡೆಗೆ ಏನು ಮಾಡಿದ್ದಾರೆ' ಎಂದು ಅವರು ಪ್ರಶ್ನಿಸಿದರು.

ಕೃಷಿ ವಿಶ್ವವಿದ್ಯಾಲಯಗಳು ಏನು ಮಾಡುತ್ತಿವೆ ಎಂಬುದು ಯಾರಿಗೂ ಗೊತ್ತಾಗುತ್ತಿಲ್ಲ ಎಂದು ರಮೇಶ್‌ಕುಮಾರ್ ಹೇಳಿದರು.

2010–11 ರಲ್ಲಿ ರಾಜ್ಯದಲ್ಲಿ 78.31 ಲಕ್ಷ ರೈತ ಕುಟುಂಬಗಳಿದ್ದವು. 2015–16 ರಲ್ಲಿ ಆ ಸಂಖ್ಯೆಯ 86 ಲಕ್ಷಕ್ಕೆ ಏರಿತ್ತು. ಆದರೆ ಉಳುಮೆ ಮಾಡುವ ಭೂಮಿ ಕಡಿಮೆ ಆಯಿತು. ಈಗ ಎಲ್ಲರೂ ರೈತರು ಎಂದೇ ಹೇಳಿಕೊಳ್ಳುತ್ತಾರೆ ಎಂದು ಅವರು ವ್ಯಂಗ್ಯವಾಡಿದರು.

ಸಚಿವ ಸೋಮಣ್ಣಗೆ ಸಮನ್ಸ್

ಒಂದನೇ ಪುಟದಿಂದ

ಮೂಡಲಪಾಳ್ಯದ ರಾಮಕೃಷ್ಣ ಸಲ್ಲಿಸಿರುವ ಖಾಸಗಿ ದೂರಿನ ಮುಖ್ಯಾಂಶಗಳು:

- ಬೆಂಗಳೂರಿನ ಜನತಾ ಬಜಾರ್‌ನಲ್ಲಿ 1974 ರಲ್ಲಿ ಸಹಾಯಕ ಮಾರಾಟಗಾರರಾಗಿ ಕೆಲಸ ಆರಂಭಿಸಿದ ಸೋಮಣ್ಣ ಪ್ರತಿ ತಿಂಗಳಿಗೆ ₹ 231 ಸಂಬಳ ಪಡೆಯುತ್ತಿದ್ದರು.
- 1983 ರಲ್ಲಿ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿದಾಗ ಅವರ ಒಟ್ಟು ದುಡಿಮೆಯ ಮೊತ್ತ ₹15,330.65 ಪೈಸೆ ಇತ್ತು. ನಂತರ ಕೆಲಸಕ್ಕೆ ರಾಜೀನಾಮೆ ನೀಡಿ ಹೊಸಹಳ್ಳಿ ವಾರ್ಡ್ ನಗರಸಭೆ ಸದಸ್ಯರಾಗಿ ಆಯ್ಕೆಯಾದರು.
- ಇಲ್ಲಿಂದ ಆರಂಭವಾದ ಇವರ ಜನಪ್ರತಿನಿಧಿ ಸೇವಾವಧಿಯಲ್ಲಿ, ಇವರು ಕೋಟ್ಯಂತರ ರೂಪಾಯಿಗಳ ಸ್ಥಿರ ಮತ್ತು ಚರಾಸ್ತಿ ಸಂಪಾದನೆ ಮಾಡಿದ್ದಾರೆ.
- ಸೋಮಣ್ಣ ಮತ್ತು ಅವರ ಕುಟುಂಬದವರು ಬೆಂಗಳೂರು, ಮಂಗಳೂರು ಮತ್ತು ಮೈಸೂರುಗಳಲ್ಲಿ ಸಾಕಷ್ಟು ಅಕ್ರಮ ಸ್ಥಿರಾಸ್ತಿ ಹೊಂದಿದ್ದಾರೆ. ಮಾರ್ಗದರ್ಶಿ ಮೌಲ್ಯಕ್ಕಿಂತಲೂ ಕಡಿಮೆ ದರದಲ್ಲಿ ಜಮೀನುಗಳನ್ನು ಖರೀದಿಸಿದ್ದಾರೆ. ಎಸಿಬಿ ತನಿಖೆಯಲ್ಲಿ ಕೇವಲ ಇವರ ವೈಯಕ್ತಿಕ ಮತ್ತು ಖಾಸಗಿ ಸಾಲಗಳ ಬಗ್ಗೆ ತನಿಖೆ ನಡೆಸಲಾಗಿದೆ.
- ಸೋಮಣ್ಣ ಸಾರ್ವಜನಿಕ ಸೇವಕರಾಗಿ ಅಕ್ರಮ ಸಂಪಾದನೆ ಮಾಡುವ ಮೂಲಕ ಕ್ರಿಮಿನಲ್ ದುರ್ನಡತೆ ತೋರಿದ್ದಾರೆ. ಆದ್ದರಿಂದ, ಇವರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ- 1988ರ ಕಲಂ 13(1)(ಬಿ)(ಡಿ) ಮತ್ತು (ಇ) ಕಲಂ 13(2)ರ ಅಡಿ ಪ್ರಕರಣ ದಾಖಲಿಸಲು ಆದೇಶಿಸಬೇಕು.

'ಭ್ರಷ್ಟಾಚಾರದಲ್ಲಿ ನಂಬರ್ ಒನ್ ಆಗಿರುವ ರಾಜ್ಯ ಸರ್ಕಾರಕ್ಕೆ ಮೋದಿ ಬಹುಮಾನ ನೀಡಲಿ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ರಾಜ್ಯ ಬಿಜೆಪಿ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಭ್ರಷ್ಟಾಚಾರದ ಕುರಿತು 'ಪ್ರಜಾವಾಣಿ' ಸರಣಿ ವರದಿ ಪ್ರಕಟಿಸುತ್ತಿದೆ. ಭ್ರಷ್ಟಾಚಾರದಲ್ಲಿ ನಂಬರ್ ಒನ್ ಆಗಿರುವ ರಾಜ್ಯ ಸರ್ಕಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಬಹುಮಾನ ನೀಡಬೇಕು' ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕುಟುಕಿದರು.

'ಬಡ ರೈತರ ಹೊಲಗಳಿಗೆ ಬೋರ್‌ವೆಲ್ ಕೊರೆಸುವ ಗಂಗಾ ಕಲ್ಯಾಣ ಯೋಜನೆಯಲ್ಲಿಯೂ ಭಾರಿ ಭ್ರಷ್ಟಾಚಾರ ನಡೆದಿದೆ. ರಾಜ್ಯ ಸರ್ಕಾರದ ಭ್ರಷ್ಟಾಚಾರದ ದಾಖಲೆಗಳನ್ನು ಶೀಘ್ರ ಬಿಡುಗಡೆ ಮಾಡುತ್ತೇವೆ' ಎಂದು ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮೇಕೆದಾಟು ವಿಚಾರದಲ್ಲಿ ತಮಿಳುನಾಡು ಏನೇ ರಾಜಕಾರಣ ಮಾಡಲಿ, ಯೋಜನೆ ಜಾರಿಗೆ ತರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದ್ದಾರೆ. ಬಿಜೆಪಿ ಕೇಂದ್ರ ಸಮಿತಿಯವರು ನೀರಾವರಿ ವಿಚಾರದಲ್ಲಿ ತಮಿಳುನಾಡು–ಗೋವಾ ಬೇಕೋ; ಕರ್ನಾಟಕ ಬೇಕೋ ಎಂಬುದನ್ನು ನಿರ್ಧರಿಸಲಿ. ಈ ವಿಚಾರದಲ್ಲಿ ರಾಜ್ಯದ 26 ಬಿಜೆಪಿ ಸಂಸದರು ಗಮನ ಹರಿಸಬೇಕು ಎಂದರು.

'ಯಾರು ಏನೇ ಹೇಳಲಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರ ನಾಯಕತ್ವದಲ್ಲಿ ನಮಗೆ ವಿಶ್ವಾಸವಿದೆ' ಎಂದು ಜಿ–23 ಗುಂಪಿನ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಭಗವದ್ಗೀತೆ ಅಳವಡಿಸಿದ್ದೇ ಕಾಂಗ್ರೆಸ್': 'ಬಿಜೆಪಿಯವರಿಗಿಂತ ಮುಂಚೆಯೇ ನಾವು ಭಗವದ್ಗೀತೆಯಲ್ಲಿನ ಉತ್ತಮ ಅಂಶಗಳನ್ನು ಪಠ್ಯಪುಸ್ತಕದಲ್ಲಿ ಸೇರಿಸಿದ್ದೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕುರಿಗಾಹಿ ರಕ್ಷಣೆಗಾಗಿ ಕಾಯ್ದೆ ರೂಪಿಸಲು ಒತ್ತಾಯ

ಕುರಿಗಾಹಿಗಳ ಮೇಲೆ ದೌರ್ಜನ್ಯ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಕುರಿಗಾಹಿಗಳ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಯುತ್ತಿದ್ದು, ಸೂಕ್ತ ಭದ್ರತೆ ಕಲ್ಪಿಸಬೇಕು' ಎಂದು ಒತ್ತಾಯಿಸಿ 'ಕುರುಬ ಸಮಾಜ ಸಂಘಟನೆಗಳ ಒಕ್ಕೂಟ'ದಿಂದ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

'ವಿಧಾನಸೌಧ ಚಲೊ' ಹೆಸರಿನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ರಾಜ್ಯದ ವಿವಿಧ ಜಿಲ್ಲೆಗಳ ಮುಖಂಡರು ಹಾಗೂ ಕುರಿಗಾಹಿಗಳು ಪಾಲ್ಗೊಂಡಿದ್ದರು. ಮೆಜೆಸ್ಟಿಕ್ ವೃತ್ತದಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಕೆಲ ಮುಖಂಡರು, ವಿಧಾನಸೌಧದತ್ತ ತೆರಳಲು ಯತ್ನಿಸಿದರು. ಸ್ವಾತಂತ್ರ್ಯ ಉದ್ಯಾನ ಬಳಿ ಅವರನ್ನು ಪೊಲೀಸರು ತಡೆದರು. ಬಳಿಕ, ಉದ್ಯಾನದಲ್ಲಿ ಬಹಿರಂಗ ಸಭೆ ನಡೆಯಿತು.

'ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನಲ್ಲಿ ಕುರಿಗಾಹಿ ಮಹಿಳೆ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ನೈಜ ಆರೋಪಿಗಳನ್ನು ಇದುವರೆಗೂ ಬಂಧಿಸಿಲ್ಲ. ಬಸವಕಲ್ಯಾಣ ತಾಲ್ಲೂಕಿನ ಜಾನಾಪುರದಲ್ಲೂ ಕುರಿಗಾಹಿ ಕೊಲೆ ಆಗಿದ್ದು, ಆರೋಪಿಗಳನ್ನು ಪೊಲೀಸರು ಪತ್ತೆ ಮಾಡಿಲ್ಲ' ಎಂದು ಒಕ್ಕೂಟದ ರಾಜ್ಯ ಸಂಚಾಲಕ ಸಿದ್ದಣ್ಣ ತೇಜಿ ದೂರಿದರು.

'ಕುರುಬ ಸಮಾಜ ಸಂಘಟನೆಗಳ ಒಕ್ಕೂಟ' ನೇತೃತ್ವದಲ್ಲಿ ಕುರಿಗಾಹಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು

ಪ್ರಮುಖ ಬೇಡಿಕೆಗಳು

- ಕುರಿಗಾಹಿಗಳ ಆತ್ಮ ರಕ್ಷಣೆಗೆ ಉಚಿತವಾಗಿ ಪರವಾನಗಿ ಸಮೇತ ಬಂದೂಕು ನೀಡಬೇಕು
- ಪೊಲೀಸ್ ಠಾಣೆಗಳಲ್ಲಿ ಪ್ರತಿ ತಿಂಗಳು ಕುರಿಗಾಹಿಗಳ ಸಭೆ ನಡೆಸಬೇಕು. ಕುರಿಗಾಹಿಗಳ ಸಮಸ್ಯೆಗಳನ್ನು ಆಲಿಸಿ, ತ್ವರಿತವಾಗಿ ಇತ್ಯರ್ಥಪಡಿಸಬೇಕು
- ಕುರಿಗಾಹಿಗಳ ಮಕ್ಕಳಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಪ್ರಾತಿನಿಧ್ಯ ನೀಡಬೇಕು
- ಅವಘಡಗಳು ಸಂಭವಿಸಿದಾಗ ಕುರಿಗಾಹಿಗಳ ಹಿತ ರಕ್ಷಣೆಗಾಗಿ ಶಾಶ್ವತ ಪರಿಹಾರ ನೀಡಿ ಸ್ಥಾಪಿಸಬೇಕು
- ಅನುಗ್ರಹ ಯೋಜನೆ ಪರಿಹಾರ ಮೊತ್ತವನ್ನು ₹ 5 ಸಾವಿರದಿಂದ ₹ 10 ಸಾವಿರಕ್ಕೆ ಹೆಚ್ಚಿಸಬೇಕು
- ಕುರಿಗಳ ಆರೋಗ್ಯ ದೃಷ್ಟಿಯಿಂದ ಕಾಲ ಕಾಲಕ್ಕೆ ಲಸಿಕೆಗಳನ್ನು ಉಚಿತವಾಗಿ ಪೂರೈಸಬೇಕು
- ಪ್ರತಿ ತಾಲ್ಲೂಕಿಗೊಂದು ರೋಗ ತಪಾಸಣಾ ಕೇಂದ್ರ ತೆರೆಯಬೇಕು
- ಕುರಿಗಳ ತುರ್ತು ಆರೋಗ್ಯ ಚಿಕಿತ್ಸೆಗಾಗಿ ಪ್ರತಿ ಹೋಬಳಿಗೊಂದು ಆಂಬುಲೆನ್ಸ್ ಮೀಸಲಿಡಬೇಕು
- ಪಶು ವೈದ್ಯಕೀಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು

'ರಾಜ್ಯದಲ್ಲಿ ಹೆಚ್ಚಿರುವ ಕುರಿಗಾಹಿಗಳ ಮೇಲೆ ನಿರಂತರವಾಗಿ ದೌರ್ಜನ್ಯಗಳು ನಡೆಯುತ್ತಿವೆ. ಇಂಥ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳುತ್ತಿಲ್ಲ. ಕುರಿಗಾಹಿ ರಕ್ಷಣೆಗಾಗಿ ದೌರ್ಜನ್ಯ ತಡೆ ಕಾಯ್ದೆ ಜಾರಿಗೆ ತರಬೇಕು' ಎಂದೂ ಒತ್ತಾಯಿಸಿದರು.

ಕನಕ ಗುರುಪೀಠದ ತಿಂಥಿಣಿ ಬ್ರಿಡ್ಜ್ ಶಾಖಾ ಮಠದ ಸಿದ್ಧರಾಮಾನಂದ ಪುರಿ ಸ್ವಾಮೀಜಿ, ಕಾಂಗ್ರೆಸ್ ಮುಖಂಡ ಎಚ್‌.ಎಂ. ರೇವಣ್ಣ ಪ್ರತಿಭಟನೆಯಲ್ಲಿದ್ದರು.

ಸಿಐಡಿ ತನಿಖೆಗೆ ಎಂ.ಟಿ.ಬಿ ಆಗ್ರಹ

'ಕುಂದಗೋಳ ತಾಲ್ಲೂಕಿನಲ್ಲಿ ಕುರಿಗಾಹಿ ಮಹಿಳೆ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಬೇಕು. ಈ ಬಗ್ಗೆ ಮುಖ್ಯಮಂತ್ರಿ ಅವರನ್ನು ಒತ್ತಾಯಿಸಲಾಗುವುದು' ಎಂದು ಪೌರಾಡಳಿತ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಎಂ.ಟಿ.ಬಿ. ನಾಗರಾಜು ತಿಳಿಸಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿದ ಅವರು, 'ಕುರಿಗಾಹಿಗಳ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ. ಕುರಿಗಾಹಿಗಳ ಟೆಂಟ್‌ಗಳಿಗೆ ಪೊಲೀಸ್ ಭದ್ರತೆ ಒದಗಿಸಬೇಕು. ಕುರಿಗಾಹಿಗಳು ಅರ್ಜಿ ಸಲ್ಲಿಸಿದ 15 ದಿನದೊಳಗೆ ಬಂದೂಕು ಪರವಾನಗಿ ನೀಡಬೇಕು' ಎಂದರು.

'ಕುರುಬ ಸಮುದಾಯವನ್ನು ಎಸ್‌.ಟಿ ಪಟ್ಟಿಗೆ ಸೇರ್ಪಡೆ ಮಾಡಬೇಕು ಎನ್ನುವ ಬೇಡಿಕೆ ಕೇಂದ್ರ, ರಾಜ್ಯ ಸರ್ಕಾರಗಳ ಮುಂದಿದೆ' ಎಂದೂ ನಾಗರಾಜು ಅವರು ಹೇಳಿದರು.

'ಸುಧಾ' ಯುಗಾದಿ ಪ್ರಬಂಧ ಸ್ಪರ್ಧೆ ಫಲಿತಾಂಶ

ಸಂತೋಷ, ಭಾರತಿ, ಮಿಸ್ರಿಯಾಗೆ ಬಹುಮಾನ

ಬೆಂಗಳೂರು: ನಂಜನಗೂಡು ತಾಲ್ಲೂಕಿನ ಹೆಗ್ಗಡಹಳ್ಳಿಯ ಸಂತೋಷ ಗುಡ್ಡಿಯಂಗಡಿ ಅವರ 'ನಾಟ್ಕದ ರಾಜನೂ ರಿಯಲ್ ಕುದುರೆಯೂ' ಬರಹ, 'ಸುಧಾ' ಯುಗಾದಿ ಪ್ರಬಂಧ ಸ್ಪರ್ಧೆ–2022ರಲ್ಲಿ ಮೊದಲ ಬಹುಮಾನ ಪಡೆದಿದೆ.

ಹಾಸನದ ಬಿ.ಎಂ. ಭಾರತಿ ಹಾದಿಗೆ ('ಕೊತ್ತಿಮರಿ') ಹಾಗೂ ಬಂಟ್ವಾಳ ತಾಲ್ಲೂಕಿನ ಪೆರ್ಣಪಾಡಿಯ ಮಿಸ್ರಿಯಾ ಐ ಪಜೀರ್ ('ನೇರ್ಚೆಯ ಕೋಳಿ') ಅವರ ರಚನೆಗಳು ಎರಡು ಮತ್ತು ಮೂರನೇ ಬಹುಮಾನಗಳಿಗೆ ಆಯ್ಕೆಯಾಗಿವೆ. ಬಹುಮಾನಿತ ಪ್ರಬಂಧಗಳಿಗೆ ಕ್ರಮವಾಗಿ ₹10,000, ₹ 5000 ಹಾಗೂ ₹ 3000 ದೊರೆಯಲಿದೆ.

ಸಂತೋಷ ಗುಡ್ಡಿಯಂಗಡಿ

ಬಿ.ಎಂ. ಭಾರತಿ ಹಾದಿಗೆ

ಮಿಸ್ರಿಯಾ ಐ ಪಜೀರ್

ಸುಧಾ ಯುಗಾದಿ ವಿಶೇಷಾಂಕ-2022

'ಮನೆಮನೆಯ ಚಂದಿರ' (ಪ್ರವೀಣ್ ಕುಮಾರ್ ಜಿ.), 'ಸುನ್ನತಿ' (ಸ್ವಾಲಿಹ್ ತೋಡಾರ್), 'ಬಾಬು ಭಂಡಾರಿಯ ಸೂಪರ್ ಸಲೂನ್' (ವಿನಾಯಕ ಅರಳಸುರಳಿ), 'ಅವಮಾನಂ ಮನುಷ್ಯ ಲಕ್ಷಣಂ' (ಸಂಪತ್ ಸಿರಿಮನೆ), 'ಅಣಶಿಯೂ ಕನ್ನಡ ನಾಟಕವೂ...' (ಅಕ್ಷತಾ ಕೃಷ್ಣಮೂರ್ತಿ) ಪ್ರಬಂಧಗಳು ತೀರ್ಪುಗಾರರ ಮೆಚ್ಚುಗೆಗೆ ಪಾತ್ರವಾಗಿವೆ.

ಕವಯಿತ್ರಿ ಅಕ್ಷತಾ ಹುಂಚದಕಟ್ಟೆ ಮತ್ತು ಪ್ರಬಂಧಕಾರ ಈರಪ್ಪ ಎಂ. ಕಂಬಳಿ ಈ ವರ್ಷದ ಪ್ರಬಂಧ ಸ್ಪರ್ಧೆಯ ತೀರ್ಪುಗಾರರಾಗಿದ್ದರು. ಏಳು ನೂರಕ್ಕೂ ಹೆಚ್ಚಿನ ಪ್ರಬಂಧಗಳು ಸ್ಪರ್ಧೆಗೆ ಬಂದಿದ್ದವು.

ಯುವ ಮತ್ತು ಅನುಭವಿ ಬರಹಗಾರರ ವಿಶಿಷ್ಟ ಬರಹಗಳನ್ನೊಳಗೊಂಡ 'ಸುಧಾ ಯುಗಾದಿ ವಿಶೇಷಾಂಕ' ಸದ್ಯದಲ್ಲೇ ಮಾರುಕಟ್ಟೆಯಲ್ಲಿ ಲಭ್ಯವಾಗಲಿದೆ.

ತೀರ್ಪುಗಾರರ ಅನಿಸಿಕೆ

ವರುಷ ವರುಷವೂ ಪ್ರಬಂಧ ಕಳಿಸುವವರ ಸಂಖ್ಯೆ ಹೆಚ್ಚುತ್ತಲೇ ಇರುವುದು ಕನ್ನಡ ಸಾಹಿತ್ಯಲೋಕದಲ್ಲಿ ಬರೆಯುವವರ ಮತ್ತು ಓದುವವರ ಉತ್ಸಾಹ ಎರಡೂ ಜೀವಂತ ಉಳಿದಿವೆ ಎಂಬುದರ ದ್ಯೋತಕವಾಗಿದೆ.

ಅಕ್ಷತಾ ಹುಂಚದಕಟ್ಟೆ

ಸ್ಪರ್ಧೆಯ ಅಂತಿಮ ಹಂತಕ್ಕೆ ಬಂದಿದ್ದ ಪ್ರಬಂಧಗಳಲ್ಲಿ ಪ್ರತಿಯೊಂದೂ ಒಂದೊಂದು ಪ್ರಪಂಚವನ್ನು ಪ್ರತಿನಿಧಿಸುವ ಮೂಲಕ ಆಸಕ್ತಿದಾಯಕವಾಗಿದ್ದವು.

ಈರಪ್ಪ ಎಂ. ಕಂಬಳಿ

ಎಸ್‌ಟಿ ಮೀಸಲು: ಇಂದು ಶಾಸಕರ ಸಭೆ

ಬೆಂಗಳೂರು: ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಶೇ 3 ರಿಂದ ಶೇ 7.5ಕ್ಕೆ ಹೆಚ್ಚಿಸುವ ಬೇಡಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಮಂಗಳವಾರ ಸಭೆ ನಡೆಯಿತು.

ಈ ಸಭೆಯಲ್ಲಿ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ಶ್ರೀರಾಮುಲು, ಶಾಸಕ ಬಿ.ಎಸ್.ಯಡಿಯೂರಪ್ಪ ಭಾಗವಹಿಸಿದ್ದರು. ಈ ಕುರಿತು ಚರ್ಚಿಸಲು ಅಧಿಕಾರಿಗಳು ಮತ್ತು ಸಮುದಾಯದ ಶಾಸಕರ ಸಭೆಯನ್ನು ಬುಧವಾರ ನಿಗದಿ ಮಾಡಲಾಗಿದ್ದು, ಸರ್ಕಾರ ನಿಲುವು ಏನಾಗಿರಬೇಕು ಎಂಬ ಬಗ್ಗೆ ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮೀಸಲಾತಿ ಹೆಚ್ಚಳಕ್ಕೆ ಒತ್ತಾಯಿಸಿ ವಾಲ್ಮೀಕಿ ಪ್ರಸನ್ನಾನಂದಪುರಿ ಸ್ವಾಮೀಜಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ 40 ದಿನಗಳಿಂದ ಹೋರಾಟ ನಡೆಸುತ್ತಿದ್ದಾರೆ. ಸ್ವಾಮೀಜಿಯವರ ಮನವೊಲಿಸಲು ಸರ್ಕಾರ ಮುಂದಾಗಬೇಕು ಎಂದು ಯಡಿಯೂರಪ್ಪ ಅವರು ಸಲಹೆ ನೀಡಿದ್ದಾರೆ.

ಅಪಘಾತ: ಐವರು ವಿದ್ಯಾರ್ಥಿಗಳ ಸಾವು

ಬೇಲೂರು: ತಾಲ್ಲೂಕಿನ ಸಂಕೇನಹಳ್ಳಿ ಸಮೀಪ ಮಂಗಳವಾರ ಕೆಎಸ್‌ಆರ್‌ಟಿಸಿ ಬಸ್ ಮತ್ತು ಆಲ್ಟೊ ಕಾರು ನಡುವೆ ಸಂಭವಿಸಿದ ಅಪಘಾತದಲ್ಲಿ ಐವರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.

ಬೇಲೂರಿನ ವಿದ್ಯಾವಿಕಾಸ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಾದ ಮೊಹಮ್ಮದ್ ಜಿಲಾನಿ (19), ಹಸನ್ (20) , ಅಕ್ಮಲ್ ಪಾಷ (19), ಮೊಹಮ್ಮದ್ ಕೈಫ್ (20) ಹಾಗೂ ಹಾಸನದ ಎನ್‌ಡಿಆರ್‌ಕೆ ಕಾಲೇಜಿನ ದ್ವಿತೀಯ ಬಿ.ಕಾಂ ವಿದ್ಯಾರ್ಥಿ ರಿಹಾನ್ ಪಾಷ (21) ಮೃತರು.

ಬೇಲೂರು ನಿವಾಸಿಗಳಾದ ಅವರೆಲ್ಲರೂ ಸ್ನೇಹಿತರು. ಕಾಲೇಜಿನಲ್ಲಿ ಪೂರ್ವಸಿದ್ಧತಾ ಪರೀಕ್ಷೆಗೆ ಹಾಜರಾಗಿ ಹಾಸನದಲ್ಲಿ ಪುಸ್ತಕ ಖರೀದಿಸಲು, ಮಧ್ಯಾಹ್ನ ಕಾರಿನಲ್ಲಿ ಪ್ರಯಾಣಿಸುವಾಗ ಸಂಕೇನಹಳ್ಳಿ ಕ್ರಾಸ್ ಬಳಿ, ಮತ್ತೊಂದು ವಾಹನವನ್ನು ಹಿಂದಿಕ್ಕುವ ವೇಳೆ ನಿಯಂತ್ರಣ ತಪ್ಪಿದ ಕಾರು, ಕೆಎಸ್‌ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆಯಿತು. ಸ್ಥಳದಲ್ಲೇ ನಾಲ್ವರು ಹಾಗೂ ಆಸ್ಪತ್ರೆಗೆ ಕರೆದೊಯ್ಯುವಾಗ ಐದನೆಯವರು ಕೊನೆಯುಸಿರೆಳೆದರು.

ದೇವಸ್ಥಾನಗಳ ಮುಂಭಾಗದಲ್ಲಿ ಬ್ಯಾನರ್ ಅಳವಡಿಕೆ

ಕಾಪು: ಜಾತ್ರೆಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಕಾಪು (ಉಡುಪಿ ಜಿಲ್ಲೆ): ಇಲ್ಲಿನ ಮಾರಿಗುಡಿ ಜಾತ್ರೆ ಮಂಗಳವಾರದಿಂದ ಆರಂಭವಾಗಿದ್ದು, ಮುಸ್ಲಿಂ ವ್ಯಾಪಾರಿಗಳಿಗೆ ಅನುಮತಿ ನೀಡಲಾಗಿಲ್ಲ. ಪಡುಬಿದ್ರಿಯ ಮಹಾಲಿಂಗೇಶ್ವರ ದೇವಸ್ಥಾನದ ರಥೋತ್ಸವದಲ್ಲೂ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ಹಾಕಲಾಗಿದೆ.

ಮಾರಿಗುಡಿ ಜಾತ್ರೆಯಲ್ಲಿ ಪ್ರತಿವರ್ಷ ನೂರಾರು ಮುಸ್ಲಿಂ ವ್ಯಾಪಾರಿಗಳು ಕೋಳಿ, ಐಸ್‌ಕ್ರೀಂ,, ಹೂ ಮಾರಾಟ ಮಳಿಗೆಗಳನ್ನು ಹಾಕಿ ವ್ಯಾಪಾರ ಮಾಡುತ್ತಿದ್ದರು. ಈ ವರ್ಷ ಮುಸ್ಲಿಮರ ಬದಲಾಗಿ ಹಿಂದೂ ವ್ಯಾಪಾರಿಗಳು ಸ್ಟಾಲ್‌ಗಳನ್ನು ಹಾಕಿದ್ದಾರೆ.

'ದಶಕಗಳಿಂದಲೂ ಜಾತ್ರೆ, ಉತ್ಸವ ಸೇರಿದಂತೆ ಹಿಂದೂಗಳ ಧಾರ್ಮಿಕ ಕಾರ್ಯಕ್ರಮಗಳಲ್ಲಿ ವ್ಯಾಪಾರ ಮಾಡಿಕೊಂಡು ಬಂದಿದ್ದೇವೆ. ಮೊದಲ ಬಾರಿಗೆ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ಹಾಕಲಾಗಿದೆ. ವ್ಯಾಪಾರಕ್ಕೆ ಅವಕಾಶ ನೀಡುವಂತೆ ಕಾಪು ಮಾರಿಗುಡಿ ದೇವಸ್ಥಾನ ಮಂಡಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ' ಎಂದು ಬೀದಿಬದಿ ವ್ಯಾಪಾರಿಗಳ ಹಾಗೂ ಜಾತ್ರೆ ವ್ಯಾಪಾರಿಗಳ ಒಕ್ಕೂಟದ ಕಾರ್ಯದರ್ಶಿ ಮಹಮ್ಮದ್ ಆರೀಫ್ ಬೇಸರ ವ್ಯಕ್ತಪಡಿಸಿದರು.

'ಹಿಜಾಬ್ ಸಂಬಂಧಿಸಿದಂತೆ ಹೈಕೋರ್ಟ್ ತೀರ್ಪಿಗೆ ವಿರುದ್ಧ ಕರೆ ನೀಡಿದ್ದ ಬಂದ್‌ಗೆ ಬೀದಿ ಬದಿ ಹಾಗೂ ಜಾತ್ರಾ ವ್ಯಾಪಾರಿಗಳು ಬೆಂಬಲ ನೀಡಿಲ್ಲ. ಒಕ್ಕೂಟದಲ್ಲಿ ಎಲ್ಲ ಜಾತಿ– ಧರ್ಮಗಳಿಗೆ ಸೇರಿದ ಸಾವಿರಕ್ಕೂ ಹೆಚ್ಚು ವ್ಯಾಪಾರಿಗಳಿದ್ದು, ಅವರಲ್ಲಿ 600ಕ್ಕೂ ಹೆಚ್ಚು ಮುಸ್ಲಿಮರಿದ್ದಾರೆ. ಕೋಮು ಸಂಘರ್ಷದಿಂದ ಮುಸ್ಲಿಂ ವ್ಯಾಪಾರಿಗಳ ಜೀವನ ಬೀದಿಗೆ ಬರಲಿದೆ' ಎಂದು ಹೇಳಿದರು.

ಮಂಗಳೂರು ಸಮೀಪದ ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನದ ಎದುರು ಅಳವಡಿಸಿರುವ ಬ್ಯಾನರ್

ಗ್ರಾ.ಪಂ.ಗೆ ಮನವಿ: ಕೊಲ್ಲೂರಿನ ಮೂಕಾಂಬಿಕಾ ದೇವಸ್ಥಾನದ ಜಾತ್ರಾ ಮಹೋತ್ಸವದಲ್ಲಿ ಅನ್ಯ ಮತೀಯರಿಗೆ ವ್ಯಾಪಾರ ನಡೆಸಲು ಅವಕಾಶ ನೀಡಬಾರದು ಎಂದು ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗ ದಳದ ವತಿಯಿಂದ ಸೋಮವಾರ ಕೊಲ್ಲೂರು ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಹರೀಶ್ ಶೆಟ್ಟಿ ಅವರಿಗೆ ಮನವಿ ನೀಡಲಾಗಿದೆ.

ದಕ್ಷಿಣ ಕನ್ನಡದಲ್ಲೂ ಬ್ಯಾನರ್: ಜಿಲ್ಲೆಯ ಮಂಗಳಾದೇವಿ ದೇವಸ್ಥಾನ, ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನ, ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನ, ಕಾಟಿಪಳ್ಳ ಗಣೇಶಪುರ ಮಹಾಗಣಪತಿ ದೇವಸ್ಥಾನಗಳ ಜಾತ್ರೋತ್ಸವದಲ್ಲಿ ಹಿಂದೂಯೇತರರಿಗೆ ವ್ಯಾಪಾರಕ್ಕೆ ಅವಕಾಶ ನೀಡದಿರಲು ನಿರ್ಧಾರ ಕೈಗೊಳ್ಳಲಾಗಿದ್ದು, ಈ ಸಂಬಂಧ ದೇವಸ್ಥಾನಗಳ ಮುಂಭಾಗ ಬ್ಯಾನರ್ ಅಳವಡಿಸಲಾಗಿದೆ.

'ಜಾತ್ರೋತ್ಸವದಲ್ಲಿ ಹಿಂದೂಯೇತರರಿಗೆ ವ್ಯಾಪಾರಕ್ಕೆ ಅವಕಾಶ ಇಲ್ಲ. ಸಂವಿಧಾನಕ್ಕೆ ವಿರುದ್ಧವಾದವರಿಗೆ, ಗೋ ಕಟುಕರಿಗೆ ವ್ಯಾಪಾರಕ್ಕೆ ಅವಕಾಶ 'ಇಲ್ಲ' ಎಂಬ ಬ್ಯಾನರ್ ಅನ್ನು ದೇವಸ್ಥಾನದ ಮುಂದೆ ಹಾಕಲಾಗಿದೆ.

'ಘಟನೆ ಬಗ್ಗೆ ದೇವಸ್ಥಾನದ ಆಡಳಿತ ಮಂಡಳಿ, ತಹಶೀಲ್ದಾರ್ ಜೊತೆ ಮಾತನಾಡಿದ್ದೇವೆ. ಬ್ಯಾನರ್ ಯಾರು ಹಾಕಿದ್ದಾರೆ ಎಂಬುದರ ಬಗ್ಗೆ ತನಿಖೆ ಮಾಡುತ್ತೇವೆ' ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

'ಆಡಳಿತ ಮಂಡಳಿಯವರು ದೂರು ನೀಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ಕಾನೂನು ತಜ್ಞರ ಬಳಿ ಮಾಹಿತಿ ಕೇಳಿದ್ದೇವೆ. ಬಪ್ಪನಾಡು ದೇವಸ್ಥಾನದ ಆಡಳಿತ ಮಂಡಳಿ ನಿಯಮದ ಪ್ರಕಾರ ಹಿಂದೂಯೇತರರಿಗೆ ವ್ಯಾಪಾರಕ್ಕೆ ಅವಕಾಶ ಇಲ್ಲ ಎಂದು ಹೇಳಿರುವುದಾಗಿ' ತಿಳಿಸಿದ್ದಾರೆ.

ಬಪ್ಪ ಬ್ಯಾರಿ ನಿರ್ಮಿಸಿದ ದೇವಸ್ಥಾನ

800 ವರ್ಷ ಇತಿಹಾಸವಿರುವ ಬಪ್ಪನಾಡು ದುರ್ಗಾ ಪರಮೇಶ್ವರಿ ದೇವಸ್ಥಾನವನ್ನು ಮುಸ್ಲಿಂ ವ್ಯಾಪಾರಿ ಬಪ್ಪ ಬ್ಯಾರಿ ನಿರ್ಮಿಸಿದ್ದಾರೆ ಎಂಬುದು ಪ್ರತೀತಿ. ಮುಸ್ಲಿಮರು ಮೊದಲು ಪ್ರಸಾದವನ್ನು ಸ್ವೀಕರಿಸಲು ಅವಕಾಶ ನೀಡುವ ಅಪರೂಪದ ಸಂಪ್ರದಾಯಕ್ಕೆ ಇದು ಹೆಸರುವಾಸಿಯಾಗಿದೆ.

ಮೂಲ್ಕಿ ಶಾಂಭವಿ ನದಿಯ ಪ್ರವಾಹದಲ್ಲಿ ದೇವಸ್ಥಾನವು ನಶಿಸಿತು. ಆದರೆ 5ಲಿಂಗಗಳ ಪೀಠಕ್ಕೆ ಯಾವುದೇ ಹಾನಿಯಾಗಿರಲಿಲ್ಲ. ಒಂದು ದಿನ ಬಪ್ಪ ಬ್ಯಾರಿ ಹಡಗು ಆ ಕಲ್ಲುಗಳಿಗೆ ಡಿಕ್ಕಿ ಹೊಡೆದು ನಿಂತಿತು. ಆಗ ಬಪ್ಪ ಬ್ಯಾರಿಯ ಕನಸಿನಲ್ಲಿ ಬಂದ ದುರ್ಗಾದೇವಿಯು, ಆ ಲಿಂಗಗಳಿಗೆ ದೇವಸ್ಥಾನವನ್ನು ಕಟ್ಟಲು ಹೇಳಿದಂತಾಯಿತು. ಆದ್ದರಿಂದ ಈ ಸ್ಥಳವನ್ನು ಬಪ್ಪನಾಡು ಎಂದು ಕರೆಯುತ್ತಾರೆ.

ಬಪ್ಪರ ವಂಶಸ್ಥರು ಈಗಲೂ ಪೂರ್ವಜರ ಮನೆಯಲ್ಲಿ ವಾಸಿಸುತ್ತಿದ್ದಾರೆ. ದೇವಸ್ಥಾನವನ್ನು ನಿರ್ಮಿಸಿದ ವ್ಯಕ್ತಿಯ ಗೌರವಾರ್ಥವಾಗಿ ದೇವಾಲಯದ ರಥೋತ್ಸವ ಪ್ರತಿವರ್ಷ ಈ ಮನೆಯಿಂದ ಪ್ರಾರಂಭವಾಗುತ್ತದೆ. ವಾರ್ಷಿಕ ಉತ್ಸವದ ಮೊದಲ ಪ್ರಸಾದವನ್ನು ಬಪ್ಪ ಬ್ಯಾರಿಯ ವಂಶಸ್ಥರಿಗೆ ನೀಡಲಾಗುತ್ತದೆ. ಪ್ರತಿಯಾಗಿ ಕುಟುಂಬದವರು ಹಣ್ಣು ಮತ್ತು ಹೂವುಗಳನ್ನು ದೇವಿಗೆ ಅರ್ಪಿಸುತ್ತಾರೆ.

ಮಾರಿಕಾಂಬಾ ಜಾತ್ರೆ: ಮಳಿಗೆ ಮೇಲೆ ಕೇಸರಿ ಬಾವುಟ ಕಡ್ಡಾಯ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿಯ ಕೋಟೆ ಮಾರಿಕಾಂಬಾ ದೇವಿ ಜಾತ್ರಾ ಮಹೋತ್ಸವದಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ಅವಕಾಶ ನಿರಾಕರಿಸಲಾಗಿದ್ದು, ಮಳಿಗೆ ತೆರೆಯುವ ಹಿಂದೂ ವ್ಯಾಪಾರಿಗಳು ಅಂಗಡಿಯ ಮೇಲೆ ಕೇಸರಿ ಬಾವುಟ ಹಾರಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಪ್ರತಿ ಎರಡು ವರ್ಷಗಳಿಗೆ ಒಮ್ಮೆ ಐದು ದಿನಗಳ ಕಾಲ ನಡೆಯುವ ಈ ಜಾತ್ರಾ ಮಹೋತ್ಸವದಲ್ಲಿ ಹಿಂದಿನಿಂದಲೂ ಎಲ್ಲ ಧರ್ಮದ ವ್ಯಾಪಾರಿಗಳು ಭಾಗವಹಿಸುತ್ತಿದ್ದರು. ಆದರೆ, ಈ ಬಾರಿಯ ಜಾತ್ರಾ ಮಹೋತ್ಸವದಲ್ಲಿ ಬಜರಂಗದಳದ ಮುಖಂಡರು ಮಳಿಗೆಗಳ ನಿರ್ವಹಣೆಯ ಟೆಂಡರ್ ಪಡೆದಿದ್ದು, ಮುಸ್ಲಿಮರಿಗೆ ಮಳಿಗೆ ಹಾಕಲು ಅವಕಾಶ ನೀಡಿಲ್ಲ.

ಈ ಬಾರಿ ಗೊಂದಲ ನಿರ್ಮಾಣವಾದ ಕಾರಣ ಹೆಚ್ಚಿನ ವ್ಯಾಪಾರಿಗಳು ಬಂದಿಲ್ಲ. ಮಳಿಗೆ ತೆರೆಯುವ ಎಲ್ಲ ವ್ಯಾಪಾರಿಗಳು ಈಗ ಕೇಸರಿ ಬಾವುಟ ಹಾಕಿದ್ದಾರೆ. ಆ ಮೂಲಕ ಜಾತ್ರೆಯಲ್ಲಿ ಮುಸ್ಲಿಮರು ಭಾಗವಹಿಸಿಲ್ಲ ಎಂಬ ಸಂದೇಶವನ್ನು ಸಾರಲಾಗಿದೆ.

ಶಿವಮೊಗ್ಗದ ಕೋಟೆ ಮಾರಿಕಾಂಬಾ ಜಾತ್ರೆಯಲ್ಲಿ ಮಳಿಗೆಗಳ ಮೇಲೆ ಕೇಸರಿ ಬಾವುಟ ಹಾರಿಸಲಾಗಿದೆ

ಕೃತಿರೂಪದಲ್ಲಿ ಹೊರಬಂದಿರುವ ಸಮಗ್ರ ಒಳನೋಟ

ಆಂಗ್ಲಯಲ್ಲಿ ಕಂದಾಯ ಆಡಳಿತ ಚರಿತ್ರೆ

• ಸಂಧ್ಯಾ ಹೆಗಡೆ

ಮಂಗಳೂರು: ಸರ್ಕಾರಿ ವ್ಯವಸ್ಥೆಯಲ್ಲಿ ಮಾತೃ ಇಲಾಖೆಯಾಗಿರುವ ಕಂದಾಯ ಇಲಾಖೆಯ ಬಗ್ಗೆ ಮಾಹಿತಿ ಕಲೆ ಹಾಕಲು ಇನ್ನು ತಡಕಾಡಬೇಕಾಗಿಲ್ಲ. ಕಂದಾಯ ಇಲಾಖೆಯ ಡಿಜಿಟಲ್ ಆಡಳಿತದ ಸಮಗ್ರ ಚಿತ್ರಣವನ್ನು ಐಎಎಸ್ ಅಧಿಕಾರಿಯೊಬ್ಬರು ಅಕ್ಷರ ರೂಪಕ್ಕಿಳಿಸಿದ್ದಾರೆ.

ಮಂಗಳೂರು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಕುಮಾರ್ ಅವರು 'ದಿ ಅಡ್ವೆಂಟ್ ಆಫ್ ಡಿಜಿಟಲ್ ಗವರ್ನನ್ಸ್: ಇಂಪ್ಲಿಕೇಷನ್ಸ್ ಫಾರ್ ರೆಸ್ಪಾನ್ಸಿವ್ ರೆವಿನ್ಯೂ ಎಡ್ಮಿನಿಷ್ಟ್ರೇಷನ್ ಆಫ್ ಕರ್ನಾಟಕ' ಪುಸ್ತಕ ರಚಿಸಿದ್ದಾರೆ. 460 ಪುಟಗಳ ಈ ಕೃತಿಯಲ್ಲಿ ಕಂದಾಯ ಇಲಾಖೆಯ ಐತಿಹಾಸಿಕ ನೋಟ, ಸಾಂಸ್ಥಿಕ ರೂಪುರೇಷೆ, ಜಿಲ್ಲಾ ಮಟ್ಟದಿಂದ ಗ್ರಾಮ ಮಟ್ಟದವರೆಗಿನ ಅಧಿಕಾರಿಗಳ ಹೊಣೆಗಾರಿಕೆ, ಇ-ಆಡಳಿತ ಬಂದಮೇಲೆ ಆಗಿರುವ ಕ್ರಾಂತಿಕಾರಿ ಬದಲಾವಣೆಗಳು, ಇಲಾಖೆಯ 25ಕ್ಕೂ ಹೆಚ್ಚು ಮಾಹಿತಿ ಮತ್ತು ತಂತ್ರಜ್ಞಾನ ಆಧಾರಿತ ಯೋಜನೆಗಳು, ಇವುಗಳ ಫಲಿತಾಂಶದ ಜತೆಗೆ ಸಾರ್ವಜನಿಕರು ಮತ್ತು ಅನುಷ್ಠಾನಾಧಿಕಾರಿಗಳ ಅಭಿಪ್ರಾಯ ದಾಖಲಾಗಿದೆ.



'ದಿ ಅಡ್ವೆಂಟ್ ಆಫ್ ಡಿಜಿಟಲ್ ಗವರ್ನನ್ಸ್' ಕೃತಿ

ಸದ್ಯ ಇಂಗ್ಲಿಷ್‌ನಲ್ಲಿ ಮುದ್ರಿತವಾಗಿರುವ ಈ ಕೃತಿಯನ್ನು ಕನ್ನಡ ಅವತರಣಿಕೆಯಲ್ಲಿ ಹೊರತರಲು ಸಿದ್ಧತೆಗಳು ನಡೆಯುತ್ತಿವೆ.

ಡಾ. ಕುಮಾರ್, ಕೃತಿಕಾರ

'ನನ್ನ ಪಿಎಚ್.ಡಿ ಅಧ್ಯಯನಕ್ಕೆ ಕೆಲವು ಅಂಕಿ–ಅಂಶ ಕಲೆಹಾಕಲು ಹುಡುಕಾಟ ಮಾಡಬೇಕಾದ ಸಂದರ್ಭ ಬಂತು. ಆಗ ಮೂಡಿದ ಒತ್ತಾಸೆ ಹಾಗೂ 13 ವರ್ಷಕ್ಕೂ ಹೆಚ್ಚು ಅವಧಿಯಲ್ಲಿ ಕಂದಾಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವ ಈಗ ಕೃತಿ ರೂಪದಲ್ಲಿ ಹೊರಬಂದಿದೆ ಕಂದಾಯ ಇಲಾಖೆಯ ಎಲ್ಲ ಹರವುಗಳನ್ನು ಕೃತಿಯಲ್ಲಿ ದಾಖಲಿಸಿದ್ದೇನೆ' ಎಂದು ಡಾ. ಕುಮಾರ್ ಹೇಳಿದರು.

ಕೆಲವು ಯೋಜನೆ ಅನುಷ್ಠಾನದಲ್ಲಿ ಎದುರಾದ ತೊಡಕುಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು, ಫಲಾನುಭವಿ ಸಾರ್ವಜನಿಕರ ಅಭಿಪ್ರಾಯವನ್ನು ವಿವರವಾಗಿ ವಿಶ್ಲೇಷಿಸಿ, ಸಮಸ್ಯೆ ಪರಿಹಾರಕ್ಕೆ ಪುಸ್ತಕದ ಕೊನೆಯ ಪುಟಗಳಲ್ಲಿ ಸಲಹೆಗಳನ್ನು ಸೂಚಿಸಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕಂದಾಯ ಸಚಿವ ಆರ್. ಅಶೋಕ ಅವರು ಈ ಕೃತಿಯನ್ನು ಬಿಡುಗಡೆಗೊಳಿಸಿದ್ದಾರೆ.

'ಜೇಮ್ಸ್' ನಿಲ್ಲಿಸಿ 'ಕಾಶ್ಮೀರ್ ಫೈಲ್ಸ್'ಗೆ ಅವಕಾಶ: ದೂರು

ಬೆಂಗಳೂರು: 'ಕಾಶ್ಮೀರ್ ಫೈಲ್ಸ್' ಸಿನಿಮಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲು ದಿವಂಗತ ಪುನೀತ್ ರಾಜ್‌ಕುಮಾರ್ ನಟನೆಯ 'ಜೇಮ್ಸ್' ಚಿತ್ರ ಪ್ರದರ್ಶನ ಸ್ಥಗಿತಗೊಳಿಸುವಂತೆ ಬಿಜೆಪಿಯವರು ಬಲವಂತ ಮಾಡುತ್ತಿರುವುದು ದೌರ್ಜನ್ಯ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ದೂರಿದ್ದಾರೆ.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಅನೇಕ ಕಡೆಗಳಲ್ಲಿ ಬಿಜೆಪಿ ಶಾಸಕರು, ಕಾರ್ಯಕರ್ತರು ಚಿತ್ರಮಂದಿರಗಳಿಗೆ ತೆರಳಿ 'ಜೇಮ್ಸ್' ಚಿತ್ರ ಪ್ರದರ್ಶನ ಸ್ಥಗಿತಗೊಳಿಸಿ 'ಕಾಶ್ಮೀರ ಫೈಲ್ಸ್' ಪ್ರದರ್ಶಿಸುವಂತೆ ಒತ್ತಡ ಹೇರುತ್ತಿದ್ದು, ಕೆಲವೆಡೆ ಸಿನಿಮಾ ಪ್ರದರ್ಶನ ನಿಲ್ಲಿಸಿದ್ದಾರೆಂದು ಅದರ ನಿರ್ಮಾಪಕ ಕಿಶೋರ್ ನನಗೆ ತಿಳಿಸಿದ್ದಾರೆ. ಹಲವು ಕಡೆ ಹೀಗೆ ಒತ್ತಡ ಹಾಕುತ್ತಿದ್ದಾರೆಂದು ತಿಳಿಸಿದ್ದಾರೆ' ಎಂದರು.

'ಜೇಮ್ಸ್' ನಿರ್ಮಾಪಕರು ಸಿನಿಮಾ ಬಿಡುಗಡೆಗೆ ಮೊದಲೇ ಕೆಲ ಚಿತ್ರಮಂದಿರಗಳನ್ನು ಕಾದಿರಿಸಿ, ಮುಂಗಡ ಪಾವತಿಸಿದ್ದರು. ಹೀಗಾಗಿ, ಸಿನಿಮಾ ಪ್ರದರ್ಶನಕ್ಕೆ ಅಡ್ಡಿ ಮಾಡುವುದು ಸರಿಯಲ್ಲ' ಎಂದರು.

'ಪುನೀತ್ ಒಬ್ಬ ಸಮಾಜಮುಖಿ, ಪ್ರತಿಭಾನ್ವಿತ ನಟರಾಗಿದ್ದರು. ಅವರ ಕೊನೆ ಸಿನಿಮಾ ವೀಕ್ಷಿಸಬೇಕೆಂದು ಅವರ ಅಭಿಮಾನಿಗಳಿಗೆ ಆಸೆ ಇದೆ. ಬಿಜೆಪಿಯವರು ತಮ್ಮನ್ನು ಸಜ್ಜನರು ಎಂದು ಹೇಳಿಕೊಂಡು ದೌರ್ಜನ್ಯ ಮಾಡುತ್ತಿದ್ದಾರೆ. ಜೇಮ್ಸ್ ಪ್ರದರ್ಶನಕ್ಕೆ ಅಡ್ಡಿ ಮಾಡಿರುವ ಶಾಸಕರ ಜೊತೆ ಮಾತನಾಡುತ್ತೇನೆ.' ಎಂದರು.

ಯಾರು ಒತ್ತಡ ಹಾಕಿದ್ದಾರೋ ತಿಳಿದಿಲ್ಲ–ನಿರ್ಮಾಪಕ

ಸುದ್ದಿಗಾರರೊಂದಿಗೆ ಮಾತನಾಡಿದ 'ಜೇಮ್ಸ್' ನಿರ್ಮಾಪಕ ಕಿಶೋರ್, 'ಕೆಲ ಚಿತ್ರಮಂದಿರದ ಮಾಲೀಕರು ನನಗೆ ಕರೆ ಮಾಡಿ ಒಂದು ಶೋ 'ಕಾಶ್ಮೀರ್ ಫೈಲ್ಸ್' ಹಾಕಿಕೊಳ್ಳುತ್ತೇವೆ ಎಂದು ಕೇಳಿದರು. ಅವರಿಗೆ ಯಾರು ಒತ್ತಡ ಹಾಕಿದ್ದಾರೋ ನನಗೆ ತಿಳಿದಿಲ್ಲ. ಎಲ್ಲೂ ಜೇಮ್ಸ್‌ನ ಎಲ್ಲ ಪ್ರದರ್ಶನಗಳನ್ನು ತೆಗೆದು ಈ ಸಿನಿಮಾ ಹಾಕಲು ಕೇಳಿಲ್ಲ. ಆದರೆ, ಇದಕ್ಕೆ ನಾನು ಒಪ್ಪಲಿಲ್ಲ. 'ಜೇಮ್ಸ್' ಅಪ್ಪು ಅವರ ಕೊನೆಯ ಸಿನಿಮಾ. ನನ್ನ ಸಿನಿಮಾಗೆ ತೊಂದರೆ ನೀಡಬೇಡಿ ಎಂದಿದ್ದೇನೆ. ಚಿತ್ರಮಂದಿರಗಳು ಪ್ರೇಕ್ಷಕರಿಂದ ತುಂಬುತ್ತಿರುವಾಗ ತೆಗೆಯಬೇಡಿ ಎಂದಿದ್ದೇನೆ. ಸಿನಿಮಾ ವೀಕ್ಷಿಸಲು ಆಹ್ವಾನ ನೀಡಲು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿದ್ದೆ' ಎಂದರು.

The Classic KAS & IAS Study Circle

SINCE 1997

ಸತತ 25 ವರ್ಷಗಳಿಂದ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯಶಸ್ವಿಯಾಗಿ ತರಬೇತಿ ನೀಡುತ್ತಿರುವ ರಾಜ್ಯದ ಪ್ರತಿಷ್ಠಿತ ಅಧ್ಯಯನ ಕೇಂದ್ರ

ಮುಖ್ಯ ಕಚೇರಿ: Unit-A, ಸಪ್ತಾಪುರ ಬಾವಿ ಸರ್ಕಲ್, ಉಪ ಕಚೇರಿಗಳು: Unit-B, ಶಾರದಾ ಸ್ಕೂಲ್ ಹತ್ತಿರ, Unit-C, ಸಪ್ತಾಪುರ ಬಾವಿ ಸರ್ಕಲ್, ಧಾರವಾಡ. Cell: 9980552080 | 82 Ph: 0836-2449005

ಕಲಬುರಗಿ ಶಾಖೆ: ಪ್ಲಾಟ ನಂ–6, ಅರಿಹಂತ ನಗರ, ಸೇಡಂ ರಸ್ತೆ (ಯುನಿವರ್ಸಿಟಿ ರಸ್ತೆ) M: 63663 95426 / 27, 9900018403

ಬೆಂಗಳೂರು ಶಾಖೆ: RV Complex, 860/29, 4th Main, 3rd Cross, Vijayanagar, at Hosahalli Metro Station, Bengaluru. Ph:080-23359599

ಧಾರವಾಡ, ಬೆಂಗಳೂರು & ಕಲಬುರ್ಗಿ ಶಾಖೆಗಳಲ್ಲಿ ಹೊಸ ಬ್ಯಾಚ್‌ಗಳು ಪ್ರಾರಂಭ

- KAS Prelims & Mains (Kannada & English Medium)
- IAS Prelims & Mains (English Medium)
- PSI (Kannada & English Medium) • PC| Bank PO|Clerk

6 ರಿಂದ 8 ಪದವಿಧರ ಶಾಲಾ ಶಿಕ್ಷಕರ ನೇಮಕಾತಿ ಪರೀಕ್ಷೆಗೆ 28-03-2022 ರಂದು ಹೊಸ ಬ್ಯಾಚ್ ಪ್ರಾರಂಭ
ಪತ್ರಿಕೆ–1, ಪತ್ರಿಕೆ–2 & ಪತ್ರಿಕೆ–3
Maths & Science, English & Social Science

ಉಚಿತ ಕಾರ್ಯಾಗಾರ KAS & PSI ದಿ: 10-04-2022 ರಂದು ರವಿವಾರ ಕಲಬುರ್ಗಿಯಲ್ಲಿ @ 10am

Classic PU & Degree College, Dharwad

Recognised by Govt. of Karnataka
ಕಲಾ, ವಾಣಿಜ್ಯ ಮತ್ತು ವಿಜ್ಞಾನ (ಕನ್ನಡ ಮತ್ತು ಆಂಗ್ಲ ಮಾಧ್ಯಮ)
PUC-I & II Science Commerce Arts
Integrated with • IIT-JEE/ NEET/ K-CET/ •CA/ CS •KAS/ IAS/ PSI/ BANK Exam etc.
E-Square Building, Saptapur Bhavi Circle, Dharwad
Cell: 0836-2449009, 9606064879 (PU)

Affiliated to Karnatak University
B.Sc. BA B.Com
Integrated with IAS/ KAS/ PSI/ BANK etc Exams Training
E-Square Building, Saptapur Bhavi Circle, Dharwad
Cell: 0836-2449010, 9606064880 (Degree)

Reserve your seat for the Academic Year 2022-23

ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಸಂಸ್ಥೆಯ ಹೆಮ್ಮೆಯ ಪತ್ರಿಕೆಗಳು & ಪುಸ್ತಕಗಳು

ಸ್ಪರ್ಧಾ ಸ್ಫೂರ್ತಿ, Competition Vision, ಕ್ಲಾಸಿಕ್ ನೋಟ್ಸ್ & ಕ್ಲಾಸಿಕ್ ಇಯರ್ ಬುಕ್–2022

ಸ್ಪರ್ಧಾ ಸ್ಫೂರ್ತಿ 200ನೇ ಸಂಚಿಕೆ ಈಗ ನೂತನ ಶೈಲಿಯಲ್ಲಿ

IAS/KAS/PSI/PC/PDO/B.ED CET/FDA/SDA ಇತ್ಯಾದಿ ಪರೀಕ್ಷೆಗಳಿಗೆ ಉಪಯುಕ್ತ ಪತ್ರಿಕೆ ಇದಾಗಿದ್ದು, ಪ್ರತಿ ತಿಂಗಳು 96 ಪುಟಗಳನ್ನು ಹೊಂದಿದ್ದ ನಿಮ್ಮ ಸ್ಪರ್ಧಾ ಸ್ಫೂರ್ತಿ ಪತ್ರಿಕೆಯ ಮಾರ್ಚ್ ಸಂಚಿಕೆಯಲ್ಲಿ 16 ಪುಟಗಳನ್ನು ಹೆಚ್ಚುವರಿಯಾಗಿ ನೀಡಲಾಗಿದೆ. 200ನೇ ಸಂಚಿಕೆ ವಿಶೇಷವಾಗಿದ್ದು, ಈ ಸಂಚಿಕೆಯಲ್ಲಿ ಸ್ಪರ್ಧಾ ಸ್ಫೂರ್ತಿ ನಡೆದು ಬಂದ ಹಾದಿಯನ್ನು ನೀಡಲಾಗಿದೆ. ಪ್ರಧಾನ ಸಂಪಾದಕರಾದ ಶ್ರೀ ಲಕ್ಷ್ಮಣ ಎಸ್ ಉಪ್ಪಾರ ಅವರು ಸ್ಪರ್ಧಾ ಸ್ಫೂರ್ತಿ ಪತ್ರಿಕೆಯನ್ನು ಹೇಗೆ ಹುಟ್ಟುಹಾಕಿದರು, ಅವರ ನಡೆದು ಬಂದ ಹೆಜ್ಜೆಗಳ ಕುರಿತು ವಿವರವಾಗಿ ಈ ಪತ್ರಿಕೆಯಲ್ಲಿ ನೀಡಲಾಗಿದೆ.

ಸ್ಪರ್ಧಾ ಸ್ಫೂರ್ತಿಯ ಈ ಸಂಚಿಕೆಯು ಕೇಂದ್ರ & ರಾಜ್ಯ ಬಜೆಟ್, ಆರ್ಥಿಕ ಸಮೀಕ್ಷೆ ಸೇರಿದಂತೆ ಇನ್ನೂ ಹಲವು ಉಪಯುಕ್ತ ಲೇಖನಗಳನ್ನು, ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಪ್ರಚಲಿತ ಘಟನಾವಳಿಗಳು, ಯುಪಿಎಸ್‌ಸಿ ಪರೀಕ್ಷೆ ಅಧಿಸೂಚನೆ ಮಾಹಿತಿಯನ್ನು, ಸಾಧಕರ ಸಂದರ್ಶನಗಳನ್ನು ಜೊತೆಗೆ ಸಿಇಟಿ, ಟಿಇಟಿ, ಎಫ್‌ಡಿಎ, ಎಸ್‌ಡಿಎ, ಗ್ರೂಪ್–ಸಿ ಪರೀಕ್ಷೆಗಳಿಗೆ ಅನುಕೂಲವಾಗಲೆಂದು ಜಿಕೆ, ಕನ್ನಡ, ಶೈಕ್ಷಣಿಕ ಮನೋವಿಜ್ಞಾನ, ಕಂಪ್ಯೂಟರ್ ವಿಷಯಗಳ ಅಧ್ಯಯನ ಸಾಮಗ್ರಿಯನ್ನು ಒಳಗೊಂಡಿದೆ. ಈಗ ರಾಜ್ಯಾದ್ಯಂತ ಎಲ್ಲ ಪುಸ್ತಕ ಮಳಿಗೆಗಳಲ್ಲಿ ಲಭ್ಯ.

ಹೆಚ್ಚಿನ ಮಾಹಿತಿಗಾಗಿ : 9980552082

ಶ್ರೀ ಲಕ್ಷ್ಮಣ ಎಸ್ ಉಪ್ಪಾರ
ನಿರ್ದೇಶಕರು, ಕ್ಲಾಸಿಕ್ ಸಮೂಹ ಸಂಸ್ಥೆಗಳು, ಧಾರವಾಡ
Classic Group of Organisations

WANTED : WALK-IN-INTERVIEW

Classic International Public School (ICSE)

Pre-Primary, Primary & High School | Affiliated to CISCE New Delhi | Affiliation Code : KA412

Opp.Tapovana, Kyarakoppa Road, Dharwad Cell: Ph: 0836-2775791, 8197049780 / 81, 9902043353

School Requires Trained Graduate / Post Graduate Teachers with D.Ed./B.Ed./M.Ed.

WALK IN INTERVIEW ON: 27-03-2022 (Sunday) | Timings: 10 am to 3 pm | Venue: School Office

Sl No	Subject	No of Posts
1	English/Science/Maths	04
2	English	05
3	Kannada	02
4	Hindi	02
5	EVS/Science	04
6	Maths	05
7	Physics	02
8	Chemistry	02
9	Biology	02
10	Computer	04
11	Social Studies	05
12	Geography	02
13	Yoga	02
14	Art & Craft	02
15	Physical Education	02
16	Library	02

- Preference will be given to experienced & competent teachers
- Fluency in English is mandatory
- Salary will be as per institutional norms
- Conducive work atmosphere
- Confirm your visit and mail to

acips1234@gmail.com

Bring a hard copy of the resume along with 2 passport size photos at the time of interview.

The Classic KAS & IAS Study Circle

ಸತತ 25 ವರ್ಷಗಳಿಂದ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯಶಸ್ವಿಯಾಗಿ ತರಬೇತಿ ನೀಡುತ್ತಿರುವ ರಾಜ್ಯದ ಪ್ರತಿಷ್ಠಿತ ಅಧ್ಯಯನ ಕೇಂದ್ರ

ಯುನಿಟ್–ಎ: ಅಕ್ಷತಾ ಆರ್ಕೇಡ್, ಸಪ್ತಾಪುರ ಬಾವಿ ಸರ್ಕಲ್ | ಇ–ಸ್ಕ್ವೇರ್ ಬಿಲ್ಡಿಂಗ್, ಸಪ್ತಾಪೂರ ಬಾವಿ ಸರ್ಕಲ್, ಧಾರವಾಡ. ಮೊ: 9980552080/81

WALK IN INTERVIEW ON: 10-04-2022 (Sunday) | Timings: 10 am to 5 pm | Venue: Unit-C

Teaching Posts

Sl No	Subject	No of Posts
1.	History	4
2.	Geography	3
3.	Indian Constitution	4
4.	Economics	4
5.	Kannada	2
6.	English	4
7.	Science	4
8.	Science & Tech	4
9.	General Awareness	4
10.	EVS	4
11.	Physiology	2
12.	Biology	3

- The Organization requires Teaching & Non-teaching staff, experienced, competent candidates having mastery in English and Kannada can send their resume to the official mail:

classicnewunit@gmail.com

- Mention the post for which you are applying
- Teachers having 4 to 5 year of experience in the field of competitive exams in their subjects, proficiency both in Kannada and English medium
- For Non-teaching Staff : Young, Enthusiastic Graduates, good at Communication in English and Kannada are preferred
- Salary based on institutional norms.

Non-Teaching Posts

Sl No	Subject	No of Posts
1.	Administrator	2
2.	Counselor	4
3.	Graphics Designer	2
3.	DTP Operator	4
4.	Account Section	2
5.	Tele Caller	4
6.	Receptionist	2
7.	Office Boys	4

- Short listed candidates are called for interview in a week with prior intimation (By Phone Call)

Phone No : 9900018401

Official Mail: classicnewunit@gmail.com Phone No : 9900018401 Shri Laxman S. Uppar Sd/-Chairman

Classic Education YouTube Channel
Regular Online guidance for all competitive exams

ಅಪಘಾತ: ಬಿಬಿಎಂಪಿ ಲಾರಿ ಚಾಲಕ ಬಂಧನ

ಬೆಂಗಳೂರು: ಹೆಬ್ಬಾಳ ಬಸ್ ನಿಲ್ದಾಣ ಬಳಿ ಸೋಮವಾರ (ಮಾರ್ಚ್ 21) ಸಂಭವಿಸಿದ್ದ ಅಪಘಾತ ಪ್ರಕರಣ ಸಂಬಂಧ ಬಿಬಿಎಂಪಿ ಕಸ ಸಾಗಣೆ ಲಾರಿ ಚಾಲಕ ಮಂಜುನಾಥ್ ಅವರನ್ನು ಆರ್.ಟಿ.ನಗರ ಸಂಚಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಶಾಲೆ ಮುಗಿಸಿ ಮನೆಗೆ ಹೊರಟಿದ್ದ ಅಕ್ಷಯಾ ಅಪಘಾತದಿಂದಾಗಿ ಮೃತಪಟ್ಟಿದ್ದರು. ಪಾದಚಾರಿಗಳಿಬ್ಬರು ಹಾಗೂ ಬೈಕ್ ಸವಾರ ಗಾಯಗೊಂಡಿದ್ದರು. ಚಾಲಕ ಮಂಜುನಾಥ್ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ನಿಲ್ದಾಣ ಎದುರಿನ ಮುಖ್ಯ ರಸ್ತೆ ದಾಟಲು ಪಾದಚಾರಿಗಳಿಗಾಗಿ ಕೆಳಸೇತುವೆ ನಿರ್ಮಿಸಲಾಗಿದೆ. ಭಾನುವಾರ ರಾತ್ರಿ ಸುರಿದ ಮಳೆಯಿಂದಾಗಿ ಕೆಳಸೇತುವೆಯಲ್ಲಿ ನೀರು ನಿಂತಿತ್ತು. ಪಾದಚಾರಿಗಳು ಓಡಾಡಲು ಸಾಧ್ಯವಾಗಿರಲಿಲ್ಲ. ಹೀಗಾಗಿ, ಬಾಲಕಿ ಹಾಗೂ ಇತರರು ಮುಖ್ಯರಸ್ತೆ ಮೂಲಕ ರಸ್ತೆ ದಾಟಲು ಮುಂದಾಗಿದ್ದರೆಂದು ಪ್ರತ್ಯಕ್ಷದರ್ಶಿಗಳು ಹೇಳಿಕೆ ನೀಡಿದ್ದಾರೆ. ರಸ್ತೆ ದಾಟುವಾಗಲೇ ಅವರಿಗೆ ಲಾರಿ ಗುದ್ದಿತ್ತು. ಬಾಲಕಿ ಅಕ್ಷಯಾ ಸ್ಥಳದಲ್ಲೇ ಮೃತಪಟ್ಟಿದ್ದರು' ಎಂದೂ ತಿಳಿಸಿದರು.

ಬಿಕ್ಕಿ ಅತ್ತ ಮಹಿಳಾ ಕಾನ್‌ಸ್ಟೆಬಲ್: ಹೆಬ್ಬಾಳ ಬಸ್ ನಿಲ್ದಾಣ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದ ಮಹಿಳಾ ಕಾನ್‌ಸ್ಟೆಬಲ್ ಮಾಧುರಿ, ಅಪಘಾತದಲ್ಲಿ ಮೃತಪಟ್ಟ ಬಾಲಕಿ ಕಂಡು ಬಿಕ್ಕಿ ಬಿಕ್ಕಿ ಅತ್ತಿದ್ದರು. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

'ಮುಖ್ಯರಸ್ತೆಯಲ್ಲಿ ವಾಹನಗಳ ಓಡಾಟ ಹೆಚ್ಚಿರುತ್ತದೆ. ಪಾದಚಾರಿಗಳು ರಸ್ತೆ ದಾಟಲು ಮುಂದಾದರೆ ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚು. ಹೀಗಾಗಿ, ಮೂರೂವರೆ ಅಡಿ ರಸ್ತೆ ವಿಭಜಕ ನಿರ್ಮಿಸಲಾಗಿದೆ. ನಿಲ್ದಾಣ ಬಳಿ ನಿಂತಿದ್ದ ಕಾನ್‌ಸ್ಟೆಬಲ್ ಮಾಧುರಿ, ಅಪಾಯಕಾರಿಯಾದ ಮುಖ್ಯರಸ್ತೆ ದಾಟದಂತೆ ಜನರಿಗೆ ಎಚ್ಚರಿಕೆ ನೀಡುತ್ತಿದ್ದರು. ಅಷ್ಟಾದರೂ ಕೆಲವರು ರಸ್ತೆ ದಾಟಲು ಮುಂದಾಗಿದ್ದರು. ಕಣ್ಣೆದುರೇ ಬಾಲಕಿ ಮೃತಪಟ್ಟಿದ್ದನ್ನು ನೋಡಿ ಮಾಧುರಿ ಕಣ್ಣೀರಿಟ್ಟರು' ಎಂದೂ ತಿಳಿಸಿದರು.

ಡ್ರಗ್ಸ್: ಬಂಧನ

ಬೆಂಗಳೂರು: ನಗರದಲ್ಲಿ ವ್ಯವಸ್ಥಿತವಾಗಿ ಡ್ರಗ್ಸ್ ಮಾರುತ್ತಿದ್ದ ಆರೋಪಿಯನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದು, 50 ಗ್ರಾಂ ಎಂಡಿಎಂಎ ಮಾತ್ರೆಗಳನ್ನು ಜಪ್ತಿ ಮಾಡಿದ್ದಾರೆ.

'ಸಾಹೋಜ್ (36) ಬಂಧಿತ. ಕೆಲ ಕಾಲೇಜು ವಿದ್ಯಾರ್ಥಿಗಳಿಗೆ ಆರೋಪಿ ಡ್ರಗ್ಸ್ ಮಾರುತ್ತಿದ್ದರು. ಆರೋಪಿಯನ್ನು ವಿಚಾರಿಸಿದಾಗ, ಡ್ರಗ್ಸ್ ಪತ್ತೆಯಾಯಿತು' ಎಂದು ಪೊಲೀಸರು ಹೇಳಿದರು.

ಯುವತಿ ಸಾವು: ನ್ಯಾಯಾಂಗ ಬಂಧನಕ್ಕೆ ಪ್ರಿಯಕರ

ಬೆಂಗಳೂರು: ಪರಿಶಿಷ್ಟ ಜಾತಿ ಯುವತಿ ದಾನೇಶ್ವರಿ (23) ಸಾವಿನ ಪ್ರಕರಣದ ಆರೋಪಿಯಾಗಿರುವ ಪ್ರಿಯಕರ ಶಿವಕುಮಾರ್ ಅವರನ್ನು ನ್ಯಾಯಾಂಗ ಬಂಧನಕ್ಕೆ ಮಂಗಳವಾರ ಒಪ್ಪಿಸಲಾಗಿದೆ.

ಉಪ ತಹಶೀಲ್ದಾರ್ ಪುತ್ರಿ ದಾನೇಶ್ವರಿ ಅವರ ಮೈ ಮೇಲೆ ಸುಟ್ಟ ಗಾಯಗಳಾಗಿದ್ದವು. ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಮಾ.15ರಂದು ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ತೀರಿಕೊಂಡಿದ್ದರು. 'ಎಂಜಿನಿಯರಿಂಗ್ ಪದವೀಧರೆ ದಾನೇಶ್ವರಿ, ಲಿಂಗಾಯತ ಸಮುದಾಯದ ಶಿವಕುಮಾರ್ ಅವರನ್ನು ಪ್ರೀತಿಸುತ್ತಿದ್ದರು. ಪರಿಶಿಷ್ಟ ಜಾತಿಯೆಂಬ ಕಾರಣಕ್ಕೆ ಮದುವೆಗೆ ನಿರಾಕರಿಸಿದ್ದರು. ನೊಂದಿದ್ದ ದಾನೇಶ್ವರಿ, ಮದುವೆಯಾಗುವಂತೆ ಪಟ್ಟುಹಿಡಿದಿದ್ದರು. ಸಿಟ್ಟಾದ ಶಿವಕುಮಾರ್, ಮೈ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ದಾನೇಶ್ವರಿ ಅವರನ್ನು ಕೊಂದಿದ್ದಾರೆ' ಎಂದು ಆರೋಪಿಸಿ ಸಹೋದರಿ ದೂರು ನೀಡಿದ್ದರು.

ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಹಾಗೂ ಕೊಲೆ ಆರೋಪದಡಿ ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದರು. ಬಾದಾಮಿಯ ಶಿವಕುಮಾರ್ ಅವರನ್ನು ಬಂಧಿಸಿದ್ದರು.

'ಪ್ರಕರಣದ ಹೆಚ್ಚಿನ ವಿಚಾರಣೆಗಾಗಿ ಶಿವಕುಮಾರ್ ಅವರನ್ನು ಕಸ್ಟಡಿಗೆ ಪಡೆಯಲಾಗಿತ್ತು. ಅದರ ಅವಧಿ ಮುಗಿದಿದ್ದರಿಂದ ನ್ಯಾಯಾಲಯಕ್ಕೆ ಮಂಗಳವಾರ ಹಾಜರುಪಡಿಸಲಾಯಿತು. ಸದ್ಯ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಹೇಳಿದರು.

'ನಾನು ತಪ್ಪು ಮಾಡಿಲ್ಲ. ಅಮಾಯಕ' ಎಂಬುದಾಗಿ ಆರೋಪಿ ಹೇಳುತ್ತಿದ್ದಾನೆ. ತನಿಖೆ ದೃಷ್ಟಿಯಿಂದ ಪ್ರಕರಣದ ಬಗ್ಗೆ ಹೆಚ್ಚು ಮಾಹಿತಿ ಬಹಿರಂಗಪಡಿಸಲಾಗದು' ಎಂದೂ ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED SANSKRIT TEACHER for 8th, 9th, 10th standard. Walk-in- Interview on working days 'JNANADEEPTHI ENGLISH SCHOOL', #56, 6th Main, Avalahalli, BDA Layout, Girinagar, Bangalore-85. Phone: 26748056 (Near pushpak 10 last Bus-stop)

EAST WEST GROUP OF INSTITUTIONS
H.O: Mayor Sri C.M. Nagaraj Road, Rajajinagar, Bengaluru-10.
EAST WEST 1968
THE GREAT EASTERN INTERNATIONAL PUBLIC SCHOOL
Affiliated to CBSE New Delhi (Affiliation No. 830539)
REQUIRES LADY PRINCIPAL & LADY TEACHERS
LADY PRINCIPAL: M.Sc / MA, with B.Ed / M.Ed. Good looking, experience in CBSE / ICSE Schools
LADY TEACHERS: To teach MATHS & SCIENCE: M.Sc / B.Sc, with B.Ed, ENGLISH & SOCIAL SCIENCE: MA / BA with B.Ed, Hindi trained Teachers, Computer, Music, Dance, Art & Crafts and Drawing, Keyboard, Swimming & Lady Physical Education Instructor. Nursery trained teachers for Kindergarten classes
Send your resume to: E-mail: tgeips2014@gmail.com; OR by post to:# 18, Lingadhiranahalli, D Group Employees Layout, Vishwaneedam Post, Herohalli, Off Magadi Main Road, Bengaluru-560091 Phone: 080-23245266, 23245299
TGEIPS-21201
Attractive Package with all other benefits

St. Benedict's Degree College
Asirvanam, Kengeri, Anchaplaya, Bangalore-74
Requires Trained & Experienced
LECTURERS
to teach Commerce, Computer Science, English
Call: 9740245828
Mail your resume to: jeromeosb@gmail.com

N.E.T. PUBLIC SCHOOL
Affiliated to ICSE, New Delhi
Bull Temple Road, Basavanagudi, Bangalore-19
REQUIRES TEACHERS
SOCIAL, ENGLISH, for High School, SCIENCE & MATHS for Primary School
ALSO REQUIRED TRAINED NURSERY TEACHERS
netpublicschool@gmail.com
080-26611419, 98450 11418

ST.PHILOMENA'S PUBLIC SCHOOL & P.U.COLLEGE, Byalakere, Near Yelahanka, Bangalore Required TEACHERS ENGLISH MA B.Ed., CHEMISTRY MSc.B.Ed., HINDI MA B.Ed. 9480091189/ 9845036582 stphilomenas118@gmail.com

ST SOPHIA'S International School, 9th block Sir M.V.Layout requires trained experienced Female Vice Principal, *Office assistant, *Academic Coordinators and Teachers for the academic year 2022-23 to teach Mathematics, Science, Socialscience, English, Hindi , Art & craft, Music, Phyical education and Computers for primary and High school.Walk-in interview scheduled on Monday 04 April 2022 principal@stsophiaconvent.org9243031872

SRI AHAM_AATHMA VIDYALAYA-[ICSE], Gruhalakshmi Layout, Nagasandra post, Peenya Dasarahalli, Bangalore-73 Invites applications for the following posts with good English vocabulary for the academic year 2021-22/2022-23 (1).Computer science- BCA/ MCA/Geography (2).Teachers to teach all the subjects for Nursery/ Primary/ Middle/ High-school. (3).Office Staff/ Clerk/ Data-Entry with Tally (4).Lab-Assistant/ Librarian. Offers Attractive Salary. 'Transportation provided'. Call 9880200172, 9663778869 Email: sriaavapplic@gmail.com

REQUIRES TRAINED Graduate/ Post Graduate/ (T.C.H./ D.Ed./ B.Ed.)- English/ Hindi/ Kannada/ History, Civics, Geography/ Science- Physics, Chemistry, Biology/ Mathematics/ P.E. Teachers/ Music; Librarian, Lab-Attender, Admin Staff, Technician for Primary/ Middle/ High School Section. Apply with C.V. to The Secretary, Allard Education Society, ST. CHARLES HIGH SCHOOL (ICSE), Kammanahalli, Bengaluru-84.

NIRMAN INTERNATIONAL PUBLIC SCHOOL, Near Automated RTO, 7th Block, Vishweshwaraiah Layout, Bangalore-91 Requires Qualified TEACHERS for all Subjects from Nursery to Grade-X. Walk-in Interview between 10:00am to 02:00pm from 28-03-2022 onwards. Contact: 8123030731. Email: nirmanorganisation @gmail.com

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

WAYANAMAC EDUCATION TRUST®
DON BOSCO INSTITUTE OF TECHNOLOGY
(Approved by AICTE, Affiliated to VTU, Belagavi, NBA & NAAC Accredited)
KUMBALAGODU, MYSORE ROAD, BANGALORE – 560074.
Ph. : 080 - 28437028 / 29 / 30. Website: www.dbit.co.in
We are looking for talented, competent, qualified faculty & professionals for the following positions:
Professors, Associate Professors & Assistant Professors
In following disciplines:
- Artificial Intelligence & Machine Learning
- Artificial Intelligence & Data Science
- Computer Science & Engineering
- Electronics & Communication Engineering
- Information Science & Engineering
- Electrical & Electronics Engineering
- Civil Engineering
- Mechanical Engineering
- Physics - Chemistry - Mathematics
- MBA - VTU

NON - TEACHING STAFF
- Computer Programmer
- Foreman (EEE / Civil)
- Lab Instructors
- Asst. Librarian
- Drivers (Car &Bus)
- System Administrator
- Office Assistant
- Warden - Boys/Girls Hostel

- The institution provides professional work environment and ample opportunities for career development.
- Eligible candidates may please forward their profile with copies of testimonials and recent passport size photo to the Secretary within 10 days of this advertisement by post/courier only.
- Alternatively, eligible candidates can also E-mail their profile with all relevant details to recruitment@dbit.co.in.
- The emoluments will be as per AICTE pay scales (6th Pay Commission) and commensurate with the qualification and experience.
- Adjunct faculty with 18 years of Industrial / Research / Teaching experience may also apply.
- Appropriate weightage will be given for candidates with Doctorate qualification.
- While forwarding the application, candidates are requested to superscribe on the envelope, the position for which the application is being made.

Principal

HOLY ANGEL'S High School, #2,5th Main, 4th Cross, R.P.C Layout, Vijayanagar, Bengaluru-560104. Phone:23404465, 23405556, 23202042.E-mail: holyangels.highschoolrpclayout@gmail.com Requires Experienced Teachers to handle Hindi, English, Kannada,Social-Science, Computer-Science,Mathematics for Primary, Higher Primary & High School for Academic year 2022-2023 STATE & ICSE. Qualification : B.A/B.Sc.,M.A/M.Sc., B.ED/M.Ed and BCA/MCA. Only English medium candidates need apply.

KUVEMPU ADARSHA PUBLIC SCHOOL Requires Office Staff and Trained Teachers, for Nursery, Primary and High School to Teach Languages, Core Subjects, Physical Education and Computer Education. Walk-in Interview on 3rd April 2022., between 10-am to 12-pm. Interested candidates can mail their resume to kapsmmedutrust@gmail.com, Contact: 7760337806/ 9972095137 Address: 214, Muneshwara Temple Road, RMV 2nd stage, Nagashettyhalli, Bangalore-94

WANTED ENGLISH Medium Trained LADY TEACHERS for Nursery/ Primary/ Higher Secondary for Teaching English; Maths; Science; E.V.S; Social Studies; Kannada; Hindi; Physical Education Teacher (Female/ Male). Walk-in interview 01:30 pm to 4:00 pm. New Oxford English School, 185, 6th Cross, Gandhinagar, Bangalore-09. Ph: 22261590/ 41475015. Email: noes.school@gmail.com

REQUIRES LADY Teachers for English (BABEd),Hindi (BABEd),Physics (MScBEd),Social Studies(BABEd) Art&.craft walkin interview between 10:30am and 1:30pm with the Secretary, SriKrishna International School-ITI-Layout,BSK 3rd Stage Bangalore-85 Ph:-08026690799

Wanted

WANTED FOLLOWING candidates for an electronic manufacturing unit .1. Testing engineer. Qualification: Diploma in electronics. Experience: 1 or 2 year .2. Technician for soldering Qualification: Diploma/ ITI in electronics. Experience: 1 or 2 year .3. Sales executives Qualification: Any degree with 2 years experience in electronics product sales or BE in electronics. Experience: 1 or 2 year Email: hrtest343@gmail.com

HINDUSTAN PHARMA Distributor Pvt. Ltd. Required for DELIVERY BOYS, Attractive Salary with P.F. and E.S.I. Address: 76/1, Aruna Complex, above Union Bank, J.C. Road, Bangalore-560002. Contact: 9980120613.

|| Jai Sri Gurudev ||
Sri Adichunchanagiri Shikshana Trust ®
SJB INSTITUTE OF TECHNOLOGY
(A Constituent of BGS & SJB Group of Institutions and Hospitals)
BGS Health & Education City, Bengaluru - 560 060
Ph: 6366041109, Email: principal@sjbit.edu.in
Web: www.sjbit.edu.in
- NAAC Accredited with 'A' Grade • NBA Accredited
- Recognized by UGC (2f & 12B)
- Certified by ISO 9001-2015
- Best Performer Award in ATAL Ranking 2021
- Institution Innovation council - 4.0 stars

SJBIT invites candidates with self-driven, passionate and research inclined to work in excellent academic conducive environment to grow with the institute for faculty/staff positions in the following departments:
Associate Professor: CSE, ISE
Assistant Professor: CSE, ISE, EEE
Foreman: ISE, Mechanical Engg.
Instructor: CSE, ISE, EEE, MBA
Public Relation Officer | Asst. Librarian
Library Assistant | Office Assistants
The qualifications are as per AICTE norms
Interested candidates may submit the application by downloading from the website(www.sjbit.edu.in), via email: principalsr@sjbit.edu.in on or before 03.04.2022 along with two references.
Sd/- Principal, SJBIT

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

Advertising Agency

ADVERTISING Agency (Bangalore) Required Male COLLECTION EXECUTIVE. 2-WHEELER MUST with English, Computer Knowledge. 9845597155

Accounts & Finance

REQUIRED FEMALE ACCOUNTANTS/ PURCHASE EXECUTIVE with 3- 5 years of experience, residing around Hanumanthnagar. B.Com/ B.Sc. 998079996. sridhar@vinayaka-plumbing.com

WANTED ACCOUNTANT for an Export/Import Company based in South Bangalore. Knowledge of Computers, Tally, GST essential. Send your Resume to bharathi@aqs.in.net

B.COM FRESHERS Male Candidates Required by Audit-firm Immediate Appointment mail Resume: bcmates@hotmail.com

Engg/ Production Technical

CUSTOMER SERVICE EXECUTIVES required for our Banashankari office. Graduates with 6 years experience can apply- jagadeesh@amithgarmentservices.com

REQUIRED: OPERATOR for STP at Bangalore. ITI with 2 years Experience in MBR Plant. Contact No. 7259827711/ 9611788677.

WANTED B.E Mechanical Engineer Fresher's Trainees for an Aircraft Component Manufacturing Industry. Training period 1 YEAR, Stipend 0-6 Months- Rs. 12000, 7-12 Months Rs. 14000. Mail Your resume to mail@ayyappa-cnc.com

QUALITY CONTROLLER: Diploma in Mechanical, STORE-KEEPER- B.A./ B.Com. Experience: 3-5 years. 'VINUMAC', #205A, Peenya 3rd phase, Bangalore. Phone: 080-28391959, 28394512. admin@vinumac.com

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

General

REQUIRED
STENOGRAPHERS COMPUTER TYPIST
for an Advocate Office. Payment negotiable
V.B. SHIVAKUMAR, Advocate
No. 230, II Main Road, Chamarajpet, Bangalore.
Mobile: 9886117443
Ph: 080-26678443, 22426644

STOCK BROKING FIRM IN MANGALORE
REQUIRES
EXPERIENCED DEALER AND BACK OFFICE STAFF
EMAIL RESUMES TO
kfin.adm@gmail.com

REQUIRED
JUNIOR ADVOCATES
with computer knowledge for an Advocate Office. Payment negotiable
V.B. SHIVAKUMAR, Advocate
No. 230, II Main Road, Chamarajpet, Bangalore.
Mobile: 9886117443
Ph: 080-26678443, 22426644

WANTED FOLLOWING Staff to work at Malleswaram area, 1. Graduate With Computer Knowledge able to Handle PF/ ESI And Other Labour Matters 2. Office Boy With Working Experience (Minimum Qualification SSLC) Both Salary Negotiable Contact In Person With Resume And Passport Size Photo At RP Associates, 36, Emami Nest, #202, 1st Floor, 8th Main, 16th Cross, Malleswaram, Bangalore-55, Beside Reliance Smart Point. Phone 080: 23322353/ 8951687500

CLEANING STAFF, Female Warden, Librarian, Female Office Assistant, Contact: Mahathma Gandhi Professional College, Bangalore. Call:988623634.

WANTED SUPERVISOR for Standard Pottery Works Pvt Ltd., for Clay Roofing Tile Factory at Nagamangala, Mandya District. Accommodation will be provided and salary starts at Rs.25,000/-. Interested persons in similar field may apply standardbricksynk@gmail.com, and call to 8971781677/ 9449435390.

Multiple Vacancy

Karnataka Leading Media Company Chittara Media Looking for new & Experience Talents for...
1. Front Office Executive - Female-2 Nos
2. Sales Executives-10 Nos
3. Graphic Designer-2 Nos
4. Reporter- 4 Nos
5. Video Editors - 2 Nos

Direct Interview on Monday 10 am to 2 pm. 9845156447 inmedia.img@gmail.com

Hospital & Medical Jobs

WANTED STAFF Nurse, OT Technician, Pharmacist, Duty Doctor. Contact: S.G. Hospital, Ittamadu, Bangalore-85. Mobile: 8197779588.

Marketing & Sales

ASHOK LEYLAND Dealer Magnum Motors Requires Field Executives for Bangalore (Hosur Road, Chandapura, Kanakapura Road), Ramagagara. Under Graduates, Freshers also can Apply. Candidates who wish to Earn More than 25,000/- per Month. Only Should apply. Send Resume to mail: hr.blr@magnumhonda.com/ ceo@magnummotors.net Contact: 9849021579/ 9513769125/ 9916816121.

SALES EXECUTIVES (inside office) is required for our office in Banashankari. Graduates with 5 years experience can send resume to jagadeesh@amithgarmentservices.com

REQUIRED-FOR MARKETING-EXECUTIVES. Dental-implant company-at Bangalore Requires MBA/BDS Graduates to-work-in Marketing-field with-goodEnglish speaking,should have-flair and-ability to-deal with-Medical professional and-involves traveling. Email-to: jobatvkdentalindia@gmail.com

REQ SALES Executives for Sales of Purva Strong TMT Bars, Purva Steel Pipes & Tubes, Purva Roofing Sheets, Decking Sheets, C&Z Purlin Etc. in South India. Salary can earn up to Rs.50000/-PM. Shiva Ferric Pvt Ltd, #193, Shiv Sadan, B.Narayanapura, B'lore# 9480024697

SHARANYA TELTRONICS Requires experienced SALES EXECUTIVES to sell EPOS SENNHEISER HEADSETS in Corporate Companies Call: 9845010634

Part-Time Jobs

REPUTED MNC Company Will Provide Work From Home, Earn 30 to 35K Malleswaram 7019215243/ 9886641282

Walk-in

SILICON CITY COLLEGE
Accredited By NAAC with 'A' Grade
#26/2 Ravindra Layout, K R Puram, Bengaluru-36, Karnataka
Walk in Interview
Applications are invited from eligible candidates having minimum 3 years of teaching experience for the post of
Assistant Professors
Associate Professors
Professors
in Commerce, Statistics, Management, Computer Science, Mathematics, Kannada, English and also System Admin & Front Office Executive
Candidates may attend walk-in-interview and demo along with their original testimonials and recent passport size photo on Saturday & Sunday 26th & 27th March, 2022 between 9.30 AM to 1 PM
PH: 8147093466, 8147093467, 7411072259
email id: chairman@siliconcitycollege.ac.in
www.siliconcitycollege.ac.in

Security & Detectives

SENTINEL SECURITY, a reputed Security Agency Urgent requirement for Field Officers Total package: Rs.30,000/- Contact: 8904458613

WANTED ACCOUNTS Assistant and Security Supervisor for HBR Layout Contact: 9972214845

PUBLIC NOTICE

Annexure – H5
PUBLIC NOTICE DOCUMENT LOST
(Lost of Sale Deed)

I **Smt. SALIMA SHERIFF,** W/o. Ziaulla Sheriff, Aged about 75 years, having office at No.73/1, Sheriff Center, 5th Floor, St. Marks Road, Bangalore– 560001, do hereby inform to the general public that I declare that, I am the absolute owner of a property bearing old Municipal Corporation No.3/1, Present Municipal Corporation No.4 and 4/1, Situated at Laurel Road, Myrtle Lane Cross, Richmond Town, Bangalore-560025. Measuring about 2,628 Square Feet together with residential building existing thereon and bounded on East by: Private Property known as Xavier Nilaya bearing No.5 myrtel Lane, West by: Private Property known as Bat and Ball Home Stay bearing No.3 Laurel Lane, North by: Old Cemetery, South by: Laurel Lane **(Composite Property, along with Schedule A and B thereon)** and I have been purchased the same by way of registered Sale Deed vide document **No.SHV-1-01441-2011-12** of Book No.1, **CD No.SHVD132 dated 29.10.2011.** registered in the office of the Senior Sub–Registrar, Shivajinagar, executed by Mr. Althaf Khan, Mr. Imran Khan, Mr. Usman Khan, Mrs. Nayara Sulthana, Mrs. Nassira Khan, Mrs. Aneesa Khan and Mrs. Azra Farook. I have lost the above said Sale Deed at my office on 06.01.2022, after that in spite of my best search I could not trace out the same, in this regard on 10.03.2022 I have lodged police complaint at Bangalore City Crime branch Police Station limits, Bangalore **vide Complaint No.0178961/2022,** if anybody finds the above said document please inform to the aforesaid address and also contact me on **Mob: No. 9886000600.**

This Notice is also to notify that, relying on the original Deed mentioned above, no persons should engage in any transaction in respect of the aforesaid property. Any person entering into any transaction in respect of the property mentioned above, will be doing so at his/her own risk and I am not responsible to such person in any manner.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ದೇಬೊರಾ ಫೌಂಡೇಷನ್ ಇಂಡಿಯಾ, ಅದರ ಮ್ಯಾನೇಜಿಂಗ್ ಟ್ರಸ್ಟಿ ಥಾಮಸ್ ರಾಜಕುಮಾರ್‌ರವರಿಂದ ಪ್ರಾತಿನಿಧಿತ್ವದಲ್ಲಿ ಅದರ ಪರವಾಗಿ ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತುಗಳನ್ನು ಶ್ರೀ ಎನ್.ಆರ್. ರಾಜೇಂದ್ರ ಬಿನ್ ಹೆಚ್. ರಾಮಣ್ಣ ಮತ್ತು ಅವರ ಪತ್ನಿಯಾದ ಶ್ರೀಮತಿ ಆರ್. ಸುಶೀಲ ವಾಸ ನಂ. 136/2, ವೇಣುಗೋಪಾಲಸ್ವಾಮಿ ರಸ್ತೆ, ನಾಗವಾರ, ಎ.ಸಿ. ಅಂಚೆ, ಬೆಂಗಳೂರು–560045 ಇವರಿಂದ ಶುದ್ಧಕ್ರಯಕ್ಕೆ ಪಡೆದುಕೊಳ್ಳಲು ತೀರ್ಮಾನಿಸಿರುತ್ತಾರೆ. ಹಾಗಾಗಿ ಸದರಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿಗೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿಗಳಿದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ 15 ದಿನಗಳ ಒಳಗಾಗಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸತಕ್ಕದ್ದು. ಆ ನಂತರ ಬರುವಂತಹ ಯಾವುದೇ ರೀತಿಯ ತಕರಾರನ್ನು ಪರಿಗಣಿಸಲಾಗುವುದಿಲ್ಲ ಮತ್ತು ನಂತರದಲ್ಲಿ ಷೆಡ್ಯೂಲ್ ಸ್ವತ್ತಿನ ಕುರಿತಾಗಿ ಯಾವುದೇ ರೀತಿಯ ತಕರಾರು ಇಲ್ಲವೆಂದು ಪರಿಗಣಿಸಿ ಸದರಿ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲಾಗುವುದು ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

ಷೆಡ್ಯೂಲ್

ಐಟಂ ನಂ. 1: ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ. 24/2ರ 1 ಎಕರೆ 10 ಗುಂಟೆ ಜಮೀನು ಮತ್ತು ಸರ್ವೆ ನಂ. 24/4ರ 1 ಎಕರೆ 10 ಗುಂಟೆ ಜಮೀನು ಅದರಂತೆ ಒಟ್ಟು 2 ಎಕರೆ 20 ಗುಂಟೆ ಜಮೀನಿಗೆ ಒಂದೇ ಚಕ್ಕುಬಂದಿ: **ಪೂರ್ವಕ್ಕೆ:** ಮರಿಯಪ್ಪನವರ ಸ್ವತ್ತು, **ಪಶ್ಚಿಮಕ್ಕೆ:** ಕರಗಪ್ಪನವರ ಸ್ವತ್ತು, **ಉತ್ತರಕ್ಕೆ:** ಶಾಮಣ್ಣನವರ ಸ್ವತ್ತು, **ದಕ್ಷಿಣಕ್ಕೆ:** ಸರ್ವೆ ನಂ. 26/2.

ಐಟಂ ನಂ. 2: ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ. 26/2ರ 10.8 ಗುಂಟೆ ಜಮೀನು ಮತ್ತು ಸರ್ವೆ ನಂ.26/10ರ 10.08 ಗುಂಟೆ ಜಮೀನು ಅದರಂತೆ ಒಟ್ಟು 21 ಗುಂಟೆ ಜಮೀನಿಗೆ ಒಂದೇ ಚಕ್ಕುಬಂದಿ: **ಪೂರ್ವಕ್ಕೆ:** ಮರಿಯಪ್ಪನವರ ಸ್ವತ್ತು, **ಪಶ್ಚಿಮಕ್ಕೆ:** ಕರಗಪ್ಪನವರ ಸ್ವತ್ತು, **ಉತ್ತರಕ್ಕೆ:** ಸರ್ವೆ ನಂ. 24/2, **ದಕ್ಷಿಣಕ್ಕೆ:** ಸರ್ಕಾರಿ ರಸ್ತೆ.

ಥಾಮಸ್ ರಾಜಕುಮಾರ್,
ಮ್ಯಾನೇಜಿಂಗ್ ಟ್ರಸ್ಟಿ
ದೇಬೊರಾ ಫೌಂಡೇಷನ್ ಇಂಡಿಯಾ,
ಮೊ: 98220 96455

ಧನಲಕ್ಷ್ಮಿ ಎಸ್.,
ವಕೀಲರು ಮತ್ತು ನೋಟರಿ
ಇಂದ್ರಾಣಿ ನಿವಾಸಂ, ನಂ. 522,
ನಾ. ನಂಜುಂಡಯ್ಯ ರಸ್ತೆ,
ದೊಡ್ಡಬಳ್ಳಾಪುರ–561203.
ಮೊ: 98453 45031

RENTAL PROPERTIES

Accommodation Available

House

FOR RENT 69,000/- R.M.V Second Three B.H.K HIG Bungalow 349, 5th Main Contact: 9986033339, 9341833353

REAL ESTATE BUYING

General

General

FOR AGRICULTURE Land Conversion,Change of land use,Phodi, Approvals/ Sanctions, NOC's, RERA Project Registration, Property Documentation work. Call Verna Developers, MG-Road, Bengaluru. 9916310226/ 9620253180.

BUSINESS

Business Offers

Finance

NRI'S INVESTMENT And Finance availableOn LowInterest Against properties, Lands, Building, sites, Flats,converted Lands, Agriculture Lands Also Towards Businesses call 7411265189

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATIONAL

Correspondence Courses

PASS IN ONE YEAR! LL.B/LL.M/B.Tech/M.Tech/ Diploma/M.Phil/MBA/MCA/ M.Sc/BCA/BBA/B.Sc/B.Com/ 10th/ PU (NIOS). Asha Academy, Bangalore: 9448460103/ 7093438248

PERSONAL

Change of Name

CHANGE OF NAME
I, **POORNIMA SRINIVAS** Residing at # 58, Unnathi, Amruthahalli-Jakkur Main Road, B.G.S. Layout, Amruthahalli, Bangalore-560 064 have changed my name to **POORNIMA JAYASHANKAR,** vide affidavit dated 21.03.2022, before notary K.C.Chowde Gowda, Bangalore. Henceforth I shall be called **POORNIMA JAYASHANKAR** only.

I, FAZIL ABBAS KHAN, residing at Alipur Village, Thondebhavi Hobli, Gauribidanur Taluk, Chikkaballapur District, Karnataka, have changed my name to SYED FAZIL ABBAS, vide affidavit dated 14.03.2022 before Notary N.S. Ashok Kumar, Gauribidanur. Henceforth I shall be called SYED FAZIL ABBAS only.

CHANGE OF NAME
I, **KAVITHA VIJAYAKUMAR,** Residing at No. 306, Sri Nilaya Apartment, 8th Main, 10th Corss, Hoysala Nagar, T.C.Palya Main Road, Bengaluru- 560016, have changed my name to **KAVITHAA KEMPRAJ.** vide affidavit dated 22.03.2022, before notary Gangaraju.B.N., Bengaluru. Henceforth I shall be called **KAVITHAA KEMPRAJ,** only.

I, NIVAS BABU MANICKAM S/o MANICKAM M residing at No.29, 1st Floor, VI Cross, Vasanthanagar, Bangalore-560052 have changed my name to RAAJ NIVAS BABHU MANICKAM vide affidavit dated 22.03.2022 sworn before notary P.N Nagesha, Bangalore-26.

CHANGE OF NAME
I, **MOHAMOODA AMEENA S.M.,** Residing at No. 34, 3rd Cross, Palm Spring Layout, Gubbalala, Off Kanakapura Main Road, Bangalore- 560062, have changed my name to **MOHAMODA. A.P.** vide affidavit dated 15.03.2022, before notary Mahesha.J.J., Bengaluru. Henceforth I shall be called **MOHAMODA. A.P.** only.

I, KAMSANI KRISHNAVENI R/a #87/3, 2nd Floor, 2nd Main, BOB Colony 7th Phase, J.P.Nagar, Bengaluru-560078 have Changed Name to KRISHNAVENI SINIPIREDDY vide Affidavit 22.03.2022 Before Notary Hemalatha, Bangalore.

I, HAMSAVENI W/o. SHEKAR D R/a #676, Close Burn Madikeri Taluk, Kadagadalu, Kodagu-571248, have Changed Name to M KRISHNAMA W/o. SHEKAR D vide Affidavit 22.03.2022 Before Notary Hemalatha, Bangalore.

SARINA W/O 8037147L-NK- SHANUR NADAF R/a Vannur, Bailhongal, Belgavi, Karnataka changed name from SARINA to SARINA NADAF notary KV Mani, Bangalore.

Lost

LOST
I, **SAVITHA N C,** aged about 37 years, W/o. Basavaraj .N, R/at Flat No. 405, Varshagrand Apartment, Serenity Layout, Bangalore-35, **Site No. 152/1 17&18 Doddanekkundi,** have lost the Original Sale Deed dt: 15-03-2003 registered as document No. 19684/2002-03, stored in CD No. 77, registered in the office of Sub-Registrar, Krishnarajapuram, Bangalore (U) Dist. In this regard I have lodged missing complaint with the Lost Article Report Reference No. 0186102/2022 dated : 21-03-2022. If found please call : **9972236333**

LOST
I, **V N Prakash Kumar,** R/at No. 66, 16th Cross, BK Nagar Main Road, Yeshwanthpur, Bangalore-22, have lost the Original Sale Deed dated: 14-11-1983, registered as document No. 3307/83-84, registered in the office of Sub-Registrar, Rajajinagar, Bangalore. In this regard I have lodged missing complaint with the Lost Article Report Reference No. 0183058/2022 dated : 16-03-2022. If found please call : **9845840940**

‘ಎಸಿಬಿ: ದಾಳಿ ಮಾಡಿದರಷ್ಟೇ ಸಾಕೆ?’

ರಾಜಧಾನಿ ಒಡಲದನಿ

ಬೆಂಗಳೂರು: ಭ್ರಷ್ಟರ ವಿರುದ್ಧ ದಾಳಿ ನಡೆಸುವ ಎಸಿಬಿ (ಭ್ರಷ್ಟಾಚಾರ ನಿಗ್ರಹ ದಳ) ಅಧಿಕಾರಿಗಳು, ಭ್ರಷ್ಟರಿಗೆ ಶಿಕ್ಷೆ ಕೊಡಿಸುವಲ್ಲಿ ವಿಫಲರಾಗುತ್ತಿದ್ದಾರೆ.

ದಾಖಲಾದ ಪ್ರಕರಣಗಳಲ್ಲಿ ಅಧಿಕಾರಿಗಳಿಗೆ ಆಗುತ್ತಿರುವ ಪ್ರಮಾಣ ತೀರಾ ಕಡಿಮೆ. ಇದು ಅತ್ಯಂತ ಆತಂಕಕಾರಿ ಬೆಳವಣಿಗೆ. ತನಿಖಾ ವಿಧಾನವನ್ನು ಸಮರ್ಪಕವಾಗಿ ಅನುಸರಿಸದೆ, ನ್ಯಾಯಾಲಯದಲ್ಲಿ ಸಮರ್ಪಕವಾಗಿ ವಾದ ಮಂಡನೆ ಮಾಡದಿರುವುದೇ ಶಿಕ್ಷೆ ಪ್ರಮಾಣ ಕಡಿಮೆ ಆಗಲು ಕಾರಣವಾಗುತ್ತಿದೆ. ಎಸಿಬಿ ಎಂದರೆ ದಾಳಿಗಷ್ಟೇ ಸೀಮಿತವೇ ಎಂಬ ಪ್ರಶ್ನೆ ಎದುರಾಗಿದೆ. ಈ ಬಗ್ಗೆ ಹೋರಾಟಗಾರರು ‘ಪ್ರಜಾವಾಣಿ’ ಜತೆ ಅಭಿಪ್ರಾಯ ಹಂಚಿಕೊಂಡಿದ್ದಾರೆ.

‘ಎಸಿಬಿ ರದ್ದುಪಡಿಸುವುದೇ ಸೂಕ್ತ’



ಎಸಿಬಿಯನ್ನು ಮುಂದುವರಿಸುವ ಬದಲು ರದ್ದು ಮಾಡುವುದೇ ಸೂಕ್ತ. ಲೋಕಾಯುಕ್ತಕ್ಕೆ ಇದ್ದ ಪೊಲೀಸ್ ಅಧಿಕಾರವನ್ನು ರದ್ದುಪಡಿಸಿದ್ದೇ ದೊಡ್ಡ ಪ್ರಮಾದ. ಸಿದ್ದರಾಮಯ್ಯ ಮುಖ್ಯ-ಮಂತ್ರಿಯಾಗಿದ್ದಾಗ ಮಾಡಿದ ದೊಡ್ಡ ತಪ್ಪು ಇದು. ಆ ಮೂಲಕ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ವ್ಯವಸ್ಥೆಯೇ ಹಿಮ್ಮುಖವಾಯಿತು. ಮುಖ್ಯ ಕಾರ್ಯದರ್ಶಿ ಮತ್ತು ಮುಖ್ಯಮಂತ್ರಿ ಅಡಿಯಲ್ಲಿ ಕೆಲಸ ಮಾಡುವ ಎಸಿಬಿಯಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಬೀಳಲಿದೆ ಎಂದು ನಿರೀಕ್ಷಿಸಲು ಸಾಧ್ಯವೇ. ಎಸಿಬಿ ದಾಳಿಗೆ ಒಳಗಾದವರಲ್ಲಿ ಎಷ್ಟು ಜನರಿಗೆ ಶಿಕ್ಷೆ ಆಗಿದೆ ಎಂದು ನೋಡಿದರೆ ಅತ್ಯಂತ ಕಡಿಮೆ. ಈ ರೀತಿ ಕಾರ್ಯನಿರ್ವಹಿಸುವ ಬದಲು ಎಸಿಬಿಯನ್ನೇ ರದ್ದು ಮಾಡುವುದು ಸೂಕ್ತ. ಅದರ ಬದಲಿಗೆ ಈ ಹಿಂದಿನಂತೆ ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರ ನೀಡಬೇಕು. ಸ್ವತಂತ್ರ ತನಿಖಾ ಸಂಸ್ಥೆಯಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಬೇಕು. ಯಾವುದೇ ಪ್ರಭಾವಕ್ಕೂ ಒಳಗಾಗದೆ ಲೋಕಾಯುಕ್ತ ಸ್ಥಾನಕ್ಕೆ ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕು. ಖಾಲಿ ಇರುವ ಲೋಕಾಯುಕ್ತ ಸ್ಥಾನಕ್ಕೆ ಕೂಡಲೇ ನೇಮಕ ಮಾಡಬೇಕು.

ಎಸ್.ಆರ್.ಹಿರೇಮಠ, ಸಮಾಜ ಪರಿವರ್ತನಾ ವೇದಿಕೆ ಅಧ್ಯಕ್ಷ

‘ಇಡೀ ವ್ಯವಸ್ಥೆ ಭ್ರಷ್ಟವಾಗಿದೆ’

ಈಗ ಎಸಿಬಿ ಮತ್ತು ಈ ಹಿಂದೆ ಲೋಕಾಯುಕ್ತ ಸಂಸ್ಥೆ ದಾಖಲು ಮಾಡಿರುವ ಬಹುತೇಕ ಭ್ರಷ್ಟಾಚಾರ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಯಾವುದೇ ಶಿಕ್ಷೆ ಆಗಿಲ್ಲ. ಅದಕ್ಕೆ ಪ್ರಮುಖ ಕಾರಣ ಆ ಸಂಸ್ಥೆಯ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಅವರ ಪರವಾಗಿ ನ್ಯಾಯಾಲಯದಲ್ಲಿ ವಾದಿಸುವ ವಕೀಲರ ಅದಕ್ಷತೆ, ನಿರಾಸಕ್ತಿ ಮತ್ತು ಭ್ರಷ್ಟಾಚಾರ. ಈ ಸಂಸ್ಥೆಗಳ ವಕೀಲರಲ್ಲಿ ಸರ್ಕಾರಿ ಕೆಲಸ ಎನ್ನುವ ಬೇಜವಾಬ್ದಾರಿ ಇದೆ. ಅವರಲ್ಲಿ ಬಹುತೇಕರು ಪ್ರಭಾವಗಳ ಮೂಲಕ ಎಸಿಬಿ ಅಥವಾ ಲೋಕಾಯುಕ್ತ ಸಂಸ್ಥೆಗೆ ತಾತ್ಕಾಲಿಕವಾಗಿ ನಿಯೋಜನೆ ಆಗಿರುತ್ತಾರೆ. ಕಾಲಕಾಲಕ್ಕೆ ಅವರ ಕಾರ್ಯಕ್ಷಮತೆಯ ವಿಶ್ಲೇಷಣೆ ನಡೆಯುವುದೂ ಅನುಮಾನ. ದೋಷಾರೋಪ ಪಟ್ಟಿ ಸಿದ್ಧಪಡಿಸುವ ತನಿಖಾ ಹಂತದಲ್ಲಿಯೇ ಎಸಿಬಿ ಅಧಿಕಾರಿಗಳೂ ಪ್ರಭಾವಕ್ಕೆ ಒಳಗಾಗಿ ಅಥವಾ ಲಂಚ ಪಡೆದು ಮೊಕದ್ದಮೆ ದುರ್ಬಲಗೊಳಿಸುವ ಸಾಧ್ಯತೆಗಳೂ ಇವೆ. ನ್ಯಾಯಾಲಯಗಳೂ ವೇಗವಾಗಿ ಕೆಲಸ ಮಾಡದೆ ಸಾಕ್ಷಿಗಳು ಆಸಕ್ತಿ ಕಳೆದುಕೊಳ್ಳಲು ಕಾರಣವಾಗುತ್ತಿದೆ. ಒಟ್ಟಾರೆ ವ್ಯವಸ್ಥೆಯೇ ಭ್ರಷ್ಟವಾಗಿರುವಾಗ ಒಬ್ಬರನ್ನು ದೂಷಿಸಿ ಉಪಯೋಗವಿಲ್ಲದ ಸಂದರ್ಭ ಇದಾಗಿದೆ.

ರವಿ ಕೃಷ್ಣಾರೆಡ್ಡಿ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ

‘ತನಿಖಾ ವಿಧಾನವೇ ಗೊತ್ತಿಲ್ಲ’

ಎಸಿಬಿ ಅಧಿಕಾರಿಗಳಿಗೆ ತನಿಖಾ ವಿಧಾನ ಗೊತ್ತಿರಬೇಕಾಗುತ್ತದೆ. ಈ ಅಧಿಕಾರಿಗಳಿಗೆ ತನಿಖಾ ವಿಧಾನದ ತರಬೇತಿಯನ್ನೇ ನೀಡಿಲ್ಲ. ಸಾಕ್ಷ್ಯ ಸಂಗ್ರಹ ಹೇಗಿರಬೇಕು ಎಂಬುದೇ ಗೊತ್ತಿಲ್ಲ. ಅದಕ್ಕಿರುವ ಪ್ರಕ್ರಿಯೆಗಳನ್ನೇ ಅನುಸರಿಸುವುದಿಲ್ಲ. ಆದ್ದರಿಂದ ಎಸಿಬಿ ದಾಖಲಿಸುವ ಪ್ರಕರಣಗಳು ನ್ಯಾಯಾಲಯದಲ್ಲಿ ನಿಲ್ಲುತ್ತಿಲ್ಲ. ಮೊದಲನೆಯದಾಗಿ ಶಿಕ್ಷೆ ಕೊಡಿಸುವ ಮನಸ್ಥಿತಿಯೇ ಎಸಿಬಿ ಅಧಿಕಾರಿಗಳಿಗೆ ಇರುವುದಿಲ್ಲ. ಭ್ರಷ್ಟಾಚಾರದ ವಿರುದ್ಧ ಸಂಸ್ಥೆ ಇದೆ ಎಂದು ತೋರಿಸಿಕೊಳ್ಳಲಷ್ಟೇ ದಾಳಿಗಳು ನಡೆಯುತ್ತಿವೆ. ದಾಳಿಗೆ ಒಳಗಾದವರಲ್ಲಿ ಎಷ್ಟು ಜನರಿಗೆ ಶಿಕ್ಷೆ ಆಗಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಶಿಕ್ಷೆ ಆಗಿದ್ದರೆ ವ್ಯವಸ್ಥೆ ಸುಧಾರಿಸಿ ಭ್ರಷ್ಟಾಚಾರ ಕಡಿಮೆಯಾಗುತ್ತಿತ್ತು. ತನಿಖೆಗೆ ಅಭಿಯೋಜನಾ ಮಂಜೂರಾತಿ ಪಡೆಯಬೇಕು ಎಂಬ ವ್ಯವಸ್ಥೆಯನ್ನು ಮೊದಲು ಕೈಬಿಡಬೇಕು. ಈ ಸೆಕ್ಷನ್ ತೆಗೆಯುವ ತನಕ ಭ್ರಷ್ಟಾಚಾರ ಕಡಿಮೆಯಾಗುವುದಿಲ್ಲ. ಭ್ರಷ್ಟಾಚಾರಕ್ಕೆ ರಕ್ಷಣೆ ಇದೆ, ಸಾಮಾನ್ಯ ಜನರಿಗೆ ರಕ್ಷಣೆ ಇಲ್ಲ ಎಂಬಂತಾಗಿದೆ. ಈ ವ್ಯವಸ್ಥೆ ಬದಲಾಗಬೇಕು.

ಆದರ್ಶ ಅಯ್ಯರ್, ಜನಾಧಿಕಾರ ಸಂಘರ್ಷ ಪರಿಷತ್

ವಿವಿಧ ಜಿಲ್ಲೆಗಳಿಂದ ಬಂದಿದ್ದ ಪೋಷಕರ ಮನವಿ

‘ಶೋಷಿತ ಸಮುದಾಯದ ಮಕ್ಕಳ ಶಾಲಾ ಶುಲ್ಕ ಮನ್ನಾ ಮಾಡಿ’

ಪ್ರಜಾವಾಣಿ ವಾರ್ತೆ

ಸಮಸ್ಯೆ ಹೇಳಿಕೊಳ್ಳುವ ವೇಳೆ ಕೊಳಗೇರಿ ನಿವಾಸಿ ರಾಜೇಶ್ವರಿ ಕಣ್ಣೀರಿಟ್ಟರು. (ಎಡದಿಂದ) ಮಕ್ಕಳ ಹಕ್ಕುಗಳ ಸಂಘಟನೆಯ ನಿರ್ದೇಶಕಿ ಕವಿತಾ ರತ್ನ, [illegible] ವಿನಯ್ ಕೆ.ಶ್ರೀನಿವಾಸ, ಐಟಿ ಫಾರ್ ಚೇಂಜ್ ನಿರ್ದೇಶಕ ಗುರು ಕಾಶೀನಾಥನ್ ಹಾಗೂ ಪ್ರಾಥಮಿಕ ಶಿಕ್ಷಣ ಇಲಾಖೆಯ ಶಿಕ್ಷಣ ಸಮಿತಿ ನಿರ್ದೇಶಕ ನರಸಿಂಹಯ್ಯ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಕೋವಿಡ್‌ನಿಂದಾಗಿ ಕೆಲಸವಿಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದೇವೆ. ಬದುಕು ಇನ್ನೂ ಸಹಜ ಸ್ಥಿತಿಗೆ ಮರಳಿಲ್ಲ. ಮಕ್ಕಳ ಶಾಲಾ ಶುಲ್ಕ ಕಟ್ಟುವ ಶಕ್ತಿಯೂ ನಮಗಿಲ್ಲ. ಹೀಗಾಗಿ ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬದ ಮಕ್ಕಳ 2020–21 ಮತ್ತು 2021–22ನೇ ಸಾಲಿನ ಶಾಲಾ ಶುಲ್ಕವನ್ನು ಸರ್ಕಾರ ಮನ್ನಾ ಮಾಡಬೇಕು’ ಎಂದು ಪೋಷಕರು ಒತ್ತಾಯಿಸಿದರು.

ಆಕ್ಷನ್ ಏಡ್ ಅಸೋಸಿಯೇಷನ್ ಮತ್ತು ಸ್ತ್ರೀ ಮಹಿಳಾ ಸಂಘಟನೆ ಆಯೋಜಿಸಿದ್ದ ‘ಮಕ್ಕಳ ಶಿಕ್ಷಣದ ಮೇಲೆ ಕೋವಿಡ್ ಬಿಕ್ಕಟ್ಟಿನ ಪರಿಣಾಮ’ ಕುರಿತ ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬೆಂಗಳೂರು ನಗರ, ಬೆಳಗಾವಿ, ಬಾಗಲಕೋಟೆ, ಮೈಸೂರು ಜಿಲ್ಲೆಗಳ ಪೋಷಕರು ಅಧಿಕಾರಿಗಳ ಎದುರು ಅಳಲು ತೋಡಿಕೊಂಡರು.

‘ವರ್ಗಾವಣೆ ಪತ್ರ ನೀಡಲು ಖಾಸಗಿ ಶಾಲೆಗಳ ಆಡಳಿತ ಮಂಡಳಿಯವರು ಹಲವು ಷರತ್ತುಗಳನ್ನು ವಿಧಿಸುತ್ತಿದ್ದಾರೆ. ಈ ವಿಚಾರದಲ್ಲಿ ಪೋಷಕರಿಗೆ ಕಿರುಕುಳ ನೀಡದಂತೆ ಸರ್ಕಾರವು ಸುತ್ತೋಲೆ ಹೊರಡಿಸಬೇಕು’ ಎಂದು ಆಗ್ರಹಿಸಿದರು.

‘ಕೋವಿಡ್ ಸಮಯದಲ್ಲಿ ಮಕ್ಕಳ ಕಲಿಕೆಯಲ್ಲಿ ಸಾಕಷ್ಟು ನಷ್ಟವಾಗಿದೆ. ಇದನ್ನು ಸರಿದೂಗಿಸಲು ಶಿಕ್ಷಣ ಇಲಾಖೆ, ಅಲ್ಪಸಂಖ್ಯಾತ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಗಳು ಮುಂದಾಗಬೇಕು. ಮಕ್ಕಳ ಗುಣಮಟ್ಟದ ಕಲಿಕೆಗಾಗಿ ಕನಿಷ್ಠ ಎರಡು ವರ್ಷ ಸಮುದಾಯಗಳಲ್ಲಿ ಸೇತುಬಂಧ ತರಗತಿಗಳನ್ನು ನಡೆಸಬೇಕು’ ಎಂದೂ ಒತ್ತಾಯಿಸಿದರು.

‘ಎಲ್ಲಾ ಸರ್ಕಾರಿ ಶಾಲೆಗಳು ನವೋದಯ ಮಾದರಿಯ ಶಾಲೆಗಳಂತಾದರೆ ನಮ್ಮ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರೆಯುತ್ತದೆ. ಈ ದಿಸೆಯಲ್ಲೂ ಸರ್ಕಾರ ಚಿಂತಿಸಬೇಕು’ ಎಂದರು.

‘ಶುಲ್ಕ ಕಟ್ಟಲಿಲ್ಲವೆಂದು ಕೆಲ ಶಾಲೆಯವರು ಸಹಪಾಠಿಗಳ ಎದುರೇ ನಮ್ಮ ಮಕ್ಕಳನ್ನು ನಿಂದಿಸುತ್ತಿದ್ದಾರೆ. ಆನ್‌ಲೈನ್ ಶಿಕ್ಷಣದಿಂದಲೂ ಹೊರಗಿಟ್ಟಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಕೋವಿಡ್ ಸಮಯದಲ್ಲಿ ಮಕ್ಕಳು ಬಾಕಿ ಉಳಿಸಿಕೊಂಡಿರುವ ಶಾಲಾ ಶುಲ್ಕ ಕಟ್ಟಲು ಎಸ್.ಸಿ., ಎಸ್.ಟಿ ಅನುದಾನ ಬಳಸಿಕೊಳ್ಳುವಂತೆ ಹಲವರು ಮನವಿ ಮಾಡಿದ್ದಾರೆ. ಈ ಕುರಿತು ಪ್ರಸ್ತಾವನೆ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುತ್ತೇವೆ’ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ದೇವರಾಜ್ ಭರವಸೆ ನೀಡಿದರು.

ಪ್ರಾಥಮಿಕ ಶಿಕ್ಷಣ ಇಲಾಖೆಯ ಶಿಕ್ಷಣ ಸಮಿತಿ ನಿರ್ದೇಶಕ ನರಸಿಂಹಯ್ಯ, ‘ಶುಲ್ಕ ಕಟ್ಟಲಿಲ್ಲವೆಂದು ಯಾವ ಶಾಲೆಯೂ ಮಕ್ಕಳಿಗೆ ವರ್ಗಾವಣೆ ಪತ್ರ ನಿರಾಕರಿಸುವಂತಿಲ್ಲ. ಈ ವಿಚಾರದಲ್ಲಿ ಯಾರಾದರೂ ತೊಂದರೆ ಕೊಟ್ಟರೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದೂರು ನೀಡಿ’ ಎಂದರು.

‘ದಲಿತ ಮಹಿಳೆಗೆ ಸತತ ಲೈಂಗಿಕ ದೌರ್ಜನ್ಯ’

ಚೆನ್ನೈ: ಎಂಟು ಜನರ ಗುಂಪು ಸತತ ಹಲವು ತಿಂಗಳ ಕಾಲ ದಲಿತ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಘಟನೆ ತಮಿಳುನಾಡಿನ ವಿರುಧ್‌ನಗರದಲ್ಲಿ ನಡೆದಿದೆ. ಆರೋಪಿಗಳ ಪೈಕಿ ಡಿಎಂಕೆ ಕಾರ್ಯಕರ್ತನೊಬ್ಬ ಸೇರಿದ್ದಾನೆ.

‘ಜುನೈದ್ ಅಹ್ಮದ್‌ನನ್ನು ಡಿಎಂಕೆ ಅಮಾನತು ಮಾಡಿದೆ. ಎಲ್ಲ ಆರೋಪಿಗಳನ್ನು ಬಂಧಿಸಲಾಗಿದೆ. ಇವರಲ್ಲಿ ನಾಲ್ವರು ಶಾಲಾ ವಿದ್ಯಾರ್ಥಿಗಳು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಪ್ರಮುಖ ಆರೋಪಿ ಹರಿಹರನ್ ಸಾಮಾಜಿಕ ಜಾಲತಾಣದಿಂದ ಸಂತ್ರಸ್ತೆಗೆ ಪರಿಚಿತನಾಗಿದ್ದ, ಗೆಳೆಯನಾಗಿದ್ದ. ಮದುವೆ ಆಗುವುದಾಗಿ ನಂಬಿಸಿದ್ದ ಹರಿಹರನ್ ಆಕೆಯ ಜತೆಗೆ ಕಳೆದಿದ್ದ ಖಾಸಗಿ ಕ್ಷಣದ ವಿಡಿಯೊ ಮಾಡಿಕೊಂಡಿದ್ದ. ಹರಿಹರನ್ ಮದುವೆಗೆ ನಿರಾಕರಿಸಿದ ಬಳಿಕ ಮಹಿಳೆ ಮತ್ತೊಬ್ಬರನ್ನು ಮದುವೆಯಾಗಲು ನಿರ್ಧರಿಸಿದ್ದರು. ಆಗ ವಿಡಿಯೊ ತೋರಿಸಿ ಲೈಂಗಿಕ ದೌರ್ಜನ್ಯ ನಡೆಸಿದ್ದರು. ಇತರರೂ ಕೈಜೋಡಿಸಿದ್ದರು’ ಎಂದು ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಮಾಹಿತಿ ನೀಡಿದ ಗೃಹ ಸಚಿವ ಆರಗ ಜ್ಞಾನೇಂದ್ರ

‘ಪೊಲೀಸರ ವರ್ಗಾವಣೆ: ನಿಯಮ ಬದಲಾವಣೆಗೆ ಪರಿಶೀಲನೆ’

ಪ್ರಜಾವಾಣಿ ವಾರ್ತೆ

ವಿಧಾನ ಮಂಡಲದಲ್ಲಿ

ಬೆಂಗಳೂರು: ‘ಪೊಲೀಸ್ ಇಲಾಖೆಯಲ್ಲಿ ಮರು ನೇಮಕಾತಿ ಆಗಿರುವ ಮಾಜಿ ಸೈನಿಕ ಪೊಲೀಸ್ ಸಿಬ್ಬಂದಿ, ನೇಮಕಗೊಂಡ ಸ್ಥಳದಲ್ಲಿ ಏಳು ವರ್ಷ ಕರ್ತವ್ಯ ನಿರ್ವಹಿಸಿದ ಬಳಿಕ ವರ್ಗಾವಣೆಗೆ ಅವಕಾಶ ಕಲ್ಪಿಸಲಾಗಿದೆ. ಈ ನಿಯಮ ಬದಲಿಸುವ ಬಗ್ಗೆ ಪರಿಶೀಲಿಸಲಾಗುವುದು’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ, ‘ಸೇನೆಯಲ್ಲಿ 15 ವರ್ಷ ಸೇವೆ ಸಲ್ಲಿಸಿ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುವವರಿಗೆ ಏಳು ವರ್ಷದವರೆಗೆ ನಿಯೋಜನೆ ಸ್ಥಳದಿಂದ ವರ್ಗಾವಣೆ ಸಿಗುತ್ತಿಲ್ಲ. ಅದನ್ನು ಎರಡು ವರ್ಷಕ್ಕೆ ಇಳಿಸಿ, ಕುಟುಂಬದ ಜತೆ ಕಾಲ ಕಳೆಯಲು ಅವಕಾಶ ನೀಡಬೇಕು. ಪೊಲೀಸರ ಕಷ್ಟ ಪರಿಹಾರ ಭತ್ಯೆ ಮತ್ತು ರಜಾ ಸೌಲಭ್ಯದಲ್ಲಿ ತಾರತಮ್ಯ ಸರಿಪಡಿಸಬೇಕು’ ಎಂದು ಆಗ್ರಹಿಸಿದರು.

ಚರ್ಚೆಯ ಬಳಿಕ ಉತ್ತರಿಸಿದ ಸಚಿವರು, ‘ಕೆಲವು ನಿರ್ಬಂಧಗಳ ಕಾರಣಕ್ಕೆ ಪೊಲೀಸ್ ಕೆಲಸದಲ್ಲಿ ನಿರತರಾಗಿರುವ ನಿವೃತ್ತ ಸೈನಿಕರಿಗೆ ಏಳು ವರ್ಷಕ್ಕೆ ಮೊದಲೇ ವರ್ಗಾವಣೆ ನೀಡುವುದು ಕಷ್ಟವಾಗಲಿದೆ’ ಎಂದರು.

‘ಪೊಲೀಸ್ ಕೆಲಸಕ್ಕೆ ನೇಮಿಸುವಾಗ ವಲಯ, ಪ್ರದೇಶವಾರು ಅಧಿಸೂಚನೆ ಹೊರಡಿಸಲಾಗುತ್ತದೆ. ಮಾಜಿ ಸೈನಿಕರಿಗೆ ಶೇ 10 ಮೀಸಲಾತಿ, 40 ವರ್ಷ ವಯೋಮಿತಿ ನೀಡಲಾಗಿದೆ. ಪತಿ-ಪತ್ನಿ ಮತ್ತು ಗಂಭೀರ ಪ್ರಕರಣಗಳಲ್ಲಿ ವರ್ಗಾವಣೆಗೆ ಎರಡು ವರ್ಷದ ಮಿತಿ ಇದೆ. ಮಾಜಿ ಸೈನಿಕರಿಗೂ ಈ ಸವಲತ್ತು ನೀಡಿದರೆ ಇತರರೂ ಕೇಳುವ ಸಾಧ್ಯತೆ ಇದೆ. ಮಾಜಿ ಸೈನಿಕರ ಬೇಡಿಕೆಯಂತೆ ಅವರ ತವರಿಗೆ ವರ್ಗಾವಣೆ ತಕ್ಷಣ ನೀಡಿದರೆ ಕೆಲವು ಭಾಗದಲ್ಲಿ ಪೊಲೀಸ್ ಸಿಬ್ಬಂದಿ ಕೊರತೆ ಎದುರಾಗಲಿದೆ’ ಎಂದು ಸಚಿವರು ಹೇಳಿದರು.

‘ಎಲ್ಲ ಶಾಸಕರಿಗೆ ಅಂಗರಕ್ಷಕರು ಯಾಕೆ ಬೇಕು? ಅಂಗರಕ್ಷಕರ ಅಗತ್ಯವಿದೆ ಎಂದು ಬರೆದು ಕೊಡುವವರಿಗೆ ಮಾತ್ರ ಕೊಡಿ’ ಎಂದು ಬಿಜೆಪಿಯ ಆಯನೂರು ಮಂಜುನಾಥ ನೀಡಿದ ಸಲಹೆಯನ್ನು ಪರಿಶೀಲಿಸುವುದಾಗಿ ಸಚಿವರು ತಿಳಿಸಿದರು.

ಪೊಲೀಸರಿಗೆ ಹೆಚ್ಚಿನ ಸೌಲಭ್ಯ ಒದಗಿಸುವಂತೆ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕಾಂಗ್ರೆಸ್ಸಿನ ಕೆ. ಗೋವಿಂದರಾಜ್, ಮಂಜುನಾಥ ಭಂಡಾರಿ, ಬಿಜೆಪಿಯ ಎನ್. ರವಿಕುಮಾರ್, ತೇಜಸ್ವಿನಿ ಗೌಡ ಕೂಡಾ ಆಗ್ರಹಿಸಿದರು.

ಕೇಂದ್ರೀಯ ವಿ.ವಿ: ಕನ್ನಡ ಸೇರಿ 13 ಭಾಷೆಗಳಲ್ಲಿ ಪ್ರವೇಶ ಪರೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರೀಯ ವಿಶ್ವ ವಿದ್ಯಾಲಯಗಳಲ್ಲಿ ಪದವಿ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸಲು ನಡೆಯುವ ವಿಶ್ವವಿದ್ಯಾಲಯ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಯುಇಟಿ) ಕನ್ನಡ ಸೇರಿದಂತೆ 13 ಭಾಷೆಗಳಲ್ಲಿ ನಡೆಯಲಿದೆ. ಏಪ್ರಿಲ್ ಮೊದಲ ವಾರ ಪರೀಕ್ಷಾ ಪ್ರಕ್ರಿಯೆ ಆರಂಭವಾಗಲಿದೆ.

‘ಒಂದು ರಾಷ್ಟ್ರ, ಒಂದು ಪ್ರವೇಶ ಪರೀಕ್ಷೆ’ ಚಿಂತನೆಯಡಿ ಈ ಪರೀಕ್ಷೆಯು ನಡೆಯಲಿದೆ. ಪ್ರವೇಶ ಪರೀಕ್ಷೆಯು ಸಾಮಾನ್ಯ ಜ್ಞಾನ ಮತ್ತು ವಿಷಯ ಕೇಂದ್ರಿತ ಪರೀಕ್ಷೆಗಳ ಜೊತೆಗೆ 1ಎ ಮತ್ತು 1ಬಿ ಎಂಬ ಎರಡು ವರ್ಗದಲ್ಲಿ ನಡೆಯಲಿದೆ.

1ಎ ವರ್ಗದ ಪರೀಕ್ಷೆ ಕಡ್ಡಾಯವಾಗಿದ್ದು, ಗುರುತಿಸಲಾದ 13 ಭಾಷೆಗಳಲ್ಲಿ ಯಾವುದೇ ಒಂದು ಭಾಷೆಯಲ್ಲಿ ತೆಗೆದುಕೊಳ್ಳಬಹುದಾಗಿದೆ. 1ಬಿ ಐಚ್ಛಿಕವಾಗಿದ್ದು. ಕೊಂಕಣಿ, ಸಿಂಧಿ ಸೇರಿದಂತೆ ಹೆಚ್ಚುವರಿಯಾಗಿ ಗುರುತಿಸಲಾದ ಭಾಷೆಗಳಲ್ಲಿ ತೆಗೆದುಕೊಳ್ಳಬಹುದಾಗಿದೆ.

ವಿಷಯ ಆಧಾರಿತ ವಿಭಾಗದಲ್ಲಿ ರಾಸಾಯನ ವಿಜ್ಞಾನ, ಭೌತವಿಜ್ಞಾನ, ಲೆಕ್ಕಶಾಸ್ತ್ರ, ಸಮಾಜವಿಜ್ಞಾನ ಸೇರಿದಂತೆ 27 ವಿಷಯಗಳಿವೆ. ಅಭ್ಯರ್ಥಿಗಳು ಇವುಗಳಲ್ಲಿ 6 ವಿಷಯ ಆಯ್ಕೆ ಮಾಡಿಕೊಳ್ಳಬಹುದು. ಸಾಮಾನ್ಯ ಜ್ಞಾನ ಪರೀಕ್ಷೆಯು ಪ್ರಚಲಿತ ವಿದ್ಯಮಾನ, ಸಾಮಾನ್ಯ ಜ್ಞಾನ, ಗ್ರಹಿಕೆ ಸಾಮರ್ಥ್ಯ, ಬುದ್ಧಿಮತ್ತೆಗೆ ಸಂಬಂಧಿಸಿದ್ದಾಗಿದೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಸಿಯುಇಟಿ ಅನ್ನು ನಡೆಸಲಿದ್ದು, ಪರೀಕ್ಷೆಯ ಅವಧಿಯು ಮೂರುವರೆ ಗಂಟೆ ಆಗಿದೆ. ಪರೀಕ್ಷೆಯು ಜುಲೈ ತಿಂಗಳಲ್ಲಿ ನಡೆಯಲಿದೆ ಎಂದು ವಿಶ್ವ ವಿದ್ಯಾಲಯ ಅನುದಾನ ಆಯೋಗದ ಅಧ್ಯಕ್ಷ ಎಂ.ಜಗದೀಶ್ ಕುಮಾರ್ ತಿಳಿಸಿದ್ದಾರೆ.

‘ಸರ್ಕಾರಿ ವಕೀಲರ ನೇಮಕಕ್ಕೆ ಬಿಗಿ ನಿಯಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಸ್ಥಳೀಯ ಪ್ರಾಧಿಕಾರಗಳನ್ನು ಪ್ರತಿನಿಧಿಸುವ ಸರ್ಕಾರಿ ವಕೀಲರ ನೇಮಕಕ್ಕೆ ಬಿಗಿ ನಿಯಮಗಳನ್ನು ಜಾರಿಗೊಳಿಸಲಾಗುವುದು ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಭರವಸೆ ನೀಡಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಕೀಲರ ನೇಮಕಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್‌ನಲ್ಲಿ ಮಂಗಳವಾರ ನಿಯಮ 330ರ ಅಡಿಯಲ್ಲಿ ವಿಷಯ ಪ್ರಸ್ತಾಪಿಸಿದ ಸರ್ಕಾರದ ಮುಖ್ಯ ಸಚೇತಕ ಡಾ.ವೈ.ಎ. ನಾರಾಯಣಸ್ವಾಮಿ, ‘ಬಿಬಿಎಂಪಿಯಲ್ಲಿ ವಕೀಲರ ಆಯ್ಕೆ ಸಮರ್ಪಕವಾಗಿ ನಡೆಯುತ್ತಿಲ್ಲ. ಪಾಲಿಕೆಯನ್ನು ಪ್ರತಿನಿಧಿಸುವ ವಕೀಲರು ವಿರೋಧಿಗಳ ಜತೆ ಕೈಜೋಡಿಸುತ್ತಿದ್ದಾರೆ. ವಕೀಲರ ನೇಮಕಾತಿಯಲ್ಲಿನ ದೋಷದಿಂದಾಗಿ ಪಾಲಿಕೆಯ ಆಸ್ತಿಗಳು ಕಬಳಿಕೆದಾರರ ಪಾಲಾಗುತ್ತಿವೆ’ ಎಂದು ದೂರಿದರು.

‘ಉದ್ಯಾನದಲ್ಲಿ ಕಟ್ಟಿದ ಮನೆಯನ್ನು ತೆರವು ಮಾಡಿಸುವುದಕ್ಕೂ ಬಿಬಿಎಂಪಿ ವಕೀಲರು ಶಕ್ತರಾಗಿಲ್ಲ. ವಕೀಲರ ನೇಮಕಕ್ಕೆ ಪ್ರತ್ಯೇಕ ನೀತಿ ರೂಪಿಸಬೇಕು. ನೇಮಕಾತಿಯಲ್ಲಿ ಪಾರದರ್ಶಕತೆ ತರಬೇಕು’ ಎಂದು ಒತ್ತಾಯಿಸಿದರು.

ಮೇಲ್ಮನವಿ ಸಲ್ಲಿಸಲು ನಿರ್ಧಾರ

‘ಬೆಂಗಳೂರಿನಲ್ಲಿ ನಗರ ಭೂಮಿತಿ ಕಾಯ್ದೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳಲ್ಲಿ ಸರ್ಕಾರದ ವಿರುದ್ಧ ಆದೇಶ ಬಂದ ಬಳಿಕ ಮೇಲ್ಮನವಿ ಸಲ್ಲಿಸದೇ ವಕೀಲರು ಲೋಪ ಎಸಗಿದ್ದಾರೆ. 8,000ದಿಂದ 10,000 ಪ್ರಕರಣಗಳಲ್ಲಿ ಸರ್ಕಾರಿ ಆಸ್ತಿ ಖಾಸಗಿಯವರ ಪಾಲಾಗುವ ಸ್ಥಿತಿ ನಿರ್ಮಾಣವಾಗಿದೆ. ಕಾನೂನಿಗೆ ತಿದ್ದುಪಡಿ ತಂದು, ಮೇಲ್ಮನವಿ ಸಲ್ಲಿಸಲು ಸರ್ಕಾರ ನಿರ್ಧರಿಸಿದೆ’ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ವಿಧಾನ ಪರಿಷತ್‌ನಲ್ಲಿ ತಿಳಿಸಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ ಮಾತನಾಡಿ, ‘ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ. ಕಾನೂನು ಹೋರಾಟದಲ್ಲಿ ಸರ್ಕಾರ ಸೋಲುತ್ತಿದೆ. ಆದರೆ, ಸರ್ಕಾರಿ ವಕೀಲರು ಬೆಳೆಯುತ್ತಿದ್ದಾರೆ’ ಎಂದರು.

‘ಬಿಡಿಎ ಸ್ವಾಧೀನಕ್ಕೆ ಪಡೆದುಕೊಂಡ ಜಮೀನುಗಳು ಮತ್ತೆ ಒತ್ತುವರಿದಾರರ ಪಾಲಾಗುತ್ತಿವೆ. ಸರ್ಕಾರದ ಪರ ವಕೀಲರು ಈ ಕುರಿತು ಮೇಲ್ಮನವಿಯನ್ನೂ ಸಲ್ಲಿಸುತ್ತಿಲ್ಲ’ ಎಂದು ಜೆಡಿಎಸ್‌ನ ಎಚ್.ಎಂ. ರಮೇಶ್ ಗೌಡ ದೂರಿದರು.

ಕಠಿಣ ನಿಯಮಕ್ಕೆ ಚಿಂತನೆ: ಉತ್ತರ ನೀಡಿದ ಮಾಧುಸ್ವಾಮಿ, ‘ಸರ್ಕಾರಿ ವಕೀಲರ ನೇಮಕಾತಿಯಲ್ಲಿ ರಾಜಕೀಯ ಹಸ್ತಕ್ಷೇಪ, ಪ್ರಭಾವ ಬೀರುವುದು ದೀರ್ಘಕಾಲದಿಂದ ನಡೆದುಕೊಂಡು ಬಂದಿದೆ. ಇದಕ್ಕೆ ಕಡಿವಾಣ ಹಾಕುವ ಪ್ರಯತ್ನ ಮಾಡುತ್ತಿದ್ದೇನೆ. ಸರ್ಕಾರಿ ವಕೀಲರ ನೇಮಕಕ್ಕೆ ಜಿಲ್ಲಾಧಿಕಾರಿ ಮತ್ತು ಸ್ಥಳೀಯ ನ್ಯಾಯಾಧೀಶರ ಶಿಫಾರಸು ಕಡ್ಡಾಯಗೊಳಿಸಲಾಗಿದೆ’ ಎಂದರು.

ಜಿಲ್ಲಾಧಿಕಾರಿಗಳು ಪರಿಶೀಲನಾ ವರದಿ ನೀಡಿದ ಬಳಿಕವೇ ನೇಮಕಾತಿ ಮಾಡಲಾಗುತ್ತಿದೆ. ವಕೀಲರ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶೀಲನಾ ಸಭೆ ನಡೆಸಲಾಗುತ್ತಿದೆ. ನಿಗಮ, ಮಂಡಳಿಗಳಲ್ಲಿನ ವಕೀಲರ ನೇಮಕಾತಿ ಇನ್ನೂ ನೇರವಾಗಿ ಕಾನೂನು ಇಲಾಖೆ ವ್ಯಾಪ್ತಿಗೆ ಬಂದಿಲ್ಲ. ಎಲ್ಲವನ್ನೂ ಸರಿಪಡಿಸಿ ಬಿಗಿಯಾದ ನಿಯಮಗಳನ್ನು ಜಾರಿಗೊಳಿಸಲಾಗುವುದು ಎಂದು ತಿಳಿಸಿದರು.

‘ರಾಜ್ಯ ಸರ್ಕಾರದ ಹಂತದಲ್ಲೂ ವಕೀಲರ ನೇಮಕಾತಿ ಪ್ರಕ್ರಿಯೆಯಲ್ಲಿ ಬಿಗಿ ತರಲಾಗಿದೆ. ತಪ್ಪುಗಳಾದರೆ ಅಡ್ವೊಕೇಟ್ ಜನರಲ್ ಮತ್ತು ಹೆಚ್ಚುವರಿ ಅಡ್ವೊಕೇಟ್ ಜನರಲ್‌ಗಳನ್ನೇ ಹೊಣೆ ಮಾಡುವುದಾಗಿ ಎಚ್ಚರಿಕೆ ನೀಡಿದ್ದೇನೆ’ ಎಂದರು.

2011ನೇ ಸಾಲಿನ 13 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ

ಬೆಂಗಳೂರು: ಕೆಪಿಎಸ್‌ಸಿ ನಡೆಸಿದ 2011ನೇ ಸಾಲಿನ ಗೆಜೆಟ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿ (ಗ್ರೂಪ್ ಬಿ) ಹುದ್ದೆಗೆ ಆಯ್ಕೆಯಾದ 13 ಅಭ್ಯರ್ಥಿಗಳಿಗೆ ಮಂಗಳವಾರ ನೇಮಕಾತಿ ಆದೇಶ ನೀಡಲಾಗಿದೆ.

ಅಕ್ರಮ ನಡೆದಿದೆ ಎಂಬ ಕಾರಣಕ್ಕೆ ಈ ಸಾಲಿನ ಆಯ್ಕೆಯನ್ನು 2018ರ ಮಾರ್ಚ್ 9ರಂದು ಹೈಕೋರ್ಟ್ ರದ್ದುಪಡಿಸಿತ್ತು. ಆದರೆ, ಸರ್ಕಾರ ಈ ಸಾಲಿನ ನೇಮಕಾತಿ ಅಧಿಸೂಚನೆ ವಾಪಸು ಪಡೆದ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆಯಾಗಿದೆ ಎಂಬ ಕಾರಣಕ್ಕೆ ಎಲ್ಲ ಅಭ್ಯರ್ಥಿಗಳ ಮರು ನೇಮಕಕ್ಕೆ ಇತ್ತೀಚೆಗೆ ಕಾಯ್ದೆ ರೂಪಿಸಿತ್ತು. ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿ ಹುದ್ದೆಗೆ ಈ ಸಾಲಿನಲ್ಲಿ ಆಯ್ಕೆಯಾಗಿದ್ದ 18 ಅಭ್ಯರ್ಥಿಗಳಿಗೆ ಈ ಹಿಂದೆಯೇ ನೇಮಕಾತಿ ಆದೇಶ ನೀಡ ಲಾಗಿತ್ತು. ಆಯ್ಕೆ ಪಟ್ಟಿ ರದ್ದುಗೊಂಡಿದ್ದರಿಂದ ಈ ಅಭ್ಯರ್ಥಿಗಳ ನೇಮಕವನ್ನು ರದ್ದುಪಡಿಸಿ, ಕರ್ತವ್ಯದಿಂದ ಬಿಡುಗಡೆ ಮಾಡಲಾಗಿತ್ತು. ಇದೀಗ, ಆ ಪಟ್ಟಿಯಲ್ಲಿ 13 ಅಭ್ಯರ್ಥಿಗಳಿಗೆ ಸರ್ಕಾರ ಮತ್ತೆ ನೇಮಕಾತಿ ಆದೇಶ ಹೊರಡಿಸಿದೆ.

ಪರಿಷತ್‌ನಲ್ಲಿ ಮತ್ತೆ ಪ್ರತಿಧ್ವನಿಸಿದ ನೈಸ್ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್’ (ನೈಸ್) ಸಂಸ್ಥೆಯ ಬೆಂಗಳೂರು– ಮೈಸೂರು ಹೆದ್ದಾರಿ ಯೋಜನೆಯ (ಬಿಎಂಐಸಿಎಲ್) ಅಕ್ರಮ ವಿಧಾನ ಪರಿಷತ್‌ನಲ್ಲಿ ಮತ್ತೆ ಪ್ರತಿಧ್ವನಿಸಿದೆ.

ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ, ‘ರಾಜ್ಯ ಸರ್ಕಾರದ ಅನುದಾನ ನೀಡದ ಯೋಜನೆ ಇದಾಗಿದ್ದು, ಪರ್ಯಾಯವಾಗಿ ಐದು ಕಡೆ ಟೌನ್‌ಶಿಪ್ ನಿರ್ಮಾಣಕ್ಕೆ ಸರ್ಕಾರ ಭೂಮಿ ನೀಡಬೇಕು ಎಂದು ತೀರ್ಮಾನವಾಗಿತ್ತು. ಯೋಜನೆಗೆ ಅನಗತ್ಯವಾಗಿ ಸುಮಾರು 9 ಸಾವಿರ ಎಕರೆ ಭೂಮಿ ಹೆಚ್ಚುವರಿಯಾಗಿ ನೀಡಲಾಗಿದೆ. ಈ ಅಕ್ರಮದ ಬಗ್ಗೆ ಜಂಟಿ ಸದನ ಸಮಿತಿ ವರದಿ ನೀಡಿದ್ದರೂ ಶಿಫಾರಸುಗಳು ಜಾರಿ ಆಗಿಲ್ಲ’ ಎಂದರು.

‘ನೈಸ್ ರಸ್ತೆಯಲ್ಲಿ 2008ರಿಂದಲೂ ಟೋಲ್ ಸಂಗ್ರಹಿಸಲಾಗುತ್ತಿದೆ. 2021ರಲ್ಲಿ ವೈಟ್ ಟ್ಯಾಪಿಂಗ್ ಮಾಡಲಾಗಿದೆ. ನಿತ್ಯ 10 ಸಾವಿರಕ್ಕೂ ಹೆಚ್ಚು ವಾಹನಗಳು ಈ ಮಾರ್ಗದಲ್ಲಿ ಸಂಚರಿಸುತ್ತವೆ ಕಂಪನಿ ಕಾಂಕ್ರೀಟ್ ರಸ್ತೆ ಮಾಡಿಲ್ಲ. ಆದರೆ, ಅದೇ ಆಧಾರದಲ್ಲಿ ಎರಡು ವರ್ಷಕ್ಕೊಮ್ಮೆ ಟೋಲ್ ಮೊತ್ತ ಹೆಚ್ಚಿಸಲಾಗುತ್ತಿದೆ. ಯೋಜನೆಯಲ್ಲಿ ವಂಚನೆ ನಡೆದಿದ್ದು, ಈ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು’ ಎಂದು ಆಗ್ರಹಿಸಿದರು.

‘ಹೆಬ್ಬಾಳ ಮೇಲು ಸೇತುವೆ ವಿಸ್ತರಣೆ: ಏಪ್ರಿಲ್‌ನಲ್ಲಿ ಟೆಂಡರ್’

ಬೆಂಗಳೂರು: ಹೆಬ್ಬಾಳ ಜಂಕ್ಷನ್ ಮೇಲುಸೇತುವೆ ವಿಸ್ತರಿಸುವ ಕಾಮಗಾರಿಯನ್ನು ಮೆಟ್ರೊ ಜತೆ ಸಂಯೋಜನೆಗೊಳಿಸಿ ಸಮಗ್ರವಾಗಿ ಅಭಿವೃದ್ಧಿಪಡಿಸಲು ಏಪ್ರಿಲ್‌ನಲ್ಲಿ ಟೆಂಡರ್ ಕರೆಯಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಕೃಷ್ಣಬೈರೇಗೌಡ ಪ್ರಶ್ನೆಗೆ ಉತ್ತರಿಸಿ, ‘ಈ ಯೋಜನೆಗೆ ಹಣದ ಕೊರತೆ ಇಲ್ಲ. ಬಿಡಿಎಯಿಂದ ಅನುಷ್ಠಾನಗೊಳಿಸಲಾಗುವುದು’ ಎಂದು ಹೇಳಿದರು.

‘ಹೆಬ್ಬಾಳ ಜಂಕ್ಷನ್‌ನ ಸಾಮರ್ಥ್ಯ ಹೆಚ್ಚಿಸುವ ಅಧ್ಯಯನವನ್ನು ಮೆ: ರೈಟ್ಸ್ ಸಂಸ್ಥೆಗೆ ವಹಿಸಲಾಗಿತ್ತು. ಈ ಸಂಸ್ಥೆಯು ಸಲ್ಲಿಸಿದ್ದ ವಿವಿಧ ಆಯ್ಕೆಗಳ ವರದಿಯ ಕುರಿತು ಚರ್ಚಿಸಿ ಸುಧಾರಿತ ಪ್ರಸ್ತಾವನೆಯನ್ನು ಅಂತಿಮಗೊಳಿಸಲಾಗಿದೆ. ಭೂಮಿಯ ವೆಚ್ಚ ಬಿಟ್ಟು ಇದರ ಒಟ್ಟು ಅಂದಾಜು ವೆಚ್ಚ ₹244 ಕೋಟಿ. ಕಳೆದ ಡಿಸೆಂಬರ್‌ನಲ್ಲಿ ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ 42 ನೇ ಎಚ್‌ಪಿಸಿ ಸಭೆಯಲ್ಲಿ ಈ ಯೋಜನೆಯ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿತ್ತು. ಈಗಾಗಲೇ ಸಾರ್ವಜನಿಕರು, ಪಾಲು ದಾರರಿಂದ ಅಭಿಪ್ರಾಯ ಮತ್ತು ಸಲಹೆಗಳು ಬಂದಿದ್ದು, ಸಲಹೆಗಾರರೊಂದಿಗೆ ವಿಶ್ಲೇಷಿಸಲಾಗುತ್ತಿದೆ’ ಎಂದು ಬೊಮ್ಮಾಯಿ ತಿಳಿಸಿದರು.

ಕೃಷ್ಣಬೈರೇಗೌಡ ಮಾತನಾಡಿ, ‘ಹೆಬ್ಬಾಳ ಮೇಲು ಸೇತುವೆ ಬಳಿ ವಾಹನಗಳ ದಟ್ಟಣೆಯಿಂದ ನಾಗರಿಕರಿಗೆ ತುಂಬಾ ಕಷ್ಟವಾಗಿದೆ. ಅರ್ಧ– ಮುಕ್ಕಾಲು ಗಂಟೆ ವಾಹನಗಳು ಮೇಲುಸೇತುವೆ ಮೇಲೆಯೇ ನಿಲ್ಲಬೇಕಾಗುತ್ತಿದೆ. 2018ರಲ್ಲಿ ₹80 ಕೋಟಿ ಬಿಡುಗಡೆ ಮಾಡಿ ಕಾಮ ಗಾರಿಗೆ ಚಾಲನೆ ನೀಡಲಾಗಿತ್ತು. ಅದು ಅರ್ಧಕ್ಕೆ ನಿಂತು ಹೋಯಿತು. ಅದಾಗಿ 3 ವರ್ಷ ಕಳೆದರೂ ಕಾಮಗಾರಿ ಆರಂಭವಾಗಿಲ್ಲ’ ಎಂದು ಬೇಸರ ವ್ಯಕತಪಡಿಸಿದರು.

ಕಾಂಗ್ರೆಸ್‌ನ ಕೆ.ಜೆ.ಜಾರ್ಜ್ ಮಾತನಾಡಿ, ‘ನಮ್ಮ ಅವಧಿಯಲ್ಲಿ ಉಕ್ಕಿನ ಸೇತುವೆ ಮಾಡಲು ಹೊರ ಟಾಗ ಅದರ ವಿರುದ್ಧ ಬಿಜೆಪಿ ಪ್ರತಿಭ ಟನೆ ನಡೆಸಿತು. ಭ್ರಷ್ಟಾಚಾರದ ಆರೋಪ ಹೊರಿಸಿದರು. ನ್ಯಾಯಾಲಯದಿಂದ ತಡೆಯಾಜ್ಞೆ ತರಲಾಯಿತು. ವಿಧಾನಸಭಾ ಚುನಾ ವಣೆ ಬಂದಿದ್ದರಿಂದ ಯೋಜನೆ ರದ್ದುಗೊಳಿಸಲಾಯಿತು. ಈಗಲಾದರೂ ವಿಸ್ತರಣೆ ಕಾರ್ಯವನ್ನು ಕೈಗೆತ್ತಿಕೊಳ್ಳಿ’ ಎಂದು ಸಲಹೆ ನೀಡಿದರು.

ಜೆಡಿಎಸ್‌ನ ಮತ್ತೊಬ್ಬ ಸದಸ್ಯ ಎಸ್.ಎಲ್. ಭೋಜೇಗೌಡ, ‘ನೈಸ್ ಕಥೆ ಹಾರುವ ಮಗನಿಗೆ ಏಣಿ ಹಾಕಿಕೊಟ್ಟಂತಾಗಿದೆ. ಮೊದಲೇ ಭ್ರಷ್ಟಾಚಾರದಲ್ಲಿ ತೊಡಗಿದ್ದ ಸಂಸ್ಥೆಗೆ ಏಜೆನ್ಸಿಗಳು ಅವಕಾಶ ಮಾಡಿಕೊಟ್ಟಿವೆ’ ಎಂದು ದೂರಿದರು.

‘ಯೋಜನೆಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿದ್ದ ಪ್ರಕರಣಗಳು ಇತ್ಯರ್ಥವಾಗಿವೆ. ಅಗತ್ಯ ಮೂಲಸೌಕರ್ಯ ಒದಗಿಸದಿದ್ದರೂ ನೈಸ್ ಸಂಸ್ಥೆ ಪ್ರತಿದಿನ ನೂರಾರು ಕೋಟಿ ಟೋಲ್ ಸಂಗ್ರಹಿಸುತ್ತಿದೆ. ಆದಾಯ ಹೆಚ್ಚಿಸಿಕೊಳ್ಳುವ ನೈಸ್‌ನಿಂದಾಗಿ ಸರ್ಕಾರಕ್ಕೆ ಏನು ಸಿಕ್ಕಿದೆ? ಈ ಯೋಜನೆಯಲ್ಲಿ ದೇವೇಗೌಡರಿಂದ ಯಾವುದೇ ಅಕ್ರಮ ಆಗಿಲ್ಲ. ವಿವಾದಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟ ಉಪ ಸಮಿತಿ ನೀಡಿರುವ ವರದಿಯನ್ನು ಅಧಿಕಾರಿಗಳು ನೀಡಬೇಕು’ ಎಂದರು ಒತ್ತಾಯಿಸಿದರು.

ಈ ವಿಷಯದ ಚರ್ಚೆ ಬುಧವಾರವೂ ಮುಂದುವರಿಯಲಿದೆ. ಚರ್ಚೆಯ ಬಳಿಕ ಉತ್ತರ ನೀಡುವುದಾಗಿ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಮತ್ತು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ತಿಳಿಸಿದರು.

ಪ್ರಶಸ್ತಿ ಪ್ರದಾನ

ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶೇಷಾದ್ರಿಪುರ ಸಮೂಹ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವೂಡೆ ಪಿ.ಕೃಷ್ಣ ಅವರಿಗೆ ‘ವರ್ಷದ ಶ್ರೇಷ್ಠ ಶಿಕ್ಷಣ ತಜ್ಞ–2022’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಾಜಿ ಮುಖ್ಯಸ್ಥ ಪ್ರೊ.ಎ.ಎಸ್. ಕಿರಣ್‌ಕುಮಾರ್, ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ ಹಾಗೂ ಅಸೋಸಿಯೇಷನ್‌ನ ಸದಸ್ಯರು ಇದ್ದರು

ನಕಲಿ ಅಂಕಪಟ್ಟಿ: ವಿಚಾರಣೆ

ಬೆಂಗಳೂರು: ನಕಲಿ ಅಂಕಪಟ್ಟಿ ಪ್ರಕರಣದ ತನಿಖೆ ಮುಂದುವರಿಸಿರುವ ಜಯನಗರ ಪೊಲೀಸರು, ಅಂಕಪಟ್ಟಿ ಖರೀದಿಸಿದ್ದವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸುತ್ತಿದ್ದಾರೆ.

‘ದೇಶದ ವಿವಿಧ ವಿಶ್ವವಿದ್ಯಾಲಯಗಳ ಹೆಸರಿನಲ್ಲಿ ನಕಲಿ ಅಂಕಪಟ್ಟಿ ಹಾಗೂ ಪ್ರಮಾಣಪತ್ರ ತಯಾರಿಸಿ ಮಾರಲಾಗುತ್ತಿತ್ತು. ಈ ಜಾಲದಲ್ಲಿದ್ದ ಜೆ. ರಘು (34), ಜಿ. ಧರ್ಮಕುಮಾರ್ (39), ಜೆ. ದೀಪಕ್ (32) ಹಾಗೂ ಸಿ. ನರೇಶ್ ರೆಡ್ಡಿ (37) ಎಂಬುವರನ್ನು ಬಂಧಿಸಲಾಗಿತ್ತು. ಅವ ರಿಂದ 200 ನಕಲಿ ಅಂಕಪಟ್ಟಿಗಳನ್ನು ಜಪ್ತಿ ಮಾಡಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ವಿ.ವಿಗಳಿಗೆ ಪತ್ರ: ‘ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಕಲ್ ಸೈನ್ಸ್, ಡಾ. ಸಿ.ವಿ.ರಾಮನ್ ವಿಶ್ವವಿದ್ಯಾಲಯ ಹಾಗೂ ರವೀಂದ್ರನಾಥ್ ಟ್ಯಾಗೋರ್ ವಿಶ್ವವಿದ್ಯಾಲಯ ಹೆಸರಿನ ನಕಲಿ ಅಂಕಪಟ್ಟಿಗಳು ಆರೋಪಿಗಳ ಬಳಿ ಸಿಕ್ಕಿವೆ. ಈ ಬಗ್ಗೆ ವಿಶ್ವವಿದ್ಯಾಲಯಗಳಿಗೆ ಪತ್ರ ಬರೆದು, ಮಾಹಿತಿ ಕೋರಲಾಗಿದೆ’ ಎಂದು ಮೂಲಗಳು ಹೇಳಿವೆ.

ಭಗವದ್ಗೀತೆ ಕಲಿಕೆ: ನಳಿನ್ ಸಮರ್ಥನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಜರಾತ್ ಮಾದರಿಯಲ್ಲಿ ಕರ್ನಾಟಕದ ಶಾಲೆಗಳಲ್ಲಿಯೂ ಭಗವದ್ಗೀತೆ ಶಿಕ್ಷಣ ನೀಡಬೇಕಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಪ್ರತಿಪಾದಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ‘ಶಿಕ್ಷಣ ಎಂದರೆ ಅದು ಮನುಷ್ಯನ ಸುಪ್ತ ಸಾಮರ್ಥ್ಯವನ್ನು ಅಭಿವ್ಯಕ್ತಿಗೊಳಿಸುವ ಪ್ರಕ್ರಿಯೆ. ಇಂದಿನ ಶಿಕ್ಷಣ ಕೇವಲ ಮೆದುಳಿಗೆ ಮಾಹಿತಿ ಕೊಡಲಾಗುತ್ತಿದೆ. ಶಿಕ್ಷಣವು ಮನುಷ್ಯನೊಳಗಿನ ವ್ಯಕ್ತಿತ್ವಕ್ಕೆ ಹೊಳಪು ಮತ್ತು ಬೆಳಕು ಕೊಡುವ ಮಾದರಿಯಲ್ಲಿರಬೇಕು. ಆದ್ದರಿಂದ ಭಗವದ್ಗೀತೆ ಶಿಕ್ಷಣ ಅತಿ ಮುಖ್ಯ’ ಎಂದು ಹೇಳಿದ್ದಾರೆ.

‘ಭಗವದ್ಗೀತೆ ದೇಶದ ಸಂಸ್ಕೃತಿಯ ಭಾಗವಾಗಿದೆ. ಮತಬ್ಯಾಂಕ್ ರಾಜಕಾರಣ, ಓಲೈಕೆಯ ರಾಜಕೀಯ ಮಾಡುವವರಿಗೆ ದೇಶದ ಇಂಥ ಗಟ್ಟಿ ಬೇರುಗಳ ಅರಿವಿಲ್ಲ. ಗಾಂಧೀಜಿ ಅವರು ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಭಗವದ್ಗೀತೆಯನ್ನು ದೇಶದಾದ್ಯಂತ ಪ್ರಸಾರ ಆಗಬೇಕೆಂದು ಪ್ರಯತ್ನ ಮಾಡಿದ್ದರು. ಭಗವದ್ಗೀತೆ ಓದುವವರು ದೇಶದ ಆಸ್ತಿಯಾಗುತ್ತಾರೆ. ಅವರು ದೇಶಕ್ಕೆಂದೂ ಹೊರೆ ಅನಿಸಲು ಸಾಧ್ಯವಿಲ್ಲ’ ಎಂದು ಅವರು ತಿಳಿಸಿದ್ದಾರೆ.

‘ನ್ಯಾಯಾಂಗ ವ್ಯವಸ್ಥೆಯಲ್ಲೂ ಭಗವದ್ಗೀತೆಯನ್ನು ಮುಟ್ಟಿ ಸತ್ಯವನ್ನೇ ಹೇಳುವುದಾಗಿ ಪ್ರಮಾಣ ಮಾಡುವ ಪದ್ಧತಿ ಇದೆ. ಭಗವದ್ಗೀತೆ ಎಂದಾಗ ದೇಶದೊಳಗೆ ವ್ಯಕ್ತಿಯಲ್ಲಿ ರೋಮಾಂಚನ ಆಗಿ ಸುಳ್ಳು ಹೇಳುವವನೂ ಸತ್ಯ ಹೇಳುವಂಥ ಸ್ಥಿತಿ ನಿರ್ಮಾಣವಾಗುತ್ತದೆ. ಸ್ವಾಮಿ ವಿವೇಕಾನಂದರು ಮನುಷ್ಯ ನಿರ್ಮಾಣದ ಶಿಕ್ಷಣ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದರು. ಅದಕ್ಕೆ ಅನುಗುಣವಾಗಿ ಮೂಲ ಶಿಕ್ಷಣದಲ್ಲಿ ಭಗವದ್ಗೀತೆ ಅತ್ಯಗತ್ಯ’ ಎಂದು ನಳಿನ್ ಹೇಳಿದ್ದಾರೆ.

‘ಎಂಎಲ್‌ಸಿಗೆ ಜೀವ ಬೆದರಿಕೆ ಹಾಕಿದ್ದು ಹಿಂದೂ ಯುವಕ’

ಶಿವಮೊಗ್ಗ: ವಿಧಾನ ಪರಿಷತ್ ಸದಸ್ಯ ಡಿ.ಎಸ್.ಅರುಣ್ ಅವರಿಗೆ ಕೊಲೆ ಬೆದರಿಕೆ ಹಾಕಿದ್ದ ಆರೋಪಿಯನ್ನು ಬಾಗಲಕೋಟೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಬೆಳಗಾವಿ ತಾಲ್ಲೂಕಿನ ಗೋಕಾಕದ ಶಿಂದಿಕುರಬೇಟ್‌ನ ಸಿದ್ಧಾರೂಢ ಶ್ರೀಕಾಂತ್ (31) ಬಂಧಿತ ಆರೋಪಿ.

ಶಿವಮೊಗ್ಗದಲ್ಲಿ ಬಜರಂಗದಳದ ಕಾರ್ಯಕರ್ತ ಹರ್ಷ ಕೊಲೆಯ ನಂತರ ಮುಸ್ಲಿಂ ವಿರೋಧಿ ಹೇಳಿಕೆ ನೀಡಿದ್ದಾರೆ ಎಂದು ಅರುಣ್ ವಿರುದ್ಧ ಫೇಸ್ ಬುಕ್‌ನಲ್ಲಿ ಮುಸ್ಲಿಂ ಯುವಕ ಮುಸ್ತಾಕ ಅಲಿ ಎಂಬುವವರ ಹೆಸರಲ್ಲಿ ಬೆದರಿಕೆ ಹಾಕಲಾಗಿತ್ತು. ಈ ಸಂಬಂಧ ಶಿವಮೊಗ್ಗ ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಾಗಲಕೋಟೆ ಪೊಲೀಸರು ಬೇರೊಂದು ಪ್ರಕರಣದಲ್ಲಿ ಆರೋಪಿಯನ್ನು ಬಂಧಿಸಿದಾಗ ಮುಸ್ಲಿಂ ಯುವಕನ ಹೆಸರಲ್ಲಿ ಅರುಣ್‌ಗೆ ಬೆದರಿಕೆ ಹಾಕಿದ ವಿಷಯ ಬೆಳಕಿಗೆ ಬಂದಿದೆ.

‘ನಿಮ್ಮ ತಲೆಲಿ ಇವತ್ತು ಕೇವಲ ಒಬ್ಬ ಹಿಂದೂ ಕಾರ್ಯಕರ್ತ ಸತ್ತಿದ್ದಾನೆ ಅಷ್ಟೆ. ಆದ್ರೆ ಮುಂದಿನ ದಿನ ನಿಮ್ಮ ಹೆಂಡಿರು ಮಕ್ಕಳೇ ನಮ್ಮವರ ಟಾರ್ಗೆಟ್...’ ಎಂದು ಫೇಸ್‌ಬುಕ್‌ನಲ್ಲಿ ಬೆದರಿಕೆ ಹಾಕಲಾಗಿತ್ತು.

ನ್ಯಾಯಮೂರ್ತಿಗೆ ಬೆದರಿಕೆ: ಆರೋಪಿ ವಶಕ್ಕೆ

ಬೆಂಗಳೂರು: ಹಿಜಾಬ್ ಪ್ರಕರಣದಲ್ಲಿ ತೀರ್ಪು ನೀಡಿದ ಹೈಕೋರ್ಟ್ ನ್ಯಾಯಮೂರ್ತಿಗೆ ಕೊಲೆ ಬೆದರಿಕೆ ಹಾಕಿದ್ದ ತಮಿಳುನಾಡಿನ ಇಬ್ಬರು ವ್ಯಕ್ತಿಗಳನ್ನು ಕರ್ನಾಟಕ ಪೊಲೀಸರು ವಶಕ್ಕೆ ಪಡೆದು ರಾಜ್ಯಕ್ಕೆ ಕರೆತಂದಿದ್ದಾರೆ.

ತಮಿಳುನಾಡಿನ ಮದುರೈನಿಂದ ಬಾಡಿ ವಾರೆಂಟ್ ನೀಡಿ ಆರೋಪಿಗಳನ್ನು ಕರೆ ತರಲಾಗಿದೆ. ಬಳಿಕ ಆರೋಪಿಗಳನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರು ಪಡಿಸಲಾಗಿದ್ದು, 8 ದಿನಗಳಿಗೆ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಸುದ್ದಿಗಾರರಿಗೆ ತಿಳಿಸಿದರು.

ಬಹಿರಂಗ ಕಾರ್ಯಕ್ರಮವೊಂದರಲ್ಲಿ ಕೊಲೆ ಬೆದರಿಕೆ ಹಾಕಿದ್ದ ಕೋವೈ ರಹಮತುಲ್ಲಾ ಮತ್ತು ಜಮಾಲ್ ಮೊಹಮ್ಮದ್ ಉಸ್ಮಾನಿಯನ್ನು ತಮಿಳುನಾಡು ಪೊಲೀಸರು ಬಂಧಿಸಿದ್ದರು. ಇವರು ಇಸ್ಲಾಮಿಕ್ ಧಾರ್ಮಿಕ ಸಂಘಟನೆಯಾದ ತಮಿಳುನಾಡು ತೌಹೀದ್ ಜಮಾತ್ ಸದಸ್ಯರು.

‘ಈ ವ್ಯಕ್ತಿಗಳು ವ್ಯವಸ್ಥೆ ಮತ್ತು ನ್ಯಾಯಾಂಗಕ್ಕೆ ಸವಾಲು ಹಾಕಿದ್ದರು. ಇಂತಹ ಪ್ರವೃತ್ತಿಯನ್ನು ಬಗ್ಗು ಬಡಿಯಲಾಗುವುದು. ಅರಾಜಕತೆ ಸೃಷ್ಟಿಸುವ ಪ್ರಯತ್ನ ನಡೆಸಲಾಗುತ್ತಿದೆ. ಇದನ್ನು ಸಹಿಸುವುದಿಲ್ಲ. ಆರೋಪಿಗಳನ್ನು ಕರೆತರುವಲ್ಲಿ ತಮಿಳುನಾಡು ಪೊಲೀಸರು ಸಹಕಾರ ನೀಡಿದ್ದಾರೆ. ಇನ್ನು ಮುಂದೆ ಯಾರೂ ನ್ಯಾಯಾಧೀಶರಿಗೆ ಬೆದರಿಕೆ ಹಾಕುವ ಘಟನೆಗಳು ಮರುಕಳಿಸಬಾರದು’ ಎಂದು ಅವರು ಹೇಳಿದರು.

ಚಾಲನೆ ಹವ್ಯಾಸ: 6 ಆಟೊ ಕದ್ದಿದ್ದ ಬಾಲಕ ವಶಕ್ಕೆ

ಬೆಂಗಳೂರು: ನಿಲ್ದಾಣ ಹಾಗೂ ರಸ್ತೆ ಬದಿ ನಿಲ್ಲಿಸುತ್ತಿದ್ದ ಆಟೊಗಳನ್ನು ಕಳವು ಮಾಡಿದ್ದ ಆರೋಪದಡಿ 17 ವರ್ಷದ ಬಾಲಕನನ್ನು ಕೆಂಗೇರಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಜಗಜೀವನ್‌ರಾಮ್ ನಗರದಲ್ಲಿ ಪೋಷಕರ ಜೊತೆ ವಾಸವಿದ್ದ ಬಾಲಕ, ಎರಡು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 15 ಲಕ್ಷ ಮೌಲ್ಯದ 6 ಆಟೊಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮನೆ ಬಳಿ ಆಟೊ ಗಮನಿಸುತ್ತಿದ್ದ ಬಾಲಕ, ಅವುಗಳನ್ನು ಚಲಾಯಿಸಲು ಪ್ರಯತ್ನಿಸುತ್ತಿದ್ದ. ಹೊಸ ಆಟೊ ಕೊಡಿಸುವಂತೆ ಪೋಷಕರನ್ನು ಕೇಳಿದ್ದ. ಆದರೆ, ಅವರು ಕೊಡಿಸಿರಲಿಲ್ಲ. ನಿತ್ಯವೂ ಆಟೊ ಚಲಾಯಿಸಬೇಕೆಂದು ಕೊಂಡಿದ್ದ ಬಾಲಕ, ಕಳ್ಳತನಕ್ಕೆ ಇಳಿದಿದ್ದ. ಆರಂಭದಲ್ಲಿ ರಸ್ತೆ ಬದಿ ನಿಲ್ಲಿಸಿದ್ದ ಆಟೊ ಬಾಲಕ ಕದ್ದಿದ್ದ. ಅದರಲ್ಲೇ ನಗರದಲ್ಲಿ ಸುತ್ತಾಡಿದ್ದ. ಇಂಧನ ಖಾಲಿಯಾಗುತ್ತಿದ್ದಂತೆ ಆಟೊ ಬಂದ್ ಆಗಿತ್ತು. ಅದನ್ನು ನಿರ್ಜನ ಪ್ರದೇಶದಲ್ಲಿ ನಿಲ್ಲಿಸಿ ಬಾಲಕ ಮನೆಗೆ ಹೋಗಿದ್ದ. ಕೆಲ ದಿನ ಬಿಟ್ಟು ಮತ್ತೊಂದು ಆಟೊ ಕದ್ದು, ಅದರಲ್ಲೂ ಸುತ್ತಾಡಿದ್ದ. ಇಂಧನ ಮುಗಿಯುತ್ತಿದ್ದಂತೆ ಯಥಾಪ್ರಕಾರ ನಿರ್ಜನ ಪ್ರದೇಶದಲ್ಲಿ ನಿಲ್ಲಿಸಿದ್ದ. ಇದೇ ರೀತಿಯಲ್ಲೇ ಬಾಲಕ 6 ಆಟೊ ಕದ್ದಿದ್ದ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

‘ಬಾಲ ನ್ಯಾಯಮಂಡಳಿ ಎದುರು ಬಾಲಕನನ್ನು ಹಾಜರುಪಡಿಸಲಾಗಿದೆ’ ಎಂದೂ ತಿಳಿಸಿವೆ.

ಪುನೀತ್, ವಿ.ಕೆ.ಆತ್ರೆ, ಮಹದೇವಸ್ವಾಮಿಗೆ ಮೈಸೂರು ವಿ.ವಿ. ಗೌರವ ಡಾಕ್ಟರೇಟ್ ಪ್ರದಾನ

ಅಂದು ರಾಜ್, ಇಂದು ಪುನೀತ್

ಪ್ರಜಾವಾಣಿ ವಾರ್ತೆ

ಮೈಸೂರು ವಿಶ್ವವಿದ್ಯಾಲಯದ 102ನೇ ಘಟಿಕೋತ್ಸವದಲ್ಲಿ ಮಂಗಳವಾರ ಜನಪದ ಕಲಾವಿದ ಎಂ.ಮಹದೇವಸ್ವಾಮಿ, ನಟ ಪುನೀತ್ ರಾಜ್‌ಕುಮಾರ್ (ಮರಣೋತ್ತರ) ಪರವಾಗಿ ಪತ್ನಿ ಅಶ್ವಿನಿ ಹಾಗೂ ವಿಜ್ಞಾನಿ ಡಾ.ವಿ.ಕೆ.ಆತ್ರೆ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ 'ಗೌರವ ಡಾಕ್ಟರೇಟ್' ಪ್ರದಾನ ಮಾಡಿದರು. ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಪರಿಷತ್‌ನ (ನ್ಯಾಕ್) ನಿರ್ದೇಶಕ ಪ್ರೊ.ಎಸ್‌.ಸಿ.ಶರ್ಮ, ಕುಲಸಚಿವರಾದ ಪ್ರೊ.ಎ.ಪಿ. ಜ್ಞಾನಪ್ರಕಾಶ್ ಹಾಗೂ ಪ್ರೊ.ಆರ್‌.ಶಿವಪ್ಪ ಇದ್ದಾರೆ

ಮೈಸೂರು: ಕ್ರಾಫರ್ಡ್ ಭವನದಲ್ಲಿ ಮಂಗಳವಾರ ಬೆಳಿಗ್ಗೆ ಭಾವುಕ ವಾತಾವರಣ. ಮರಣೋತ್ತರವಾಗಿ ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್‌ಗೆ ಭಾಜನರಾದ ನಟ ಪುನೀತ್ ರಾಜ್‌ಕುಮಾರ್ ಹೆಸರು ಹೇಳುತ್ತಿದ್ದಂತೆ ಜೋರು ಕರತಾಡನ. ಎಲ್‌ಇಡಿ ಪರದೆ ಮೇಲೆ ಅವರ ಸಾಧನೆ ಅನಾವರಣಗೊಳ್ಳುತ್ತಿದ್ದಂತೆ ಹಲವರ ಕಂಗಳಲ್ಲಿ ನೀರು.

ವಿಶ್ವವಿದ್ಯಾಲಯದ 102ನೇ ಘಟಿಕೋತ್ಸವದಲ್ಲಿ ಪುನೀತ್ ಪರವಾಗಿ ಅವರ ಪತ್ನಿ ಅಶ್ವಿನಿ ಉಕ್ಕುವ ಭಾವನೆಗಳನ್ನು ಅದುಮಿಟ್ಟುಕೊಂಡು ಗೌರವ ಡಾಕ್ಟರೇಟ್ ಸ್ವೀಕರಿಸಿದರು. ಪದವಿ ಪ್ರದಾನ ಮಾಡಿದ ರಾಜ್ಯಪಾಲ ಥಾವರಚಂದ್ ಗೆಹಲೋತ್, ಪುನೀತ್ ಅವರ ನಟನೆ ಹಾಗೂ ಸಮಾಜ ಸೇವಾ ಕಾರ್ಯ ಶ್ಲಾಘಿಸಿದರು. 'ಅವರ ನಿಸ್ವಾರ್ಥ ಸೇವೆಯು ಯುವ ಪೀಳಿಗೆಗೆ ಪ್ರೇರಣೆಯಾಗಲಿದೆ' ಎಂದರು.

46 ವರ್ಷಗಳ ಹಿಂದೆ ನಟ ಡಾ.ರಾಜ್‌ಕುಮಾರ್ ಅವರಿಗೆ ಇದೇ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿತ್ತು. ಈಗ ಅವರ ಪುತ್ರ ಪುನೀತ್ ಅವರಿಗೆ ಒಲಿದಿದೆ. ಆ ಗೌರವ ಸ್ವೀಕರಿಸಿ ಖುಷಿಪಡಲು ಅವರೇ ಇಲ್ಲ. ಆದರೆ, ಅವರ ಅಭಿಮಾನಿಗಳು ಜೋರು ಕರತಾಡನದ ಮೂಲಕ ಸಂಭ್ರಮಿಸಿದರು. ತಮಗೆ ಬಂದಷ್ಟೇ ಖುಷಿಪಟ್ಟರು.

ರಾಜ್‌ಗೂ 47, ಪುನೀತ್‌ಗೂ 47: ಅಶ್ವಿನಿ ಬದಲಿಗೆ ಘಟಿಕೋತ್ಸವ ವೇದಿಕೆಯಲ್ಲಿ ಮಾತನಾಡಿದ ರಾಘವೇಂದ್ರ ರಾಜ್‌ಕುಮಾರ್, 'ಜೀವನ ಒಂದು ಚಕ್ರ. 1976ರಲ್ಲಿ ಗೌರವ ಡಾಕ್ಟರೇಟ್ ಸ್ವೀಕರಿಸಿದಾಗ ಅಪ್ಪಾಜಿಗೆ 47 ವರ್ಷ. ಆಗ ಪುನೀತ್ 9 ತಿಂಗಳ ಮಗು. ಇದೀಗ ಆ ಗೌರವಕ್ಕೆ ಭಾಜನರಾಗಿರುವ ಪುನೀತ್‌ಗೂ 47 ವರ್ಷ' ಎಂದರು.

'ಹೂವಿನ ಜೊತೆ ನಾರು ಸ್ವರ್ಗ ಸೇರಿದಂತೆ ತಮ್ಮನಿಂದಾಗಿ ನಾವು ಕೂಡ ಧನ್ಯರಾಗಿದ್ದೇವೆ. ವಿಶ್ವವಿದ್ಯಾಲಯ ದೇಗುಲವಿದ್ದಂತೆ, ಇಲ್ಲಿ ಆಸೀನರಾಗಿರುವ ಎಲ್ಲರೂ ದೇವರ ರೀತಿ ಕಾಣುತ್ತಿದ್ದೀರಿ. ವಿಶ್ವವಿದ್ಯಾಲಯವು ಡಾಕ್ಟರೇಟ್ ನೀಡಿ ನಮ್ಮ ಜವಾಬ್ದಾರಿ ಹೆಚ್ಚಿಸಿದೆ' ಎಂದರು. ಪುನೀತ್ ಪುತ್ರಿ ವಂದಿತಾ, ರಾಘವೇಂದ್ರ ರಾಜ್‌ಕುಮಾರ್ ಪತ್ನಿ ಮಂಗಳಾ, ಇಬ್ಬರು ಪುತ್ರರು ಸಂಬಂಧಿಕರು ಈ ವಿಶೇಷ ಸಂದರ್ಭಕ್ಕೆ ಸಾಕ್ಷಿಯಾದರು.

ವಿಜ್ಞಾನಿ ಡಾ.ವಿ.ಕೆ.ಆತ್ರೆ ಹಾಗೂ ಜಾನಪದ ಕಲಾವಿದ ಎಂ.ಮಹದೇವ ಸ್ವಾಮಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

> **ಹೊಟ್ಟೆಪಾಡಿಗಾಗಿ ಹಳ್ಳಿ ಹಳ್ಳಿ ತಿರುಗಿ ಕಥೆ ಹೇಳುತ್ತಿದ್ದೆ, ಹಾಡು ಹಾಡುತ್ತಿದ್ದೆ. ಈ ಕಥೆ, ಹಾಡು ನನಗೆ ಈ ಗೌರವ ತಂದುಕೊಟ್ಟಿವೆ**
> **ಎಂ.ಮಹದೇವಸ್ವಾಮಿ**, ಜನಪದ ಕಲಾವಿದ

> **ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತೆ ನೀಡಬೇಕು. ವಿಶ್ವದರ್ಜೆಯ ಸೌಲಭ್ಯ ಬೇಕಿದ್ದು, ಸರ್ಕಾರ ಅಥವಾ ಇತರ ಮೂಲಗಳಿಂದ ಹೆಚ್ಚಿನ ಹೂಡಿಕೆ ಮಾಡಬೇಕಿದೆ**
> **ಡಾ.ವಿ.ಕೆ.ಆತ್ರೆ**, ವಿಜ್ಞಾನಿ

ಪುನೀತ್, ಪಾರ್ವತಮ್ಮ ಹೆಸರಲ್ಲಿ ಚಿನ್ನದ ಪದಕ

'ಪಾರ್ವತಮ್ಮ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಹೆಸರಲ್ಲಿ ಮೈಸೂರು ವಿಶ್ವವಿದ್ಯಾಲಯದ ಇಬ್ಬರು ರ‍್ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ತಲಾ ಒಂದು ಚಿನ್ನದ ಪದಕ ನೀಡುವುದಾಗಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಘೋಷಿಸಿದ್ದಾರೆ' ಎಂದು ಘಟಿಕೋತ್ಸವದ ನಿರೂಪಕ ಪ್ರೊ.ಸಿ.ನಾಗಣ್ಣ ಹೇಳಿದರು.

ಮುಂದಿನ ವರ್ಷದಿಂದ, 'ಲಲಿತ ಕಲೆ' ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆಯುವವರಿಗೆ ಪುನೀತ್ ಪದಕ ಹಾಗೂ 'ವ್ಯವಹಾರ ನಿರ್ವಹಣೆ' ವಿಷಯದಲ್ಲಿ ಪಾರ್ವತಮ್ಮ ಪದಕ ಲಭಿಸಲಿದೆ.

ಕೋವಿಡ್ ಮತ್ತು ರ‍್ಯಾಂಕ್!

ಬೆಂಗಳೂರಿನಲ್ಲಿ ನೆಲೆಸಿರುವ, ಚಿತ್ರದುರ್ಗ ಜಿಲ್ಲೆಯ ದೊಡ್ಡಸಿದ್ದವನಹಳ್ಳಿಯ ಗಣೇಶ್ ನಾಡಿಗ, ಎಂ.ಟೆಕ್ (ನಗರ ಹಾಗೂ ಪ್ರಾದೇಶಿಕ ಯೋಜನೆ) ಕೋರ್ಸ್‌ನಲ್ಲಿ 16 ಚಿನ್ನದ ಪದಕಕ್ಕೆ ಭಾಜನರಾದರು.

'ಪ್ರಾಧ್ಯಾಪಕರು ಹಾಗೂ ಪೋಷಕರು ಈ ಸಾಧನೆಗೆ ಕಾರಣ. ಮೈಸೂರಲ್ಲಿ ಚಿಕ್ಕಪ್ಪನ ಮನೆಯಲ್ಲಿದ್ದು ಓದುತ್ತಿದ್ದೆ. ಕೋವಿಡ್ ಕಾರಣ ಬೆಂಗಳೂರಿನಿಂದಲೇ ಆನ್‌ಲೈನ್ ಪಾಠ ಕೇಳಿದೆ. ಎಂ.ಟೆಕ್ ಎರಡನೇ ವರ್ಷದ ಆರಂಭದಲ್ಲಿ ನನಗೆ, ತಂದೆ ಎನ್. ವಿ.ಧನಂಜಯ ರೆಡ್ಡಿ, ತಾಯಿ ಎ.ತನುಜಾ ಕೊರೋನಾ ಸೋಂಕಿಗೆ ಒಳಗಾದೆವು. ತುಂಬಾ ಕಷ್ಟ ಎದುರಾಯಿತು. ಹಟ ಹಿಡಿದು ಓದಿದೆ' ಎಂದರು.

'ನಗರ ಯೋಜನೆ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುವ ಗುರಿ ಇಟ್ಟುಕೊಂಡಿದ್ದು, ಬೆಂಗಳೂರು ಸಂಚಾರ ವ್ಯವಸ್ಥೆಗೆ ಪರಿಹಾರ ಕಂಡುಕೊಳ್ಳಬೇಕೆಂಬ ಕನಸಿದೆ' ಎಂದು ಹೇಳಿದರು.

ಇವರು ಮಂಡಿಸಿದ 'ಇಂಟಿಗ್ರೇಷನ್ ಆಫ್ ಲ್ಯಾಂಡ್ ಯೂಸ್ ಅಂಡ್ ಟ್ರಾನ್ಸ್‌ಪೋರ್ಟೇಷನ್ ಫಾರ್ ಸೆಟಲೈಟ್ ಟೌನ್ ರಿಂಗ್ ರೋಡ್ ಆಫ್ ಬೆಂಗಳೂರು' ಮಹಾಪ್ರಬಂಧಕ್ಕೆ ಈಚೆಗೆ ನವದೆಹಲಿಯ ಐಟಿಪಿಐ ಸಂಸ್ಥೆಯು ರಾಷ್ಟ್ರೀಯಮಟ್ಟದ ಪ್ರಶಸ್ತಿ ಘೋಷಿಸಿದೆ.

ಎಂ.ಎಸ್ಸಿ ಸಸ್ಯ ವಿಜ್ಞಾನ: 7 ಪದಕ ವಿಜೇತೆ ಲಮ್ಯಾ ಬೇಸರ

ಹಿಜಾಬ್: ಆಯ್ಕೆ ಅನಿವಾರ್ಯ ಏಕೆ?

• ಕೆ.ಓಂಕಾರ ಮೂರ್ತಿ

ಮೈಸೂರಿನಲ್ಲಿ ಮಂಗಳವಾರ ನಡೆದ ಮೈಸೂರು ವಿಶ್ವವಿದ್ಯಾಲಯದ 102ನೇ ಘಟಿಕೋತ್ಸವದಲ್ಲಿ ಹೆಚ್ಚು ಪದಕ, ಪ್ರಶಸ್ತಿ ಪಡೆದ ಜೆ.ಎಂ.ಭಾವನಾ (ಎಂ.ಎಸ್ಸಿ ರಸಾಯನ ವಿಜ್ಞಾನ–19 ಪದಕ, 2 ಬಹುಮಾನ), ಪಿ.ಮಹದೇವಸ್ವಾಮಿ (ಎಂ.ಎ ಕನ್ನಡ–14 ಪದಕ, 3 ಬಹುಮಾನ), ಗಣೇಶ್ ನಾಡಿಗ (ಎಂ.ಟೆಕ್–16 ಪದಕ), ಶಾನೆಟ್ ಆ್ಯನ್ ಜೋನ್ಸ್ (ಬಿ.ಎ– 9 ಪದಕ, 4 ಬಹುಮಾನ), ವಿ.ತೇಜಸ್ವಿನಿ (ಬಿ.ಎ– 9 ಪದಕ, 10 ಬಹುಮಾನ), ಲಮ್ಯಾ ಮಜೀದ್ (ಎಂ.ಎಸ್ಸಿ ಸಸ್ಯ ವಿಜ್ಞಾನ– 7 ಪದಕ, 2 ಬಹುಮಾನ), ಡಿ.ಬಿ.ಲತಾ (ಎಂ.ಎ ಸಂಸ್ಕೃತ–6 ಪದಕ, 2 ಬಹುಮಾನ) ಹಾಗೂ ಕೆ.ಎಸ್.ಸುಮಿತಾ ಜೋಯಿಸ್ (ಎಂ.ಎ ಅರ್ಥಶಾಸ್ತ್ರ–6 ಪದಕ, 3 ಬಹುಮಾನ) ಇದ್ದಾರೆ

ಮೈಸೂರು: 'ಜೀವನ ಪದ್ಧತಿ ಹಾಗೂ ಶಿಕ್ಷಣ– ಇವೆರಡರಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿ ಎಂದು ಹೇಳಿರುವುದರಿಂದ ಬದುಕು ಅಯೋಮಯವಾಗಿದೆ. ಇಂಥ ಆಯ್ಕೆಯ ಅನಿವಾರ್ಯ ನಮಗೇಕೆ?'

–ಮೈಸೂರು ವಿಶ್ವವಿದ್ಯಾಲಯವು ಮಂಗಳವಾರ ಆಯೋಜಿಸಿದ್ದ ಘಟಿಕೋತ್ಸವದಲ್ಲಿ 7 ಸ್ವರ್ಣ ಪದಕ ಹಾಗೂ 2 ದತ್ತಿ ಬಹುಮಾನ ಪಡೆದ ಮಂಗಳೂರಿನ ಲಮ್ಯಾ ಮಜೀದ್ ಅವರ ಬೇಸರದ ನುಡಿಗಳಿವು. ಎಂ.ಎಸ್ಸಿ ಸಸ್ಯವಿಜ್ಞಾನದಲ್ಲಿ ಅವರು ಸಾಧನೆ ಮಾಡಿದ್ದಾರೆ.

'ಹಿಜಾಬ್ ಹಕ್ಕು ಕಸಿದುಕೊಂಡಿರುವುದು ನನ್ನ ಮನ ನೋಯಿಸಿದೆ. ಹಿಜಾಬ್ ಧರಿಸಿಯೇ ನಾನು ಶಾಲೆ–ಕಾಲೇಜಿಗೆ ಹೋಗಿದ್ದೆ. ನನ್ನಂಥ ಹಲವು ಹುಡುಗಿಯರ ಅವಕಾಶವನ್ನೇ ಈಗ ಕಿತ್ತುಕೊಂಡು ಅನ್ಯಾಯವೆಸಗಿದ್ದಾರೆ ಎಂಬ ಭಾವನೆ ಮೂಡಿದೆ' ಎಂದರು.

ಅವರಿಗೆ ವಿಜ್ಞಾನಿಯಾಗುವ ಗುರಿ ಇದೆ. 'ಎಸ್ಸೆಸ್ಸೆಲ್ಸಿ ಬಳಿಕದ ತರಗತಿಗಳಿಗಾದರೂ ಹಿಜಾಬ್ ಧರಿಸಲು ಅವಕಾಶ ನೀಡಬೇಕಿತ್ತು. ನಮ್ಮದು ಒಂದು ಜೀವನ ಶೈಲಿಯಿದ್ದು, ಅದನ್ನು ಗೌರವಿಸಬಹುದೆಂದು ನಿರೀಕ್ಷೆ ಇಟ್ಟುಕೊಂಡಿದ್ದೆ. ಆದರೆ, ಹೊರಗಡೆ ಹಿಜಾಬ್ ಧರಿಸಿ ಓಡಾಡುವವರನ್ನು ಅನುಮಾನದಿಂದ ನೋಡುವಂತಹ ಪರಿಸ್ಥಿತಿ ತಂದಿಟ್ಟಿದ್ದಾರೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಬಿಪಿಸಿಎಲ್‌ನ ನಿವೃತ್ತ ಉದ್ಯೋಗಿಯಾಗಿರುವ ತಂದೆ ಎಸ್.ಎ.ಮಜೀದ್ ಹಾಗೂ ತಾಯಿ ಆಫಿಯಾ ಶೇಕ್ ಮಗಳ ಮಾತಿಗೆ ದನಿಗೂಡಿಸಿದರು. ಈ ದಂಪತಿಯ ಇನ್ನಿಬ್ಬರ ಪುತ್ರಿಯರು ಎಂಜಿನಿಯರ್‌ಗಳಾಗಿದ್ದಾರೆ.

ಎಂ.ಎ ಕನ್ನಡದಲ್ಲಿ 14 ಚಿನ್ನದ ಪದಕ ಹಾಗೂ 3 ನಗದು ಬಹುಮಾನ ಪಡೆದ ಚಾಮರಾಜನಗರ ಜಿಲ್ಲೆ ನಾಗವಳ್ಳಿಯ ಪಿ.ಮಹದೇವಸ್ವಾಮಿ ಬಡತನದಲ್ಲೇ ಬೆಳೆದವರು. ಬಿಡುವು ಸಿಕ್ಕಾಗ ಗಾರೆ ಕೆಲಸ, ಪೇಂಟಿಂಗ್ ಮಾಡಿ ಸಂಪಾದನೆಯನ್ನು ವ್ಯಾಸಂಗಕ್ಕೆ ಬಳಸಿಕೊಳ್ಳುತ್ತಿದ್ದಾರೆ.

'ದಲಿತ ಸಮುದಾಯದ ನಾನು ಸಂಕಷ್ಟದಲ್ಲೇ ಬೆಳೆದೆ. ತಂದೆ ತೀರಿಕೊಂಡ ಮೇಲೆ ಶಾಲೆ ಬಿಟ್ಟು ಕೆಲಸಕ್ಕೆ ಹೋಗಬೇಕೆಂದು ಒತ್ತಡವಿತ್ತು. ತಾಯಿ ನಾಗಮ್ಮ ಕೂಲಿ ಮಾಡಿ ಓದಿಸಿದರು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಕೆಎಎಸ್ ಅಧಿಕಾರಿಯಾಗಬೇಕೆಂಬ ಆಸೆ ಇದೆ. ದಾನಿಗಳ ನೆರವು ಅಗತ್ಯವಿದೆ' ಎಂದು ಮಹದೇವಸ್ವಾಮಿ ನುಡಿದರು.

ಬಿ.ಎ ಕೋರ್ಸ್‌ನಲ್ಲಿ 9 ಚಿನ್ನದ ಪದಕ, 10 ದತ್ತಿ ಬಹುಮಾನ ಪಡೆದಿರುವ ಕೊಳ್ಳೇಗಾಲ ತಾಲ್ಲೂಕಿನ ವಿ.ತೇಜಸ್ವಿನಿ ಪಿಯುಸಿಗೆ ಬರುವಷ್ಟರಲ್ಲಿ ತಂದೆ–ತಾಯಿಯನ್ನು ಕಳೆದುಕೊಂಡು ವಿದ್ಯಾಭ್ಯಾಸ ತೊರೆಯಲು ಮುಂದಾಗಿದ್ದರು. ಕಣ್ಣೀರಿಡುತ್ತಲೇ ಸಾಧನೆ ಹಂಚಿಕೊಂಡ ಅವರು, 'ಪೋಷಕರಿದ್ದರೆ ನನ್ನ ಸಾಧನೆ ಕಂಡು ಖುಷಿಪಡುತ್ತಿದ್ದರು. ಈಗ ಹಾಸ್ಟೆಲ್‌ನಲ್ಲಿದ್ದು ಓದುತ್ತಿದ್ದೇನೆ. ಐಎಎಸ್ ಅಧಿಕಾರಿಯಾಗಬೇಕೆಂಬ ಗುರಿ ಇದೆ' ಎಂದರು.

ಅಫ್ಘಾನಿಸ್ತಾನದ ವಿದ್ಯಾರ್ಥಿ ಸೈಯದ್ ಕುದ್ರತ್ ಹಾಶಿಮಿ, ಎಲ್‌ಎಲ್‌ಎಂ–ಅಂತರರಾಷ್ಟ್ರೀಯ ಕಾನೂನು ವಿಭಾಗದಲ್ಲಿ ರ‍್ಯಾಂಕ್ ಪಡೆದಿದ್ದಾರೆ. 'ತಾಯ್ನಾಡಿನಲ್ಲಿ ಕುಟುಂಬ ಕಷ್ಟದ ಪರಿಸ್ಥಿತಿಯಲ್ಲಿ ಬದುಕುತ್ತಿದೆ. ಯುದ್ಧದ ಪರಿಸ್ಥಿತಿ, ಹಿಂಸಾಚಾರ ನೆಲೆಸಿದೆ. ಮುಂದೇನಾಗುತ್ತೋ ಗೊತ್ತಿಲ್ಲ. ನನಗೆ ಇಲ್ಲಿ ವಿದ್ಯಾರ್ಥಿವೇತನ ಸಿಗುತ್ತಿದ್ದು, ವಿದ್ಯಾಭ್ಯಾಸ ಸಾಧ್ಯವಾಗಿದೆ' ಎಂದು ಹೇಳಿದರು.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕೆನರಾ ಬ್ಯಾಂಕ್ Canara Bank Syndicate (ಭಾರತ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಭವನ ಮತ್ತು ಆಸ್ತಿ ವಿಭಾಗ, ವೃತ್ತ ಕಚೇರಿ, ಮಂಗಳೂರು, ಬಲ್ಮಠ ರಸ್ತೆ, ಮಂಗಳೂರು– 575001.
ಫೋನ್: 0824-2863322/2863325,ಇ–ಮೇಲ್: pecomlr@canarabank.com
ಪ್ರಸ್ತಾವನೆಗಾಗಿ ವಿನಂತಿ ಆಹ್ವಾನ ಸೂಚನೆ (ಆರ್‌ಎಫ್‌ಪಿ)–ಇ–ಟೆಂಡರಿಂಗ್
ಮಂಗಳೂರು ವೃತ್ತದ ಅಡಿಯಲ್ಲಿನ ವಿವಿಧ ಶಾಖೆಗಳಿಗೆ ದರ್ಜೆ ಎ ಟಿಆರ್‌ಟಿಎಲ್ ಜ್ಯುವೆಲ್ ಸೇಫ್‌ಗಳ ಪೂರೈಕೆ
ಕೆನರಾ ಬ್ಯಾಂಕ್ ಮಂಗಳೂರು ವೃತ್ತದ ವ್ಯಾಪ್ತಿಯಲ್ಲಿನ ವಿವಿಧ ಶಾಖೆಗಳಿಗೆ ದರ್ಜೆ–ಎ ಟಿಆರ್‌ಟಿಎಲ್ (ಟಾರ್ಚ್ ರೆಸಿಸ್ಟೆಂಟ್ ಟೂಲ್ ರೆಸಿಸ್ಟೆಂಟ್) ಜ್ಯುವೆಲ್ ಸೇಫ್ (ಆಭರಣ ಸುರಕ್ಷೆ) ಗಳನ್ನು ಇ–ಟೆಂಡರಿಂಗ್ ಮೂಲಕ ಖರೀದಿಸಲು ಉದ್ದೇಶಿಸಲಾಗಿದೆ. ಆನ್‌ಲೈನ್ ಬಿಡ್‌ನಡಿ (ಎರಡು ಬಿಡ್ ಪರಿಕಲ್ಪನೆ ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್) ಅಡಿಯಲ್ಲಿ ರಿವರ್ಸ್ ಹರಾಜಿನ ಜೊತೆಗೆ ಆರ್‌ಎಫ್‌ಪಿಯಲ್ಲಿ ವಿವರಿಸಿದಂತೆ ಚಿನ್ನಾಭರಣಗಳ ಸುರಕ್ಷಿತ ಪೂರೈಕೆಗಾಗಿ ಮಾನ್ಯತೆ ಹೊಂದಿರುವ ಬಿಐಎಸ್ ಪರವಾನಿಗೆ ಹೊಂದಿರುವ ಮೂಲ ತಯಾರಕರು/ಅಧಿಕೃತ ಡೀಲರ್‌ಗಳಿಂದ ಬಿಡ್ ಆಹ್ವಾನಿಸಲಾಗಿದೆ.
ಆರ್‌ಎಫ್‌ಪಿ ಮತ್ತು ಇತರೆ ವಿವರಗಳನ್ನು ನಮ್ಮ ಬ್ಯಾಂಕ್‌ನ ವೆಬ್‌ಸೈಟ್ https://canarabank.com/tenders.aspx, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://canarabank.abcprocure.com ಮತ್ತು ಸಿಪಿಪಿ ಪೋರ್ಟಲ್ www.eprocure.gov.in ನಿಂದ ಪಡೆದುಕೊಳ್ಳಬಹುದು. ಅರ್‌ಎಫ್ ಪಿ ಸಲ್ಲಿಸಲು ಕೊನೆಯ ದಿನಾಂಕ 13.04.2022 ಸಂಜೆ 3.00ಗಂಟೆ. ಮುಂದಿನ ಸಂವಹನ, ತಿದ್ದುಪಡಿ ಮತ್ತು ಬದಲಾವಣೆಗಳಿದ್ದಲ್ಲಿ ಬ್ಯಾಂಕ್‌ನ ವೆಬ್‌ಸೈಟ್ https://canarabank.com/tenders.aspx ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://canarabank.abcprocure.com ನಲ್ಲಿ ಮಾತ್ರ ನೀಡಲಾಗುವುದು. ಯಾವುದೇ ಕಾರಣ ನೀಡದೆ ಆಫರ್‌ಗಳನ್ನು ಸ್ವೀಕರಿಸುವ/ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.
ಸ್ಥಳ: ಮಂಗಳೂರು, ದಿನಾಂಕ: 23.03.2022 ಸಹಿ/– ಉಪ ಮಹಾಪ್ರಬಂಧಕರು, ವೃತ್ತ ಕಚೇರಿ, ಮಂಗಳೂರು

ಕರ್ನಾಟಕ ಸರ್ಕಾರ
ಜಲಸಂಪನ್ಮೂಲ ಇಲಾಖೆ
ಸಮಗ್ರ ಜಲಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರ (ACIWRM)
#1/1, 1ನೇ ಮಹಡಿ, ಕೆ.ಎಸ್.ಎಫ್.ಸಿ. ಭವನ, ತಿಮ್ಮಯ್ಯರಸ್ತೆ, ಬೆಂಗಳೂರು–560052.
ಸಂ.:ACIWRM/CE/MP/2021-22/05 ದಿನಾಂಕ: 18.03.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ಸರ್ಕಾರದ ಜಲಸಂಪನ್ಮೂಲ ಇಲಾಖೆಯ ಸಮಗ್ರ ಜಲಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರ (ಎಸಿ.ಐ.ಡಬ್ಲ್ಯೂ.ಆರ್.ಎಮ್) ಕಚೇರಿಗೆ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಅಥವಾ ಏಜೆನ್ಸಿಯಿಂದ ಅಥವಾ ಸಂಸ್ಥೆಯಿಂದ ವಿವಿಧ ವರ್ಗಗಳ ಮಾನವ ಸಂಪನ್ಮೂಲ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆಗಳನ್ನು ಒದಗಿಸುವ 'Supply of Manpower personnel of different category to ACIWRM, Bengaluru' ಕೆಲಸಕ್ಕೆ K/W-4 ನಮೂನೆಯಲ್ಲಿ ಶೇಕಡವಾರು ಟೆಂಡರ್‌ಗಳನ್ನು ದ್ವಿ–ಲಕೋಟೆಗಳಲ್ಲಿ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ದಿನಾಂಕ:19.03.2022 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: https://eproc.karnataka.gov.in ಗೆ ಭೇಟಿ ನೀಡಿ. ಟೆಂಡರ್‌ಗಳನ್ನು http://eproc.karnataka.gov.in ನಲ್ಲಿ ಎಲೆಕ್ಟ್ರಾನಿಕ್ ರೂಪದಲ್ಲಿ ಮಾತ್ರ ಸಲ್ಲಿಸಬಹುದಾಗಿದೆ. ಆಸಕ್ತ ಗುತ್ತಿಗೆದಾರರು/ಏಜೆನ್ಸಿ/ಸಂಸ್ಥೆಯವರು ಭಾಗವಹಿಸಲು ವಿವರಗಳನ್ನು https://www.waterresources.kar.nic.in ಮತ್ತು https://aciwrm.karnataka.gov.in ರಲ್ಲಿಯೂ ಲಭ್ಯವಿರುತ್ತದೆ. ಯಾವುದೇ ಸ್ಪಷ್ಟೀಕರಣ / ಹೆಚ್ಚಿನ ಮಾಹಿತಿಯು ಅವಶ್ಯವಿದ್ದಲ್ಲಿ registrar@aciwrm.org ಗೆ ಇ–ಮೇಲ್ ಕಳುಹಿಸಿ ಪಡೆಯಬಹುದಾಗಿದೆ.
ಸೂಚನೆಗಳು: 1) ಯಾವುದೇ ಬದಲಾವಣೆಗಳಾದಲ್ಲಿ ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. 2) ಇತರೆ ಯಾವುದೇ ನಿಯಮ ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. 3) ಹೆಚ್ಚುವರಿ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಎಸಿ.ಐ.ಡಬ್ಲ್ಯೂ.ಆರ್.ಎಮ್ ಕಚೇರಿಗೆ ಸಂಪರ್ಕಿಸಬಹುದು.
ಸಹಿ/– ನಿಬಂಧಕರು/ಪ್ರಧಾನ ಇಂಜಿನಿಯರ್ ಎಸಿಐಡಬ್ಲ್ಯೂಆರ್‌ಎಂ, ಬೆಂಗಳೂರು
DIPR/CP/3846/Yakshi/2021-22

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ
ನಂ 10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–560052.
ದೂರವಾಣಿ ಸಂಖ್ಯೆ: 080– 22250017 /22250018 ಇ–ಮೇಲ್ mdkmvstdc@gmail.com
WEB: http://www.karnataka.gov.in/kmvstdcl/Pages/home.aspx
ಸಂ. ಕಮವಾಪಪಅನಿನಿ/ಅಲೆಮಾರಿ ವಿಭಾಗ/ಪಪ್ರ/ಸಿ.ಆರ್.–01/2021–22 ದಿನಾಂಕ: 21–3–2022
ಮರು ವಿಸ್ತರಣಾ ಪ್ರಕಟಣೆ
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಡಿ 2021–22ನೇ ಸಾಲಿಗೆ ಪರಿಶಿಷ್ಟ ಪಂಗಡದ ಅಲೆಮಾರಿ, ಅರೆಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳಿಗೆ, ದೌರ್ಜನ್ಯ ಸಂತ್ರಸ್ತರಿಗೆ, ಮಾಜಿ ದೇವದಾಸಿಯರಿಗೆ, ಅಂತರ್ಜಾತಿ ವಿವಾಹಿತ ದಂಪತಿಗಳಿಗೆ, ವಿಧವೆಯರು/ಒಂಟಿ ಮಹಿಳೆಯರು, ಮೀನುಗಾರರಿಗೆ ವಸತಿ ರಹಿತ ನಿವೇಶನ (ಸೈಟ್) ಹೊಂದಿದ ಫಲಾಪೇಕ್ಷಿಗಳಿಗೆ ಮನೆ ನಿರ್ಮಿಸಿ ಕೊಡಲು ಮನೆ (ವಸತಿ) ನಿರ್ಮಾಣ ಯೋಜನೆಯಡಿಯಲ್ಲಿ ಫಲಾಪೇಕ್ಷಿಗಳಿಂದ ಉಚಿತ ಅರ್ಜಿಗಳನ್ನು ಆಹ್ವಾನಿಸುತ್ತಿದ್ದು, ವಸತಿ ಘಟಕ ವೆಚ್ಚ ಗ್ರಾಮಾಂತರ ಪ್ರದೇಶದಲ್ಲಿ ರೂ.3.50 ಲಕ್ಷ, ನಗರ ಪ್ರದೇಶಕ್ಕೆ ರೂ.4.00 ಲಕ್ಷಗಳಾಗಿರುತ್ತದೆ.
ನಿಗಮದಿಂದ ವಿವಿಧ ಯೋಜನೆಗಳಡಿ ಸೌಲಭ್ಯ ಪಡೆಯಲು ಇರಬೇಕಾದ ಸಾಮಾನ್ಯ ಅರ್ಹತೆಗಳು:
(1) ಅರ್ಜಿದಾರರು ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯಕ್ಕೆ ಸೇರಿದವರಾಗಿರಬೇಕು ಹಾಗೂ ಕಳೆದ ಕನಿಷ್ಠ 15 ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. (2) ಅರ್ಜಿದಾರರು 18 ವರ್ಷ ಮೇಲ್ಪಟ್ಟವರಾಗಿರಬೇಕು. (3) ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನವು ಗ್ರಾಮೀಣ ಪ್ರದೇಶವಾದಲ್ಲಿ ರೂ.98,000/– ಹಾಗೂ ನಗರ ಪ್ರದೇಶವಾದಲ್ಲಿ ರೂ.1,20,000/– ಮಿತಿಯೊಳಗಿರಬೇಕು. (4) ಅರ್ಜಿದಾರರ ಕುಟಂಬದ ಯಾವುದೇ ಸದಸ್ಯರು ಸರ್ಕಾರಿ / ಅರೆ ಸರ್ಕಾರಿ ಸಂಸ್ಥೆಯಲ್ಲಿ ನೌಕರಿಯಲ್ಲಿರಬಾರದು. (5) ಜಿಲ್ಲೆಯಲ್ಲಿ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಈಗಾಗಲೇ ನೋಂದಣಿ ಮಾಡಿಕೊಂಡಿರುವ ಪರಿಶಿಷ್ಟ ಪಂಗಡದ ಅಂಗವಿಕಲ ಫಲಾನುಭವಿಗಳ ಲಭ್ಯವಿರುವ ಪಟ್ಟಿಯಿಂದ ಅಂಗವಿಕಲರನ್ನು ನೇರವಾಗಿ ಸಂದರ್ಶನ ಮಾಡಿ ಶೇ.5ರಷ್ಟು ಮೀಸಲಾತಿಯನ್ನು ನೀಡಿ ಸೌಲಭ್ಯ ಕಲ್ಪಿಸಲಾಗುವುದು.
ಫಲಾಪೇಕ್ಷಿಯು ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:
(1) ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವ ಚಿತ್ರ, (2) ಜಾತಿ ಪ್ರಮಾಣ ಪತ್ರ, (3) ಕುಟುಂಬದ ವಾರ್ಷಿಕ ವರಮಾನ ಪತ್ರ, (4) ಪಡಿತರ ಚೀಟಿ / ಆಧಾರ್ ಕಾರ್ಡ್/ ಮತದಾರರ ಗುರುತಿನ ಚೀಟಿ, (5) ಅರ್ಜಿದಾರರು ಹೊಂದಿರುವ ಬ್ಯಾಂಕ್ ಉಳಿತಾಯ ಖಾತೆಯ ವಿವರಗಳನ್ನೊಳಗೊಂಡ ಪಾಸ್ ಬುಕ್‌ನ ಮೊದಲ ಪುಟದ ಪ್ರತಿ ಮತ್ತು (6) ನಿರಾಕ್ಷೇಪಣಾ ಪತ್ರ, ಖಾತೆ, ಸೈಟ್/ನಿವೇಶನಕ್ಕೆ ಸಂಬಂಧಪಟ್ಟ ದಾಖಲಾತಿಗಳು.
ಸಂಪರ್ಕಿಸಬಹುದಾದ ನಿಗಮದ ಜಿಲ್ಲಾ ಕಛೇರಿಗಳ ದೂರವಾಣಿ ಸಂಖ್ಯೆಗಳು:
(1) ಬೆಂಗಳೂರು ನಗರ: 080–22220867, (2) ಬೆಂಗಳೂರು ಗ್ರಾಮಾಂತರ: 080–22220867, (3) ಬಾಗಲಕೋಟೆ: 08354–235016, (4) ಬೀದರ್: 8482233147, (5) ವಿಜಯಪುರ: 08352–276743, (6) ಬಳ್ಳಾರಿ: 08392–245551, (7) ಬೆಳಗಾವಿ: 0831–2451252, (8) ಚಾಮರಾಜನಗರ: 08226–223856, (9) ಚಿಕ್ಕಮಗಳೂರು: 08262–220717, (10) ಚಿತ್ರದುರ್ಗ: 08194–221055, (11) ಚಿಕ್ಕಬಳ್ಳಾಪುರ: 08156–277161, (12) ದಾವಣಗೆರೆ: 08192–233309, (13) ಧಾರವಾಡ: 0836–2460855, (14) ಗದಗ: 08372–239557, (15) ಕಲಬುರ್ಗಿ: 08472–221331, (16) ಹಾಸನ: 08172–235336, (17) ಹಾವೇರಿ: 08375–234408, (18) ಕಾರವಾರ: 08382–226903, (19) ಕೋಲಾರ: 08152–222561, (20) ಕೊಪ್ಪಳ: 08539–221176, (21) ಮಂಡ್ಯ: 08232–221157, (22) ಮಂಗಳೂರು: 0824–2420114, (23) ಮಡಿಕೇರಿ: 08272–229983, (24) ಮೈಸೂರು: 0821–2430022, (25) ರಾಯಚೂರು: 08532–220486, (26) ರಾಮನಗರ: 080–29782111, (27) ಶಿವಮೊಗ್ಗ: 08182–276776, (28) ತುಮಕೂರು: 0816–2280165, (29) ಉಡುಪಿ: 0820–2574884 ಮತ್ತು (30) ಯಾದಗಿರಿ: 08473–253271.
* ಆಫ್‌ಲೈನ್ ಅರ್ಜಿ ದಿನಾಂಕ: 15–03–2022 ರಿಂದ ಕೊನೆಯ ದಿನಾಂಕ: 31–03–2022 ರ ವರೆಗೆ ವಿಸ್ತರಿಸಲಾಗಿರುತ್ತದೆ.
* ಆನ್‌ಲೈನ್ ಅರ್ಜಿ ದಿನಾಂಕ: 15–03–2022 ರಿಂದ ಕೊನೆಯ ದಿನಾಂಕ: 31–03–2022 ರ ವರೆಗೆ ವಿಸ್ತರಿಸಲಾಗಿರುತ್ತದೆ.
ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಕಛೇರಿಯಿಂದ ಹಾಗೂ ನಿಗಮದ ವೆಬ್ ಸೈಟ್ www.karnataka.gov.in/kmvstdcl ನಿಂದ ಪಡೆಯಬಹುದು.
ಸಹಿ/–. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/3863/ಆಕಾರ್/21–22
ಕೋವಿಡ್–19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಂಗಳೂರು ವಿಶ್ವವಿದ್ಯಾನಿಲಯ
ಸಂಖ್ಯೆ:ಮವಿ/ಅಭಿವೃದ್ಧಿವಿಭಾಗ/ಇ–ಟೆಂಡರ್/ಡಿ9 ದಿನಾಂಕ: 22–03–2022
ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕಛೇರಿಗೆ, ಸಂಬಂಧಪಟ್ಟಂತೆ ಇ–ಟೆಂಡರ್ ಆಹ್ವಾನಿಸಿದ್ದು ಟೆಂಡರಿನ ವಿವರಗಳು ಕೆಳಗಿನಂತಿವೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್(E-procurement portal) ವೆಬ್‌ಸೈಟ್ https://eproc.karnataka.gov.in ನಿಂದ ಪಡೆಯಬಹುದಾಗಿದೆ.
Name of the tender: (1) Supply of Various minor Instruments required for the dept of Industrial Chemistry Mangalore University Mangalagangothri. (ED/2021-22/IND540) Category: Goods, Date of publish through E-procurement: 19/03/2022 11:54:04
(2) Supply of Major Lab Instruments required for the dept of Industrial Chemistry Mangalore University Mangalagangothri (ED/2021-22/IND541), Category: Goods, Date of publish through E-procurement: 19/03/2022 12:14:35
(3) Tender for providing catering services to Annual Convocation of Mangalore University Mangalagangothri (MU/ED/ACADEMIC SECTION/CONVOCATIONFOOD/22) Category: Service, Date of publish through E-procurement: 19/03/2022 18:14:15
ಸಹಿ/– ಕುಲಸಚಿವರು
DIPR/ADM/MCA/1191/21-22 dt. 22.03.2022

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1/ಡಿ.ಎಂ.ಎಫ್/ಟೆಂಡರು/2021–22/2158 ದಿನಾಂಕ:22.03.2022
ಟೆಂಡರು ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ ಡಿ.ಎಂ.ಎಫ್ ಯೋಜನೆ ಅಡಿಯಲ್ಲಿ ಅನುಮೋದನೆಗೊಂಡ ಕಟ್ಟಡ ನಿರ್ಮಾಣದ ಒಟ್ಟು 01 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.
ಟೆಂಡರ್ ನಮೂನೆಗಳನ್ನು www.eproc.karnataka.gov.in/e-portal/index.seam ಅಂತರ್ಜಾಲದಲ್ಲಿ ದಿನಾಂಕ 23.03.2022 ರಿಂದ 22.04.2022 ರಂದು ಸಂಜೆ 4.00 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ ದಿನಾಂಕ: 22.04.2022 ರ 16.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ ದಿನಾಂಕ: 25.04.2022 ರಂದು 17.00 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (www.eproc.karnataka.gov.in/e-portal/index.seam) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/894/ಎಂಸಿಎ/2021–22

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ReF:1)No: EE /KNNL/UTP/Dn/TND/Bhagavathi Tank/PB-1/2021-22/ 3472 Date:- 18-03-2022
ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ
(ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರ ರಿಂದ ಲೆಕ್ಕ ಶೀರ್ಷಿಕೆ 4701ರಡಿ 1 ಭಗವತಿಕೆರೆಯ ಮರು ನಿರ್ಮಾಣಕಾಮಗಾರಿಯಟೆಂಡರ್‌ನ್ನು ಉಲ್ಲೇಖಿತ ಪತ್ರ (1) ರನ್ವಯ ಆಹ್ವಾನಿಸಲಾಗಿದೆ
ಸದರಿ ಕಾಮಗಾರಿಯ ಮೊತ್ತ ರೂ. 476.93 ಲಕ್ಷ(GSTಸೇರಿ) ಹಾಗೂಇ.ಎಮ.ಡಿ. ಮೊತ್ತ ರೂ. 4.80ಲಕ್ಷ ಇರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (ಹಿಂದಿರುಗಿಸಲಾಗದ್ದು) www.eproc.karnataka.gov.inನಲ್ಲಿ ನೋಡಿಕೊಂಡು ತುಂಬತಕ್ಕದ್ದು. ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ: 22–03–2022ರಿಂದ 30–03–2022ಸಂಜೆ 5.30ರ ವರೆಗೆ ಇರುವುದು. ಪ್ರೀ–ಬಿಡ್ ಸಭೆಯನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರುಇವರ ಕಛೇರಿಯಲ್ಲಿ ದಿ: 28–03–2022ರಂದು ಬೆಳಿಗ್ಗೆ 11.30 ಗಂಟೆಗೆ, ಟೆಂಡ್‌ರ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 29–03–2022ಸಂಜೆ 5.30ರ ವರೆಗೆ ಇರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 30–03–2022 ಸಂಜೆ 5.30ರ ವರೆಗೆ ಸಲ್ಲಿಸತಕ್ಕದ್ದು.ದಿನಾಂಕ 31–03–2022ರಂದು ಸಂಜೆ 5.35ರ ಗಂಟೆಗೆ ಆರ್ಥಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು.
ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ/ ದಿನ ಪತ್ರಿಕೆಗಳಲ್ಲಿಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ. (08373) 267071 ಕ್ಕೆ ಸಂಪರ್ಕಿಸುವುದು. ಷರತ್ತು ಬದ್ಧ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.
1436

ಕರ್ನಾಟಕ ಸರಕಾರ
ಕಾರ್ಯಕಾರಿ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ
E-mail : eepwdudp02@gmail.com
ನಂ/ಪಿಡಬ್ಲ್ಯೂಡಿ/ಯುಡಿಎನ್/ಎನ್‌ಐಟಿ–76/2021–22/ಎಇ2 ದಿನಾಂಕ: 21.03.2022
ಅಲ್ಪಾವಧಿ ಟೆಂಡರು ಪ್ರಕಟಣೆ
ಈ ಕೆಳಕಂಡ ಕಾಮಗಾರಿಗೆ 'ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್' https://www.eproc.Karnataka.gov.in" ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ.
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 28.03.2022ರ ಸಂಜೆ –5.30 ಘಂಟೆವರೆಗೆ
ಅರ್ಹ ಗುತ್ತಿಗೆದಾರರು: 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಟೆಂಡರು ಸಲ್ಲಿಸಬಹುದಾಗಿದೆ.
ಕಾಮಗಾರಿಯ ಹೆಸರು: ವಿರಾಜ್‌ಪೇಟೆ – ಬೈಂದೂರು –27ರ ರಸ್ತೆ ಕಿ.ಮೀ. 361.40 ರಿಂದ 362.00ರ ವರೆಗೆ ಅಭಿವೃದ್ಧಿ. (150069). ಟೆಂಡರಿಗಿರಿಸಿದ ಅಂದಾಜು ಮೊಬಲಗು: ರೂ. 64.46 ಲಕ್ಷ. ಹೆಚ್ಚಿನ ವಿವರಗಳಿಗೆ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ
ವಾಸಾಇಂ/ಸನಿಉ/ಎಂಸಿಎ/775/21–22 ದಿ: 22.03.2022

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಮುಖ್ಯ ಇಂಜಿನಿಯರ್‌ರವರ ಕಛೇರಿ, ಗ್ರಾ.ಕು.ನೀ. & ನೈ.ಇ.,
1ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009. ದೂರವಾಣಿ : 080–22533700 ಇ–ಮೇಲ್ : cerws14@gmail.com
ಸಂ. ಗ್ರಾಕುನೀ&ನೈಇ/ಮುಇಂ/377/2021–22 ದಿನಾಂಕ : 17–03–2022
ಟೆಂಡರ್ ಪ್ರಕಟಣೆ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕರ್ನಾಟಕ ಸರ್ಕಾರ, ಇವರು ಒಂದು ಗ್ರಾಮ ಕುಡಿಯುವ ನೀರು ಯೋಜನೆಗಳಿಗಾಗಿ ಸ್ವಯಂಚಾಲಿತ ಡೋಸಿಂಗ್ ವ್ಯವಸ್ಥೆಯೊಂದಿಗೆ ಎಲೆಕ್ಟ್ರೋ–ಕ್ಲೋರಿನೇಟರ್‌ಗಳ ಸ್ಥಾಪನೆ ಮತ್ತು ಓ&ಎಂ ಗಾಗಿ ಓಇಎಂ / ತಯಾರಕರು / ಆಮದುದಾರರು / ಎಂಓಯು ಹೊಂದಿರುವವರ ಎಂಪ್ಯಾನೆಲ್‌ಮೆಂಟ್‌ಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಅರ್ಹ ಬಿಡ್ಡುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಬಿಡ್‌ಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : 02–04–2022ರಂದು ಸಂಜೆ 5.30 ಗಂಟೆಗೆ ಮುಂಚಿತವಾಗಿ. ಬಿಡ್–ಪೂರ್ವ ಸಭೆಯನ್ನು ದಿನಾಂಕ : 25–03–2022ರಂದು ಬೆಳಿಗ್ಗೆ 11.00 ಗಂಟೆಗೆ ನಡೆಸಲಾಗುವುದು. ಇಎಂಡಿ ಮೊತ್ತ : ರೂ.20,000/–.
ಸಹಿ/– ಮುಖ್ಯ ಇಂಜಿನಿಯರ್, ಗ್ರಾಕುನೀ&ನೈಇ, ಬೆಂಗಳೂರು.
ವಾ.ಸಂ.ಇ/ಬೆಂ.ನಗರ/ಶ್ರೇಷ್ಠ/3827/2021–22
ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ
KSFIC WOOD IS GOOD
(ಕರ್ನಾಟಕ ರಾಜ್ಯ ಸರ್ಕಾರದ ಒಂದು ಸಂಸ್ಥೆ)
"ಪ್ರಾದೇಶಿಕ ವ್ಯವಸ್ಥಾಪಕರ ಕಛೇರಿ" 45ಎ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು –560026,
ದೂರವಾಣಿ: 080–26748301/26745072 ಇ–ಮೇಲ್: mailksfic@gmail.com
ಸಂಖ್ಯೆ: ಕೆಎಸ್‌ಎಫ್‌ಐಸಿ/ಟಿಇಸಿ/ಸಿಆರ್/ಟೆಂಡರ್/2022–23 ದಿನಾಂಕ: 16.03.2022
ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)
2022–23ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ, ಟಿಂಬರ್‌ಯಾರ್ಡ್ ಘಟಕಕ್ಕೆ ಅವಶ್ಯವಿರುವ ಕಚ್ಚಾ ವಸ್ತುಗಳಾದ ಸಿ.ಐ.ಲೆಗ್ಸ್ [2ನೇ ಕರೆ], ಸಾನ್ ಸೈಜಸ್ [ವಿವಿಧ ಜಾತಿ ಮತ್ತು ಅಳತೆಯ ಕೊಯ್ದ ಮರಗಳು] ಹಾಗೂ ಬೀಟೆ ಮರದ ಪೀಠೋಪಕರಣ [ರೋಸ್ ವುಡ್ ಫರ್ನೀಚರ್] ಗಳನ್ನು ಖರೀದಿಸಲು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು www.eproc.karnataka.gov.in ರಲ್ಲಿ ಪಡೆದುಕೊಂಡು ಇಚ್ಛೆಯುಳ್ಳವರು ದಿನಾಂಕ: 29.03.2022 ರ ಸಂಜೆ 4.00 ಘಂಟೆಯೊಳಗೆ ಸಲ್ಲಿಸುವುದು. ಇದಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಪ್ರಾದೇಶಿಕ ವ್ಯವಸ್ಥಾಪಕರು, ಕ.ರಾ.ಅ.ಕೈ.ನಿ.ನಿಯಮಿತ, ಟಿಂಬರ್‌ಯಾರ್ಡ್ ಘಟಕ, ಬೆಂಗಳೂರು
ವಾ.ಸಾ.ಸಂ.ಇ/ವಾ.ಪ್ರ/3848/ಅಡ್ವಿಟ್/2021–22

"ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ"
(ಕರ್ನಾಟಕ ಸರಕಾರದ ಒಂದು ಉದ್ದಿಮೆ)
ಕಾರ್ಯಪಾಲಕ ಅಭಿಯ0ತರರ ಕಾರ್ಯಾಲಯ ಕೃಭಾಜನಿನಿ, ಆಬದ0ಕಾ ವಿಭಾಗ, ಹುನಗು0ದ ದೂರವಾಣಿ: 08351 261110.
ಸಂ:ಕೃಭಾಜನಿನಿ/ಎಆರ್‌ಬಿಸಿ–ವಿ/ಟಿಎನ್‌ಡಿ/2021–22/1683 ದಿನಾಂಕ:21/03/2022
ಸಂಕ್ಷಿಪ್ತ ಟೆಂಡರ್ ಪ್ರಕಟಣೆ ಕರೆ
(ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ ನಿ., ಬೆಂಗಳೂರು/ಆಲಮಟ್ಟಿ ಇವರ ಪರವಾಗಿ, ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಬದಂಕಾ ವಿಭಾಗ, ಹುನಗುಂದ, ಈ ವಿಭಾದಡಿಯ ಅನುಮೋದಿತ ಕಾರ್ಯಕ್ರಮದಡಿಯಲ್ಲಿ ಬರುವ SCP&TSP ನ ಕನಿಷ್ಠ ಮೊತ್ತ ರೂ. 8.90, ಗರಿಷ್ಠ 80.30 ಲಕ್ಷಗಳ 10 ಕಾಮಗಾರಿಗಳಾದ 1) I.No-21569, 2) I.No-21570, 3) I.NO-21571, 4) I.No-21572, 5) I.No-21573, 6) I.No-21574, 7) I.No-21575, 8) I.No-21576, 9) I.No-21577, & 10) I.No-21578, ಕಾಮಗಾರಿಗಳಿಗೆ ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ನೊಂದಾಯಿತ ಕೆ.ಪಿ.ಡಬ್ಲ್ಯೂ.ಡಿ/ಕೆಟಗರಿ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು EMD ಯನ್ನು E-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದಿನಾಂಕ: 22.03.2022 ರಿಂದ 06.04.2022 ರ ಸಂಜೆ 5.00 ಗಂಟೆ ವರೆಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 08.04.2022 ಬೆಳಿಗ್ಗೆ 11.45 ಘಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 11.04.2022 ಬೆಳಿಗ್ಗೆ 11.45 ಘಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ www.eprocurement.kar.nic.in website ಮೂಲಕ ಅಥವಾ ಈ ಕೆಳಗಿನ ವಿಭಾಗ ಕಚೇರಿಯಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/–ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ. ಆಬದಂಕಾ ವಿಭಾಗ, ಹುನಗುಂದ.
DIPR/BGK/RO-NO-626/MCA/2021-22

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ನಂ. 1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ:10/2021–22 ದಿನಾಂಕ:21.03.2022
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಹಾಸನ ಜಿಲ್ಲೆ, ಇವರಿಂದ ಕಾವೇರಿ ನೀರಾವರಿ ನಿಗಮದಲ್ಲಿ ನೋಂದಾಯಿತವಾಗಿರುವ ನಿಗಧಿತ ದರ್ಜೆಯ ಗುತ್ತಿಗೆದಾರರಿಂದ ಈ ಅಧಿಸೂಚನೆಯಲ್ಲಿ ತಿಳಿಸಿರುವಂತೆ 1 ಕಾಮಗಾರಿಗೆ ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್‌ಗಿಟ್ಟ ಮೊತ್ತ ರೂ. 1581.64 ಲಕ್ಷಗಳಾಗಿರುತ್ತದೆ. ಅರ್ಜಿ ಬೆಲೆ E-portal ನಂತೆ ಇರುತ್ತದೆ. ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಅರ್ಹ ಗುತ್ತಿಗೆದಾರರು ಅಂತರ್ಜಾಲದಲ್ಲಿ ದಿನಾಂಕ 24–03–2022 ರಂದು ಬೆಳಿಗ್ಗೆ 11.00 ಗಂಟೆಯಿಂದ ದಿನಾಂಕ 04–04–2022 ರ ಮಧ್ಯಾಹ್ನ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು WWW.eproc.karnataka.gov.in ನಲ್ಲಿ ಡೌನ್ ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ಅಪ್ ಲೋಡ್ ಮಾಡಬಹುದಾಗಿದೆ. ಟೆಂಡರ್ ಅನ್ನು ದಿನಾಂಕ 05–04–2022 ರಂದು ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ,ಗೊರೂರು ಕಚೇರಿಯಲ್ಲಿ ತೆರೆಯಲಾಗುವುದು, ಹೆಚ್ಚಿನ ಮಾಹಿತಿ ಹಾಗೂ ಇತರೆ ನಿಬಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಎಕ್ಸಿಕ್ಯೂಟಿವ್ ಇಂಜಿನಿಯರ್, ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾವಿಭಾಗ, ಗೊರೂರು
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/861/2021–22

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ
ಕ್ರಸಂ/ಪಂರಾಇಂವಿ/ಹಾವೇರಿ/ಪಿಬಿ–4/ಟೆಂಡರ್/2021–22/6674 ದಿನಾಂಕ: 21–03–2022
ಟೆಂಡರ ಪ್ರಕಟಣೆ ನಂ: 41/2021–22 (2ನೇ ಕರೆ)
(E.GOK ಇ–ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)
ಲೆಕ್ಕ ಶೀರ್ಷಿಕೆ 5054 ಯೋಜನೆಯಡಿ ರಾಣೇಬೆನ್ನೂರ ತಾಲೂಕಿನ ರಸ್ತೆ ಕಾಮಗಾರಿಗೆ ಟೆಂಡರ ಕರೆಯಲಾಗಿದೆ.
(1) ರಾಣೇಬೆನ್ನೂರ ತಾ: ಅಸುಂಡಿ–ಸವರವಂದ ರಸ್ತೆ ಅಭಿವೃದ್ಧಿ (INDENT89023/Call-2)
(1) ಇ–ಪ್ರಕ್ಯೂರಮೆಂಟ್ ಮೂಲಕ ಟೆಂಡರಗಳನ್ನು ಡೌನಲೋಡ್ ಮಾಡುವ ದಿನಾಂಕ : 21–03–2022 (2) ಟೆಂಡರ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರವರ ಕಛೇರಿಯಲ್ಲಿ ದಿನಾಂಕ : 23–03–2022 11:00 ಗಂಟೆಗೆ (3) ಇ–ಪ್ರಕ್ಯೂರಮೆಂಟ್ ಮೂಲಕ ಭರ್ತಿಮಾಡಿದ ಟೆಂಡರಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 29–03–2022ರ 16:00 ಗಂಟೆವರೆಗೆ (4) ಇ–ಪ್ರೋಕ್ಯೂರಮೆಂಟ್ ತಾಂತ್ರಿಕ ಮತ್ತು ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ : 30–03–2022ರ 17:00 ಗಂಟೆಗೆ (5) ಇ–ಪ್ರೋಕ್ಯೂರಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ : 04–04–2022ರ 10:30 ಗಂಟೆಗೆ
ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-GOK ಇ–ಪ್ರಕ್ಯೂರಮೆಂಟ್ ಪ್ಲಾಟ್‌ಫಾರಂನಲ್ಲಿ www.eproc.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಹಾವೇರಿ
ವಾಸಾಸಂಇ/ಹಾವೇರಿ/ಎಂ.ಸಿ.ಎ/554/2021–22

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯ ನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ನಂ. 2ನೇ ವಿಭಾಗ, ಜಾವಾ ಫ್ಯಾಕ್ಟರಿ ರಸ್ತೆ, ಹೈವೇ ಸರ್ಕಲ್ ಹತ್ತಿರ, ಮೈಸೂರು-570001
ದೂರವಾಣಿ: 0821-2410999, ಇ–ಮೇಲ್ksdb_mys2@yahoo.com
ವೆಬ್‌ಸೈಟ್ : www.karnataka.gov.in/ksdb
ಸಂಖ್ಯೆ: ಕಕೊಅಮ/ಕಾನಿ.ಇಂ/ಮೈ–ವಿ–2/ಎಪಿ2021–22/ಐಎಫ್‌ಟಿ/2021–22 ದಿನಾಂಕ: 18–03–2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ದ್ವಿ–ಲಕೋಟೆ ಪದ್ಧತಿ (ಕೆಡಬ್ಲ್ಯೂ–4) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಕಾರ್ಯನಿರ್ವಾಹಕ ಇಂಜಿನಿಯರ್ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ನಂ.2ನೇ ವಿಭಾಗ, ಮೈಸೂರು ಇವರು ಮಂಡಳಿಯ ಆಯುಕ್ತರು, ಕಕೊಅಮ ರವರ ಪರವಾಗಿಮಂಡ್ಯ ನಗರದ ಹಾಲಹಳ್ಳಿ ಸರ್ವೆ ನಂ.14 ಮತ್ತು 16ರಲ್ಲಿ ರಾಜೀವ್ ಆವಾಸ್ ಯೋಜನೆಯಡಿ ನಿರ್ಮಿಸಲಾಗಿರುವ ವಸತಿ ಸಮುಚ್ಚಯದಲ್ಲಿ ಮುಖ್ಯ ರಸ್ತೆ ಮತ್ತು ಅಡ್ಡರಸ್ತೆಗಳಿಗೆ ಡಾಂಬರೀಕರಣ, ಸಿಸಿ ಚರಂಡಿ ಮತ್ತು ಸಿಸಿ ಕಲ್ವರ್ಟ್‌ಗಳ ನಿರ್ಮಾಣ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಕಾಮಗಾರಿಯ ಕನಿಷ್ಠ ಅಂದಾಜು ಮೊತ್ತ ರೂ.177.95 ಲಕ್ಷ ಮತ್ತು ಗರಿಷ್ಠ ಅಂದಾಜು ಮೊತ್ತ ರೂ.2.67 ಲಕ್ಷ ಟೆಂಡರ್ ಪ್ರಕಟಣೆ, ವೇಳಾಪಟ್ಟಿ ಹಾಗೂ ಇತರೆ ವಿವರಗಳು ವೆಬ್‌ಸೈಟ್: https://www.eproc.karnataka.gov.in ನಲ್ಲಿ ಲಭ್ಯವಿರುತ್ತದೆ.

1	ಟೆಂಡರ್ ವಿಚಾರಣೆಗೆ ಕೊನೆಯ ದಿನಾಂಕ ಮತ್ತು ಸಮಯ	25–03–2022ರ ಸಂಜೆ 4.00 ಗಂಟೆಯವರೆಗೆ.
2	ಬಿಡ್ ಪೂರ್ವ ಸಭೆಯ ದಿನಾಂಕ	28–03–2022ರ ಬೆಳಿಗ್ಗೆ 11.00 ಗಂಟೆಗೆ.
3	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	29–03–2022ರ ಸಂಜೆ 4.00 ಗಂಟೆಯವರೆಗೆ.
4	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	31–03–2022ರ ಬೆಳಿಗ್ಗೆ 11.00 ಗಂಟೆಗೆ.
5	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	08–04–2022ರ ಬೆಳಿಗ್ಗೆ 11.00 ಗಂಟೆಗೆ.
6	ಟೆಂಡರ್‌ಗಳನ್ನು ತೆರೆಯುವ ಹಾಗೂ ಪ್ರಿ–ಬಿಡ್ ಕಾನ್ಫರೆನ್ಸ್ ನಡೆಯುವ ಸ್ಥಳದ ವಿಳಾಸ	ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಕಕೊಅಮ, 2ನೇ ವಿಭಾಗ , ಹೈವೇ ಸರ್ಕಲ್ ಹತ್ತಿರ, ಜಾವಾ ಫ್ಯಾಕ್ಟರಿ ರಸ್ತೆ, ಮೈಸೂರು-570021

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಕಕೊಅಮ ನಂ. 2ನೇ ವಿಭಾಗ, ಮೈಸೂರು.
DIPR/CP/3855/Yakshi/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ~~₹599~~ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ–ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಡ್ಯೂಯೆಲ್ ಸಿಮ್ ದ್ವಂದ್ವಕ್ಕೀಗ ಕೊನೆಗಾಲ!

ಕೃಷ್ಣ ಭಟ್

ಹತ್ತು ವರ್ಷಗಳ ಹಿಂದೆ ಒಂದೇ ಸಿಮ್ ಫೋನ್‌ಗಳು ಎಂದರೆ ಜನರು ಮಾರು ದೂರ ಓಡುತ್ತಿದ್ದರು. ಎರಡು ಸಿಮ್ ಹಾಕುವ ಅವಕಾಶ ಇಲ್ಲದಿದ್ದರೆ ಜನರಿಗೆ ಅಂಥ ಫೋನ್‌ಗಳು ಎರಡನೇ, ಮೂರನೇ ಆಯ್ಕೆಯಾಗಿರುತ್ತಿದ್ದವು. ಡ್ಯೂಯೆಲ್ ಸಿಮ್ ಫೋನ್‌ಗಳು 2000ದ ಹೊತ್ತಿಗೇ ಬಂದಿದ್ದರೂ, ಭಾರತಕ್ಕೆ ಈ ಟೆಕ್ನಾಲಜಿ ಸ್ವಲ್ಪ ತಡವಾಗಿಯೇ ಬಂತು. ಚೀನಾದ ಸ್ಮಾರ್ಟ್‌ಫೋನ್‌ಗಳು ಕಾಲಿಡುತ್ತಿದ್ದ ಹಾಗೆಯೇ ಡ್ಯುಯೆಲ್ ಸಿಮ್ ಜನಪ್ರಿಯವಾಯಿತು. ನೆಟ್‌ವರ್ಕ್ ಸೇವಾ ಪೂರೈಕೆದಾರರ ಜೊತೆಗೆ ಒಪ್ಪಂದದ ಅಡಿಯಲ್ಲಿ ಸ್ಮಾರ್ಟ್‌ಫೋನ್‌ಗಳನ್ನು ಖರೀದಿ ಮಾಡುವ ವ್ಯವಸ್ಥೆ ಇಲ್ಲದ ದೇಶಗಳಲ್ಲಿ ಈ ಸಿಂಗಲ್ ಸಿಮ್ ಫೋನ್‌ಗಳು ಅಷ್ಟಾಗಿ ಜನಪ್ರಿಯವಾಗಲೇ ಇಲ್ಲ. ಇದಕ್ಕೆ ಕಾರಣಗಳು ಹಲವು. ಟೆಲಿಕಾಂ ಕಂಪನಿಗಳೇ ಈ ಡ್ಯೂಯೆಲ್ ಸಿಮ್ ಫೋನ್‌ಗಳಿಗೆ ಹೆಚ್ಚು ಒಲವು ತೋರಿದ್ದು ಒಂದಾದರೆ, ಒಂದೊಂದು ಕಂಪನಿಯೂ ವಿಭಿನ್ನ ರೀತಿಯ ಟ್ಯಾರಿಫ್ ಹೊಂದಿರುವುದು ಕೂಡ ಇದಕ್ಕೆ ಕಾರಣವಾಗಿತ್ತು. ಕೆಲವು ನೆಟ್‌ವರ್ಕ್ ಸೇವೆಯ ಪೂರೈಕೆದಾರ ಕಂಪನಿಗಳು ಕರೆಗೆ ದರ ಕಡಿಮೆ ಇಟ್ಟಿದ್ದರೆ, ಇನ್ನು ಕೆಲವು ಕಂಪನಿಗಳು ಡೇಟಾಗೆ ದರ ಕಡಿಮೆ ಇಟ್ಟಿದ್ದವು. ಹೀಗೆ ತಮ್ಮ ಅನುಕೂಲಕ್ಕೆ ಎರಡು ಸಿಮ್‌ಗಳನ್ನು ಖರೀದಿ ಮಾಡುತ್ತಿದ್ದರು. ಇನ್ನು ಗ್ರಾಮೀಣ ಪ್ರದೇಶಗಳಲ್ಲಿ, ನೆಟ್‌ವರ್ಕ್ ಸಮಸ್ಯೆಯಿಂದಾಗಿಯೂ ಜನರು ಎರಡು ಸಿಮ್ ಇಟ್ಟುಕೊಳ್ಳುತ್ತಿದ್ದರು.

> ನಿಮ್ಮ ಬಳಿ ಡ್ಯೂಯೆಲ್ ಸಿಮ್ ಇದೆಯೇ? ನೀವು ಒಂದೇ ಸಿಮ್ ಅನ್ನು ನಿಮ್ಮ ಎಲ್ಲ ವ್ಯವಹಾರಗಳಿಗೆ ಬಳಸುತ್ತಿದ್ದೀರಾ? ಹಾಗಾದರೆ, ಒಂದು ಸಿಮ್‌ಗೆ ತೆಗೆದು ಬದಿಗಿಡಿ. ಮುಂದೊಮ್ಮೆ ಟೆಲಿಕಾಂ ಕಂಪನಿಗಳ ಸೇವಾ ದರ ಇಳಿಕೆಯಾಗಲು ಶುರುವಾದಾಗ ಮತ್ತೊಂದು ಸಿಮ್ ಬಳಕೆ ಶುರು ಮಾಡಿಕೊಳ್ಳಬಹುದು. ಅಲ್ಲಿಯವರೆಗೆ, 'ಏಕಸಿಮ್ ವ್ರತಸ್ಥ'ರಾದರೆ ಯಾವ ತೊಂದರೆಯೂ ಆಗದು!

ಒಂದು ಹಂತಕ್ಕೆ ಎಲ್ಲ ನೆಟ್‌ವರ್ಕ್ ಸೇವೆ ಪೂರೈಕೆದಾರರೂ ಒಂದೇ ರೀತಿಯ ಟ್ಯಾರಿಫ್ ಶುರು ಮಾಡಿದ ಹಾಗೆ ಡ್ಯೂಯೆಲ್ ಸಿಮ್ ಫೋನ್‌ಗಳು ತಮ್ಮ ಜನಪ್ರಿಯತೆ ಕಳೆದುಕೊಳ್ಳ ಹತ್ತಿದವು. ಆದರೆ, 4ಜಿ ನೆಟ್‌ವರ್ಕ್ ಬರುತ್ತಿದ್ದಂತೆಯೇ ಮತ್ತೆ ನೆಟ್‌ವರ್ಕ್ ಸಮಸ್ಯೆ ಹಾಗೂ ಡೇಟಾ ಹಾಗೂ ಕರೆ ದರದ ಮಧ್ಯೆ ವ್ಯತ್ಯಾಸ ಕಾಣಿಸಿಕೊಂಡಿತು. ಆಗ ಮತ್ತೆ ಜನರು ಡೇಟಾಗೆ ಒಂದು, ಕರೆಗೆ ಇನ್ನೊಂದು ಸಿಮ್ ಇಟ್ಟುಕೊಳ್ಳಲು ಶುರು ಮಾಡಿದರು.

ಸದ್ಯ, ಎಲ್ಲ ಟೆಲಿಕಾಂ ಸೇವಾ ಪೂರೈಕೆದಾರರ ಪ್ಯಾಕೇಜ್‌ಗಳೂ ಒಂದೇ ರೀತಿ ಇವೆ! ಇನ್ನು ಮುಂದಿನ ದಿನಗಳಲ್ಲಿ ಟ್ಯಾರಿಫ್ ಏರಿಕೆಯಾಗುತ್ತಲೇ ಹೋಗುತ್ತದೆಯೇ ಹೊರತು ಕಡಿಮೆಯಂತೂ ಆಗದು. ನೆಟ್‌ವರ್ಕ್ ಕವರೇಜ್ ಸಮಸ್ಯೆಯೂ ಈಗ ಮೊದಲಿನಷ್ಟು ಇಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ವರ್ಕ್ ಫ್ರಮ್ ಹೋಮ್ ಶುರುವಾದ ಮೇಲೆ ಜನರು ಬ್ರ್ಯಾಡ್‌ಬ್ಯಾಂಡ್ ಖರೀದಿ ಮಾಡುತ್ತಿದ್ದಾರೆ. ಮೊಬೈಲ್ ನೆಟ್‌ವರ್ಕ್ ಪೂರೈಕೆದಾರರು ಒದಗಿಸುವ ಡೇಟಾ ಇಂಥವರಿಗೆ ಹೆಚ್ಚಾಗಿ ಬೇಕಾಗಿರುವುದಿಲ್ಲ. ಮನೆಯಿಂದ ಹೊರಗೆ ಹೋದಾಗಲಷ್ಟೇ ಡೇಟಾ ಬಳಕೆಯಾಗುತ್ತದೆ. ಅಲ್ಲದೆ, 4ಜಿ ವ್ಯಾಪಕವಾಗಿ ಬಳಕೆಗೆ ಬಂದ ನಂತರ ನೆಟ್‌ವರ್ಕ್ ಮೂಲಕ ಕರೆ ಮಾಡುವ ತಂತ್ರಜ್ಞಾನವೇ ಮರೆಯಾಗಿ, ಡೇಟಾ ಮೂಲಕ ಕರೆ ಮಾಡುವ ತಂತ್ರಜ್ಞಾನ ಚಾಲ್ತಿಗೆ ಬಂದಿದೆ. ಹೀಗಾಗಿ, ಈಗ ನಮಗೆ ಕರೆ ಮಾಡಲು, ಇಂಟರ್ನೆಟ್ ಬಳಸಲು ಡೇಟಾ ಇದ್ದರೆ ಸಾಕು ಎಂಬಂತಾಗಿದೆ. ಇದೆಲ್ಲ ಕಾರಣದಿಂದ ಜನರಿಗೆ ಎರಡನೇ ಸಿಮ್ ಹೊರೆಯಾಗುತ್ತಿದೆ. ಹೀಗಾಗಿ ಅವರು, ಎರಡನೇ ಸಿಮ್ ಅನ್ನು ಕಸದ ಬುಟ್ಟಿಗೆ ಎಸೆಯಲು ಆರಂಭಿಸಿದ್ದಾರೆ.

ಬಳಕೆದಾರರ ಸಂಖ್ಯೆಯಲ್ಲಿ ಇಳಿಕೆ

2019ರಿಂದಲೂ ಹೊಸ ಮೊಬೈಲ್ ಬಳಕೆದಾರರ ಸಂಖ್ಯೆಯಲ್ಲಿ ಇಳಿಕೆ ಕಾಣುತ್ತಿದೆ. 2019ರ ಮಾರ್ಚ್‌ನಲ್ಲಿ ಮೊಬೈಲ್ ಬಳಕೆದಾರರ ಸಂಖ್ಯೆ 2.18 ಕೋಟಿ ಕಡಿಮೆಯಾಗಿದೆ. ಇನ್ನು 2021ರ ಡಿಸೆಂಬರ್‌ನಲ್ಲಿ ಸುಮಾರು 1.29 ಕೋಟಿಯಷ್ಟು ಮೊಬೈಲ್ ಸಬ್‌ಸ್ಕ್ರೈಬರ್‌ಗಳ ಸಂಖ್ಯೆ ಇಳಿಕೆಯಾಗಿದೆ. ಈ ಇಳಿಕೆಗೆ ಮುಖ್ಯ ಕಾರಣವೇ, ಜನರು ತಮ್ಮ ಬಳಿ ಇರುವ ಎರಡು ಸಿಮ್‌ಗಳಲ್ಲಿ ಒಂದು ಸಿಮ್ ತೆಗೆದುಹಾಕಿ, ಒಂದೇ ಸಿಮ್ ಬಳಕೆ ಮಾಡಲು ಶುರು ಮಾಡಿದ್ದು ಎಂದು ಭಾರತೀಯ ಸೆಲ್ಯುಲರ್ ಆಪರೇಟರ್‌ಗಳ ಸಂಘಟನೆ (ಸಿಒಎಐ) ವಿಶ್ಲೇಷಿಸಿದೆ. ಹಾಗೆಂದ ಮಾತ್ರಕ್ಕೆ ಇಂಟರ್ನೆಟ್ ಬಳಕೆದಾರರ ಸಂಖ್ಯೆ ಕಡಿಮೆಯಾಗಿಲ್ಲ, ಅದು ಏರುತ್ತಲೇ ಇದೆ.

ಮುಂದಿನ ದಿನಗಳಲ್ಲಿ ಈ ಪ್ರವೃತ್ತಿ ಇನ್ನೂ ಹೆಚ್ಚುವ ಸಾಧ್ಯತೆ ಇದೆ. ಟ್ಯಾರಿಫ್ ಹೆಚ್ಚಾಗುತ್ತಿದ್ದ ಹಾಗೆ ಈ ಪ್ರವೃತ್ತಿ ಹೆಚ್ಚುವುದು ಸಹಜ. ಹಾಗಂತ ಈ ಟ್ರೆಂಡ್ ಕಾಯಂ ಏನಲ್ಲ. ಇನ್ನೊಂದೆರಡು ವರ್ಷಗಳಲ್ಲಿ 5ಜಿ ನೆಟ್‌ವರ್ಕ್ ಬರಲಿದೆ. ಅಲ್ಲಿಯವರೆಗೆ ಟೆಲಿಕಾಂ ನೆಟ್‌ವರ್ಕ್ ಸೇವೆ ಪೂರೈಸುವ ಕಂಪನಿಗಳು ಬೆಲೆ ಇಳಿಸುವ ಗೋಜಿಗೆ ಹೋಗುವುದಿಲ್ಲ. ಅವುಗಳಿಗೆ 5ಜಿ ನೆಟ್‌ವರ್ಕ್ ಅನ್ನು ಎಲ್ಲ ಕಡೆ ವಿಸ್ತರಿಸುವುದಕ್ಕೆ ಹಣ ಬೇಕಾಗಿದೆ. ಅಲ್ಲಿಯವರೆಗೆ ಟ್ಯಾರಿಫ್ ಏರಿಕೆಯಾಗುತ್ತಲೇ ಇರುತ್ತದೆ. ಆದರೆ, 5ಜಿ ನೆಟ್‌ವರ್ಕ್ ವ್ಯಾಪಿಸಲು ಆರಂಭಿಸಿದ ನಂತರ ಮತ್ತೊಮ್ಮೆ ಡೇಟಾ ದರದಲ್ಲಿ ಕಂಪನಿಗಳ ಮಧ್ಯೆ ವ್ಯತ್ಯಾಸ ಕಾಣಿಸಲು ಆರಂಭವಾಗುತ್ತದೆ. ಅಷ್ಟೇ ಅಲ್ಲ, ನೆಟ್‌ವರ್ಕ್ ಕವರೇಜ್‌ನಲ್ಲಿ ವ್ಯತ್ಯಾಸವೂ ಆಗುತ್ತದೆ. ಆಗ ಮತ್ತೊಮ್ಮೆ ಡ್ಯೂಯೆಲ್ ಸಿಮ್ ಬಳಕೆ ಶುರುವಾಗುತ್ತದೆ.

ಹೀಗಾಗಿ, ಎಲ್ಲ ಟೆಲಿಕಾಂ ಕಂಪನಿಗಳ ಡೇಟಾ ದರವೂ ಒಂದೇ ಆಗಿರುವ ಈ ಹೊತ್ತಿನಲ್ಲಿ ಎರಡು ಸಿಮ್ ಇಟ್ಟುಕೊಂಡು, ಎರಡೂ ಸಿಮ್‌ಗೂ ರಿಚಾರ್ಜ್ ಮಾಡುತ್ತ ಹಣ ಪೋಲು ಮಾಡುವುದು ಜಾಣತನವಲ್ಲ. ಸದ್ಯಕ್ಕೆ, ನಿಮ್ಮ ಬಳಿ ಡ್ಯೂಯೆಲ್ ಸಿಮ್ ಇದೆಯೇ? ನೀವು ಒಂದೇ ಸಿಮ್ ಅನ್ನು ನಿಮ್ಮ ಎಲ್ಲ ವ್ಯವಹಾರಗಳಿಗೆ ಬಳಸುತ್ತಿದ್ದೀರಾ? ಹಾಗಾದರೆ, ಒಂದು ಸಿಮ್‌ಗೆ ತೆಗೆದು ಬದಿಗಿಡಿ. ಮುಂದೊಮ್ಮೆ ಟೆಲಿಕಾಂ ಕಂಪನಿಗಳ ಸೇವಾ ದರ ಇಳಿಕೆಯಾಗಲು ಶುರುವಾದಾಗ ಮತ್ತೊಂದು ಸಿಮ್ ಬಳಕೆ ಶುರು ಮಾಡಿಕೊಳ್ಳಬಹುದು. ಅಲ್ಲಿಯವರೆಗೆ, 'ಏಕಸಿಮ್ ವ್ರತಸ್ಥ'ರಾದರೆ ಯಾವ ತೊಂದರೆಯೂ ಆಗದು! ❖

ಒನ್‌ಪ್ಲಸ್ ನಾರ್ಡ್ ಸಿಇ2

ವಿಶ್ವನಾಥ ಎಸ್.

ಒನ್‌ಪ್ಲಸ್ ಕಂಪನಿಯು ಮೇಲ್ಮಧ್ಯಮ ಬೆಲೆಯ (₹ 23 ಸಾವಿರದಿಂದ ₹ 30 ಸಾವಿರದೊಳಗೆ) ವಿಭಾಗದಲ್ಲಿ ಈಚೆಗಷ್ಟೇ ಒನ್‌ಪ್ಲಸ್ ನಾರ್ಡ್ ಸಿಇ2 ಸ್ಮಾರ್ಟ್‌ಫೋನ್ ಬಿಡುಗಡೆ ಮಾಡಿದೆ. ಇದರ ಬೆಲೆ ₹23,999. 'ನಾರ್ಡ್ ಸಿಇ'ಗೆ ಹೋಲಿಸಿದರೆ ಚಿತ್ರದ ಗುಣಮಟ್ಟ, ಬ್ಯಾಟರಿ ಬಾಳಿಕೆ, ಸಂಗ್ರಹಣ ಸಾಮರ್ಥ್ಯದ ದೃಷ್ಟಿಯಿಂದ ಉತ್ತಮವಾಗಿದೆ.

ವಿನ್ಯಾಸ, ಬಣ್ಣದಲ್ಲಿ ತಕ್ಷಣಕ್ಕೆ ಸೆಳೆಯುವಂತೆ ಇದನ್ನು ರೂಪಿಸಲಾಗಿದೆ. ನಾರ್ಡ್ ಸಿಇಗೆ ಹೋಲಿಸಿದರೆ ಸಂಗ್ರಹಣಾ ಸಾಮರ್ಥ್ಯ ಹೆಚ್ಚಿಸಲು ಮೈಕ್ರೊಎಸ್‌ಡಿ ಕಾರ್ಡ್ ಸ್ಲಾಟ್ ನೀಡಿರುವುದು ಇದರ ಪ್ಲಸ್ ಪಾಯಿಂಟ್‌ಗಳಲ್ಲಿ ಒಂದು. ಹಿಂಬದಿ ಕವರ್ ಅನ್ನು ಲೋಹಕ್ಕೆ ಬದಲಾಗಿ ಪ್ಲಾಸ್ಟಿಕ್‌ನಿಂದ ಮಾಡಲಾಗಿದೆ. ಹೀಗಾಗಿ ಇದರ ತೂಕವು 173 ಗ್ರಾಂ ಇದೆ. 6.43 ಇಂಚು ಅಮೊಎಲ್‌ಇಡಿ ಪರದೆ, 20:9 ಆಸ್ಪೆಕ್ಟ್ ರೇಶಿಯೊ ಹೊಂದಿದೆ. 90ಹರ್ಟ್ಸ್ ರಿಫ್ರೆಶ್ ರೇಟ್ ಇದೆ. ಕಾರ್ನಿಂಗ್ ಗೊರಿಲ್ಲಾ ಗ್ಲಾಸ್ 5 ಇದೆ. ರೀಡಿಂಗ್ ಮೋಡ್ ಇಲ್ಲ. ಆಂಡ್ರಾಯ್ಡ್ 11 ಆಧಾರಿತ ಆಕ್ಸಿಜನ್ ಒಎಸ್ 11 ಕಾರ್ಯಾಚರಣಾ ವ್ಯವಸ್ಥೆ ಹೊಂದಿದೆ. ಈಗಾಗಲೇ ಆಂಡ್ರಾಯ್ಡ್ 12 ಒಎಸ್ ಮಾರುಕಟ್ಟೆಯಲ್ಲಿ ಇದೆ. ಹೀಗಾಗಿ ಸಾಫ್ಟ್‌ವೇರ್ ದೃಷ್ಟಿಯಿಂದ ಇದು ಹಿನ್ನಡೆ.

ಕ್ಯಾಮೆರಾ: ಹಗಲು ಮತ್ತು ಮಂದ ಬೆಳಕಿನಲ್ಲಿ ಉತ್ತಮ ಫೊಟೊಗಳನ್ನು ತೆಗೆಯಬಹುದು. 20x ವರೆಗೂ ಜೂಮ್ ಮಾಡಬಹುದಾಗಿದ್ದು, ಚಿತ್ರದ ಗುಣಮಟ್ಟದಲ್ಲಿ ಯಾವುದೇ ಕೊರತೆ ಕಾಣುವುದಿಲ್ಲ. ಪ್ರತಿಯೊಂದು ವಿವರವೂ ಸ್ಪಷ್ಟವಾಗಿ ಸೆರೆಯಾಗುತ್ತದೆ. ಕ್ಲೋಸ್ ಅಪ್‌ನಲ್ಲಿ ತೆಗೆದ ಚಿತ್ರವು ಚೆನ್ನಾಗಿದೆ. ನೈಟ್‌ಸ್ಕೇಪ್ ಆಯ್ಕೆಯಲ್ಲಿ ಫೋಟೊ ತೆಗೆದ ಮೇಲೆ ಅದು ಮೂಡಲು 7–8 ಸೆಕೆಂಡ್ ಬೇಕಾಗುತ್ತದೆ. ಇಲ್ಲಿಯೂ ಗುಣಮಟ್ಟದಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ. ಸೆಲ್ಫಿಯೂ ಉತ್ತಮವಾಗಿ ಮೂಡಿಬರುತ್ತದೆ. ಮ್ಯಾಕ್ರೊ ಮೋಡ್ ಆಯ್ಕೆಯಲ್ಲಿ ಚಿತ್ರಗಳ ಗುಣಮಟ್ಟ ಅಷ್ಟು ಚೆನ್ನಾಗಿ ಬರುವುದಿಲ್ಲ.

ರಿವ್ಯುಗೆ ಬಂದಿದ್ದ ನಾರ್ಡ್‌ನ ಈ ಹಿಂದಿನ ಹ್ಯಾಂಡ್‌ಸೆಟ್‌ಗಳ ಒಎಸ್ ಸರಿಯಾಗಿ ಅಪ್‌ಡೇಟ್ ಆಗಿರಲಿಲ್ಲ. ಎರಡು ಬಾರಿ ಅಪ್‌ಡೇಟ್ ಆದ ಬಳಿಕ ಸ್ಮಾರ್ಟ್‌ಫೋನ್‌ನ ಕಾರ್ಯಸಾಮರ್ಥ್ಯದ ನೈಜ ಅನುಭವ ಸಾಧ್ಯವಾಗಿತ್ತು. ಆದರೆ, ಒನ್‌ಪ್ಲಸ್ ನಾರ್ಡ್ ಸಿಇ2ನಲ್ಲಿ ಆ ಸಮಸ್ಯೆ ನಿವಾರಿಸಲಾಗಿದೆ. ಬಾಕ್ಸ್‌ನಿಂದ ಫೋನ್ ತೆಗೆದು ಬಳಸಲು ಆರಂಭಿಸುತ್ತಿದ್ದಂತೆಯೇ ಇದರ ಎಲ್ಲಾ ವೈಶಿಷ್ಟ್ಯಗಳು ಸರಿಯಾಗಿ ಕೆಲಸ ಮಾಡಿವೆ.

ಬ್ಯಾಟರಿ: 4,500 ಎಂಎಎಚ್ ಬ್ಯಾಟರಿ ಹೊಂದಿದ್ದು, ವೇಗದ ಚಾರ್ಜಿಂಗ್‌ಗೆ 65ಡಬ್ಲ್ಯು ಸೂಪರ್ ವಿಒಒಸಿ ಚಾರ್ಜಿಂಗ್ ವ್ಯವಸ್ಥೆ ಇರುವುದು ಇದರ ಅತಿದೊಡ್ಡ ಪ್ಲಸ್ ಪಾಯಿಂಟ್. ಬ್ಯಾಟರಿ ಶೇ 100ರಷ್ಟು ಚಾರ್ಜ್ ಆಗಲು 20 ನಿಮಿಷ ತೆಗೆದುಕೊಂಡಿತು. ಸಾಮಾನ್ಯ ಬಳಕೆಯ ದೃಷ್ಟಿಯಿಂದ ನೋಡಿದರೆ ಒಮ್ಮೆ ಶೇ 100ರಷ್ಟು ಚಾರ್ಜ್ ಮಾಡಿದರೆ ಒಂದೂವರೆ ದಿನ ಬಳಸಬಹುದು. ಹೆಚ್ಚು ಸಮಯ ವಿಡಿಯೊ ನೋಡುವುದು, ಬ್ರೌಸ್ ಮಾಡಿದರೆ, ಗೇಮ್ ಆಡಿದರೆ 15 ಗಂಟೆಯವರೆಗೆ ಬ್ಯಾಟರಿಯು ಬಾಳಿಕೆ ಬರುತ್ತದೆ. ವಯರ್‌ಲೆಸ್ ಚಾರ್ಜಿಂಗ್ ಬೆಂಬಲಿಸುವುದಿಲ್ಲ. ❖

ವೈಶಿಷ್ಟ್ಯಗಳು

ಪರದೆ;6.43 ಇಂಚು 90 ಹರ್ಟ್ಸ್ ಫ್ಲ್ಯುಯೆಡ್ ಅಮೊಎಲ್‌ಇಡಿ ಡಿಸ್‌ಪ್ಲೇ
ಒಎಸ್: ಆಂಡ್ರಾಯ್ಡ್ 11 ಆಧಾರಿತ ಆಕ್ಸಿಜನ್ ಒಎಸ್ 11
ಪ್ರೊಸೆಸರ್: ಕ್ವಾಲ್ಕಂ ಸ್ನ್ಯಾಪ್‌ಡ್ರ್ಯಾಗನ್ 750ಜಿ
ಹಿಂಬದಿ ಕ್ಯಾಮೆರಾ:64 + 8 + 2 ಎಂಪಿ
ಸೆಲ್ಫಿ ಕ್ಯಾಮೆರಾ: 16 ಎಂಪಿ
ಬ್ಯಾಟರಿ: 4500 ಎಂಎಎಚ್
ಬೆಲೆ: 8 ಜಿಬಿ + 128ಜಿಬಿಗೆ ₹ ₹23,999

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೆಗಳು

ಎಸ್ಸೆಸ್ಸೆಲ್ಸಿ — ಗಣಿತಶಾಸ್ತ್ರ

ಎರಡು ಅಂಕಗಳ ಪ್ರಶ್ನೆಗಳು

1. ಈ ಕೆಳಗಿನ ರೇಖಾತ್ಮಕ ಜೋಡಿ ಸಮೀಕರಣವನ್ನು ಆದೇಶ ವಿಧಾನದಿಂದ ಬಿಡಿಸಿ. $x+y=8$: $2x-y=7$
2. $3x-1$, 15, $3x+1$ ಪದಗಳು ಸಮಾಂತರ ಶ್ರೇಢಿಯಲ್ಲಿದ್ದರೆ x ನ ಬೆಲೆ ಕಂಡುಹಿಡಿಯಿರಿ.
3. ಒಂದು ಸಮಾಂತರ ಶ್ರೇಢಿಯ 11ನೇ ಪದ 38, 16ನೇ ಪದ 73 ಆದರೆ 31ನೇ ಪದವನ್ನು ಕಂಡುಹಿಡಿಯಿರಿ.
4. $x^2-x-3=0$ ವರ್ಗ ಸಮೀಕರಣವನ್ನು ಸೂತ್ರ ಬಳಸಿ ಮೂಲಗಳನ್ನು ಕಂಡುಹಿಡಿಯಿರಿ.
5. $2x^2+kx+3=0$ ವರ್ಗ ಸಮೀಕರಣವು ಸಮನಾದ ಎರಡು ಮೂಲಗಳನ್ನು ಹೊಂದಿದ್ದರೆ k ಯ ಬೆಲೆಯನ್ನು ಕಂಡುಹಿಡಿಯಿರಿ.
6. (-1, 7) ಮತ್ತು (4,-3) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು 3:2ರ ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.
7. 8.4ಸೆಂ.ಮೀ. ಉದ್ದದ ರೇಖಾಖಂಡವನ್ನು 4:7 ಅನುಪಾತದಲ್ಲಿ ಜ್ಯಾಮಿತಿಯ ರಚನೆಯಿಂದ ವಿಭಾಗಿಸಿ.
8. $\cot 60^\circ + \operatorname{cosec} 60^\circ = x$ ಆದರೆ x ನ ಬೆಲೆ ಕಂಡುಹಿಡಿಯಿರಿ.

ಮೂರು ಅಂಕದ ಪ್ರಶ್ನೆಗಳು

1. ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶ ಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ ಎಂದು ಸಾಧಿಸಿ.
2. ನೇರ ವಿಧಾನದಿಂದ ಈ ಕೆಳಕಂಡ ದತ್ತಾಂಶಗಳ ಸರಾಸರಿಯನ್ನು ಕಂಡುಹಿಡಿಯಿರಿ.

ವರ್ಗಾಂತರಗಳು	ಆವೃತ್ತಿ
5–10	3
10–15	6
15–20	9
20–25	5
25–30	2

3. $\tan 6^\circ \tan 36^\circ \tan 84^\circ \tan 54^\circ \tan 45^\circ$ ಯ ಬೆಲೆಯನ್ನು ಕಂಡುಹಿಡಿಯಿರಿ.
4. ತ್ರಿಜ್ಯ 12 ಸೆಂ.ಮೀ. ಮತ್ತು ಓರೆ ಎತ್ತರ 15ಸೆಂ.ಮೀ. ಇರುವ ಶಂಕುವಿನ ಶೃಂಗದಿಂದ 3ಸೆಂ.ಮೀ ಸಣ್ಣ ಶಂಕುವನ್ನು ಕತ್ತರಿಸಿ ತೆಗೆದರೆ ಉಳಿದ ಶಂಕುವಿನ ಭಿನ್ನಕದ ಘನಫಲವನ್ನು ಕಂಡುಹಿಡಿಯಿರಿ.
5. ಒಂದು ಸಮಾಂತರ ಶ್ರೇಢಿಯಲ್ಲಿ 5 ಪದಗಳಿದ್ದು ಅವುಗಳ ಮೊತ್ತ 55 ಮತ್ತು ಶ್ರೇಢಿಯ ನಾಲ್ಕನೇ ಪದವು ಮೊದಲೆರಡು ಪದಗಳ ಮೊತ್ತಕ್ಕಿಂತ 5 ಹೆಚ್ಚಾಗಿದೆ. ಸಮಾಂತರ ಶ್ರೇಢಿಯ ಪದಗಳನ್ನು ಕಂಡುಹಿಡಿಯಿರಿ.
6. 4ಸೆಂ.ಮೀ. ತ್ರಿಜ್ಯದ ವೃತ್ತಕ್ಕೆ ಸ್ಪರ್ಶಕಗಳ ನಡುವಿನ ಕೋನ 45° ಇರುವಂತೆ ಒಂದು ಜೊತೆ ಸ್ಪರ್ಶಕಗಳನ್ನು ಎಳೆಯಿರಿ.
7. ಒಂದು ಕಿರುಪರೀಕ್ಷೆಯಲ್ಲಿ 32 ವಿದ್ಯಾರ್ಥಿಗಳು ಪಡೆದ ಅಂಕಗಳ ವಿವರ ಈ ಕೆಳಗಿನಂತಿದೆ. ಇದರ ಕಡಿಮೆ ವಿಧಾನದ ಓಜೀವ್ ಎಳೆಯಿರಿ.

ಅಂಕಗಳು	ವಿದ್ಯಾರ್ಥಿಗಳ ಸಂಖ್ಯೆ
0–4	4
4–8	6
8–12	10
12–16	8
16–20	4

8. ಚಿತ್ರದಲ್ಲಿ ಚೌಕದ ಬಾಹುವಿನ ಉದ್ದ ಪ್ರತಿ ವೃತ್ತವು ಉಳಿದ ಮೂರು ವೃತ್ತಗಳಲ್ಲಿ ಎರಡನ್ನು ಬಾಹ್ಯವಾಗಿ ಸ್ಪರ್ಶಿಸುವಂತೆ ಮತ್ತು ಕೇಂದ್ರವಾಗಿರುವ 4 ವೃತ್ತಗಳನ್ನು ಚಿತ್ರದಲ್ಲಿ ತೋರಿಸಿದಂತೆ ಎಳೆದಿದೆ. ಛಾಯೆಗೊಳಿಸಿದ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.



9. ಶೃಂಗಬಿಂದುಗಳು $A(7,6)$, $B(4,0)$ ಮತ್ತು $C(1,5)$ ಆಗಿರುವ ತ್ರಿಭುಜ ABCಯ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

ನಾಲ್ಕು ಅಂಕದ ಪ್ರಶ್ನೆಗಳು

1. $4cm$, $5cm$ ಮತ್ತು $6cm$ ಬಾಹುಗಳಿರುವ ಒಂದು ತ್ರಿಭುಜವನ್ನು ರಚಿಸಿ ನಂತರ ಇದಕ್ಕೆ ಸಮರೂಪವಾಗಿರುವ ಮತ್ತೊಂದು ತ್ರಿಭುಜವನ್ನು ರಚಿಸಿ. ರಚಿಸಬೇಕಾದ ಈ ತ್ರಿಭುಜದ ಪ್ರತಿಯೊಂದು ಬಾಹುವು ರಚಿಸಿದ ತ್ರಿಭುಜದ ಅನುರೂಪ ಬಾಹುಗಳ $\frac{2}{3}$ ರಷ್ಟು ಇರಬೇಕು.
2. ನಕ್ಷೆಯ ಸಹಾಯದಿಂದ ಬಿಡಿಸಿ.
   $4y+3x=100$
   $4y-19x=12$
3. 10ಮೀ ಎತ್ತರದ ಕಟ್ಟಡದ ಛಾವಣಿಯ ನಿಂತ ವ್ಯಕ್ತಿ ಹಾಗೂ ಎತ್ತರದಲ್ಲಿ ಹಾರಾಡುತ್ತಿರುವ ಗಾಳಿಪಟದ ನಡುವಿನ ದಾರದ ಉದ್ದವು 180ಮೀ. ಇದೆ. ದಾರವು ನೆಲದಿಂದ ಉನ್ನತ ಕೋನವು θ, $\tan\theta = \frac{3}{4}$ ಉಂಟಾದರೆ, ನೆಲದಿಂದ ಗಾಳಿಪಟವು ಎಷ್ಟು ಎತ್ತರದಲ್ಲಿದೆ?
4. ಒಂದು ಕಾರು 130ಕಿ.ಮೀ. ದೂರವನ್ನು ಸರಾಸರಿ 55ಕಿ.ಮೀ./ಗಂ. ವೇಗದಲ್ಲಿ ಕ್ರಮಿಸಿತು. ನಂತರ ಉಳಿದ ದೂರವನ್ನು 40ಕಿ.ಮೀ./ಗಂ. ವೇಗದಲ್ಲಿ ಕ್ರಮಿಸಿತು. ಪ್ರಯಾಣದ ಸಮಯವು 2.5ಗಂಟೆಯಾದರೆ ಕಾರು ಎಷ್ಟು ಸಮಯದವರೆಗೆ 40ಕಿ.ಮೀ./ಗಂ. ವೇಗದಲ್ಲಿ ಚಲಿಸಿತು?

ವಿ.ಸೂ: ಈವರೆಗೆ ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನಕ್ಕೆ ಗುರುತಿಸಿರುವ ಪಠ್ಯಗಳ ಟಿಪ್ಪಣಿಯೊಂದಿಗೆ ಮಾದರಿ ಪ್ರಶ್ನೋತ್ತರಗಳನ್ನು ನೀಡಲಾಗಿತ್ತು. ಈ ಪಠ್ಯಗಳು ಹಾಗೂ ಕೆಎಸ್‌ಇಇಬಿಯ ಮಾದರಿ ಪ್ರಶ್ನೆ ಪತ್ರಿಕೆ ಆಧರಿಸಿ ಮೇಲಿನ ಮಾದರಿ ಪ್ರಶ್ನೆಗಳನ್ನು ನೀಡಲಾಗಿದೆ. ವಿದ್ಯಾರ್ಥಿಗಳು ಹಿಂದಿನ ಸಂಚಿಕೆಯ ಪಠ್ಯಗಳನ್ನು ಆಧರಿಸಿ ಈ ಪ್ರಶ್ನೆಗಳನ್ನು ಬಿಡಿಸಬಹುದು.

ಶ್ರೀನಿವಾಸ ಡಿ. ಶೆಟ್ಟಿ, ಶಿಕ್ಷಣ ಸಂಯೋಜಕರು, ಬಿಇಒ ಕಚೇರಿ, ಅರಕಲಗೂಡು

ಮಾದರಿ ಪ್ರಶ್ನೋತ್ತರ — ಸಮೀಕರಣ

ಪಿಯುಸಿ — ಗಣಿತಶಾಸ್ತ್ರ

26) $\int \frac{dx}{(x+1)(x+2)}$ ಕಂಡುಹಿಡಿಯಿರಿ.

ಉತ್ತರ:– ಇಲ್ಲಿ ಅನುಕಲನೀಯ ಒಂದು ಶುದ್ಧ ಭಾಗಲಬ್ಧ ಭಿನ್ನರಾಶಿ, ಆದ್ದರಿಂದ ಆಂಶಿಕ ಭಿನ್ನರಾಶಿಯ ರೂಪವನ್ನು ಬಳಸಲಾಗುವುದು

$$\frac{1}{(x+1)(x+2)} = \frac{A}{x+1} + \frac{B}{x+2}$$ ಎಂದು ಬರೆಯುತ್ತೇವೆ.

ಇಲ್ಲಿ ವಾಸ್ತವಿಕ ಸಂಖ್ಯೆಗಳು A ಮತ್ತು B ಗಳನ್ನು ಸರಿ ಹೊಂದುವ ರೀತಿಯಲ್ಲಿ ಕಂಡುಹಿಡಿಯುತ್ತೇವೆ.

ಸಮೀಕರಣ (1)ರ ಪ್ರಕಾರ **1 = A (x + 2) + B (x + 1).** ಸಿಗುತ್ತದೆ.

xನ ಸಹ ಗುಣಕ ಮತ್ತು ಸ್ಥಿರ ಪದಗಳನ್ನು ಸಮಾಂತರಿಸಿದಾಗ

$$A+B=0$$

ಮತ್ತು $2A+B=1$

ಈ ಸಮೀಕರಣಗಳನ್ನು ಪರಿಹರಿಸಿದಾಗ $A=1$ ಮತ್ತು $B=-1$ ಸಿಗುತ್ತದೆ.

ಆದ್ದರಿಂದ ಅನುಕಲನೀಯವನ್ನು ಕೆಳಕಂಡಂತೆ ನೀಡಬಹುದು.

$$\frac{1}{(x+1)(x+2)} = \frac{A}{x+1} + \frac{B}{x+2}$$

$$\int \frac{dx}{(x+1)(x+2)} = \int \frac{dx}{x+1} - \int \frac{dx}{x+2}$$

$$= \log|x+1| - \log|x+2| + C$$

$$= \log\left|\frac{x+1}{x+2}\right| + C$$

27) $\int_0^2 (x^2+1)dx$ ನ್ನು ಮೊತ್ತದ ಮಿತಿಯನ್ನಾಗಿ ಕಂಡುಹಿಡಿಯಿರಿ.

ಉತ್ತರ:– ವ್ಯಾಖ್ಯೆಯಂತೆ

$$\int_a^b f(x)dx = (b-a)\lim_{n\to\infty}\frac{1}{n}[f(a)+f(a+h)+\ldots\ldots\ldots\ldots+f(a+n-1)h]$$

ಇಲ್ಲಿ $h = \frac{b-a}{n}$

A=0, b=2, f(x)=x2+1, $h = \frac{2-0}{n} = \frac{2}{n}$

ಆದುದರಿಂದ,

$$\int_0^2 (x^2+1)dx = 2\lim_{n\to\infty}\frac{1}{n}\left[f(0)+f\left(\frac{2}{n}\right)+f\left(\frac{4}{n}\right)+\ldots..+f\left(\frac{2(n-1)}{n}\right)\right]$$

$$= 2\lim_{x\to\infty}\frac{1}{n}\left[1+\left(\frac{2^2}{n^2}+1\right)+\left(\frac{4^2}{n^2}+1\right)+\ldots..+\left(\frac{(2n-2)^2}{n^2}+1\right)\right]$$

$$= 2\lim_{x\to\infty}\frac{1}{n}\left[\underbrace{(1+1+\ldots\ldots+1)}_{n\text{-terms}}+\frac{1}{n^2}(2^2+4^2+\ldots..+(2n-2)^2\right]$$

$$= 2\lim_{n\to\infty}\frac{1}{n}\left[n+\frac{2^2}{n^2}(1^2+2^2+\ldots.+(n-1)^2\right]$$

$$= 2\lim_{n\to\infty}\frac{1}{n}\left[n+\frac{4}{n^2}\frac{(n-1)n(2n-1)}{6}\right]$$

$$= 2\lim_{n\to\infty}\frac{1}{n}\left[n+\frac{2}{3}\frac{(n-1)(2n-1)}{n}\right]$$

$$= 2\lim_{n\to\infty}\left[1+\frac{2}{3}\left(1-\frac{1}{n}\right)\left(2-\frac{1}{n}\right)\right] = 2\left[1+\frac{4}{3}\right] = \frac{14}{3}$$

28) $\int_{\frac{-\pi}{4}}^{\frac{\pi}{4}} \sin^2 x dx$ ನ್ನು ಕಂಡುಹಿಡಿಯಿರಿ.

ಉತ್ತರ:– $\sin^2 x$ ಒಂದು ಸಮ ಉತ್ಪನ್ನವಾಗಿರುವುದರಿಂದ, $P_2(i)$ ನಿಂದ

$$\int_{\frac{-\pi}{4}}^{\frac{\pi}{4}} \sin^2 x\,dx = 2\int_0^{\frac{\pi}{4}} \sin^2 x\,dx$$

ಎಂದಾಗುತ್ತದೆ.

$$= 2\int_0^{\frac{\pi}{4}} \frac{(1-\cos 2x)}{2}dx = \int_0^{\frac{\pi}{4}}(1-\cos 2x)dx$$

$$= \left[x-\frac{1}{2}\sin 2x\right]_0^{\frac{\pi}{4}} = \left(\frac{\pi}{4}-\frac{1}{2}\sin\frac{\pi}{2}\right)-0 = \frac{\pi}{4}-\frac{1}{2}$$

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಗಣಿತಶಾಸ್ತ್ರದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಸುಭಾಷಿತ

ಕುರಿಯಂತೆ ನಡೆಯುವವರು ಬಹಳಷ್ಟು ಜನ. ಗುರಿಯಿಟ್ಟು ನಡೆಯುವವರು ತುಂಬಾ ಕಡಿಮೆ.

–ದ.ರಾ.ಬೇಂದ್ರೆ

ಸಾರಿಗೆ ಅವ್ಯವಸ್ಥೆ ಎತ್ತಿತೋರಿದ ದುರಂತ ಗ್ರಾಮೀಣ ಜನರ ಸಂಕಟ ನಿವಾರಿಸಿ

ತುಮಕೂರು ಜಿಲ್ಲೆಯ ಪಾವಗಡದ ಬಳಿ ಮೊನ್ನೆ ಖಾಸಗಿ ಬಸ್ಸೊಂದು ಉರುಳಿಬಿದ್ದು ಸಂಭವಿಸಿದ ದುರಂತ ಎಂಥವರ ಮನವನ್ನೂ ಕಲಕುವಂತಹದು. ಅಪಘಾತದಲ್ಲಿ ಮೃತಪಟ್ಟ ಆರೂ ಮಂದಿ 19ರಿಂದ 22 ವರ್ಷದೊಳಗಿನ ಯುವಕರು. ಅದರಲ್ಲೂ ಐವರು ವಿದ್ಯಾರ್ಥಿಗಳು. ಭವ್ಯ ಭವಿಷ್ಯದ ಕನಸು ಕಾಣುತ್ತಿದ್ದ ಯುವ ಜೀವಗಳ ಇಂತಹ ಅಕಾಲಿಕ ನಿರ್ಗಮನಕ್ಕಿಂತ ಹೃದಯವಿದ್ರಾವಕ ಘಟನೆ ಬೇರೊಂದು ಇರ ಲಾರದು. ಬಸ್ ಒಳಗಡೆ ಮಾತ್ರವಲ್ಲದೆ ಮೇಲೆಯೂ (ಟಾಪ್) ಜನರನ್ನು ತುಂಬಿಕೊಂಡು ಹೊರಟಿದ್ದು, ಅತಿವೇಗ ಹಾಗೂ ಅಜಾಗರೂಕತೆಯಿಂದ ಬಸ್ಸನ್ನು ಚಲಾಯಿಸಿದ್ದು ದುರ್ಘಟನೆಗೆ ಕಾರಣ ಎನ್ನುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ರಾಜ್ಯದ ಗ್ರಾಮಾಂತರ ಭಾಗಗಳು ಅನುಭವಿಸುತ್ತಿರುವ ಸಾರಿಗೆ ಅವ್ಯವಸ್ಥೆಯನ್ನು ಈ ದುರ್ಘಟನೆ ಎತ್ತಿ ತೋರಿದೆ. ದುರಂತಕ್ಕೆ ಕಾರಣವಾದ ಆ ಖಾಸಗಿ ಬಸ್‌ನಲ್ಲಿ ಅಷ್ಟೊಂದು ಪ್ರಯಾಣಿಕರು ಏಕೆ ಕಿಕ್ಕಿರಿದಿದ್ದರು (ಬಸ್‌ನ ಧಾರಣೆ ಸಾಮರ್ಥ್ಯಕ್ಕಿಂತ ದುಪ್ಪಟ್ಟು ಜನ ಅದರಲ್ಲಿದ್ದರು ಎಂದು ವರದಿಯಾಗಿದೆ) ಎಂಬ ಪ್ರಶ್ನೆಗೆ ಉತ್ತರ ಹುಡುಕಿದರೆ ಸಾಕು, ಗ್ರಾಮೀಣ ಪ್ರದೇಶಗಳ ಸಾರಿಗೆ ಅವ್ಯವಸ್ಥೆಯ ಕಾರಣಗಳೆಲ್ಲ ಒಂದೊಂದಾಗಿ ಹೊರಬೀಳುತ್ತವೆ. ಪಾವಗಡ ಸೇರಿ ದಂತೆ ರಾಜ್ಯದ ಹಲವು ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಬಸ್ ಸೌಕರ್ಯ ಸಮರ್ಪಕವಾಗಿ ಇಲ್ಲ. ಅದರಲ್ಲೂ ಬೆಳಗಿನ ಹೊತ್ತು ನಗರ ಪ್ರದೇಶಗಳಿಗೆ ಶಾಲಾ–ಕಾಲೇಜುಗಳಿಗಾಗಲೀ ಉದ್ಯೋಗಕ್ಕಾಗಲೀ ಹೋಗುವವರು ಖಾಸಗಿ ಬಸ್‌ಗಳನ್ನೇ ಅವಲಂಬಿಸುವುದು ಅನಿವಾರ್ಯ. ಇಂತಹ ಮಾರ್ಗಗಳಲ್ಲಿ ಓಡಾಡುವ ಪ್ರತೀ ಬಸ್ಸಿನಲ್ಲಿ ಪ್ರಯಾಣಿಕರನ್ನು ಕುರಿಗಳಂತೆ ತುಂಬುವುದು ಮಾಮೂಲು. ಸಾರಿಗೆ ಅಧಿಕಾರಿಗಳಿಗೆ ಇಲ್ಲಿನ ಸಮಸ್ಯೆಯ ಮೂಲ ಏನು ಎನ್ನುವುದು ಗೊತ್ತಿಲ್ಲದ ಸಂಗತಿಯೇನಲ್ಲ. ಆದರೆ, ದುರ್ಘಟನೆಯ ಬಳಿಕ ತಪಾಸಣೆ, ಪರ್ಮಿಟ್ ರದ್ದತಿಯಂತಹ ಕಣ್ಣೊರೆಸುವ ಕ್ರಮಗಳ ಮೂಲಕ ಮೂಲ ಸಮಸ್ಯೆಯನ್ನು ಮೂಲೆಗೆ ಸರಿಸ ಲಾಗುತ್ತದೆ.

ರಾಜ್ಯದಾದ್ಯಂತ ಖಾಸಗಿ ಬಸ್‌ಗಳ ಸ್ಥಿತಿಗತಿ, ಸರ್ಕಾರಿ ಬಸ್‌ಗಳ ಸಂಚಾರ ಹೆಚ್ಚಿಸಬೇಕಿರುವ ಮಾರ್ಗಗಳ ಕುರಿತು ಸಾರಿಗೆ ಇಲಾಖೆ ಸಮೀಕ್ಷೆ ನಡೆಸಬೇಕು

ಸರ್ಕಾರಿ ಬಸ್‌ಗಳು ಸಕಾಲದಲ್ಲಿ ಮತ್ತು ಸೂಕ್ತ ಪ್ರಮಾಣದಲ್ಲಿ ಸಂಚರಿಸದೇ ಇರುವುದರಿಂದ ತಾನೇ ಖಾಸಗಿ ಬಸ್‌ಗಳು ಪ್ರಯಾಣಿಕರನ್ನು ಅಷ್ಟೊಂದು ಕಿಕ್ಕಿರಿದು ತುಂಬಿಸಿಕೊಂಡು ಹೋಗುತ್ತಿರುವುದು? ಮೂಲ ಸಮಸ್ಯೆಯನ್ನು ಹಾಗೆಯೇ ಉಳಿಸಿ, ಖಾಸಗಿ ಬಸ್‌ಗಳ ಓಡಾಟವನ್ನೇ ರದ್ದು ಮಾಡುವುದಾಗಿ ಸಾರಿಗೆ ಸಚಿವರು ಘೋಷಿಸಿದರೆ ಗ್ರಾಮೀಣ ಪ್ರದೇಶಗಳ ಜನರ ಸಂಚಾರ ಸೌಲಭ್ಯಕ್ಕಾಗಿ ಏನು ಮಾಡಬೇಕು, ಬೇರೆ ಯಾರನ್ನು ಆಶ್ರಯಿಸಬೇಕು? ಖಾಸಗಿ ಬಸ್‌ಗಳ ಪರ್ಮಿಟ್, ಫಿಟ್‌ನೆಸ್ ಪ್ರಮಾಣಪತ್ರ, ವಿಮೆ ನವೀಕರಣ ಮೊದಲಾದವುಗಳನ್ನು ಕಟ್ಟುನಿಟ್ಟಾಗಿ ಪರಿಶೀಲಿಸಲು ಅಪಘಾತ ಸಂಭವಿಸುವವರೆಗೆ ಕಾಯ ಬೇಕಿತ್ತೇ? ಮೊದಲೇ ಈ ಕ್ರಮ ಕೈಗೊಳ್ಳುವುದರಿಂದ ಸಾರಿಗೆ ಅಧಿಕಾರಿಗಳನ್ನು ತಡೆದವರಾದರೂ ಯಾರು? ದುರ್ಘಟನೆಗೆ ಖಾಸಗಿ ಬಸ್ ಮಾಲೀಕರ ಧನದಾಹ ಎಷ್ಟು ಕಾರಣವೋ ಸಾರಿಗೆ ಅಧಿಕಾರಿಗಳ ನಿರ್ಲಕ್ಷ್ಯವೂ ಅಷ್ಟೇ ಕಾರಣ. ತಪ್ಪಿತಸ್ಥರ ವಿರುದ್ಧ ದಾಕ್ಷಿಣ್ಯವಿಲ್ಲದೆ ಕ್ರಮ ಕೈಗೊಳ್ಳಬೇಕು. ಅದು ಉಳಿದವರಿಗೂ ಪಾಠವಾಗಬೇಕು. ಈಗ ಆರಂಭಿಸಿರುವ ಸರ್ಕಾರಿ ಬಸ್‌ಗಳ ತಾತ್ಕಾಲಿಕ ಸೇವೆಯನ್ನು ಮುಂದೆ ದುರಂತದ ಬಿಸಿ ತಣ್ಣಗಾಗುತ್ತಿದ್ದಂತೆಯೇ ಯಾವುದೋ ಸಬೂಬು ಹೇಳಿ ನಿಲ್ಲಿಸದಿರುವ ಬದ್ಧತೆಯನ್ನೂ ಪ್ರದರ್ಶಿಸಬೇಕು.

ಸಾರಿಗೆ ಇಲಾಖೆಯು ಈ ದುರಂತವನ್ನು ಒಂದು ಪಾಠವನ್ನಾಗಿ ಭಾವಿಸುವುದಾದರೆ ರಾಜ್ಯದಾದ್ಯಂತ ಎಲ್ಲೆಲ್ಲಿ ಖಾಸಗಿ ಬಸ್‌ಗಳು ಹೆಚ್ಚಾಗಿ ಓಡಾಡುತ್ತವೆ, ಅವುಗಳ ಸ್ಥಿತಿಗತಿ ಹೇಗಿದೆ, ಯಾವ ಮಾರ್ಗದಲ್ಲಿ, ಯಾವ ಸಮಯದಲ್ಲಿ ಸರ್ಕಾರಿ ಬಸ್‌ಗಳ ಸಂಚಾರವನ್ನು ಹೆಚ್ಚಿಸಬೇಕಿದೆ ಎಂಬುದರ ಸಮೀಕ್ಷೆ ನಡೆಸಬೇಕು. ಸಮಯಕ್ಕೆ ಸರಿಯಾಗಿ ಬಸ್‌ಗಳ ಸೌಕರ್ಯವಿಲ್ಲದೆ ಪ್ರಾಣವನ್ನು ಒತ್ತೆ ಇಟ್ಟು ಸಿಕ್ಕ ಸಿಕ್ಕ ವಾಹನಗಳಲ್ಲಿ ಓಡಾಡುತ್ತಿರುವ ವಿದ್ಯಾರ್ಥಿಗಳ, ದುಡಿಮೆಗೆ ಹೋಗುವವರ ಸಂಕಟವು ಇಲಾಖೆಯನ್ನು ಕಾಡಬೇಕು. ಸಾರಿಗೆ ನಿಗಮಗಳು ಇರುವುದು ಜನಸಾಮಾನ್ಯರಿಗೆ ಸೇವೆಯನ್ನು ಒದಗಿಸಲೇ ಹೊರತು ಲಾಭ ಮಾಡುವುದಕ್ಕಲ್ಲ. ಪಾಸ್ ಹೊಂದಿದ ವಿದ್ಯಾರ್ಥಿಗಳೇ ಹೆಚ್ಚಿದ್ದಾರೆ ಎನ್ನುವ ಕಾರಣಕ್ಕೆ ಅಂತಹ ಮಾರ್ಗಗಳಲ್ಲಿ ಬಸ್ ಓಡಿಸಲು ಹಿಂದೇಟು ಹಾಕುವುದು ಅಮಾನವೀಯ. ಇಲಾಖೆಯ 'ವರಮಾನ ಗುರಿ'ಗಿಂತಲೂ ಮಕ್ಕಳು ನಿಗದಿತ ಸಮಯದೊಳಗೆ ಸುರಕ್ಷಿತವಾಗಿ ಶಾಲೆ ತಲುಪುವ ಗುರಿ ಮುಟ್ಟುವುದು ಹೆಚ್ಚು ಮಹತ್ವದ್ದು. ಮಾನವೀಯವಾದದ್ದು ಕೂಡ. ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವಂತೆ ಅಧಿಕಾರಿ ಗಳಿಗೆ ಮುಖ್ಯಮಂತ್ರಿಯವರೇ ಕಿವಿಮಾತು ಹೇಳಬೇಕು. ಖಾಸಗಿ ಬಸ್‌ಗಳ ಸಂಚಾರ ರದ್ದುಗೊಳಿಸಿದ ಮಾರ್ಗಗಳಲ್ಲಿ ಸರ್ಕಾರಿ ಬಸ್‌ಗಳ ಸೇವೆಯನ್ನು ಹೆಚ್ಚಿಸಬೇಕು. ಆ ಬಸ್‌ಗಳು ಸಕಾಲದಲ್ಲಿ ಸಂಚರಿಸುವಂತೆ ನಿಗಾ ವಹಿಸಬೇಕು. ಹಾಗೆಯೇ ದುರಂತದಲ್ಲಿ ಗಂಭೀರವಾಗಿ ಗಾಯಗೊಂಡ ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆಗೆ ಶಿಕ್ಷಣ ಇಲಾಖೆಯು ಸಮರ್ಪಕ ಉತ್ತರವನ್ನು ಕಂಡುಕೊಳ್ಳಬೇಕು.

ದಿನದ ಟ್ವೀಟ್

ಅಪಾಯಕಾರಿ ನಡೆ

10 ನಿಮಿಷದಲ್ಲಿ ಆಹಾರ ತಲುಪಿಸುವ ಜೊಮ್ಯಾಟೊ ಘೋಷಣೆಯು ಅಪಾಯಕಾರಿ ಮತ್ತು ಅನವಶ್ಯಕ. ಆಹಾರ ಪದಾರ್ಥ ತಲುಪಿಸುವ ವಾಹನ ಸವಾರರು ಮತ್ತು ರಸ್ತೆಯಲ್ಲಿ ಸಂಚರಿಸುವವರ ಜೀವದ ಜೊತೆಗೆ ಚೆಲ್ಲಾಟವಾಡುವ ನಡೆ ಇದು. ಏನು ತಿನ್ನಬೇಕು ಎಂಬುದನ್ನು 10 ನಿಮಿಷಗಳ ಮೊದಲಷ್ಟೇ ನಿರ್ಧರಿಸುವಷ್ಟು ಒತ್ತಡದಲ್ಲಿ ಯಾರೂ ಇರುವುದಿಲ್ಲ ಮತ್ತು ಅಂತಹ ಮೂರ್ಖರು ಸಹ ಯಾರೂ ಆಗಿರುವುದಿಲ್ಲ!

ಸುಹೇಲ್ ಸೇಠ್, ಉದ್ಯಮಿ, ಲೇಖಕ

ಕಿಡಿನುಡಿ



ದೇಶದ ಬಹುತೇಕ ಭಾಗಗಳಲ್ಲಿ ಎಲ್‌ಪಿಜಿ ಬೆಲೆಯನ್ನು ₹ 1,000ಕ್ಕೆ ತಲುಪಿಸುವ ಗುರಿ ಸಾಧಿಸಿದ್ದಕ್ಕೆ ಪ್ರಧಾನಿ ಮೋದಿಜಿಗೆ ಅಭಿನಂದನೆಗಳು. ಇನ್ನು ಮುಂದೆ ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿಯೂ ಪ್ರತಿದಿನ 'ವಿಕಾಸ' ಇರಲಿದೆ. ಮೋದಿ ನೇತೃತ್ವದ ಸರ್ಕಾರದಲ್ಲಿ ಕೈಗೆಟಕುವ ದರ ಇರುವುದು ಕೋಮುವಾದ ಮತ್ತು ದ್ವೇಷಕ್ಕೆ ಮಾತ್ರ, ಇನ್ನುಳಿದ ಎಲ್ಲವೂ ದುಬಾರಿ.

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 23-3-1997

• **ಭಯೋತ್ಪಾದಕರಿಂದ ಏಳು ಕಾಶ್ಮೀರಿ ಪಂಡಿತರ ಹತ್ಯೆ**

ಶ್ರೀನಗರ, ಮಾರ್ಚ್ 22 (ಪಿಟಿಐ)– ಜಮ್ಮು ಮತ್ತು ಕಾಶ್ಮೀರದಲ್ಲಿ 7 ವರ್ಷಗಳ ಹಿಂದೆ ಭಯೋತ್ಪಾದನೆ ಆರಂಭವಾದ ನಂತರ ಇದೇ ಮೊದಲ ಬಾರಿಗೆ ನಿನ್ನೆ ರಾತ್ರಿ ಇಲ್ಲಿಗೆ ಸಮೀಪದ ಬದ್ಗಾಂ ಜಿಲ್ಲೆಯಲ್ಲಿ 7 ಮಂದಿ ಕಾಶ್ಮೀರಿ ಪಂಡಿತರನ್ನು ಶಂಕಿತ ಭಯೋತ್ಪಾದಕರು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ಇಲ್ಲಿಗೆ 35 ಕಿ.ಮೀ. ದೂರದ ಬದ್ಗಾಂ ಜಿಲ್ಲೆಯ ಸಂಗ್ರಾಂಪುರದಲ್ಲಿ ಭಾರೀ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಸುಮಾರು 10 ಮಂದಿ ಭಯೋತ್ಪಾದಕರ ಗುಂಪು ಈ ಏಳು ಮಂದಿ ಪಂಡಿತರನ್ನು ಅವರ ಮನೆಗಳಿಂದ ಹೊರಗೆಳೆದು ಗುಂಡಿಕ್ಕಿ ಕೊಂದಿತು.

ಈ ದುಷ್ಕೃತ್ಯವನ್ನು ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಸದಸ್ಯರು ಒಕ್ಕೊರಲಿನಿಂದ ಖಂಡಿಸಿದ್ದಾರೆ. ಸದ್ಯವೇ ನಡೆಯಲಿರುವ ಭಾರತ– ಪಾಕಿಸ್ತಾನ ವಿದೇಶಾಂಗ ಕಾರ್ಯದರ್ಶಿ ಮಟ್ಟದ ಮಾತುಕತೆಗೂ ಮುನ್ನ ಕಣಿವೆಯಲ್ಲಿ ಭಯೋತ್ಪಾದನೆಗೆ ಬೆಂಬಲ ನೀಡುವುದನ್ನು ನಿಲ್ಲಿಸಲು ಕೇಂದ್ರ ಸರ್ಕಾರವು ಪಾಕಿಸ್ತಾನಕ್ಕೆ ತಿಳಿಸಬೇಕೆಂಬ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅವರ ಒತ್ತಾಯಕ್ಕೆ ಶಾಸಕರು ಬೆಂಬಲ ಸೂಚಿಸಿದರು.

• **ಆಂಧ್ರದ 5 ಯೋಜನೆಗಳಿಗೆ ತಡೆ ಕೋರಿ ರಾಜ್ಯದ ಅರ್ಜಿ**

ನವದೆಹಲಿ, ಮಾರ್ಚ್ 22– ರಾಜಕೀಯವಾಗಿ ಕಳೆದ ಕೆಲ ತಿಂಗಳುಗಳಿಂದ ಸಾಕಷ್ಟು ದೂಳೆಬ್ಬಿಸಿದ ಆಲಮಟ್ಟಿ ಅಣೆ ವಿವಾದ ಸುಪ್ರೀಂ ಕೋರ್ಟ್ ಅಂಗಳ ತಲುಪಿದೆ. ಆಲಮಟ್ಟಿ ಅಣೆ ಎತ್ತರಿಸುವುದಕ್ಕೆ ನೀಡಿರುವ ಆಜ್ಞೆಯ ರದ್ದತಿಗೆ ಆಂಧ್ರ ಪ್ರದೇಶ ಮನವಿ ಮಾಡಿದ್ದರೆ, ಆಂಧ್ರದ ಐದು ಯೋಜನೆಗಳಿಗೆ ತಡೆ ಕೋರಿ ಕರ್ನಾಟಕ ಅರ್ಜಿ ಸಲ್ಲಿಸಿದೆ.

50 ವರ್ಷಗಳ ಹಿಂದೆ

ಗುರುವಾರ, 23-3-1972

• **ರಾಜ್ಯದ ಹೊಸ ಸಚಿವರ ಪಟ್ಟಿ ಇಂದು ಪ್ರಕಟಣೆ**

ನವದೆಹಲಿ, ಮಾರ್ಚ್ 22– ಮೈಸೂರು ರಾಜ್ಯದ ಸಚಿವ ಸಂಪುಟ ರಚನೆ ಬಗ್ಗೆ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಇಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಂಜೀವಯ್ಯ ಅವರ ಜತೆ ಮಾತುಕತೆ ನಡೆಸಿದರು.

ಸಚಿವರ ಪಟ್ಟಿಯನ್ನು ನಾಳೆ ಬೆಂಗಳೂರಿನಲ್ಲಿ ಬಿಡುಗಡೆ ಮಾಡುವುದಾಗಿ, ಅರಸು ಅವರು ಇಂದಿರಾ ಗಾಂಧಿ ಅವರ ಜತೆ ಮಾತುಕತೆ ನಡೆಸಿದ ನಂತರ ಸುದ್ದಿಗಾರರಿಗೆ ತಿಳಿಸಿದರು.

• **ಹುಬ್ಬಳ್ಳಿಯಲ್ಲಿ 70 ಮಂದಿ ಬಂಧನ, ಶಾಂತ ಸ್ಥಿತಿ**

ಹುಬ್ಬಳ್ಳಿ, ಮಾರ್ಚ್ 22– ಕಳೆದ ಶುಕ್ರವಾರ ಇಲ್ಲಿ ನಡೆದ ಎರಡು ಗುಂಪುಗಳ ಘರ್ಷಣೆಯಲ್ಲಿ ಇರಿತಕ್ಕೊಳಗಾಗಿದ್ದ ಯುವಕ ಶ್ರೀಕಂಠ ಚಿಪ್ಕರ್ ಅವರು ನಿನ್ನೆ ಮುಂಜಾನೆ ಆಸ್ಪತ್ರೆಯಲ್ಲಿ ಸತ್ತ ಸುದ್ದಿ ಕೇಳಿ ಮತ್ತೆ ನಡೆದ ಗಲಭೆಗಳ ಸಂಬಂಧದಲ್ಲಿ ಪೊಲೀಸರು ಸುಮಾರು 70 ಮಂದಿಯನ್ನು ಬಂಧಿಸಿರುವುದಾಗಿ ಇಂದು ಇಲ್ಲಿ ಅಧಿಕೃತವಾಗಿ ತಿಳಿದುಬಂದಿದೆ.

ಬಿಹಾರದಲ್ಲಿ ನಿತೀಶ್ ಕುಮಾರ್ ಮಾಡಿದ ಪ್ರಯೋಗವನ್ನೇ ಉತ್ತರಪ್ರದೇಶದಲ್ಲಿ ಬಿಜೆಪಿ ಮಾಡಿದೆ

ಬಿಜೆಪಿಯ ವಿಜಯ: ಜಾತಿವಾದದ ಅಂತ್ಯವಲ್ಲ

ವಿಶ್ಲೇಷಣೆ

ಅರುಣ್ ಸಿನ್ಹಾ

ಉತ್ತರಪ್ರದೇಶದಲ್ಲಿನ ತನ್ನ ಗೆಲುವು ಜಾತಿವಾದದ ವಿರುದ್ಧದ ವಿಜಯ ಎಂಬಂಥ ಬಿಜೆಪಿಯ ಪ್ರತಿಪಾದನೆಗೆ ಯಾವುದೇ ನೆಲಗಟ್ಟಿಲ್ಲ. ಯಾದವ ಮತಗಳನ್ನು ಮುಖ್ಯವಾಗಿ ಅವಲಂಬಿಸಿಕೊಂಡು ಇತರ ಹಿಂದುಳಿದ ಜಾತಿಗಳನ್ನೂ ತನ್ನತ್ತ ಒಟ್ಟುಗೂಡಿಸಿಕೊಳ್ಳಲು ಯತ್ನಿಸಿದ ಸಮಾಜವಾದಿ ಪಕ್ಷದ ವಿರುದ್ಧದ ಬಿಜೆಪಿಯ ಗೆಲುವು ಬಿರುಗಾಳಿಯಂತಹದ್ದು. ಆದರೆ ಇದು, 'ಜಾತಿವಾದಿ' ಪಕ್ಷದ ವಿರುದ್ಧ 'ಜಾತಿರಹಿತ' ಪಕ್ಷದ ಗೆಲುವಲ್ಲ. ಚೆನ್ನಾಗಿ ಪೋಷಿಸಿ, ಬೆಳೆಸಿದ ಜಾತಿ ಒಕ್ಕೂಟಗಳನ್ನು ತನ್ನ ಜೊತೆಗಿಟ್ಟುಕೊಂಡು, ಈ ವಿಷಯದಲ್ಲಿ ದುರ್ಬಲವಾಗಿರುವ ತನ್ನ ಎದುರಾಳಿಯ ವಿರುದ್ಧ ಪಕ್ಷವೊಂದು ಸಾಧಿಸಿದ ಗೆಲುವು ಇದು.

ಹೌದು, ಅತಿರೇಕದ ರಾಷ್ಟ್ರೀಯವಾದ ಹಾಗೂ ಹಿಂದುತ್ವದ ಪಾತ್ರವೂ ಇಲ್ಲಿದೆ. ಆದರೆ, ಸಾಮಾಜಿಕ ಬದುಕಿನ 'ಗಂಗಾ'ದಲ್ಲಿ ಪ್ರತ್ಯೇಕ ಬಾವುಟಗಳೊಡನೆ ಸಾಗುತ್ತಿದ್ದ ಜಾತಿ ದೋಣಿಗಳನ್ನು ಒಟ್ಟು ಮಾಡಲು ಹಗ್ಗದಂತೆ ಇವುಗಳನ್ನು ಬಿಜೆಪಿ ಬಳಸಿಕೊಂಡಿದೆ. ಈ ದೋಣಿಗಳೇನೂ ಜಾಗ ಖಾಲಿ ಮಾಡಿಲ್ಲ.

ಆಡಳಿತದಲ್ಲಿ ಯಾದವರ ಪ್ರಾಬಲ್ಯ ಸಹಿಸದ ಇತರ ಹಿಂದುಳಿದ ಜಾತಿಗಳು ಹಾಗೂ ದಲಿತರಿಗೆ ರಾಜಕೀಯ ಸಾಧನವಾಗಿ ತನ್ನನ್ನು ತಾನು ಕೊಟ್ಟುಕೊಳ್ಳುವಲ್ಲಿ ಬಿಜೆಪಿ ಮೊದಲಿಗೆ ಯಶಸ್ವಿಯಾಯಿತು. 'ಯಾದವ್ ರಾಜ್' ಎಂದು ಯಾದವರು, ಹಾಗೆಯೇ ಯಾದವೇತರರೂ ವಿಭಿನ್ನ ಕಾರಣಗಳಿಗಾಗಿ ಪರಿಭಾವಿಸುವಂತಹ ಅಖಿಲೇಶ್ ಯಾದವ್ ನೇತೃತ್ವದ ಆಡಳಿತವು (2012-2017) ಯಾದವ ವಿರೋಧಿ ಭಾವನೆಗಳನ್ನು ಬೆಳೆಸಿತಲ್ಲದೆ ಬಿಜೆಪಿಗೆ ಪುಷ್ಕಳ ಸುಗ್ಗಿಯ ಫಲವನ್ನೇ ನೀಡಿತು.

ರಾಷ್ಟ್ರವಾದಿ ಪಕ್ಷಕ್ಕೆ ತಕ್ಕಂತೆ ಜಾತಿರಹಿತ ನಿಲುವುಗಳೊಂದಿಗೇನೂ ಬಿಜೆಪಿ ಮತದಾರರ ಬಳಿ ಹೋಗಲಿಲ್ಲ. 'ಯಾದವ್, ತೇಲಿ, ಮೌರ್ಯ, ಜಾಟವ ಅಥವಾ ಪಾಸಿ ಯಾರೇ ಆಗಲಿ ಎಲ್ಲರೂ ಒಂದೇ ಕುಟುಂಬದ ಸದಸ್ಯರು. ರಾಷ್ಟ್ರ ನಿರ್ಮಾಣಕ್ಕೆ ಎಲ್ಲರೂ ಒಟ್ಟಾಗೋಣ' ಎಂದೇನೂ ಬಿಜೆಪಿ ಹೇಳಲಿಲ್ಲ. ಈ ಸಮುದಾಯಗಳ ಮಧ್ಯೆ ಸೋದರತ್ವ ಬೆಸೆಯುವ ಕೆಲಸವನ್ನೂ ಮಾಡಲಿಲ್ಲ. ಬದಲಿಗೆ, ತನ್ನ ರಾಜಕೀಯ ಲಾಭಕ್ಕಾಗಿ ಯಾದವರು ಮತ್ತು ಇತರ ಹಿಂದುಳಿದ ಜಾತಿಗಳು ಹಾಗೂ ಜಾಟವರು ಮತ್ತು ಇತರ ಪರಿಶಿಷ್ಟ ಜಾತಿಗಳ ನಡುವಿನ ಕಂದರವನ್ನು ಹೆಚ್ಚು ಮಾಡಿ ವೈಷಮ್ಯ ಬೆಳೆಸುವ ಕೆಲಸ ಮಾಡಿತು.

ನಿಜ, ಬಿಹಾರದಲ್ಲಿ ನಿತೀಶ್ ಕುಮಾರ್ ಮಾಡಿದ್ದನ್ನೇ ಇಲ್ಲಿ ಬಿಜೆಪಿ ಮಾಡಿತು. ಉತ್ತರಪ್ರದೇಶದಲ್ಲಿ ಸಮಾಜವಾದಿ ಪಕ್ಷದಲ್ಲಿರುವಂತೆ, ಬಿಹಾರದಲ್ಲೂ ರಾಷ್ಟ್ರೀಯ ಜನತಾ ದಳದಲ್ಲಿ ಯಾದವರ ಪ್ರಾಬಲ್ಯ ಜೋರಾಗಿದೆ. ಯಾದವೇತರ ಹಿಂದುಳಿದ ಜಾತಿಗಳ ಮೈತ್ರಿಕೂಟವನ್ನು ನಿತೀಶ್ ಹೆಣೆದರು. ಅಸಾಧಾರಣ ಮತದಾರ ನೆಲೆಯೊಂದನ್ನು ಕಟ್ಟುವುದಕ್ಕಾಗಿ ದಲಿತರಲ್ಲಿ ಪ್ರಮುಖ ಜಾತಿಯಾಗಿರುವ ದುಸಾದ್ ಸಮುದಾಯವನ್ನು ಪ್ರತ್ಯೇಕಗೊಳಿಸಲು 'ಮಹಾದಲಿತ್' ಎಂಬ ಹೊಸ ವರ್ಗವನ್ನೇ ಅವರು ರಚಿಸಿದರು. ಅದು ಈಗಲೂ ಅವರಿಗೆ ಫಲ ನೀಡುತ್ತಿದೆ.

ಆದರೆ, ಬಿಜೆಪಿಯು ನಿತೀಶ್ ಅವರಿಗಿಂತ ಮುಂದೆ ಹೋಗಿದೆ. ಪ್ರತೀ ಜಾತಿಯ 'ಸಮುದಾಯ ನಾಯಕ'ರನ್ನು ಗುರುತಿಸಿ ಅವರ ಜೊತೆಗೆ ಸಕ್ರಿಯ ಸಂಪರ್ಕ ಇಟ್ಟುಕೊಳ್ಳುವಂತೆ ಸ್ಥಳೀಯ ಬಿಜೆಪಿ ಕಾರ್ಯಕರ್ತರಿಗೆ ನಿರ್ದೇಶಿಸಲಾಗುತ್ತಿತ್ತು. ಕೇಂದ್ರದಲ್ಲಿ ಮೋದಿ ನೇತೃತ್ವದ ಸರ್ಕಾರ ಹಾಗೂ ರಾಜ್ಯದಲ್ಲಿ ಯೋಗಿ ನೇತೃತ್ವದ ಸರ್ಕಾರ ಸಮುದಾಯಕ್ಕೆ ತಂದುಕೊಟ್ಟಿರುವ 'ಲಾಭ'ಗಳ ಬಗ್ಗೆ ಆಯಾಯ ಜಾತಿಗಳ ಮತದಾರರ ಮಧ್ಯೆ ಅರಿವನ್ನು ಈ 'ಸಮುದಾಯ ನಾಯಕ'ರ ಮೂಲಕ ಪಕ್ಷದ ಕಾರ್ಯಕರ್ತರು ಬಿತ್ತಬೇಕಿತ್ತು. ಜಾತಿಯ ಜನರ ಮಧ್ಯೆ ಪ್ರಭಾವ ಬೀರುವವರಾಗಿ ಸಮುದಾಯ ನಾಯಕರನ್ನು ಬಳಸಿಕೊಂಡರೆ, ಪಕ್ಷದ ಸಂಘಟನೆಯ ಪ್ರಮುಖ ಸ್ಥಾನಗಳಿಗೆ ಅವರನ್ನು ಪ್ರತಿನಿಧಿಸುವ ರಾಜಕಾರಣಿಗಳನ್ನು ನೇಮಕ ಮಾಡಿ, ಜಾತಿಗಳೊಳಗಿನ ಸಂಪರ್ಕವನ್ನು ಬಿಜೆಪಿ ಆಳವಾಗಿಸಿಕೊಂಡಿತು. ಅಭ್ಯರ್ಥಿಗಳ ಆಯ್ಕೆಯ ಮೂಲಕವೂ ಜಾತಿಯ ಸಂಪರ್ಕವನ್ನು ಬಿಜೆಪಿ ಮತ್ತಷ್ಟು ಗಾಢವಾಗಿಸಿಕೊಂಡಿತು. ಹೀಗಾಗಿ ಚುನಾವಣೆಗೆ ಮುಂಚೆ, ಹಿಂದುಳಿದ ಜಾತಿಗಳು ಹಾಗೂ ಜಾಟವೇತರ ಸಮುದಾಯಗಳ ಮೈತ್ರಿಕೂಟವನ್ನು ರಚಿಸಲು ಯತ್ನಿಸಿದ ಸಮಾಜವಾದಿ ಪಕ್ಷದ ವಿರುದ್ಧ ಯಾದವೇತರ ಹಿಂದುಳಿದ ಜಾತಿಗಳು ಹಾಗೂ ಜಾಟವೇತರ ಪರಿಶಿಷ್ಟ ಜಾತಿಗಳೊಂದಿಗಿನ ತನ್ನ ಆಳವಾದ ಸಂಪರ್ಕಗಳಿಂದಾಗಿ ಬಿಜೆಪಿ ಮೇಲುಗೈ ಸಾಧಿಸಿತು. ಅಂದರೆ, ಬಿಜೆಪಿಯ ವಿಜಯವು ಮೇಲ್ವದರದ ಜಾತಿವಾದದ ವಿರುದ್ಧ ಆಳವಾಗಿ ಬೇರೂರಿದ ಜಾತಿವಾದದ ಗೆಲುವು ಎಂದು ಅರ್ಥೈಸಬೇಕಾಗುತ್ತದೆ.

ತನ್ನದು ಜಾತಿರಹಿತ ಹಾಗೂ ರಾಷ್ಟ್ರವಾದದ ರಾಜಕಾರಣ ಎಂಬಂತಹ ಉನ್ನತ ನೈತಿಕ ನಿಲುವನ್ನು ಬಿಜೆಪಿ ಪ್ರದರ್ಶಿಸಲಾಗದು. ಬಿಜೆಪಿಯು ಜಾತಿಯನ್ನು ಒಡೆಯುತ್ತಿಲ್ಲ; ಇತರ ರಾಜಕೀಯ ಪಕ್ಷಗಳು ಮಾಡಿದ್ದಂತೆಯೇ ಜಾತಿಯ ಬೇರುಗಳನ್ನು ಬಲಪಡಿಸುತ್ತಿದೆ. ಮೂರು ವಿಭಿನ್ನ ರೂಪಗಳಲ್ಲಿ ಜಾತಿಯು ಅಸ್ತಿತ್ವದಲ್ಲಿದೆ. ಮೊದಲನೆಯದು, ರಾಜಕೀಯ ರೂಪ. ಚುನಾವಣೆಗಳಲ್ಲಿ ಬೆಂಬಲವನ್ನು ಗಳಿಸಿಕೊಳ್ಳಲು ಜಾತಿಯ ರಾಜಕೀಯ ಅಭಿವ್ಯಕ್ತಿಯನ್ನು ಇತರ ರಾಜಕೀಯ ಪಕ್ಷಗಳಂತೆ ಬಿಜೆಪಿಯೂ ಬಳಸಿಕೊಳ್ಳುತ್ತಿದೆ. ಸರ್ಕಾರವನ್ನು ಮುನ್ನಡೆಸುವ ರಾಜಕೀಯ ಪಕ್ಷವು ಬದಲಾಗುತ್ತದೆ. ಆದರೆ ಜಾತಿಗಳ ರಾಜಕೀಯ ಸಂಘಟನೆಗಳು ಬದಲಾಗುವುದಿಲ್ಲ. ವಿವಿಧ ಜಾತಿಗಳನ್ನೊಳಗೊಂಡ ತನ್ನ 'ಕಾಮನಬಿಲ್ಲಿನ ಕೂಟ'ದ ಮೂಲಕ ಜಾತಿಗಳನ್ನು ಕರಗಿಸಲಾಗಿದೆ ಎಂದು ಬಿಜೆಪಿಯು ನಮ್ಮನ್ನು ನಂಬಿಸಲಾಗದು. 'ಕಾಮನಬಿಲ್ಲು' ಇಂದಲ್ಲ ನಾಳೆ ಮಾಯವಾಗಿಬಿಡುತ್ತದೆ.



ಜಾತಿಯ ಎರಡನೇ ರೂಪ ಎಂದರೆ ಸಾಮಾಜಿಕ ಸಂಘಟನೆ. ಜಾತಿಯನ್ನು ಒಡೆಯಬೇಕೆಂದು ಬಿಜೆಪಿ ಬಯಸಿದಲ್ಲಿ ಜಾತಿಯ ಸಾಮಾಜಿಕ ಶ್ರೇಣಿಯನ್ನು ಒಡೆಯಬೇಕಾಗುತ್ತದೆ. ಉತ್ತರಪ್ರದೇಶದ ಎಷ್ಟು ಮಂದಿ ಠಾಕೂರರು ಮೌರ್ಯ ಅಳಿಯ ಅಥವಾ ಪಾಸಿ ಸೊಸೆಯನ್ನು ಒಪ್ಪಿಕೊಳ್ಳಬಲ್ಲರು? ಚುನಾವಣೆಗೆ ಮುಂಚೆ, ದಲಿತರೊಬ್ಬರ, ಅಚ್ಚುಕಟ್ಟಾಗಿ ಕಾಣಿಸುತ್ತಿದ್ದ ಮನೆಯಲ್ಲಿ ಯೋಗಿ ಆದಿತ್ಯನಾಥ ಊಟ ಮಾಡುತ್ತಿರುವಂತಹ ಛಾಯಾಚಿತ್ರ ಪ್ರಕಟವಾಗಿತ್ತು. ಆದರೆ ದಲಿತರೊಂದಿಗೆ ಪಂಕ್ತಿಯಲ್ಲಿ ಪ್ರಭಾವಿ ಜಾತಿಯ ಎಷ್ಟು ಮಂದಿ ಊಟ ಮಾಡಬಲ್ಲರು?

ಕರ್ಮಕ್ಕೆ ಅನುಸಾರವಾದ ಪುನರ್ಜನ್ಮ, ಶುದ್ಧ ರಕ್ತ ಕುರಿತಾದ ಆಳವಾದ ತಪ್ಪುಗ್ರಹಿಕೆಯ ಪರಿಕಲ್ಪನೆಗಳಿಂದಾಗಿ ಸಾಮಾಜಿಕ ಶ್ರೇಣೀಕರಣ ಬೇರೂರಿದೆ. ಈ ಪರಿಕಲ್ಪನೆಗಳೇ ಸಾಮಾಜಿಕ ಶ್ರೇಣೀಕರಣದ ಬೇರುಗಳಾಗಿವೆ. ಆದರೆ ಈ ಬೇರುಗಳನ್ನೆಂದೂ ಬಿಜೆಪಿ ಟೀಕಿಸಿಲ್ಲ, ಪ್ರಶ್ನಿಸಿಲ್ಲ. ಏಕೆಂದರೆ, ಹಾಗೆ ಪ್ರಶ್ನಿಸಿದರೆ ಅದು ತಾನು ಪ್ರತಿಪಾದಿಸುವಂತಹ ಹಿಂದೂ ಧರ್ಮದ ನಂಬಿಕೆ ಹಾಗೂ ಸಂಪ್ರದಾಯಗಳನ್ನೇ ಪ್ರಶ್ನಿಸಿದಂತಾಗುತ್ತದೆ.

ಜಾತಿಯ ಮೂರನೇ ರೂಪ, ಆರ್ಥಿಕ ಸಂಘಟನೆ. ಶತಶತಮಾನಗಳಿಂದ ನಿಗದಿತ ಕೆಲಸವನ್ನು ಪ್ರತೀ ಜಾತಿಗೆ ವಹಿಸಲಾಗಿದೆ. ಈ ಕೆಲಸಗಳ ಮೇಲು, ಕೀಳು ಎಂಬಂಥ ವರ್ಗೀಕರಣಗಳು ಅಸ್ಪೃಶ್ಯತೆ, ಪ್ರತ್ಯೇಕತೆ ಹಾಗೂ ಶ್ರೇಣೀಕರಣಕ್ಕೆ ಆಧಾರವಾಗಿವೆ. ಕೈಗಾರಿಕೀಕರಣ ಹಾಗೂ ನಗರೀಕರಣಗಳಿಂದಾಗಿ ಜಾತಿ ಹಾಗೂ ಉದ್ಯೋಗದ ಮಧ್ಯದ ಸಂಬಂಧ ದುರ್ಬಲವಾಗುತ್ತಿದೆ. ಆದರೆ, ಹಳ್ಳಿಯಿಂದ ದೂರವಾಗಿ ಕೈಗಾರಿಕೆ ಅಥವಾ ವ್ಯಾಪಾರದಂತಹ ಇತರ ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದರೂ ಕೆಳಜಾತಿಯವರನ್ನು ಕೆಳಜಾತಿಯವರಂತೆಯೇ ಈಗಲೂ ನೋಡಲಾಗುತ್ತದೆ. ಜಾತಿಯ ಆರ್ಥಿಕ ರೂಪಕ್ಕಿಂತ, ಸಾಮಾಜಿಕ ರೂಪ ದೀರ್ಘಕಾಲ ಜೀವಂತವಾಗಿರುವಂತಿದೆ.

ಜಾತಿ ಅಳಿಯುವುದಿಲ್ಲ ಎಂಬುದಕ್ಕೆ ಅನೇಕ ಉದಾಹರಣೆಗಳಿರುವಂತೆಯೇ ಅದು ಮಸುಕಾಗುತ್ತಿದೆ ಎಂಬುದಕ್ಕೂ ಹಲವು ಉದಾಹರಣೆಗಳಿವೆ. ಜಾತಿ ಒಡೆಯುವ ಮಾರ್ಗವೆಂದರೆ, ಈವರೆಗೆ ಪ್ರಭಾವಿ ಜಾತಿಗಳೇ ಹೊಂದಿದ್ದ ಉದ್ಯೋಗಗಳನ್ನು ದುರ್ಬಲ ಜಾತಿಗಳಿಗೆ ನೀಡುವುದು. ಸಂಕ್ಷಿಪ್ತವಾಗಿ ಹೇಳುವುದಾದಲ್ಲಿ, ಜಾತಿವಾದವನ್ನು ನಿರ್ಮೂಲನ ಮಾಡಲು ಬಯಸುವ ರಾಜಕೀಯ ಪಕ್ಷವು ಕೈಗಾರಿಕೆ ಹಾಗೂ ವ್ಯಾಪಾರ ರಂಗದಲ್ಲಿ ಉದ್ಯೋಗ ಸೃಷ್ಟಿಯನ್ನು ತನ್ನ ಮುಖ್ಯ ಆದ್ಯತೆಯಾಗಿಸಿಕೊಳ್ಳಬೇಕು. ಉತ್ತರಪ್ರದೇಶದಲ್ಲಿ ಬಿಜೆಪಿ ಅದನ್ನು ಮಾಡುತ್ತಿದೆಯೇ? ಸೆಂಟರ್ ಫಾರ್ ಮಾನಿಟರಿಂಗ್ ಆಫ್ ಇಂಡಿಯನ್ ಎಕಾನಮಿ ಪ್ರಕಾರ, ಉತ್ತರಪ್ರದೇಶದ 15-29 ವಯೋಮಾನದ ಒಟ್ಟು 7.09 ಕೋಟಿ ಯುವಜನರ ಪೈಕಿ ಸುಮಾರು ಶೇಕಡ 17ರಷ್ಟು ಮಂದಿ ಮಾತ್ರ 2021ರ ಸೆಪ್ಟೆಂಬರ್- ಡಿಸೆಂಬರ್‌ನಲ್ಲಿ ಉದ್ಯೋಗಗಳನ್ನು ಹೊಂದಿದ್ದರು. ಜಾತಿ ಹಾಗೂ ಉದ್ಯೋಗದ ನಡುವಣ ಸಂಬಂಧ ಹೇಗೆ ತಾನೇ ಒಡೆಯುತ್ತದೆ?

ಚುರುಮುರಿ

ಔಟಾಫ್ ಸಿಲೆಬಸ್

• ಮಣ್ಣೆರಾಜು

'ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮಕ್ಕಳು ಉತ್ತಮ ಫಲಿತಾಂಶ ಪಡೆಯಲೆಂದು ಪೇರೆಂಟ್ಸ್ ಎಲ್ರೂ ದೇವರಲ್ಲಿ ಪ್ರಾರ್ಥನೆ ಮಾಡಿ...' ಪೋಷಕರ ಸಭೆಯಲ್ಲಿ ಶಾಲೆಯ ಹೆಚ್ಚೆಂ ಮನವಿ ಮಾಡಿದರು.

'ಯಾಕೆ ಮೇಡಂ, ಮಕ್ಕಳು ಚೆನ್ನಾಗಿ ಪಾಠ ಕಲಿತಿಲ್ವಾ?...' ಪೋಷಕರು ಕಳವಳಗೊಂಡರು.

'ಸಮವಸ್ತ್ರದ ಗಲಾಟೆ ಕಾವಲಿಗೆಂದು ಶಾಲೆಗೆ ಬಂದಿದ್ದ ಪೊಲೀಸರ ಲಾಠಿ ಭಯದಲ್ಲಿ ಅದೆಷ್ಟು ಕಲಿತಿದ್ದಾರೋ ಗೊತ್ತಿಲ್ಲ'.

'ಮಕ್ಕಳಲ್ಲಿ ಧೈರ್ಯ ತುಂಬಿ ಪಾಠ ಹೇಳಬೇಕಲ್ಲವೇ?' ಎಂದರು ಪೋಷಕರೊಬ್ಬರು.

'ಹೇಳಿದ್ದೇವೆ. ಸಮವಸ್ತ್ರ ಧರಿಸದಿದ್ದರೆ ಆಗಬಹುದಾದ ನಷ್ಟ, ಧರಿಸಿದರೆ ಆಗುವ ಲಾಭ, ಈ ಎರಡನ್ನೂ ಕೂಡಿ, ಕಳೆದು ಉಳಿಯುವ ಮೊತ್ತದ ಬಗ್ಗೆ ಮಕ್ಕಳಿಗೆ ಸರಳ ಗಣಿತ ಬೋಧಿಸಿದ್ದೇನೆ' ಎಂದರು ಗಣಿತ ಟೀಚರ್.

'ಕಲರ್ ಡ್ರೆಸ್‌ನಿಂದ ಮಕ್ಕಳ ಮನಃಸ್ಥಿತಿ ಮೇಲಾಗುವ ದುಷ್ಪರಿಣಾಮ, ಸಮವಸ್ತ್ರದಿಂದ ಆಗುವ ಸತ್ಪರಿಣಾಮದ ಬಗ್ಗೆ ವೈಜ್ಞಾನಿಕವಾಗಿ ಮನವರಿಕೆ ಮಾಡಿಕೊಟ್ಟಿದ್ದೇನೆ' ವಿಜ್ಞಾನ ಶಿಕ್ಷಕಿ ತಿಳಿಸಿದರು.

'ವಸ್ತ್ರ ಸಮಾನತೆಯಿಂದ ಭಾವೈಕ್ಯ, ಸಾಮಾಜಿಕ ಸಮಾನತೆ ಸಾಧ್ಯವೆಂದು ಉದಾಹರಣೆಗಳನ್ನು ಉಲ್ಲೇಖಿಸಿ ನಾನು ಮಕ್ಕಳಿಗೆ ಪಾಠ ಹೇಳಿದ್ದೇನೆ' ಎಂದರು ಸಮಾಜ ಶಿಕ್ಷಕಿ.

'ಪರೀಕ್ಷೆಯಲ್ಲಿ ಸಮವಸ್ತ್ರದ ಬಗ್ಗೆ ಪ್ರಶ್ನೆಗಳಿರುತ್ತವಾ ಮೇಡಂ?' ಮತ್ತೊಬ್ಬರು ಕೇಳಿದರು.

'ಇಲ್ಲ, ಅದೆಲ್ಲಾ ಔಟಾಫ್ ಸಿಲೆಬಸ್...' ಎಂದರು ಹೆಚ್ಚೆಂ.

'ಹಿಂದಿನ ವರ್ಷಗಳಲ್ಲಿ ಕೊರೊನಾ ಪಾಠ ಹೇಳಿದ್ರಿ, ಈಗ ಯೂನಿಫಾರಂ ಬೋಧನೆ ಮಾಡಿದ್ರಿ, ಇದರ ಜೊತೆಗೆ ವಿಜ್ಞಾನ, ಗಣಿತ, ಸಮಾಜದ ಪಾಠ ಮಾಡಿದ್ರೋ ಇಲ್ವೋ?'

'ಆ ಸಬ್ಜೆಕ್ಟ್‌ಗಳನ್ನೂ ಕಲಿಸಿ ಸಿಲೆಬಸ್ ಮುಗಿಸಿದ್ದೇವೆ. ಮುಂದೆ ಭಗವದ್ಗೀತೆ ಟೀಚರನ್ನು ನೇಮಕ ಮಾಡಿಕೊಂಡು ಮಕ್ಕಳಿಗೆ ಕಲಿಸುತ್ತೇವೆ' ಎಂದರು ಹೆಚ್ಚೆಂ.

'ಕಲಿಸಿ, ಔಟಾಫ್ ಸಿಲೆಬಸ್ ಸಬ್ಜೆಕ್ಟ್‌ಗಳನ್ನು ನೀವು ಕಲಿಸಿ, ಮನೆಯಲ್ಲಿ ನಾವು ಮಕ್ಕಳಿಗೆ ಸೈನ್ಸ್, ಮ್ಯಾಥ್ಸ್ ಕಲಿಸುತ್ತೇವೆ...' ಎಂದು ಪೋಷಕರು ಸಿಟ್ಟಿನಿಂದ ಸಭೆ ಮುಗಿಸಿ ಹೊರಟರು.

ಸಂಗತ

ಸ್ಪರ್ಧಾತ್ಮಕ ಪರೀಕ್ಷೆಗೆ 'ಪರೀಕ್ಷಾ' ಕಾಲ!

ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲಿ ಇತರ ಯಾವುದೇ ಪ್ರಶ್ನೆಪತ್ರಿಕೆಗಳಲ್ಲಿ ಇಲ್ಲದ ಗೊಂದಲ ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಮಾತ್ರ ಯಾಕೆ?

• ಯು.ಟಿ.ಆಯಿಶ ಫರ್ಝಾನ

ಸಾಹಿತ್ಯದ ಪಠ್ಯಗಳನ್ನು ವಿಮರ್ಶಾತ್ಮಕವಾಗಿ ಮತ್ತು ಸೃಜನಶೀಲವಾದ ರೀತಿಯಲ್ಲಿ ಓದಬೇಕಿರುವುದು ಸರಿಯಾದ ರೀತಿ. ಸಾಹಿತ್ಯದ ಬೋಧಕರಿಗಂತೂ ಇದು ಕಡ್ಡಾಯ ಕ್ರಮ. ಹಾಗಿದ್ದಾಗ ಆ ಸ್ಥಾನಗಳಿಗೆ ಅವರ ಆಯ್ಕೆಯೂ ಅದೇ ರೀತಿಯ ವಿವರಣಾತ್ಮಕ ಪರೀಕ್ಷೆಯ ಮೂಲಕ ಆಗಬೇಕಲ್ಲವೇ?

ಮಾನವಿಕ ಅಧ್ಯಯನ ವಿಷಯಗಳಲ್ಲಿ ಇದು ವಿಶೇಷವಾಗಿ ವಿದ್ಯಾರ್ಥಿಗಳ ಪ್ರಶ್ನಿಸುವ ಸಾಮರ್ಥ್ಯವನ್ನು ಹೆಚ್ಚಿಸಿ, ಆಲೋಚನೆಗೆ ಅವಕಾಶ ಮಾಡಿಕೊಡುತ್ತದೆ. ಆದರೆ ಇಂದಿನ ಸ್ಪರ್ಧಾತ್ಮಕ ಯುಗದ ಪ್ರಶ್ನೆಪತ್ರಿಕೆಗಳು ಕಲಿಯುವವನ ಭಾಷಾಜ್ಞಾನ, ಸಾಹಿತ್ಯಜ್ಞಾನವನ್ನು ಒರೆಗೆ ಹಚ್ಚುವುದಕ್ಕೆ ಬದಲಾಗಿ ಬಹು ಆಯ್ಕೆಯ ಪರೀಕ್ಷೆಗಳೆಂಬ ಮಂತ್ರದಂಡಗಳು (ಯಂತ್ರದಂಡ) ಆಗಿವೆ.

ಅಮಿತಾಭ್ ಬಚ್ಚನ್ ಅವರು 'ಕೌನ್ ಬನೇಗ ಕರೋಡ್‌ಪತಿ' ಟಿ.ವಿ. ಕಾರ್ಯಕ್ರಮದಲ್ಲಿ ಕೇಳಿದ ಹಾಗೆ, ಒಂದು ಪ್ರಶ್ನೆಗೆ ಒಂದೇ ಉತ್ತರ ಎಂಬಂತೆ ಇವೆ ವಿನಾ ಸೃಜನಶೀಲತೆಯ ಅಭಿವ್ಯಕ್ತಿಗೆ ಅವಕಾಶವೇ ಇಲ್ಲ. ಆದರೆ ಈ ವ್ಯವಸ್ಥೆಯನ್ನಾದರೂ ನೆಟ್ಟಗೆ ಮಾಡಿದ್ದರೆ ಅಷ್ಟಾದರೂ ಸಾಕು ಎಂದು ಸಮಾಧಾನ ಪಡಬಹುದಾಗಿತ್ತು. ಆದರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗಾಗಿ ಇತ್ತೀಚೆಗೆ ನಡೆದ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆಗಳಲ್ಲಿದ್ದ ತಪ್ಪುಗಳನ್ನು ನೋಡಿದ ಪರೀಕ್ಷಾರ್ಥಿಗಳು ಆಘಾತಗೊಂಡಿದ್ದಾರೆ.

ಕನ್ನಡ ವಿಷಯಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು 15 ಪುಟಗಳ ಪಠ್ಯಕ್ರಮವನ್ನು ನಿಗದಿಪಡಿಸಿತ್ತು. ಆದರೆ ಪ್ರಶ್ನೆಪತ್ರಿಕೆಗಳ ಗುಣಮಟ್ಟ ನೋಡಿದರೆ ಪ್ರಾಧಿಕಾರಕ್ಕೆ ಅಥವಾ ಪ್ರಶ್ನೆಪತ್ರಿಕೆ ಸಿದ್ಧಪಡಿಸಿದ ಹಿರಿಯ ಪ್ರಾಧ್ಯಾಪಕರಿಗೆ ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸಲ್ಲಬೇಕು!

ಎ4 ಸರಣಿಯ ಪ್ರಶ್ನೆಪತ್ರಿಕೆಯನ್ನು ಉದಾಹರಣೆಗೆ ತೆಗೆದುಕೊಳ್ಳುವುದಾದರೆ, ಪ್ರಶ್ನೆಸಂಖ್ಯೆ 9ರಲ್ಲಿ 'Memorial stones: a study of their origin, significance, and variety' ಎಂಬ ಸಂಪಾದಿತ ಕೃತಿಯ ಹೆಸರನ್ನು 'Memorial stones in South India' ಎಂದು ಬದಲಾಯಿಸಲಾಗಿದೆ. ಇದನ್ನೇ ಸರಿಯಾದ ಆಯ್ಕೆಯನ್ನಾಗಿ ಗುರುತಿಸಲು ಹೇಳಲಾಗಿದೆ! ಹೀಗೆ ಕೃತಿಯ ಹೆಸರನ್ನು ತಿರುಚಲಾಗಿದೆ.

ಪ್ರಶ್ನೆಸಂಖ್ಯೆ 45ರಲ್ಲಿ ಅಲ್ಲಮನ 'ಇಂದು ಸಾವ ಹೆಂಡತಿಗೆ ನಾಳೆ ಸಾವ ಗಂಡನವ್ವಾ' ಎಂಬ ವಚನವನ್ನು 'ಇಂದು ಸಾವ ಹೆಂಡತಿಗೆ ನಾಳೆ ಸಾವ ಗಂಡ ನೋಡವ್ವಾ' ಎಂದು ಕೊಡಲಾಗಿದೆ. ಬಿ.ವಿ.ಮಲ್ಲಾಪುರ ಅವರ ಸಂಪಾದಕತ್ವದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ ಅಲ್ಲಮ ಪ್ರಭುದೇವರ ವಚನ ಸಂಪುಟ- 2ರಲ್ಲಿ ಮತ್ತು ಎಂ.ಎಂ.ಕಲಬುರ್ಗಿ ಅವರ ಸಂಪಾದಕತ್ವದಲ್ಲಿ ಸಿದ್ಧಪಡಿಸಿದ ಸಂಪುಟಗಳಲ್ಲಿಯೂ 'ಗಂಡನವ್ವಾ' ಎಂದೇ ಇದೆ.

ಪ್ರಶ್ನೆಸಂಖ್ಯೆ 52ರಲ್ಲಿ ಅಕ್ಕಮಹಾದೇವಿಯ ವಚನದ ಬದಲಿಗೆ ಅಕ್ಕಮ್ಮಳ ವಚನವನ್ನು ಕೊಡಲಾಗಿದೆ. ಕೊಟ್ಟಿದ್ದ ಉತ್ತರಗಳ ಪೈಕಿ ಅಕ್ಕಮಹಾದೇವಿಯ ಹೆಸರಿನೊಂದಿಗೆ ಬೇರೆ ಯಾವ ಆಯ್ಕೆಯೂ ಹೊಂದಾಣಿಕೆ ಆಗುವುದಿಲ್ಲ.

ಪ್ರಶ್ನೆಸಂಖ್ಯೆ 63ರ ಹೊಂದಿಸಿ ಬರೆಯಿರಿಯಲ್ಲಿ ಕನ್ನಡ ಸಾಹಿತ್ಯಕ್ಕೆ ಕೆ.ಎಸ್.ನರಸಿಂಹವರ್ಮ ಎಂಬ ಹೊಸ ಕವಿಯೊಬ್ಬರನ್ನು ಪರಿಚಯಿಸಲಾಗಿದೆ! 'ಶರ್ಮ' ಎಂದಿದ್ದು 'ವರ್ಮ' ಆಗಿದ್ದರೆ ಮುದ್ರಾರಾಕ್ಷಸನ ಹಾವಳಿ ಎಂದು ಸುಮ್ಮನಿರಬಹುದಾಗಿತ್ತು. ಆದರೆ 'ಸ್ವಾಮಿ'ಯು 'ವರ್ಮ' ಆಗಿ ಬದಲಾಗುವುದು ಚೋದ್ಯವೇ ಸರಿ. ಕನ್ನಡ ಪತ್ರಿಕೆಯಲ್ಲಿ ಇಂತಹ ಇನ್ನೂ ಹಲವಾರು ತಪ್ಪುಗಳು ನುಸುಳಿದ್ದು ತೀರಾ ಅವಮಾನಕಾರಿಯಾಗಿದೆ.

ಪ್ರಶ್ನೆಸಂಖ್ಯೆ 57 'ನೆಪೋಲಿಯನ್ ಮತ್ತು ನಾಯಿ' ಕವನದ ಕರ್ತೃಗೆ ಉತ್ತರದ ಆಯ್ಕೆ ಕುವೆಂಪು. ಆದರೆ ಈ ಕವಿತೆಯ ಶೀರ್ಷಿಕೆ ಇರುವುದು 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ' ಕವನ ಸಂಕಲನದಲ್ಲಿ 'ವೀರನ ಕನಿಕರ (ನಾಯಿ-ನೆಪೋಲಿಯನ್)' ಎಂದಿದೆ. ಪ್ರಶ್ನೆ ರೂಪಿಸಿದವರು ಬೇಕಾಬಿಟ್ಟಿಯಾಗಿ ಶೀರ್ಷಿಕೆಯನ್ನೇ ಬದಲಾಯಿಸಿದ್ದಾರೆ.



ಪರೀಕ್ಷಾ ಹಾಲ್‌ನಲ್ಲಿ ಸಮಯದ ಮಿತಿಯೊಳಗೆ ಪರೀಕ್ಷೆಗಳನ್ನು ಎದುರಿಸಬೇಕಾಗಿರುವಾಗ, ಈ ರೀತಿ ತಪ್ಪು ಪ್ರಶ್ನೆಗಳಿಂದಾಗುವ ಗೊಂದಲಗಳು ಅಭ್ಯರ್ಥಿಯು ಪ್ರಶ್ನೆಗೆ ಉತ್ತರಿಸುವ ಗೋಜಿಗೇ ಹೋಗದಂತೆ ಮಾಡುತ್ತವೆ. ನೆಗೆಟಿವ್ ಅಂಕ ಪಡೆಯುವುದಕ್ಕಿಂತ ದೂರವಿರುವುದೇ ಕ್ಷೇಮ ಅಂದುಕೊಳ್ಳುವ ಸಾಧ್ಯತೆಯೇ ಹೆಚ್ಚು.

ಪ್ರಾಧಿಕಾರವು ಈ ಬಗ್ಗೆ ಗಂಭೀರವಾಗಿ ಗಮನ ಹರಿಸಬೇಕು. ಹಾಗೆಯೇ ಸಾಹಿತ್ಯ ಕ್ಷೇತ್ರದಲ್ಲಿ ಬಹಳಷ್ಟು ಹೆಸರು ಮಾಡಿರುವವರು, ವಿದ್ವಾಂಸರು, ಕನ್ನಡಪರ ಹೋರಾಟಗಾರರು ಇಂತಹ ಕೆಟ್ಟ ಕನ್ನಡದ ಹುಟ್ಟುಗಾರರನ್ನು ಆರಂಭದಲ್ಲೇ ಚಿವುಟಿಹಾಕಬೇಕು. ಕನ್ನಡ ನಾಡಿನಲ್ಲಿಯೇ ಕನ್ನಡಕ್ಕೆ ಇಂತಹ ಅಧೋಗತಿಯಾದರೆ ಹೇಗೆ? ಇತರ ಯಾವುದೇ ಪ್ರಶ್ನೆಪತ್ರಿಕೆಗಳಲ್ಲಿ ಇಲ್ಲದ ಗೊಂದಲ ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಮಾತ್ರ ಯಾಕೆ?

ಪ್ರಾಧಿಕಾರವೇನೋ ಗ್ರೇಸ್ ಅಂಕಗಳನ್ನು ನೀಡುತ್ತೇವೆ ಎನ್ನಬಹುದು. ಈ ಉಪಕ್ರಮವು ಕಷ್ಟಪಟ್ಟು ಓದಿ ಪರೀಕ್ಷೆ ಬರೆದವರಿಗೆ ಮಾಡುವ ಅನ್ಯಾಯವೇ ವಿನಾ ಮತ್ತೇನಲ್ಲ. ಕರ್ನಾಟಕದ ಹೆಸರಿಟ್ಟುಕೊಂಡು ಕನ್ನಡದ ಪ್ರಶ್ನೆಪತ್ರಿಕೆಗಳನ್ನು ಈ ರೀತಿ ವಿರೂಪಗೊಳಿಸಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಈ ಅಸಡ್ಡೆ ಅಕ್ಷಮ್ಯ. ಇಂತಹ ಕೆಟ್ಟ ಪರೀಕ್ಷೆ ರದ್ದಾಗಲಿ. ಅಭ್ಯರ್ಥಿಗಳ ಭವಿಷ್ಯದೊಂದಿಗೆ ಈ ಪರಿಯ ಆಟವಾಡುವ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ. ಸ್ಪರ್ಧಾತ್ಮಕ ಪರೀಕ್ಷೆಗಾಗಿಯೇ ಹುಟ್ಟುತ್ತಿರುವ ಇಂತಹ ಕನ್ನಡವನ್ನು ಗಂಭೀರವಾಗಿ ಪರಿಗಣಿಸುವಂತಾಗಲಿ.

ವಾಚಕರ ವಾಣಿ

ಬಾಳು ಹದಗೆಡದಿರಲಿ, ಭಾವೈಕ್ಯ ಮೆರೆಯಲಿ

ಜಾತ್ಯತೀತ ಸಮಾಜದಲ್ಲಿ ಬದುಕುತ್ತಿರುವ ನಮ್ಮ ವ್ಯಾಪಾರ ಮಾರುಕಟ್ಟೆಯು ಕೋಮುದ್ವೇಷ ಮುಕ್ತವಾಗಿರಲಿ. ದಿನದ ದುಡಿಮೆ ನಂಬಿ ಬದುಕುತ್ತಿರುವವರ ಬಾಳು ಹದಗೆಡದಿರಲಿ. ಎಲ್ಲಾ ಜಾತಿ, ಮತದವರೂ ಭಾವೈಕ್ಯವನ್ನು ಮೆರೆದು ಒಂದಾಗಿ ಸಾಗಿದರೆ ಮಾತ್ರ ರಾಷ್ಟ್ರದ ಅಭಿವೃದ್ಧಿ ಸಾಧ್ಯ.

ಜಯರಾಜ ತೋಳದ್, ಮಲ್ಲಿಗೆವಾಡ, ಕೊಪ್ಪಳ

ತಮ್ಮ ಮಕ್ಕಳಿಗೆ ತಾವೇ ವಿಷ ಉಣಿಸುತ್ತಿರುವವರು...

ರಾಜ್ಯದಲ್ಲಿ ಕೆಲವೆಡೆ ರೈತರು ಕಳೆ ಹಾಗೂ ಕೀಟನಾಶಕವಾಗಿ ಅತ್ಯಂತ ಅಪಾಯಕಾರಿ ಗ್ಲೈಕೊ ಫಾಸ್ಫೇಟ್ ಬಳಸುತ್ತಿರುವುದು ಆಘಾತಕಾರಿ. ಹೀಗೆ ತಿಳಿದೋ ತಿಳಿಯದೆಯೋ ಭೂಮಿಗೆ ವಿಷ ಉಣಿಸುತ್ತಿರುವ ಹಲವಾರು ರೈತರು ಈ ಮೂಲಕ ತಮ್ಮ ಮಕ್ಕಳಿಗೂ ತಾವು ನಿಧಾನವಾಗಿ ವಿಷ ಉಣಿಸುತ್ತಿದ್ದೇವೆ ಎಂಬುದನ್ನು ಅರಿಯಬೇಕಿದೆ. ಗೃಹ ಬಳಕೆ ವಸ್ತುಗಳನ್ನು ಖರೀದಿಸುವಾಗ ಹತ್ತಾರು ಬಾರಿ ಯೋಚಿಸಿ, ವಿಚಾರಿಸಿ, ಆ ವಸ್ತುಗಳು ದೀರ್ಘಾವಧಿ ಬಾಳಿಕೆ ಬರುತ್ತವೆ ಎಂಬುದನ್ನು ಖಾತರಿಪಡಿಸಿಕೊಂಡ ಮೇಲೆಯೇ ಖರೀದಿಸುವ ನಾವು, ನಮ್ಮ ಜೀವನಪೂರ್ತಿ ಬದುಕಲು ಆಸರೆಯಾದ ನಮ್ಮ ನೆಲ, ಜಲವನ್ನು ಈ ರೀತಿ ಹಾನಿಕಾರಕ ರಾಸಾಯನಿಕಗಳನ್ನು ಬಳಸಿ ಹಾಳು ಮಾಡುತ್ತಿರುವುದು ನಿಲ್ಲಬೇಕು. ಹಾನಿಕಾರಕ ರಾಸಾಯನಿಕ ಬಳಕೆಯ ನಿರ್ಬಂಧಕ್ಕೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು.

ಎಸ್.ನಾಗರಾಜ, ನಾಗೂರ, ಬಾಗಲಕೋಟೆ

ಮೌಲಿಕ ಗ್ರಂಥಗಳ ಸಾರ ಅಳವಡಿಸಿ

ಶಾಲಾ ಮಕ್ಕಳ ಪಠ್ಯಪುಸ್ತಕಗಳಲ್ಲಿ ಭಗವದ್ಗೀತೆ ಅಳವಡಿಸುವ ಕುರಿತಂತೆ ರಾಜಕೀಯ ನಾಯಕರ ಪರ, ವಿರೋಧದ ಹೇಳಿಕೆಗಳು ಹೊರಬೀಳುತ್ತಿವೆ. ಭಗವದ್ಗೀತೆಯ ಸೇರ್ಪಡೆ ಹಿಂದುತ್ವದ ಕಾರ್ಯಸೂಚಿ ಎಂಬಂತೆ ಬಿಂಬಿಸಿ ಬಿಜೆಪಿ ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿದ್ದರೆ, ಕಾಂಗ್ರೆಸ್ ನಾಯಕ ತನ್ವೀರ್ ಸೇಠ್ 'ಸರ್ಕಾರದ ಚಿಂತನೆ ಕೊರೊನಾಗಿಂತ ಅಪಾಯಕಾರಿ' ಎಂದು ಅಪದ್ಧ ಹೇಳಿಕೆ ನೀಡಿದ್ದಾರೆ. ಅದೇ ಪಕ್ಷದ ಸಿದ್ದರಾಮಯ್ಯ ಹಾಗೂ ಯು.ಟಿ.ಖಾದರ್ ಸಮತೂಕದ ಮಾತುಗಳನ್ನಾಡಿದ್ದಾರೆ. ಎಚ್.ಡಿ.ಕುಮಾರಸ್ವಾಮಿ ಅವರು 'ಭಗವದ್ಗೀತೆಯಿಂದ ಹೊಟ್ಟೆ ತುಂಬುತ್ತದೆಯೇ?' ಎಂದು ಪ್ರಶ್ನಿಸುವ ಮೂಲಕ, ಶಿಕ್ಷಣದ ಗುರಿ ಕೇವಲ 'ಹೊಟ್ಟೆ ಹೊರೆದುಕೊಳ್ಳುವುದು' ಎಂದು ಭಾವಿಸಿದಂತಿದೆ! ಭಗವದ್ಗೀತೆ ಮಾತ್ರ ನೈತಿಕ ಗ್ರಂಥವೆಂದೂ ಕುರಾನ್, ಬೈಬಲ್‌ಗಳು ಧಾರ್ಮಿಕ ಗ್ರಂಥಗಳೆಂದೂ ಆ ಕಾರಣಕ್ಕಾಗಿ ಅವುಗಳನ್ನು ಪಠ್ಯದಲ್ಲಿ ಸೇರಿಸಬಾರದೆಂದೂ ಸಂಸದ ಪ್ರತಾಪ ಸಿಂಹ ಸಂಕುಚಿತ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ಭಗವದ್ಗೀತೆ ಸಾರ್ವಕಾಲಿಕ ಶ್ರೇಷ್ಠ ಗ್ರಂಥ. ಗಾಂಧೀಜಿ ಭಗವದ್ಗೀತೆಯನ್ನು 'ತಾಯಿ' ಎಂದು ಭಾವಿಸಿ ಅನುಸರಿಸುತ್ತಿದ್ದರು. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದರಾದಿಯಾಗಿ ವಿಶ್ವದ ಶ್ರೇಷ್ಠ ತತ್ವಜ್ಞಾನಿಗಳು ಈ ಗ್ರಂಥದಿಂದ ಪ್ರಭಾವಿತರಾದವರು. ಅನೇಕ ಮಂದಿ ಸ್ವಾತಂತ್ರ್ಯ ಹೋರಾಟಗಾರರು ಇದರಿಂದ ಸ್ಫೂರ್ತಿ ಪಡೆದಿದ್ದಾರೆ. ಗಾಂಧೀಜಿ ಯಾವುದೇ ಧರ್ಮಗ್ರಂಥಗಳ ವಿರೋಧಿಯಾಗಿರಲಿಲ್ಲ. 'ನಾನು ನನ್ನ ಕೋಣೆಯ ಕಿಟಕಿ ಬಾಗಿಲುಗಳನ್ನು ತೆರೆದಿಡುತ್ತೇನೆ. ಎಲ್ಲ ಕಡೆಯಿಂದಲೂ ಗಾಳಿ, ಬೆಳಕು ಹರಿದುಬರಲಿ' ಎಂದು ಮಾರ್ಮಿಕವಾಗಿ ನುಡಿದಿದ್ದರು. ಸರ್ವಜ್ಞ ಕವಿಯೂ 'ಊರಿಂಗೆ ದಾರಿಯನು ಆರು ತೋರಿದರೇನು?' ಎಂದಿದ್ದಾನೆ. ಆದ್ದರಿಂದ ಭಗವದ್ಗೀತೆಯ ಜೊತೆಗೆ ಕುರಾನ್, ಬೈಬಲ್, ಗ್ರಂಥಸಾಹೇಬ್ ಮುಂತಾದ ಗ್ರಂಥಗಳ ಮೌಲಿಕ ಜಾತ್ಯತೀತ ಸಾರ್ವತ್ರಿಕ ಭಾಗಗಳನ್ನು ಪಠ್ಯದಲ್ಲಿ ಅಳವಡಿಸುವ ಮೂಲಕ ಮಕ್ಕಳಲ್ಲಿ ಮಾನವೀಯ ಮೌಲ್ಯ ಮತ್ತು ಧಾರ್ಮಿಕ ಸಹಿಷ್ಣುತೆಯನ್ನು ಬೆಳೆಸುವುದು ಇಂದಿನ ತುರ್ತು ಅಗತ್ಯವಾಗಿದೆ.

ಶಿವಕುಮಾರ ಬಂಡೋಳಿ, ಹುಣಸಗಿ

ತಂದು ನೋಡಿ...

ಸುಲಭವಾಗಿ ಸಿಕ್ಕ
ಮಾತ್ರಕ್ಕೆ ಬೇಕಾಬಿಟ್ಟಿಯಾಗಿ
ಬಳಸಬೇಡಿ ನೀರನ್ನು,
ಬೇಕೆಂದರೆ ಬಳಸಿ ನೋಡಿ
ಹೊತ್ತು ತಂದು ಒಂದೆರಡು
ತುಂಬಿದ ಕೊಡ!

ವಿಜಯ ಮಹಾಂತೇಶ್, ಬಾಗಲಕೋಟೆ

ಬಾಲಕಿಯಿಂದ ದುಸ್ಸಾಹಸದ ನಿರೀಕ್ಷೆ ತರವೇ?

ಬೆಂಗಳೂರಿನ ಹೆಬ್ಬಾಳದ ಬಸ್ ನಿಲ್ದಾಣದ ಬಳಿ ರಸ್ತೆ ದಾಟುವಾಗ ಒಂಬತ್ತನೇ ತರಗತಿಯ ಬಾಲಕಿಯು ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ (ಬಿಬಿಎಂಪಿ) ಕಸ ಸಾಗಣೆ ವಾಹನಕ್ಕೆ ಸಿಕ್ಕಿ ಪ್ರಾಣ ಕಳೆದುಕೊಂಡಿದ್ದಾಳೆ. ಪಾದಚಾರಿಗಳು ರಸ್ತೆ ದಾಟಲು ನಿರ್ಮಿಸಲಾಗಿರುವ ಕೆಳಸೇತುವೆಯಲ್ಲಿ ತುಂಬಿದ್ದ ಮಳೆನೀರನ್ನು ಬಿಬಿಎಂಪಿ ತೆರವುಗೊಳಿಸದಿದ್ದುದರಿಂದ, ಬಾಲಕಿ ಮುಖ್ಯರಸ್ತೆ ದಾಟಿ ಸಾವಿನ ದವಡೆಗೆ ಸಿಲುಕಬೇಕಾಯಿತು ಎಂಬುದು ಸ್ಥಳೀಯರ ಅಭಿಪ್ರಾಯ. '...ಕೆಳ ಸೇತುವೆಯಲ್ಲಿ ಹೆಚ್ಚು ನೀರಿರಲಿಲ್ಲ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿಕೆ ನೀಡಿದ್ದಾರೆ. ಅರ್ಥಾತ್, ವಿದ್ಯಾರ್ಥಿನಿ ರಸ್ತೆ ದಾಟುವ ಧೈರ್ಯ ಮಾಡದೆ 'ಸ್ವಲ್ಪ ನೀರಿದ್ದ' ಕೆಳ ಸೇತುವೆಯನ್ನು ಬಳಸಬೇಕಿತ್ತು ಎಂಬುದು ಅವರ ಮಾತಿನ ಇಂಗಿತ. ತಮ್ಮ ಅಸಮರ್ಪಕ ಕರ್ತವ್ಯ ನಿರ್ವಹಣೆಗೆ ಹೈಕೋರ್ಟ್‌ನಿಂದ ಪದೇಪದೇ ಕಟುಟೀಕೆಗೆ ಗುರಿಯಾಗುತ್ತಿರುವ ಮತ್ತು ಇತ್ತೀಚೆಗೆ ಪ್ರಕರಣವೊಂದರಲ್ಲಿ ಕ್ಷಮೆ ಯಾಚಿಸಿರುವ ಮುಖ್ಯ ಆಯುಕ್ತರು, 14 ವರ್ಷದ ಬಾಲಕಿಯಿಂದ 'ರಸ್ತೆ ದಾಟುವ ದುಸ್ಸಾಹಸ'ವನ್ನು ನಿರೀಕ್ಷಿಸುವುದು ಎಷ್ಟು ಸಮಂಜಸ?

ರಾಜ್ಯದ ರಾಜಧಾನಿಯಲ್ಲಿರುವ ಪಾದಚಾರಿ ಸುರಂಗ ಮಾರ್ಗಗಳಲ್ಲಿ ಹೆಚ್ಚಿನವು ವೈಜ್ಞಾನಿಕವಾಗಿ ನಿರ್ಮಾಣಗೊಂಡಿಲ್ಲ. ಹೀಗಾಗಿ, ತಗ್ಗು ಪ್ರದೇಶದಲ್ಲಿರುವ ಅವು ರಸ್ತೆಯಿಂದ ಹರಿದುಬರುವ ಮಳೆ ನೀರಿನಿಂದ ತುಂಬಿಕೊಳ್ಳುತ್ತವೆ. ನೀರು ಅಲ್ಲೇ ಸಂಗ್ರಹವಾಗಿ ಸೊಳ್ಳೆಗಳ ವೃದ್ಧಿಗೆ ಅವಕಾಶವಾಗುತ್ತದೆ. ನಗರದ ಹೃದಯ ಭಾಗದಲ್ಲಿರುವ ಇನ್ನು ಕೆಲವು ಪಾದಚಾರಿ ಸುರಂಗ ಮಾರ್ಗಗಳನ್ನು ಉಪಯೋಗಕ್ಕೆ ತೆರೆದಿಡದೆ ಬೀಗ ಜಡಿದಿಡಲಾಗಿದೆ! ಆಯಾ ಕ್ಷೇತ್ರದ ಜನಪ್ರತಿನಿಧಿಗಳು ಪಾದಚಾರಿ ಸುರಂಗ ಮಾರ್ಗಗಳ ಸೂಕ್ತ ನಿರ್ವಹಣೆಗೆ ಏರ್ಪಾಡು ಮಾಡಿ ಪಾದಚಾರಿಗಳ ಜೀವ ರಕ್ಷಣೆಗೆ ನೆರವಾಗಲಿ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಳಿ ಕಣಿವೆಯಲ್ಲಿ ಆಕ್ರೋಶದ ಕಿಡಿ

ಉತ್ತರ ಕರ್ನಾಟಕದ ಐದು ಜಿಲ್ಲೆಗಳಿಗೆ ನದಿಯ ನೀರು ಹರಿಸುವ ಬಜೆಟ್ ಪ್ರಸ್ತಾವಕ್ಕೆ ವಿರೋಧ

• ಸದಾಶಿವ ಎಂ.ಎಸ್

ಕಾಳಿ ನದಿಯ ನೀರನ್ನು ಉತ್ತರ ಕರ್ನಾಟಕದ ಐದು ಜಿಲ್ಲೆಗಳಿಗೆ ಹರಿಸುವ ರಾಜ್ಯ ಸರ್ಕಾರದ ಬಜೆಟ್ ಪ್ರಸ್ತಾವವು ನದಿಯ ಉದ್ದಗಲಕ್ಕೂ ಭಾರಿ ಆಕ್ಷೇಪ, ವಿರೋಧ ಹುಟ್ಟು ಹಾಕಿದೆ. ಹೇಳಿಕೆಗಳು, ಮನವಿಗಳು, ಪ್ರತಿಭಟನೆಗಳನ್ನು ದಾಟಿರುವ ಅಸಮಾಧಾನವು, ಈಗ ತಾಲ್ಲೂಕು, ಹೋಬಳಿಗಳ ಬಂದ್ ಹಂತಕ್ಕೆ ತಲುಪಿದೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಮೊರೆ ಹೋಗುವ ಸಿದ್ಧತೆಯೂ ನಡೆದಿದೆ.

ಅಸಮಾಧಾನವೇನು?:

ಸೂಪಾದಲ್ಲಿ ಜಲಾಶಯ ನಿರ್ಮಾಣದ ಸಂದರ್ಭದಲ್ಲಿ ನಿರಾಶ್ರಿತರಾದವರಿಗೆ ಅದೇ ಜೊಯಿಡಾ ತಾಲ್ಲೂಕಿನ ರಾಮನಗರದಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ. ನೀರು ಸಂಗ್ರಹಕ್ಕಾಗಿ ಹುಟ್ಟೂರು ತೊರೆದು ಬಂದವರಿಗೆ ಇನ್ನೂ ಕುಡಿಯುವ ನೀರಿನ ವ್ಯವಸ್ಥೆಯಾಗಿಲ್ಲ. ಕಾಳಿ ನದಿಯ ದಂಡೆಯಲ್ಲಿರುವ ಹಲವು ಗ್ರಾಮಗಳಲ್ಲೂ ನೀರಿನ ಸಮಸ್ಯೆಯಿದೆ. ಅದನ್ನು ಪರಿಹರಿಸಿಲ್ಲ ಎಂಬ ಅಸಮಾಧಾನ ಪ್ರಬಲವಾಗಿದೆ.

‘ಮೊದಲು ಇಲ್ಲಿನ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿ. ನಂತರ ಬೇರೆ ಜಿಲ್ಲೆಗಳಿಗೆ ನೀರು ಸಾಗಿಸಲು ಪೈಪ್‌ಲೈನ್ ಅಳವಡಿಸಿ’ ಎನ್ನುತ್ತಾರೆ ದಾಂಡೇಲಿ ನಗರಸಭೆಯ ಮಾಜಿ ಸದಸ್ಯರೂ ಆಗಿರುವ ಡಿ.ವೈ.ಎಫ್.ಒ ಜಿಲ್ಲಾ ಘಟಕದ ಕಾರ್ಯದರ್ಶಿ ಡಿ.ಸ್ಯಾಮ್ಸನ್.

‘ನೀರು ರಾಷ್ಟ್ರೀಯ ಸಂಪತ್ತು. ಎಲ್ಲರಿಗೂ ಕುಡಿಯಲು ಬೇಕು. ಹಾಗೆಂದು ನಮ್ಮ ಜಿಲ್ಲೆಗೆ ಅನ್ಯಾಯ ಮಾಡಿ ಬೇರೆ ಕಡೆಗೆ ತೆಗೆದುಕೊಂಡು ಹೋಗುವುದಲ್ಲ. ಸರ್ಕಾರವು ನಿರಾಶ್ರಿತರ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗೆ ವಿಶೇಷ ಅನುದಾನ ಬಿಡುಗಡೆ ಮಾಡಬೇಕು’ ಎಂದು ಆಗ್ರಹಿಸುತ್ತಾರೆ.

‘ದಾಂಡೇಲಿಯಲ್ಲಿ ಈಗಾಗಲೇ ಎರಡು ಕಾರ್ಖಾನೆಗಳು ಸ್ಥಗಿತಗೊಂಡಿವೆ. ಒಂದೇ ಒಂದು ಕಾಗದ ಕಾರ್ಖಾನೆಯಿದೆ. ಯುವಕರು ಉದ್ಯೋಗಕ್ಕಾಗಿ ಪ್ರವಾಸೋದ್ಯಮವನ್ನು ಅವಲಂಬಿಸಿದ್ದಾರೆ. ಹೀಗಿರುವಾಗ ಪಕ್ಷಾತೀತವಾಗಿ ಯೋಚಿಸಿ ನದಿಯ ನೀರನ್ನು ಬೇರೆ ಕಡೆ ಹರಿಸದಂತೆ ನೋಡಿಕೊಳ್ಳಬೇಕು’ ಎಂದು ದಾಂಡೇಲಿ ನಗರಸಭೆ ಸದಸ್ಯ ಮೋಹನ್ ಹಲವಾಯಿ ಒತ್ತಾಯಿಸುತ್ತಾರೆ.

‘ಸೂಪಾ, ನಾಗಝರಿ, ಕದ್ರಾ ಜಲಾಶಯಗಳಲ್ಲಿ ಉತ್ಪಾದನೆಯಾಗುವ ವಿದ್ಯುತ್ ನಾಡನ್ನು ಬೆಳಗುತ್ತಿದೆ. ಜೊತೆಗೇ ಕೈಗಾ ಅಣುವಿದ್ಯುತ್ ಸ್ಥಾವರದ ಟರ್ಬೈನ್ ತಂಪಾಗಿಸಲು ನದಿಯ ನೀರು ಬೇಕು. ಹೊಸ ಹೊಸ ಯೋಜನೆಗಳ ಮೂಲಕ ನದಿಯಲ್ಲಿ ನೀರಿನ ಹರಿವು ಕಡಿಮೆ ಮಾಡಿದರೆ ವಿದ್ಯುತ್ ಉತ್ಪಾದನೆಯ ಮೇಲೆ ಪರಿಣಾಮವಾಗಲಿದೆ’ ಎಂದು ಅವರು ಕಳವಳ ವ್ಯಕ್ತಪಡಿಸುತ್ತಾರೆ.

ದಾಂಡೇಲಿ ತಾಲ್ಲೂಕು ರಚನಾ ಸಮಿತಿ ಪ್ರಧಾನ ಕಾರ್ಯದರ್ಶಿ ರೋಶನ್ ನೇತ್ರಾವಳಿ ಕೂಡ ವಿರೋಧಿಸುತ್ತಾರೆ. ‘ಇದು ಅವೈಜ್ಞಾನಿಕ, ಕಾರ್ಯಸಾಧುವಲ್ಲದ ಯೋಜನೆ. ಹಳಿಯಾಳದ ಸಕ್ಕರೆ ಕಾರ್ಖಾನೆಗೆ ಈಗಾಗಲೇ ಪೈಪ್‌ಲೈನ್ ಮೂಲಕ ನೀರು ಸಾಗಿಸಿದ್ದಾರೆ. ಅದರ ಜೊತೆಗೇ ಹಳಿಯಾಳ ಪಟ್ಟಣಕ್ಕೆ 24/7 ಕುಡಿಯುವ ನೀರಿನ ಯೋಜನೆಗೆ ಪೈಪ್‌ಲೈನ್ ಅಳವಡಿಸಿದ್ದಾರೆ. ಕೆರೆ, ಬಾಂದಾರ ಭರ್ತಿ ಮಾಡಲು ಒಂದೂವರೆ ಮೀಟರ್ ಅಗಲದ ಪೈಪ್‌ಲೈನ್‌ಗಳನ್ನು ಅಳವಡಿಸಲಾಗುತ್ತಿದೆ. ಅಳ್ನಾವರಕ್ಕೂ ಇಲ್ಲಿಂದ ನೀರು ಕೊಂಡೊಯ್ಯಲಾಗುತ್ತಿದೆ. ಇನ್ನು ಐದು ಜಿಲ್ಲೆಗಳಿಗೆ ನೀರು ಸಾಗಿಸಲು ನದಿಯಲ್ಲಿ ಏನು ಉಳಿಯುತ್ತದೆ’ ಎಂದು ಪ್ರಶ್ನಿಸುತ್ತಾರೆ.

ಕಾಳಿ ನದಿಯು ಕಾರವಾರದ ಬಳಿ ಸದಾಶಿವಗಡದಲ್ಲಿ ಸಮುದ್ರಕ್ಕೆ ಸೇರುತ್ತದೆ. ಸಿಹಿನೀರಿನ ಹರಿವು ಕಡಿಮೆಯಾದಾಗ ಸಮುದ್ರದ ಉಪ್ಪು ನೀರು ನದಿಗೆ ಹರಿದು ಬರುತ್ತದೆ. ಇದರಿಂದ ಸುತ್ತಮುತ್ತಲಿನ ಸಾವಿರಾರು ಎಕರೆ ಕೃಷಿ ಜಮೀನು ಸವಳಾಗುತ್ತಿದೆ. ಫಲವತ್ತತೆ ಕಳೆದುಕೊಂಡು ಪಾಳು ಬೀಳುತ್ತಿದೆ. ಜೊತೆಗೆ ತಾಲ್ಲೂಕಿನ ಹತ್ತಾರು ಗ್ರಾಮಗಳಲ್ಲಿ ಬೇಸಿಗೆ ಆರಂಭದಿಂದಲೇ ಬಾವಿಗಳಲ್ಲಿ ಸಿಹಿನೀರು ಮಾಯವಾಗಿ ಉಪ್ಪು ನೀರು ತುಂಬಿಕೊಳ್ಳುತ್ತಿದೆ. ನದಿಯನ್ನೇ ಅವಲಂಬಿಸಿ ಅದೆಷ್ಟೋ ಮೀನುಗಾರ ಕುಟುಂಬಗಳಿವೆ. ಹಾಗಾಗಿ ನದಿ ತಿರುವಿನ ಯೋಜನೆಗೆ ಕರಾವಳಿ ಭಾಗದಲ್ಲೂ ತೀವ್ರ ಆಕ್ಷೇಪ ವ್ಯಕ್ತವಾಗುತ್ತಿದೆ.

‘ಕೃಷ್ಣೆಯ ನೀರು ಸದ್ಬಳಕೆಯಾಗಲಿ’

‘ಆಲಮಟ್ಟಿ ಜಲಾಶಯದ ಎತ್ತರವನ್ನು 519.6 ಅಡಿಗಳಿಂದ 524 ಅಡಿಗಳಿಗೆ ಏರಿಸಲು ಸುಪ್ರೀಂ ಕೋರ್ಟ್ ಅನುಮತಿ ಕೊಟ್ಟಿದೆ. ಹಿಡಕಲ್ ಜಲಾಶಯದಲ್ಲಿ 52 ಟಿ.ಎಂ.ಸಿ.ಗಳಷ್ಟು ನೀರು ಸಂಗ್ರಹವಾಗುತ್ತದೆ. ಕೃಷ್ಣ ನದಿ ನೀರಿನ ಬಳಕೆಯ ಬಗ್ಗೆ ಸರಿಯಾದ ಯೋಜನೆ ಮಾಡದೇ ಸರ್ಕಾರ ಮೌನವಾಗಿದೆ. ಅದನ್ನು ಬಿಟ್ಟು ಕಾಳಿ ಕಡೆ ಹೊರಟಿದೆ’ ಎನ್ನುತ್ತಾರೆ ಪರಿಸರ ಬರಹಗಾರ ಶಿವಾನಂದ ಕಳವೆ.

‘ಮಲಪ್ರಭಾಕ್ಕೆ 12 ಟಿ.ಎಂ.ಸಿ ನೀರಿನ ಕೊರತೆಯಿದೆ. ಮಹದಾಯಿ ಸೇರಿದಂತೆ ಬೇರೆ ಬೇರೆ ಮೂಲಗಳಿಂದ ಪಡೆಯುವ ಯೋಚನೆಯಲ್ಲಿ ಕೆಲವರಿದ್ದಾರೆ. ಕಾಳಿ ನದಿಯಿಂದ ತೆಗೆದುಕೊಂಡು ಹೋಗುವುದು ಅವರ ಆಲೋಚನೆಯಾಗಿದೆ’ ಎಂದು ಹೇಳುತ್ತಾರೆ.

‘ಚಿಕ್ಕೋಡಿ, ಬೆಳಗಾವಿ, ಬಾಗಲಕೋಟೆ ಭಾಗದಲ್ಲಿ ನೀರಾವರಿ ಅತಿಯಾಗಿದೆ. ಎರೆ ಮಣ್ಣಿಗೆ (ಕಪ್ಪು ಮಣ್ಣು) ಹೆಚ್ಚು ನೀರು ಹರಿಸಿದ್ದರಿಂದ ಮಣ್ಣು ಹಾಳಾಗಿದೆ. 60 ಟನ್ ಕಬ್ಬು ಬೆಳೆಯಬೇಕಾದ ಗದ್ದೆಯಲ್ಲಿ ಈಗ 15 ಟನ್ ಕೂಡ ಬೆಳೆಯುತ್ತಿಲ್ಲ. ಸರಾಸರಿ 29.5 ಟನ್‌ಗಳಿಗೆ ಇಳಿಕೆಯಾಗಿದೆ. ನೀರಿನ ಮಿತ ಬಳಕೆ ಕಲಿಸುವುದು ಬಿಟ್ಟು, ಹೆಚ್ಚು ನೀರು ಬೇಕಾಗುವ ಶುಗರ್ ಬೀಟ್ ಬೆಳೆಯನ್ನು ಬೆಳೆಯಲಾಗುತ್ತಿದೆ’ ಎಂದು ಅವರು ಬೇಸರಿಸುತ್ತಾರೆ.

‘ಮೇಲ್ನೋಟಕ್ಕೆ ಸಮೃದ್ಧಿ ಅಂದರೂ ನೀರಿನಿಂದ ಆಗಿರುವ ಸಂಕಟಗಳನ್ನು ಯೋಚಿಸಬೇಕು. ಎರೆ ಮಣ್ಣಿನ ಹೊಲಗಳಲ್ಲಿ ಕೆರೆಗಳನ್ನು ಮಾಡಿ ಪ್ರವಾಹದ ನೀರನ್ನು ತುಂಬಿಸಿ ಅಂತರ್ಜಲ ಹೆಚ್ಚಿಸಿ ಕೃಷಿ ಮಾಡುವ ಅವಕಾಶಗಳಿವೆ. ಸರ್ಕಾರ ದೊಡ್ಡ ಜಲಾಶಯಗಳು, ಪೈಪ್‌ಲೈನ್‌ಗಳ ಬಗ್ಗೆಯೇ ಯೋಚಿಸುತ್ತಿದೆ’ ಎಂದು ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಕಾಳಿಯ ಮೇಲಿನ ಅವಲಂಬನೆ

- ವಿದ್ಯುತ್ ಉತ್ಪಾದನೆಗೆ ಐದು ಜಲಾಶಯಗಳು
- ಕೈಗಾ ಅಣು ವಿದ್ಯುತ್ ಸ್ಥಾವರ
- ದಾಂಡೇಲಿ ಕಾಗದ ಕಾರ್ಖಾನೆ
- ಹಳಿಯಾಳ ಸಕ್ಕರೆ ಕಾರ್ಖಾನೆ
- ದಾಂಡೇಲಿ ಮೊಸಳೆ ಉದ್ಯಾನ
- ಕಾಳಿ ಹುಲಿ ಸಂರಕ್ಷಿತ ಪ್ರದೇಶ
- ಪ್ರವಾಸೋದ್ಯಮದ ಚಟುವಟಿಕೆಗಳು
- ದಾಂಡೇಲಿ ನಗರಕ್ಕೆ ಕುಡಿಯುವ ನೀರು
- ಕೆ.ಪಿ.ಸಿ.ಎಲ್ ಅಂಬಿಕಾನಗರಕ್ಕೆ ನೀರು
- ಹಳಿಯಾಳ ಪಟ್ಟಣಕ್ಕೆ 24/7 ನೀರು

ಮುಂಬರುವ ಯೋಜನೆಗಳು

- ಅಳ್ನಾವರಕ್ಕೆ ಕುಡಿಯುವ ನೀರು
- ಬಹುಗ್ರಾಮ ಕುಡಿಯುವ ನೀರು ಸರಬರಾಜು
- ಕೈಗಾ ಅಣು ವಿದ್ಯುತ್ ಸ್ಥಾವರದಲ್ಲಿ 2 ಹೊಸ ಘಟಕಗಳು
- ಹಳಿಯಾಳ ಸಕ್ಕರೆ ಕಾರ್ಖಾನೆಯ ಸಾಮರ್ಥ್ಯ ದ್ವಿಗುಣ
- ದಾಂಡೇಲಿ ಪೇಪರ್ ಮಿಲ್‌ನಲ್ಲಿ ಉತ್ಪಾದನೆ ಹೆಚ್ಚಳ

184 ಕಿ.ಮೀ ಉಗಮ ಸ್ಥಾನ ಡಿಗ್ಗಿಯಿಂದ ಸಮುದ್ರ ಸೇರುವ ಸದಾಶಿವಗಡ ತನಕ ಕಾಳಿ ನದಿಯ ಉದ್ದ

‘ಅಳ್ನಾವರಕ್ಕೆ ಸಾಗಿಸುವುದನ್ನೇ ಬಿಡಿ’

‘ಅಳ್ನಾವರಕ್ಕೆ ನೀರು ಸಾಗಿಸಲು ಈಗ ನಡೆಯುತ್ತಿರುವ ಕಾಮಗಾರಿಯೇ ಐದು ಜಿಲ್ಲೆಗಳಿಗೆ ನೀರು ಸಾಗಿಸುವುದರ ಪ್ರಾರಂಭಿಕ ಹಂತ. ಹಾಗಾಗಿ ಅಳ್ನಾವರಕ್ಕೆ ನೀರು ಸಾಗಿಸುವ ಯೋಜನೆಯನ್ನೇ ಮೊದಲು ನಿಲ್ಲಿಸಬೇಕು’ ಎಂಬ ಆಗ್ರಹ ಕಾಳಿ ಬ್ರಿಗೇಡ್ ಸಂಚಾಲಕ ರವಿ ರೇಡ್ಕರ್ ಅವರದ್ದು.

‘ನದಿಯ ಮೇಲೆ ಯೋಜನೆಗಳ ಭಾರ ಜಾಸ್ತಿಯಾಗಿದೆ. ಬೇರೆ ಊರುಗಳಿಗೆ ನೀರು ಸಾಗಿಸಿದರೆ ಕಾಳಿ ಖಂಡಿತ ಒಣಗುತ್ತದೆ’ ಎಂದು ಎಚ್ಚರಿಕೆ ನೀಡುತ್ತಾರೆ.

ದಾಂಡೇಲಿಯಲ್ಲಿ ಕಾಳಿ ನದಿಯ ದಂಡೆಯಲ್ಲಿ ದೊಡ್ಡ ದೊಡ್ಡ ಜಾಕ್‌ವೆಲ್‌ಗಳನ್ನು ನಿರ್ಮಿಸಲಾಗುತ್ತಿದೆ

ಜೊಯಿಡಾ ಜನ ನಾಡಿಗೆ ಬೆಳಕು ಕೊಡಲು ತಮ್ಮ ಊರನ್ನು ತ್ಯಾಗ ಮಾಡಿದರು. ಆದರೆ, ಅವರೇ ಈಗ ಕತ್ತಲಲ್ಲಿದ್ದಾರೆ

ಮೋಹನ ಹಲವಾಯಿ
ದಾಂಡೇಲಿ ನಗರಸಭೆ ಸದಸ್ಯ

‘ಮರ್ಮವೇನು?’

‘1.70 ಲಕ್ಷ ಜನಸಂಖ್ಯೆ ಇರುವ ಹಳಿಯಾಳ ತಾಲ್ಲೂಕಿಗೆ 14 ಇಂಚಿನ ಪೈಪ್‌ನಲ್ಲಿ ನೀರು ಸಾಗಿಸಲಾಗಿದೆ. ಆದರೆ, 18 ಸಾವಿರ ಜನಸಂಖ್ಯೆಯ ಧಾರವಾಡ ಜಿಲ್ಲೆಯ ಅಳ್ನಾವರ ಪಟ್ಟಣಕ್ಕೆ ಒಂದೂವರೆ ಮೀಟರ್‌ಗಳಷ್ಟು ಬೃಹತ್ ಗಾತ್ರದ ಪೈಪ್‌ಗಳನ್ನು ಅಳವಡಿಸಲಾಗುತ್ತಿದೆ. ಇದ್ಯಾಕೆ ಹೀಗೆ’ ಎಂದು ರವಿ ರೇಡ್ಕರ್ ಪ್ರಶ್ನಿಸುತ್ತಾರೆ.

‘ಕಾಳಿಯ ನೀರನ್ನು ಹಳಿಯಾಳದಿಂದ ಅಳ್ನಾವರಕ್ಕೆ ಸಾಗಿಸಿ, ಕಳಸಾ ಬಂಡೂರಿ ನಾಲೆಗೆ ಸೇರಿಸುತ್ತಾರೆ ಎಂಬ ಮಾತುಗಳಿವೆ. ಯೋಜನೆಯನ್ನು ಕೈಬಿಡಲು ಪ್ರತಿಯೊಬ್ಬರೂ ಹೋರಾಡುವ ಅನಿವಾರ್ಯ ಎದುರಾಗಿದೆ’ ಎಂದು ಮೋಹನ್ ಹಲವಾಯಿ ಹೇಳುತ್ತಾರೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

‘ನಿಗೂಢ ಯೋಜನೆ’

‘ಕಾಳಿ ನದಿಯಿಂದ ನೀರು ಸಾಗಿಸುವ ಯೋಜನೆಗಳನ್ನು ನಿಗೂಢವಾಗಿ ಮಾಡಲಾಗುತ್ತಿದೆ. ಸ್ಪಷ್ಟವಾದ ಮಾಹಿತಿಯನ್ನೇ ಕೊಡುತ್ತಿಲ್ಲ. ಹಳಿಯಾಳ ತಾಲ್ಲೂಕಿನ ಕೆರೆ ಮತ್ತು ಬಾಂದಾರಗಳನ್ನು ತುಂಬಿಸುವ ಕಾಮಗಾರಿಯ ಪಂಪ್‌ಹೌಸ್ ನಿರ್ಮಾಣಕ್ಕೆ, ದಾಂಡೇಲಿ ನಗರಸಭೆಯು ಒಂದು ಎಕರೆ 10 ಗುಂಟೆ ಜಾಗವನ್ನು 2020ರ ಜುಲೈ 6ರಂದು ಮಾರಾಟ ಮಾಡಿದೆ’ ಎಂದು ರೋಶನ್ ನೇತ್ರಾವಳಿ ವಿವರಿಸುತ್ತಾರೆ.

‘ಅದರ ಒಪ್ಪಂದಕ್ಕೆ ಕರ್ನಾಟಕ ನೀರಾವರಿ ನಿಗಮದ ಖಾನಾಪುರದ ಕಳಸಾ ಯೋಜನಾ ವಿಭಾಗದ ಕಾರ್ಯ ನಿರ್ವಾಹಕ ಎಂಜಿನಿಯರ್ ಸಹಿ ಮಾಡಿದ್ದಾರೆ’ ಎಂದು ಹೇಳುತ್ತಾರೆ.

‘ಅಳ್ನಾವರದಿಂದ 17 ಕಿಲೋಮೀಟರ್ ದೂರದಲ್ಲಿ ಘಟಪ್ರಭಾ ನದಿ ಹರಿಯುತ್ತದೆ. ಮೂರು ದೊಡ್ಡ ಪೈಪ್‌ಲೈನ್‌ಗಳಲ್ಲಿ ಕಾಳಿ ನದಿಯ ನೀರನ್ನು ಘಟಪ್ರಭಾಕ್ಕೆ ಹರಿಸುವ ಯೋಚನೆ ಇದ್ದಂತಿದೆ’ ಎಂಬುದು ಅವರ ಶಂಕೆಯಾಗಿದೆ.

ನೀರು ಇರುವ ಕಾರಣ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಇಲ್ಲಿನ ನೀರನ್ನು ಕೊಂಡೊಯ್ದರೆ ಪ್ರವಾಸೋದ್ಯಮ, ಪರಿಸರ ಮತ್ತು ವನ್ಯಜೀವಿಗಳಿಗೆ ತೊಂದರೆಯಾಗಲಿದೆ

ಡಿ.ಸ್ಯಾಮ್ಸನ್
ಡಿ.ವೈ.ಎಫ್.ಒ ಜಿಲ್ಲಾ ಘಟಕದ ಕಾರ್ಯದರ್ಶಿ

ಸರ್ಕಾರ ದಬ್ಬಾಳಿಕೆಯಿಂದ ಯೋಜನೆ ಜಾರಿ ಮಾಡುತ್ತಿದೆ. ಇದರ ವಿರುದ್ಧ ಕಾನೂನುಬದ್ಧವಾಗಿ ನಾವು ರಾಷ್ಟ್ರೀಯ ಹಸಿರುಪೀಠದಲ್ಲಿ ಹೋರಾಡುತ್ತೇವೆ

ರೋಶನ್ ನೇತ್ರಾವಳಿ, ಪ್ರಧಾನ ಕಾರ್ಯದರ್ಶಿ
ದಾಂಡೇಲಿ ತಾಲ್ಲೂಕು ರಚನಾ ಸಮಿತಿ

ಡಿಗ್ಗಿಯಿಂದ ಸದಾಶಿವಗಡದವರೆಗೆ ಹಲವು ಊರುಗಳಿಗೆ ಇನ್ನೂ ಕುಡಿಯುವ ನೀರಿಲ್ಲ. ಮೊದಲು ಆ ವ್ಯವಸ್ಥೆ ಮಾಡಿ. ಇಲ್ಲೇ ನೀರಿನ ಕೊರತೆಯಾದರೆ ಎಲ್ಲಿಂದ ತರುತ್ತೀರಿ?

ರವಿ ರೇಡ್ಕರ್, ಕಾಳಿ ಬ್ರಿಗೇಡ್ ಸಂಚಾಲಕ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 75

ಮಾಯಾಬಲೆಗೆ ಬಿದ್ದ ನಾರದ

ಸೃಷ್ಟಿಖಂಡದ ‘ನಾರದ ಮೋಹವರ್ಣನ’ ಎಂಬ ಮೂರನೆಯ ಅಧ್ಯಾಯದಲ್ಲಿ ಸೂತಮುನಿಯು ಗರ್ವಿತ ನಾರದನಿಗೆ ಪಾಠ ಕಲಿಸಿದ ಕತೆ ಹೇಳುತ್ತಾನೆ.

‘ವಿಷ್ಣುವಿನ ಮುಂದೆ ಜಂಭದ ಮಾತಾಡಿ, ಗರ್ವ ಮೆರೆದ ನಾರದ ಮಹರ್ಷಿ ವಿಶ್ವಸಂಚಾರ ಮಾಡಲು ಹೊರಟಿದ್ದ. ಈ ಸಂದರ್ಭದಲ್ಲಿ ಹರಿಯು ಶಿವನ ಇಚ್ಛೆಯಂತೆ ಒಂದು ಮಾಯಾಸೂತ್ರವನ್ನು ರೂಪಿಸಿದ. ನಾರದನು ಹೋಗುವ ದಾರಿಯಲ್ಲಿ ಒಂದು ಮಾಯಾನಗರಿ ನಿರ್ಮಿಸಿದ. ಅದು ನೂರು ಯೋಜನಗಳಷ್ಟು ವಿಸ್ತಾರವಾಗಿತ್ತು.

ಮಾಯಾನಗರವು ತನ್ನ ವಾಸವಾದ ವೈಕುಂಠಲೋಕಕ್ಕಿಂತಲೂ ಹೆಚ್ಚು ಸುಂದರವಾಗಿರುವಂತೆ ವಿಷ್ಣು ತನ್ನ ಮಾಯೆಯಿಂದ ಸೃಷ್ಟಿಸಿದ್ದ. ಆ ಮಾಯಾನಗರಿಯಲ್ಲಿ ಎಲ್ಲಿ ನೋಡಿದರೂ ನಾನಾ ವಿಧವಾದ ಆಕರ್ಷಕ ಪದಾರ್ಥಗಳು ಕಂಗೊಳಿಸುತ್ತಿದ್ದವು. ಅಲ್ಲಿ ಸ್ತ್ರೀಪುರುಷರು ಸ್ವಚ್ಛಂದವಾಗಿ ವಿಹರಿಸುತ್ತಿದ್ದರು. ಎಲ್ಲಾ ವರ್ಗದ ಜನರು ಅಲ್ಲಿ ವಾಸಿಸುತ್ತಿದ್ದರು. ಮಾಯಾನಗರವನ್ನು ಶೀಲನಿಧಿ ಎಂಬ ಐಶ್ವರ್ಯವಂತ ದೊರೆ ಆಳುತ್ತಿದ್ದ. ಅವನ ಶ್ರೀಮತಿ ಎಂಬ ಮಗಳಿಗೆ ಸ್ವಯಂವರವನ್ನು ಮಾಡುವ ಸಿದ್ದತೆಯಲ್ಲಿ ತೊಡಗಿದ್ದ. ಶೀಲನಿಧಿ ಮಹಾರಾಜನ ಮಗಳನ್ನು ವರಿಸಬೇಕೆಂದು ಹಂಬಲಿಸಿ, ದಶದಿಕ್ಕುಗಳಿಂದ ನಾನಾ ಆಭರಣ ಭೂಷಿತರಾದ ರಾಜಕುಮಾರರು ಅಪಾರ ಸಂಖ್ಯೆಯಲ್ಲಿ ನೆರೆದಿದ್ದರು. ಇದರಿಂದ ಆ ನಗರದಲ್ಲಿ ವಿವಿಧ ದೇಶಗಳ ರಾಜಕುಮಾರರು ಮತ್ತವರ ಒಡ್ಡೋಲಗದವರು ತುಂಬಿಹೋಗಿದ್ದರು.

ಅಲಂಕಾರಭೂಷಿತವಾದ ನಗರದಲ್ಲಿ ನಡೆಯುತ್ತಿದ್ದ ಸ್ವಯಂವ ರದ ಸಂಭ್ರಮವನ್ನು ನೋಡಿದ ನಾರದ ಮೋಹಾವಿಷ್ಟನಾಗಿ ಮನ್ಮಥೋದ್ರೇಕಿತನಾದ. ಮನದೊಳಗೆ ಏಳುತ್ತಿದ್ದ ತುಮುಲ ಮತ್ತು ಕುತೂಹಲಗಳನ್ನು ತಾಳಲಾರದೆ, ಅರಮನೆಯ ಒಳಗೆ ಹೋದ. ಮುನಿಶ್ರೇಷ್ಠನಾದ ನಾರದನು ಬಂದುದನ್ನು ಕಂಡು ರಾಜ ಶೀಲನಿಧಿಯು ಉತ್ತಮವಾದ ರತ್ನಸಿಂಹಾಸನವೊಂದರಲ್ಲಿ ಅವನನ್ನು ಕುಳ್ಳಿರಿಸಿ, ಪಾದಪೂಜೆ ಮಾಡಿದ. ನಂತರ, ಶೀಲನಿಧಿ ರಾಜ ತನ್ನ ಮಗಳು ಶ್ರೀಮತಿಯಿಂದಲೂ ನಾರದನ ಕಾಲುಗಳಿಗೆ ನಮಸ್ಕಾರ ಮಾಡಿಸಿದ. ರಾಜಕುಮಾರಿ ಶ್ರೀಮತಿಯನ್ನು ಕಂಡು ನಾರದಮುನಿ ವಿಸ್ಮಯಗೊಂಡು, ‘ಎಲೈ ರಾಜನೇ, ದೇವಕನ್ಯೆಯಂತೆ ಸುಂದರಿಯೂ, ಮಹಾಭಾಗ್ಯಶಾಲಿನಿಯೂ ಆದ ಈ ಕನ್ಯೆ ಯಾರು?’ ಎಂದು ಕೇಳಿದ.

ಆಗ ರಾಜ ಶೀಲನಿಧಿ ‘ಓ ಮುನೀಂದ್ರ! ಇವಳು ನನ್ನ ಮಗಳು. ಹೆಸರು ಶ್ರೀಮತಿ. ಇವಳು ಮದುವೆಯಾಗಲು ಈಗ ತಕ್ಕ ವಯಸ್ಸನ್ನು ಹೊಂದಿದ್ದಾಳೆ. ಆದುದರಿಂದ ಸರ್ವಲಕ್ಷಣಸಂಪನ್ನಳಾದ ಈಕೆಗೆ ಅನುರೂಪನಾದ ವರನನ್ನು ಆಯ್ಕೆ ಮಾಡಲು ಇಂದು ಸ್ವಯಂವರವನ್ನು ಕೈಗೊಂಡಿದ್ದೇನೆ. ಇವಳ ಜಾತಕಲಕ್ಷಣವನ್ನು ನೋಡಿ, ಈಕೆಯ ಭಾಗ್ಯವೆಂಥದು ಎಂಬುದನ್ನು ತಿಳಿಸಬೇಕು, ಎಂತಹ ವರನು ಇವಳಿಗೆ ದೊರೆಯುವವನು ಎಂಬುದನ್ನೂ ಸಹ ಹೇಳಬೇಕು’ ಎಂದು ಕೋರುತ್ತಾನೆ.

ಹೀಗೆ ಶೀಲನಿಧಿ ಮಹಾರಾಜ ಕೇಳುವಾಗ ನಾರದ ಮೋಹದ ಮೋಡಿಯಲ್ಲಿ ತೇಲುತ್ತಿದ್ದ. ತ್ರಿಲೋಕಸುಂದರಿಯಾದ ರಾಜಕುಮಾರಿ ಶ್ರೀಮತಿಯನ್ನು ತಾನೇ ವರಿಸಬೇಕೆಂಬ ಬಯಕೆ ಹುಟ್ಟಿತು. ಕಾಮ ವಿಕಾರಗಳಿಗೆ ಸಿಲುಕಿದ ನಾರದ ರಾಜನಿಗೆ ಆಕೆ ವರಿಸುವ ವರನ ವಿವರವನ್ನು ಹೇಳಿದ. ನಾರದ ಹೇಳಿದ ವರನ ವಿವರಣೆ ಅವನದೇ ಆಗಿತ್ತು. ‘ಎಲೈ ರಾಜೇಂದ್ರ! ಒಳ್ಳೆಯ ಲಕ್ಷಣಗಳಿಂದ ಶೋಭಿತಳಾದ ನಿನ್ನ ಮಗಳು ಮಹಾಭಾಗ್ಯಶಾಲಿನಿ. ಲಕ್ಷ್ಮಿಯಂತೆ ಸುಗುಣಗಳಿಗೆ ನೆಲೆಯಾಗಿದ್ದಾಳೆ. ಆದ್ದರಿಂದ ಈಕೆ ಸಾಮಾನ್ಯರನ್ನು ವರಿಸಲಾರಳು. ಸರ್ವೇಶ್ವರನೂ, ಎಂದಿಗೂ ಸೋಲನ್ನೇ ಕಂಡರಿಯದ ಮಹಾ ಪರಾಕ್ರಮಶಾಲಿಯಾಗಿರುತ್ತಾನೆ. ಮನ್ಮಥನನ್ನು ಜಯಿಸಿದ ಮತ್ತು ಶಿವನಿಗೆ ಸಮಾನನೂ ಆದ ಸುರಶ್ರೇಷ್ಠನೊಬ್ಬ ಈಕೆ ಮದುವೆ ಯಾಗುತ್ತಾಳೆ’ ಎಂದು ತನ್ನ ವರ್ಣನೆಯನ್ನೇ ಹೇಳಿದ. ಅನಂತರ ರಾಜನನ್ನು ಬೀಳ್ಕೊಂಡು ಸ್ವೇಚ್ಛಾಗಾಮಿಯಾದ ನಾರದ ಅಲ್ಲಿಂದ ಹೊರಟುಹೋದ.

ದಾರಿಯಲ್ಲಿ ಹೋಗುವಾಗ ನಾರದಮುನಿಗೆ ರಾಜಕುಮಾರಿ ಶ್ರೀಮತಿಯ ಸುಂದರರೂಪವೇ ಕಾಡತೊಡಗಿತು. ಶಿವನ ಮಾಯೆಯಿಂದ ವಿಮೋಹಿತನಾಗಿದ್ದ ನಾರದನಿಗೆ ವಿರಹ ಉಕ್ಕಿ ವಿಹ್ವಲನಾದ. ಆಗ ನಾರದಮುನಿಯ ಮನದಲ್ಲಿ ‘ಹೇಗಾದರೂ ಇವಳನ್ನು ವರಿಸಬೇಕೆಂಬ ಉತ್ಕಟೇಚ್ಛೆ ಹೆಚ್ಚಾಯಿತು. ಸುಂದರರಾದ ರಾಜಕುಮಾರರು ನೆರೆದಿರುವ ಸ್ವಯಂವರದಲ್ಲಿ ತನ್ನೊಬ್ಬನನ್ನೇ ಆಕೆ ಆಯ್ಕೆ ಮಾಡುವುದು ಹೇಗೆ’ – ಎಂದು ಯೋಚಿಸತೊಡಗಿದ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸ್ವಾತಂತ್ರ್ಯ ಮಿತಿ

ಪುರುಷನ ಸ್ವಾತಂತ್ರ್ಯವವನ ತೋಳ್ಗಿರುವಷ್ಟು |
ಪರಿಧಿಯೊಂದರೊಳದರ ಯತ್ನಕೆಡೆಯುಂಟು ||
ತಿರುಗುವುದು ಮಡಿಸುವುದು ನಿಗುರುವುದು ನೀಳುವುದು |
ತೊರೆದು ಹಾರದು ತೋಳು – ಮಂಕುತಿಮ್ಮ
|| 590 ||

ಪದ-ಅರ್ಥ: ಸ್ವಾತಂತ್ರ್ಯವವನ = ಸ್ವಾತಂತ್ರ್ಯವು + ಅವನ, ತೋಳ್ಗಿರುವಷ್ಟು = ತೋಳಿಗೆ + ಇರುವಷ್ಟು, ಪರಿಧಿಯೊಂದರೊಳದರ = ಪರಿಧಿ (ಮಿತಿ) + ಒಂದರೊಳು + ಅದರ, ಯತ್ನಕೆಡೆಯುಂಟು = ಯತ್ನಕೆ + ಎಡೆಯುಂಟು, ನೀಳುವುದು = ಚಾಚುವುದು, ಎಟಕಿಸುವುದು

ವಾಚ್ಯಾರ್ಥ: ಮನುಷ್ಯನ ಸ್ವಾತಂತ್ರ್ಯ ಅವನ ತೋಳಿಗಿರುವಷ್ಟೆ. ಒಂದು ಮಿತಿಯಲ್ಲಿ ಅದರ ಪ್ರಯತ್ನಕ್ಕೆ ಸ್ಥಾನವಿದೆ. ಕೈಯನ್ನು ತಿರುಗಿಸುವುದು, ಮಡಿಸುವುದು, ಬಿಗಿಮಾಡುವುದು ಮತ್ತು ಚಾಚುವುದು ಇಂಥವುಗಳನ್ನು ಮಾಡಬಹುದೆ ವಿನಃ ಅದು ತೋಳನ್ನು ಬಿಟ್ಟು ಹಾರಲಾರದು.

ವಿವರಣೆ: ಎಲ್ಲರೂ ಬಯಸುವುದು ಸ್ವಾತಂತ್ರ್ಯವನ್ನು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ‘ಇಡೀ ಸಾಮಾಜಿಕ ಜೀವನವೇ ಒಂದು ಸ್ವಾತಂತ್ರ್ಯ ತತ್ವದ ಪ್ರತಿಪಾದನೆ’. ಹುಟ್ಟಿನಿಂದ ಪ್ರತಿಯೊಬ್ಬ ವ್ಯಕ್ತಿ ಸ್ವತಂತ್ರನಾಗಿರುತ್ತಾನೆ. ಒಂದು ಮಗು ತನಗೆ ಏನು ಬೇಕೋ ಅದನ್ನೇ ಮಾಡುತ್ತದೆ. ಬೇಡವಾದುದನ್ನು ಮುಟ್ಟುವುದಿಲ್ಲ. ವ್ಯಕ್ತಿ ಬೆಳೆಯುತ್ತಾನೆ. ಅಭಿವೃದ್ಧಿ ಹೊಂದುತ್ತಾನೆ. ಅವನ ಸಂಪರ್ಕ ಪರಿಸರ ಮತ್ತು ಸಮಾಜದೊಂದಿಗೆ ಗಾಢವಾಗುತ್ತ ಹೋಗುತ್ತದೆ. ಈ ಸಂಬಂಧಗಳು ಗಟ್ಟಿಯಾಗುತ್ತ ಬಂದಂತೆ, ಆಂತರಿಕವಾಗಿ ಸ್ವಾತಂತ್ರ್ಯದ ಕಲ್ಪನೆ ಕ್ರಮೇಣ ಮರೆಯಾಗುತ್ತ ಬರುತ್ತದೆ. ಆಗ ಮನುಷ್ಯ ತನ್ನ ನಡೆಯನ್ನು, ಅವಕಾಶಗಳನ್ನು, ಅಪೇಕ್ಷೆಗಳನ್ನು ಸುತ್ತಲಿನ ಪರಿಸರಕ್ಕೆ ಹೊಂದುವಂತೆ ನಿಯಮಿತಗೊಳಿಸುತ್ತ ಹೋಗುತ್ತಾನೆ. ತನಗೆ ಬೇಕಾದ ಹಾಗೆ ಮಾಡುವುದು ಸರಿಯಲ್ಲ ಎಂದು ತಿಳಿಯುತ್ತಾನೆ. ಒಬ್ಬ ಸನ್ಯಾಸಿ ಸಹಿತ ಮನಸ್ಸಿಗೆ ಬಂದಂತೆ ಇರಲಾರ. ಅವನು ಎಲ್ಲವನ್ನೂ ತ್ಯಾಗ ಮಾಡಿದ್ದರೂ ಸಮಾಜಕ್ಕೆ ಒಪ್ಪಿತವಾದ ನಡೆಗಳನ್ನು ಪಾಲಿಸುತ್ತಾನೆ.

ಸ್ವಾತಂತ್ರ್ಯ, ವೈಯಕ್ತಿಕ ಜವಾಬ್ದಾರಿಯನ್ನು ಅಪೇಕ್ಷಿಸುತ್ತದೆ. ತನ್ನ ನೆಮ್ಮದಿ, ಸಂತೋಷಗಳಿಗಾಗಿ ಮತ್ತೊಬ್ಬರಿಗೆ ತೊಂದರೆ ನೀಡುವುದು ಸ್ವಾತಂತ್ರ್ಯವಲ್ಲ. ಇದು ನನ್ನ ಸ್ವಾತಂತ್ರ್ಯ, ನಾನು ಹೇಗಾದರೂ ಇರುತ್ತೇನೆ ಎಂದು ಇತ್ತೀಚೆಗೆ ಪ್ಯಾರಿಸ್‌ನಲ್ಲಿ, ಒಬ್ಬ ತರುಣ ತುಂಬಿದ ಸಭೆಯಲ್ಲಿ ಬೆತ್ತಲೆಯಾಗಿ ಓಡಿ ಹೋದ. ಅವನನ್ನು ಹಿಡಿದು ಜೈಲಿಗೆ ಹಾಕಿದರು. ನೀನು ಹೇಗಾದರೂ ಇರಬಹುದು ಆದರೆ ಆ ನಡೆ ಸಮಾಜಕ್ಕೆ ಇರಿಸುಮುರಿಸು ಮಾಡಬಾರದು ಎಂದು ಎಚ್ಚರಿಕೆ ನೀಡಿದರು.

ಹಾಗೆಂದರೆ ನಮ್ಮ ಮನಸ್ಸಿಗೆ ಬಂದ ಹಾಗೆ ಮಾಡುವುದು ಸ್ವಾತಂತ್ರ್ಯವಲ್ಲ, ಅದು ಅನಿಯಂತ್ರತೆ. ಎಲ್ಲಿ ಎಲ್ಲಿ ಸ್ವಾತಂತ್ರ್ಯ ನೈತಿಕತೆಯ ಮಿತಿಯಲ್ಲಿದೆಯೋ ಅಲ್ಲಿ ಸುವ್ಯವಸ್ಥೆ ಇರುತ್ತದೆ. ಎಲ್ಲಿ ಸ್ವಾತಂತ್ರ್ಯ ಮಿತಿಗಳನ್ನು ಮೀರುತ್ತದೆಯೋ ಅಲ್ಲಿ ಅಸ್ಥಿರತೆ, ಅನಾಯಕತೆ ಕಾಣುತ್ತದೆ. ಇದನ್ನು ನಾವು ಪುರಾಣಗಳಲ್ಲಿ, ಇತಿಹಾಸದಲ್ಲಿ ಮತ್ತು ವರ್ತಮಾನದಲ್ಲಿ ಕಂಡಿದ್ದೇವೆ. ಹಿರಣ್ಯಕಶಿಪು, ಹಿಟ್ಲರ್, ಸದ್ದಾಂ ಹುಸೇನ್ ಮತ್ತು ಉತ್ತರ ಕೊರಿಯಾದ ಹುಚ್ಚು ದೊರೆ ಕಿಮ್-ಜಾಂಗ್-ಉನ್. ಇವರೆಲ್ಲ ಸ್ವಾತಂತ್ರ್ಯದ ಮಿತಿಗಳನ್ನು ಅರಿಯದೆ ಅನಾಹುತಗಳನ್ನು ಮಾಡಿದವರು.

ಕಗ್ಗ ಅದನ್ನು ಸುಂದರ ಉದಾಹರಣೆಯೊಂದಿಗೆ ತಿಳಿಸುತ್ತದೆ. ಮನುಷ್ಯನ ಸ್ವಾತಂತ್ರ್ಯ ಅವನ ತೋಳಿಗಿರುವಷ್ಟೇ. ಅದು ಒಂದು ಮಿತಿಯಲ್ಲಿ ಸ್ವತಂತ್ರವಾಗಿ ಕೆಲಸ ಮಾಡಬಲ್ಲದು. ಅದು ತನ್ನಷ್ಟಕ್ಕೆ ತಾನೇ ತಿರುಗಿಸಬಹುದು, ಮಡಿಸಬಹುದು, ನೇರಮಾಡಬಹುದು, ಚಾಚಬಹುದು, ಹಿಡಿಯಬಹುದು. ಅದೇನೇ ಮಾಡಿದರೂ ಅದು ತೋಳನ್ನು ಬಿಟ್ಟು ಹಾರಲಾರದು. ಹಾರಿದರೆ ಅದು ಮುಂದೇನೂ ಮಾಡಲಾರದು. ಅಂತೆಯೇ ಮನುಷ್ಯ ತನಗೆ ಇರುವ ಮಿತಿಯಲ್ಲಿ ಯಾವ ಕಾರ್ಯವನ್ನೂ ಮಾಡಬಲ್ಲ ಆದರೆ ಅಮಿತನಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮಾರ್ಚ್ 23, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ – ಶಿಶಿರ ಋತು ಮೀನ ಮಾಸದ 09 ನೇ ದಿನ ತಿಥಿ: (ಫಾಲ್ಗುಣ ಕೃಷ್ಣ) ಷಷ್ಠಿ ಗಂ. 26-17 ನಕ್ಷತ್ರ: ಅನುರಾಧ ಗಂ. 18-53 ಯೋಗ: ವಜ್ರ ಗಂ. 10-19, ಕರಣ: ಗರಜೆ ಗಂ. 15-20.
ರಾಹುಕಾಲ: ಮಧ್ಯಾಹ್ನ 12:00 – 01:30 ಸೂರ್ಯೋದಯ: 06-36 ಸೂರ್ಯಾಸ್ತ: 06-38 ಮುಸ್ಲಿಂ ದಿನಾಂಕ: 19 ಶಬನ್ ದಿನ ವಿಶೇಷ: ಅಮೃತಸಿದ್ಧಿ ಯೋಗ
ಅದೃಷ್ಟ ಸಂಖ್ಯೆ: 4, 9

ಮೇಷ: ಮಾಡುವ ವೃತ್ತಿಯ ಬಗ್ಗೆ ಅಧ್ಯಯನ ಅಥವಾ ಹೆಚ್ಚಿನ ಮಾಹಿತಿ ಕಲೆ ಹಾಕಬೇಕಾಗಬಹುದು. ಹಿರಿಯರಿಂದ ಹಿತವಾಕ್ಯಗಳು, ಮಾರ್ಗದರ್ಶನ ಸಿಗುವುದು. ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯಾಗುವಿರಿ.

ವೃಷಭ: ಧನಾಗಮನ ಹೆಚ್ಚಿದ್ದರೂ ಬಹುಪಾಲು ಅನಾವಶ್ಯಕವಾಗಿ ಖರ್ಚು. ನಿಮ್ಮ ಪ್ರಯತ್ನ ಬಲ ಹಾಗು ಮನೆಯಲ್ಲಿ ಪಿತೃ ಕಾರ್ಯವನ್ನು ನಡೆಸಿದರೆ ಕೌಟುಂಬಿಕ ವಿವಾದಗಳು ರಾಜೀ ಮನೋಭಾವಗಳಿಂದ ಸಮಾಪ್ತಿಯಾಗಲಿವೆ.

ಮಿಥುನ: ಶತ್ರುಗಳ ಉಪಟಳ ಅನುಭವಕ್ಕೆ ಬರಲಿದೆ. ವಿದ್ಯಾರ್ಥಿಗಳಿಗೆ ನೆನಪಿನಶಕ್ತಿ ವೃದ್ಧಿಯಾಗುತ್ತದೆ. ಉದ್ಯೋಗ ಬದಲಾವಣೆ ಯೋಚನೆಯು ಸರಿಯಲ್ಲ, ಇದೇ ಉದ್ಯೋಗದಲ್ಲಿ ವರಮಾನ ಹೆಚ್ಚಿಸಿಕೊಳ್ಳುವ ದಾರಿ ಹುಡುಕಿ.

ಕರ್ಕಾಟಕ: ನೂತನ ಮನೆ ನಿರ್ಮಾಣದಲ್ಲಿರುವ ಸಹೋದರರಿಗೆ ಸಹಾಯಹಸ್ತ ನೀಡುವ ಮನಸ್ಸಾಗುವುದು. ವಿವಾಹ ಪ್ರಸ್ತಾಪಗಳು ಬಲಗೊಂಡು ಕಂಕಣ ಭಾಗ್ಯದ ಸಾಧ್ಯತೆ. ಸಿನಿಮಾ ವ್ಯವಹಾರಗಳಿಂದ ಭರ್ಜರಿ ಲಾಭ.

ಸಿಂಹ: ಹೊಸ ಒಪ್ಪಂದವೊಂದನ್ನು ಒಪ್ಪಿಕೊಳ್ಳುವ ಮುನ್ನ ತುಸು ಯೋಚಿಸುವುದು ಉತ್ತಮ ಹಾಗೂ ಅದು ಸರಿಯಾದದ್ದು. ಹಿರಿಯರ ಆರೋಗ್ಯದ ಕಾರಣ ಪ್ರಯಾಣವನ್ನು ಮುಂದೂಡುವುದು ಉತ್ತಮ.

ಕನ್ಯಾ: ಗ್ರಾಮ ಪಂಚಾಯ್ತಿಯಂತಹ ಇಲಾಖೆಯ ಅಧಿಕಾರಿಗಳಿಗೆ ಹೆಚ್ಚಿನ ಕಾರ್ಯಭಾರ ಹೊರಬೇಕಾಗುವುದು. ನೀವು ಮಾಡುವ ಕೆಲಸದಲ್ಲಿ ದೋಷಗಳು ಸಂಭವಿಸಲಿದೆ. ಮಗನ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ.

ತುಲಾ: ಮಗನೊಡನೆ ಗಹನವಾದ ಮಾತುಕತೆ ನಡೆಯುವ ಸಂಭವ. ನೆರೆಮನೆಯ ಶುಭ ಸಮಾರಂಭಕ್ಕೆ ಹೋಗುವ ಸಲುವಾಗಿ ಕಿರು ಪ್ರಯಾಣ ಇರುವುದು. ಸಾಹಿತ್ಯ ವಲಯದಲ್ಲಿರುವ ನಿಮಗೆ ಹೆಚ್ಚಿನ ಮನ್ನಣೆ ಸಿಗಲಿದೆ.

ವೃಶ್ಚಿಕ: ಉದ್ಯೋಗದ ವಿಷಯದಲ್ಲಿದ್ದ ಚಿಂತೆ ನಿಮ್ಮಿಂದ ದೂರಾಗುವುದು. ರಾಸಾಯನಿಕ ವಸ್ತುಗಳ ಮಾರಾಟದಿಂದ ಹೆಚ್ಚಿನ ಲಾಭವನ್ನು ಕಾಣುವಿರಿ. ಆಧ್ಯಾತ್ಮಿಕ ವಿಷಯಗಳತ್ತ ನಿಮ್ಮ ಮನಸ್ಸು ಹೊರಳುವುದು.

ಧನು: ನಿಮ್ಮ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಿಕೊಳ್ಳುವ ಉಪಾಯವನ್ನು ಆಪ್ತರೊಬ್ಬರು ತಿಳಿಸಿ ಕೊಡುವರು. ನಿಮ್ಮ ವೃತ್ತಿಪರವಾದ ಸಾಧನೆಗಳಿಂದಾಗಿ ಸೂಕ್ತ ಸ್ಥಾನಮಾನ ತಾನಾಗಿಯೇ ಒದಗಿ ಬರಲಿದೆ.

ಮಕರ: ಕೆಲ ದಿನಗಳ ಹಿಂದೆ ನೀವು ತೆಗೆದುಕೊಂಡಿದ್ದ ತೀರ್ಮಾನ ಸರಿಯಾದುದೇ ಎಂಬುದರ ಬಗ್ಗೆ ಇಂದು ಆಲೋಚಿಸಿ ಮುಂದಿನ ಉತ್ತಮವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುವುದು.

ಕುಂಭ: ಮನೆ ಕಟ್ಟುವ ಬಗ್ಗೆ ಹಿರಿಯರ ಹಾಗೂ ಮನೆಯವರ ಅಭಿಪ್ರಾಯ ಸಂಗ್ರಹಿಸಿ. ಆಫೀಸಿನಲ್ಲಿ ಮೇಲಧಿಕಾರಿಗಳ ಒತ್ತಡ ಹೆಚ್ಚಾಗಿ ಕೆಲಸದಲ್ಲಿ ಆಯಾಸವೆನಿಸುವುದು. ಕಲ್ಲು ಹಾಗೂ ಕಬ್ಬಿಣದ ಕೆಲಸದಲ್ಲಿ ಜಾಗ್ರತರಾಗಿರಿ.

ಮೀನ: ಪುಸ್ತಕ ಓದುವ ಹವ್ಯಾಸ ಹುಟ್ಟಲಿದೆ. ಕೊಡುಕೊಳ್ಳುವ ವಿಚಾರದಲ್ಲಿ ಜಾಗರೂಕರಾಗಿರುವುದು ಉತ್ತಮ. ಹೂವು ಹಣ್ಣು ಮಾರಾಟಗಾರರಿಗೆ ಲಾಭ. ನಿಮ್ಮ ಮಾತುಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗುವುದು.

ಪದಬಂಧ 4906

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಇಹಲೋಕಕ್ಕೆ ಸಂಬಂಧಿಸಿದ್ದು (3)
3.ಪುಸ್ತಕದ ಹತ್ತಿರವಿರಿಸಿದ ತಲೆ (3)
5.ಸಾರವನ್ನು ಗ್ರಹಿಸುವಿಕೆ (5)
6.ಕಡತ ತರುವಿಕೆಯಲ್ಲಿ ನಿಧಾನವೇ? (2)
8.ಶುನಕ ಇಲ್ಲಿದೆ (2)
9.ನಾಗರಿಕನ ಹತ್ತಿರವಿರುವ ಸ್ತ್ರೀ (2)
10.ಆಕಳಿನ ಮರಿ ಇಲ್ಲಿದೆ (2)
14.ಮನುಷ್ಯನನ್ನು ತಿನ್ನುವ ಪ್ರಾಣಿ (5)
15.ಕಡ ಪಡೆದು ನೋಡಿದ ಸಮುದ್ರ! (3)
16.ತೊಂದರೆ ಹೀಗೆ ಬಂದಿದೆ (3)

ಮೇಲಿಂದ ಕೆಳಕ್ಕೆ
1.ಇಂದ್ರನ ಆನೆಯಿದು (4)
2.ಭಕ್ತರು ತಲೆ ಮೇಲೆ ಕಲಶ ಹೊತ್ತು ನಡೆಸುವ ಉತ್ಸವ (3)
3.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
4.ಇನ್ನೂ ಬಲಿಯದಿರುವ ಕಾಯಿ (4)
7.ಅಗಲ ಬಾಯುಳ್ಳ ಲೋಹದ ಪಾತ್ರೆ (3)
8.ಈತ ದೇವರನ್ನು ನಂಬದವನು (3)
9.ನಡುವೆ ಗರಿ ಹಿಡಿದಿರುವ ಸುಸಂಸ್ಕೃತ! (4)
11.ಲಂಚದೊಡನೆ ಬರುವ ಜೋಡುನುಡಿ (4)
12.ಪ್ರವಾಹ ಇಲ್ಲಿ ಕಾಣುತ್ತಿದೆ (3)
13.ಈತ ಕೆಟ್ಟ ಕವಿ (3)



4905ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಉತ್ತೇಜನ 5.ರಾಯಸ 6.ವಾತಾಯನ 8.ರಸಾಭಾಸ 12.ಜನಹಿತ 14.ಪರಧನ 15.ಬಲ್ಲಿದ 16.ರಸಾಯನ

ಮೇಲಿಂದ ಕೆಳಕ್ಕೆ: 1.ಪರಾವಲಂಬಿ 2.ಕಸವರ 3.ಉಪವಾಸ 4.ನಯನ 7.ಯತ್ತ 9.ಭಾಜನ 10.ಒಡಕುದನಿ 11.ತೇರ 12.ಜನಮನ 13.ತರ್ಕಬದ್ಧ 14.ಪಗಾರ

ಸುಡೊಕು 5292

2		9			7	1		4
				3				
5		7	4		6	2		3
					5			1
	5	1		8			2	7
3			9					
		2		1			9	
9			7		8		1	2
	8	3		2		4		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5291 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಶುದ್ಧ ನೀರಿನ ಬಿಕ್ಕಟ್ಟಿಗೆ ಭಾರತ ಪರಿಹಾರ ಕಂಡುಕೊಳ್ಳಬೇಕು: ತಜ್ಞರ ಸಲಹೆ

‘ವಿಶ್ವದ ಶುದ್ಧ ನೀರಿನಲ್ಲಿ ಭಾರತದ ಪಾಲು ಶೇ 4’



ನವದೆಹಲಿ(ಪಿಟಿಐ): ವಿಶ್ವದ ಒಟ್ಟಾರೆ ಶುದ್ಧ ನೀರಿನ ಪೈಕಿ ಶೇ 4ರಷ್ಟು ನೀರು ಹೊಂದಿರುವ ಭಾರತವು ಜಾಗತಿಕ ಜನಸಂಖ್ಯೆಯ ಶೇ 16ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಹೀಗಾಗಿ ಭಾರತವು ಶುದ್ಧ ನೀರಿನ ಬಿಕ್ಕಟ್ಟು ಎದುರಿಸುತ್ತಿದೆ ಎಂದು ಪರಿಸರ ತಜ್ಞರು ಎಚ್ಚರಿಕೆ ನೀಡಿದ್ದಾರೆ. ನೀರಿನ ಬಳಕೆಗೆ ಸುಸ್ಥಿರ ಮಾರ್ಗಗಳನ್ನು ಕಂಡುಕೊಳ್ಳಬೇಕು ಎಂದು ಸಹ ಅವರು ಸಲಹೆ ನೀಡಿದ್ದಾರೆ.

ವಿಶ್ವ ಜಲ ದಿನದ ಪ್ರಯುಕ್ತ ಮಾತನಾಡಿದ ಇಂಟಿಗ್ರೇಟೆಡ್ ಹೆಲ್ತ್ ಅಂಡ್ ವೆಲ್‌ಬೀಯಿಂಗ್ ಕೌನ್ಸಿಲ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಕಮಲ್ ನಾರಾಯಣ್ ಒಮರ್ ಅವರು, 'ನಲ್ಲಿ ನೀರು ಪೂರ್ತಿ ಒಣಗುವ ಶೂನ್ಯದ ದಿನ ಆರಂಭವಾಗುವ ಹಾಗೂ ಜನರು ತಮ್ಮ ಪಾಲಿನ ಕುಡಿಯುವ ನೀರಿಗಾಗಿ ಸರತಿ ಸಾಲಿನಲ್ಲಿ ನಿಲ್ಲುವ ಭೀತಿಯಲ್ಲಿ ನಾವು ಬದುಕುತ್ತಿದ್ದೇವೆ' ಎಂದು ಎಚ್ಚರಿಸಿದರು.

ಹವಾಮಾನ ಬದಲಾವಣೆಯಿಂದಾಗಿ ಪರಿಸರ ಮತ್ತು ಪರಿಸರ ವ್ಯವಸ್ಥೆ ಮೇಲೆ ಭಾರಿ ಪರಿಣಾಮ ಎದುರಾಗಿದ್ದು, ಇದರಿಂದ ನೀರಿನ ಬಿಕ್ಕಟ್ಟು ಎದುರಾಗಿದೆ. ಜತೆಗೆ ಈ ಭೂಮಿ ಮೇಲೆ 220 ಕೋಟಿಗಿಂತ ಹೆಚ್ಚು ಜನರು ಸುರಕ್ಷಿತ ನೀರಿನ ಪೂರೈಕೆಯಿಂದ ವಂಚಿತರಾಗಿದ್ದಾರೆ ಎಂದು ಹೇಳಿದರು.

ನೀರಿನ ಪೂರೈಕೆಯೆಂದರೆ ಆರೋಗ್ಯ, ಶಿಕ್ಷಣ, ಆದಾಯ ಮತ್ತು ಗೌರವದ ಸಂಕೇತವಾಗಿದೆ. ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳಿಗಾಗಿ ಇದು ಬಹುಮುಖ್ಯ. ಆದರೆ ವಿಶ್ವದ ಒಟ್ಟಾರೆ ಜನಸಂಖ್ಯೆ ಪೈಕಿ ಶೇ 16ರಷ್ಟು ಜನರನ್ನು ಹೊಂದಿರುವ ಭಾರತವು ವಿಶ್ವದ ಶುದ್ಧ ನೀರಿನ ಪೈಕಿ ಶೇ 4ರಷ್ಟು ಮಾತ್ರ ಹೊಂದಿದೆ. ಹೀಗಾಗಿ ಭಾರತವು ಶುದ್ಧ ನೀರಿನ ಬಿಕ್ಕಟ್ಟು ಎದುರಿಸುತ್ತಿದೆ ಎಂದು ಪರಿಸರ ತಜ್ಞರು ಎಚ್ಚರಿಸಿದ್ದಾರೆ.

‘2023ರ ಒಳಗೆ ‘ಯಮುನೆ’ ಶುದ್ಧ: ಸಚಿವ ಸತ್ಯೇಂದರ್ ಜೈನ್

ಯಮುನಾ ನದಿ

ನವದೆಹಲಿ(ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿ ವ್ಯಾಪ್ತಿಯಲ್ಲಿ ಹರಿಯುವ ಯಮುನಾ ನದಿಯನ್ನು ಪೂರ್ತಿಯಾಗಿ ಶುದ್ಧೀಕರಿಸಲಾಗುತ್ತದೆ. ಶೀಘ್ರವೇ ಈ ನದಿ ನೀರು ಸ್ನಾನ ಮಾಡಲು ಯೋಗ್ಯವಾಗುವಂತೆ ಮಾಡಲಾಗುತ್ತದೆ. ಜೊತೆಗೆ 2023ರ ಡಿಸೆಂಬರ್ ಅಂತ್ಯದೊಳಗೆ ಮೀನಿನ ಸಂತಾನೋತ್ಪತ್ತಿಯನ್ನು ಆರಂಭಿಸಲಾಗುತ್ತದೆ ಎಂದು ದೆಹಲಿ ಜಲ ಸಂಪನ್ಮೂಲ ಸಚಿವ ಸತ್ಯೇಂದರ್ ಜೈನ್ ಹೇಳಿದ್ದಾರೆ.

ಮಂಗಳವಾರ ಅಸೋಚಾಮ್ ಏರ್ಪಡಿಸಿದ್ದ ಆನ್‌ಲೈನ್ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, 'ದೆಹಲಿಯಲ್ಲಿ 15 ತಿಂಗಳಲ್ಲಿ ಎಲ್ಲಾ ಪ್ರದೇಶಗಳನ್ನು ಚರಂಡಿಗೆ ಸಂಪರ್ಕ ವ್ಯವಸ್ಥೆಯಡಿ ತರಲಾಗುತ್ತದೆ. 2025ರ ಬದಲಿಗೆ 2023ರ ಡಿಸೆಂಬರ್ ಅಂತ್ಯದೊಳಗೆ ಯಮುನೆಯನ್ನು ಶುದ್ಧೀಕರಿಸುತ್ತೇವೆ. ಎಲ್ಲಾ ಚರಂಡಿಗಳನ್ನು ಪೂರ್ತಿಯಾಗಿ ಶುದ್ಧ ಮಾಡುತ್ತೇವೆ' ಎಂದು ಹೇಳಿದರು.

ಜೊತೆಗೆ ಮುಂದಿನ 5-10 ವರ್ಷಗಳಲ್ಲಿ ದೆಹಲಿಯ ಅಂತರ್ಜಲವನ್ನು 50 ವರ್ಷಗಳ ಹಿಂದಿನ ಮಟ್ಟಕ್ಕೆ ಎತ್ತರಿಸಲಾಗುತ್ತದೆ ಎಂದು ತಿಳಿಸಿದರು.

ನೀರಿನ ಸಂರಕ್ಷಣೆಗೆ ಪ್ರತಿಜ್ಞೆ ಮಾಡಿ: ಪ್ರಧಾನಿ ಮೋದಿ



ನವದೆಹಲಿ(ಪಿಟಿಐ): 'ವಿಶ್ವ ಜಲ ದಿನ'ದ ಪ್ರಯುಕ್ತ ಪ್ರಧಾನಿ ನರೇಂದ್ರ ಮೋದಿ ಅವರು ನೀರಿನ ಪ್ರತಿಯೊಂದು ಹನಿಯನ್ನು ಉಳಿಸಬೇಕೆಂಬ ತಮ್ಮ ಕರೆಯನ್ನು ಪುನರುಚ್ಚರಿಸಿದ್ದಾರೆ.

ಮಂಗಳವಾರ ಮಾತನಾಡಿದ ಅವರು, 'ಕಳೆದ ಕೆಲವು ವರ್ಷಗಳಿಂದ ನೀರಿನ ಸಂರಕ್ಷಣೆಯು ಸಾಮೂಹಿಕ ಆಂದೋಲನವಾಗುತ್ತಿದೆ. ವಿಶ್ವ ಜಲ ದಿನವಾದ ಇಂದು ನಾವೆಲ್ಲರೂ ನೀರಿನ ಪ್ರತಿಯೊಂದು ಹನಿಯನ್ನು ರಕ್ಷಿಸುವ ಶಪಥ ಮಾಡೋಣ. ದೇಶದ ಪ್ರತಿಯೊಬ್ಬ ನಾಗರಿಕರಿಗೆ ಶುದ್ಧ ನೀರಿನ ಪೂರೈಕೆ ಹಾಗೂ ನೀರಿನ ಸಂರಕ್ಷಣೆ ಸಲುವಾಗಿ 'ಜಲ ಜೀವನ ಮಿಷನ್' ಸೇರಿದಂತೆ ಹಲವು ಯೋಜನೆಗಳನ್ನು ಭಾರತ ಸರ್ಕಾರ ಕೈಗೊಂಡಿದೆ' ಎಂದು ಹೇಳಿದ್ದಾರೆ.

ಅಲ್ಲದೆ ನೀರಿನ ಸಂರಕ್ಷಣೆಯಲ್ಲಿ ತೊಡಗಿದ ದೇಶದ ನಾಗರಿಕರು ಹಾಗೂ ಸಂಘ-ಸಂಸ್ಥೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಹೆಚ್ಚುವರಿ 6 ಕೋಟಿ ಮನೆಗಳಿಗೆ ನಲ್ಲಿ ನೀರು

ನವದೆಹಲಿ(ಪಿಟಿಐ): ಕೇಂದ್ರ ಸರ್ಕಾರದ 'ಜಲ ಜೀವನ ಮಿಷನ್" ಆರಂಭವಾದ ಬಳಿಕ ಹೆಚ್ಚುವರಿಯಾಗಿ ಗ್ರಾಮೀಣ ಪ್ರದೇಶದ 6 ಕೋಟಿ ಮನೆಗಳಿಗೆ ನಲ್ಲಿ ನೀರು ಸಂಪರ್ಕ ಕಲ್ಪಿಸಲಾಗಿದೆ ಎಂದು ಕೇಂದ್ರ ಜಲ ಶಕ್ತಿ ಸಚಿವಾಲಯದ ರಾಜ್ಯ ಸಚಿವ ಪ್ರಹ್ಲಾದ್ ಪಟೇಲ್ ಹೇಳಿದ್ದಾರೆ.

ವಿಶ್ವ ಜಲ ದಿನದ ಪ್ರಯುಕ್ತ ಮಂಗಳವಾರ ಮಾತನಾಡಿದ ಅವರು, 'ಭವಿಷ್ಯದ ಜನ ಸಮುದಾಯಕ್ಕೆ ಯಾವುದೇ ಸಮಸ್ಯೆ ಎದುರಾಗದಂತೆ ನೋಡಿಕೊಳ್ಳುವ ಸಲುವಾಗಿ ಸರ್ಕಾರಕ್ಕೆ ನೀರಿನ ಸಂರಕ್ಷಣೆ ಆದ್ಯತೆಯಾಗಿದೆ. ನಮ್ಮ ಮಕ್ಕಳಿಗಾಗಿ ನೀರಿನ ಸಂರಕ್ಷಣೆಗಾಗಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತಿದೆ. ಅಲ್ಲದೆ ಎಲ್ಲರಿಗೂ ನಲ್ಲಿ ನೀರಿನ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು 2019ರ ಆಗಸ್ಟ್‌ನಲ್ಲಿ 'ಜಲ ಜೀವನ ಮಿಷನ್' ಯೋಜನೆ ಆರಂಭಿಸಿದ್ದರು. ಈವರೆಗೆ ಈ ಯೋಜನೆಯಡಿ 9.24 ಕೋಟಿಗೂ ಹೆಚ್ಚು ಗ್ರಾಮೀಣ ಮನೆಗಳಿಗೆ ನಲ್ಲಿ ನೀರು ಸೌಕರ್ಯ ಕಲ್ಪಿಸಲಾಗಿದೆ.

ಸುದ್ದಿ 2 ನಿಮಿಷ

ಜನಗಣತಿ: ನಾಗರಿಕರು ಮಾಹಿತಿ ನೀಡುವುದು ಕಡ್ಡಾಯ

ನವದೆಹಲಿ(ಪಿಟಿಐ): ಜನಗಣತಿಯ ಪ್ರಶ್ನೆಗಳಿಗೆ ಉತ್ತರಿಸಲು ಭಾರತೀಯರೆಲ್ಲರೂ ಕಾನೂನಾತ್ಮಕವಾಗಿ ಬದ್ಧರಾಗಿರುತ್ತಾರೆ. ಕಡ್ಡಾಯವಾಗಿ ಮಾಹಿತಿಯನ್ನು ನೀಡಬೇಕು. ಅಲ್ಲದೆ ಜನಗಣತಿ ಮತ್ತು ರಾಷ್ಟ್ರೀಯ ಜನಸಂಖ್ಯೆ ನೋಂದಣಿ(ಎನ್‌ಪಿಆರ್) ಪ್ರಕ್ರಿಯೆಯನ್ನು ಸುಲಲಿತವಾಗಿ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ತಿಳಿಸಿದೆ.

ಮಂಗಳವಾರದ ಲೋಕಸಭೆ ಕಲಾಪ ವೇಳೆ ಮಾತನಾಡಿದ ಕೇಂದ್ರ ಗೃಹ ಇಲಾಖೆಯ ರಾಜ್ಯ ಸಚಿವ ನಿತ್ಯಾನಂದ್ ರಾಯ್ ಅವರು, '1948ರ ಜನಗಣತಿ ಕಾಯ್ದೆ ಪ್ರಕಾರ ರಾಜ್ಯ ಸರ್ಕಾರಗಳು ಜನಗಣತಿ ಅಧಿಕಾರಿಗಳನ್ನು ನೇಮಕ ಮಾಡಬೇಕು ಅಥವಾ ಜನಗಣತಿಯ ಮೇಲ್ವಿಚಾರಣೆ ನಡೆಸಬೇಕು. ಜನಗಣತಿ ಮತ್ತು ಎನ್‌ಪಿಆರ್ ಸಮೀಕ್ಷೆ ನಡೆಸಲು ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಕ್ರಮ ಕೈಗೊಳ್ಳಲಾಗಿದೆ' ಎಂದು ಹೇಳಿದರು.

ಮಹಿಳೆ ವಿವಾಹ ಕನಿಷ್ಠ ವಯಸ್ಸು: ಸ್ಥಾಯಿ ಸಮಿತಿ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಮಹಿಳೆಗೆ ವಿವಾಹಕ್ಕೆ ಅರ್ಹವಾದ ಕನಿಷ್ಠ ವಯಸ್ಸು ವಿಷಯ ಪರಿಶೀಲಿಸುತ್ತಿರುವ ಸಂಸದೀಯ ಸ್ಥಾಯಿ ಸಮಿತಿಯ ಅವಧಿಯನ್ನು ಮೂರು ತಿಂಗಳು ವಿಸ್ತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮಹಿಳೆ, ಮಕ್ಕಳು, ಯುವಜನ ಮತ್ತು ಕ್ರೀಡಾ ವ್ಯವಹಾರ ಕುರಿತ ಸಮಿತಿಯು, ಕನಿಷ್ಠ ವಯಸ್ಸು ನಿಗದಿ ಕುರಿತ ‘ಬಾಲ್ಯವಿವಾಹ ನಿಷೇಧ (ತಿದ್ದುಪಡಿ) ಮಸೂದೆ 2021’ ಪರಿಶೀಲಿಸುತ್ತಿದೆ. ಸಮಿತಿ ಗುರುವಾರ ವರದಿ ಸಲ್ಲಿಸಬೇಕಿತ್ತು. ಈಗ ಜೂನ್ 24ಕ್ಕೆ ಸಲ್ಲಿಸಲಿದೆ.

ಮಹಿಳೆಗೆ ವಿವಾಹಕ್ಕೆ ಕನಿಷ್ಠ ವಯಸ್ಸನ್ನು ಈಗಿನ 18 ವರ್ಷದಿಂದ 21ಕ್ಕೆ ಏರಿಸುವ ಪ್ರಸ್ತಾಪಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿತ್ತು. ಇದಕ್ಕೆ ಮಹಿಳಾ ಹಕ್ಕುಗಳ ಕಾರ್ಯಕರ್ತರಿಂದ ವಿರೋಧ ವ್ಯಕ್ತವಾದಂತೆ ಸಮಿತಿಯ ಪರಿಶೀಲನೆಗೆ ಇದನ್ನು ಒಪ್ಪಿಸಲಾಗಿತ್ತು.

ಶರಣಬಸವೇಶ್ವರ ಮಹಾರಥೋತ್ಸವ

ಕಲಬುರಗಿಯ ಶರಣಬಸವೇಶ್ವರ ಜಾತ್ರೆ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಮಂಗಳವಾರ ಸಂಜೆ ಅದ್ಧೂರಿ ರಥೋತ್ಸವ ನಡೆಯಿತು. –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಚುನಾವಣೆಯ ಬಳಿಕ ಪುನಃ ಇಂಧನ ಬೆಲೆ ಏರಿಕೆ– ಆರೋಪ

ಬೆಲೆ ಏರಿಕೆ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಐದು ರಾಜ್ಯಗಳ ಚುನಾವಣೆಗಳ ಬಳಿಕ, ಎಲ್‌ಪಿಜಿ, ಪೆಟ್ರೋಲ್ ಮತ್ತು ಡೀಸೆಲ್ ದರಗಳು ಏರಿಕೆಯಾಗಿವೆ ಎಂದು ಆರೋಪಿಸಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಪಕ್ಷಗಳು ಮಂಗಳವಾರ ಸಂಸತ್ತಿನ ಒಳಗೆ ಮತ್ತು ಹೊರಗೆ ತೀವ್ರ ವಾಗ್ದಾಳಿ ನಡೆಸಿದವು.

ವಿಧಾನಸಭಾ ಚುನಾವಣೆಗಳ ಫಲಿತಾಂಶದ 12 ದಿನಗಳ ಬಳಿಕ ಎಲ್‌ಪಿಜಿ ಹಾಗೂ ತೈಲ ಬೆಲೆಗಳ ಏರಿಕೆಯಾಗಿರುವ ವಿಷಯ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಪ್ರತಿಧ್ವನಿಸಿತು. ಉಭಯ ಸದನಗಳಲ್ಲಿ ಪ್ರತಿಪಕ್ಷಗಳ ಸಂಸದರು ಬೆಲೆ ಏರಿಕೆ ವಿಷಯದ ಕುರಿತ ಚರ್ಚೆಯನ್ನು ಮುಕ್ತಾಯಗೊಳಿಸುವ ಕ್ರಮವನ್ನು ವಿರೋಧಿಸಿ ಪ್ರತಿಭಟನೆ ನಡೆಸಿದರು. ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪ್ರತಿಪಕ್ಷಗಳ ಸಂಸದರು ಘೋಷಣೆಗಳನ್ನು ಕೂಗಿದ್ದರಿಂದ ರಾಜ್ಯಸಭೆಯಲ್ಲಿ ಬೆಳಗಿನ ಕಲಾಪ ನಡೆಯಲಿಲ್ಲ. ಲೋಕಸಭೆಯಲ್ಲಿ ಕಾಂಗ್ರೆಸ್, ಡಿಎಂಕೆ, ತೃಣಮೂಲ ಕಾಂಗ್ರೆಸ್, ಎನ್‌ಸಿಪಿ, ಜೆಎಂಎಂ, ಸಿಪಿಎಂ, ಸಿಪಿಐ, ಮುಸ್ಲಿಂ ಲೀಗ, ಆರ್‌ಎಸ್‌ಪಿ, ಎಂಡಿಎಂಕೆ ಮತ್ತು ವಿಸಿಕೆ ಸಂಸದರು ಪ್ರತಿಭಟನೆ ನಡೆಸಿ, ಕಲಾಪವನ್ನು ಬಹಿಷ್ಕರಿಸಿದರು.

ರಾಜ್ಯಸಭೆಯಲ್ಲಿ ಬೆಲೆ ಏರಿಕೆಯ ಕುರಿತು ಚರ್ಚಿಸಲು ಕಾಂಗ್ರೆಸ್‌ನ ಶಕ್ತಿಸಿನ್ಹ ಗೋಹಿಲ್, ತೃಣಮೂಲ ಕಾಂಗ್ರೆಸ್‌ನ ದೋಲಾ ಸೇನ್ ಮತ್ತು ಸಿಪಿಎಂನ ಎಲಮರಮ್ ಕರೀಂ, ಜಾನ್ ಬ್ರಿಟಾಸ್ ಮತ್ತು ಡಾ.ವಿ. ಶಿವದಾಸನ್ ಅವರು ಸಲ್ಲಿಸಿದ್ದ ಮನವಿಗಳನ್ನು ಸಭಾಪತಿ ಎಂ. ವೆಂಕಯ್ಯ ನಾಯ್ಡು ಅವರು ನಿರಾಕರಿಸಿದರು. ಈ ಮನವಿಯಲ್ಲಿನ ಬೇಡಿಕೆಗಳನ್ನು ನಿಗದಿತ ಚರ್ಚೆಯ ಸಂದರ್ಭದಲ್ಲಿ ಪ್ರಸ್ತಾಪಿಸಬಹುದು ಎಂದರು.

ಶೂನ್ಯವೇಳೆಯಲ್ಲಿ 19 ಸಂಸದರು ತಮ್ಮ ಮನವಿ ಸ್ವೀಕರಿಸಲು ಅವಕಾಶ ನೀಡುವಂತೆ ನಾಯ್ಡು ಅವರಿಗೆ ಮನವಿ ಮಾಡಿದರೂ ಪ್ರತಿಭಟನೆ ಮುಂದುವರಿದಿದ್ದರಿಂದ, ಸದನವನ್ನು ಮಧ್ಯಾಹ್ನ 12 ಗಂಟೆಗೆ ಮುಂದೂಡಲಾಯಿತು. ಸದನವು ಪುನರಾರಂಭಗೊಂಡಾಗ ಕೆಲ ಸಂಸದರು ಪುನಃ ಘೋಷಣೆಗಳನ್ನು ಕೂಗಿದ್ದರಿಂದ ಕಲಾಪವನ್ನು ಮತ್ತೆ ಮುಂದೂಡಲಾಯಿತು.

ವಾಯು ಗುಣಮಟ್ಟ: ನವದೆಹಲಿ ‘ಅತ್ಯಂತ ಕಲುಷಿತ ರಾಜಧಾನಿ’

ನವದೆಹಲಿ(ಪಿಟಿಐ): ಕಳೆದ ವರ್ಷ ವಿಶ್ವದಲ್ಲಿ ಅತಿಹೆಚ್ಚು ಮಾಲಿನ್ಯ ಪ್ರಮಾಣ ಹೊಂದಿದ್ದ ರಾಷ್ಟ್ರಗಳ ಪಟ್ಟಿಯನ್ನು ಮಂಗಳವಾರ ಬಿಡುಗಡೆ ಮಾಡಲಾಗಿದ್ದು, ನವದೆಹಲಿಯು ಸತತ ನಾಲ್ಕನೇ ವರ್ಷವೂ ‘ಅತ್ಯಂತ ಕಲುಷಿತ ರಾಜಧಾನಿ’ ಎಂಬ ಕುಖ್ಯಾತಿಗೆ ಪಾತ್ರವಾಗಿದೆ.

‘ಅತ್ಯಂತ ಕಲುಷಿತ ರಾಜಧಾನಿ’ಗಳ ಪಟ್ಟಿಯಲ್ಲಿ ಢಾಕಾ (ಬಾಂಗ್ಲಾದೇಶ) ಎರಡನೇ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಎನ್‌ಜಮೆನಾ (ಚಾಡ್), ದುಶಾಂಬೆ (ತಜಿಕಿಸ್ತಾನ) ಮತ್ತು ಮಸ್ಕತ್ (ಒಮನ್) ನಗರಗಳಿವೆ.

ವಿಶ್ವದ ವಿವಿಧ ದೇಶಗಳ ರಾಜಧಾನಿ ಹಾಗೂ ಇತರ ನಗರಗಳಲ್ಲಿನ ವಾಯುಗುಣಮಟ್ಟ ಕುರಿತು ಸ್ವಿಟ್ಜರ್ಲೆಂಡ್ ಮೂಲದ ‘ಐಕ್ಯೂಏರ್’ ಎಂಬ ಸಂಸ್ಥೆ ಸಿದ್ಧಪಡಿಸಿರುವ ವರದಿಯಲ್ಲಿ ಈ ಮಾಹಿತಿ ಇದ್ದು, ಜಾಗತಿಕವಾಗಿ ಈ ವರದಿಯನ್ನು ಬಿಡುಗಡೆ ಮಾಡಲಾಗಿದೆ. ಕೋಲ್ಕತ್ತ ನಗರ ಸಹ ಈ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

117 ರಾಷ್ಟ್ರಗಳ 6,475 ನಗರಗಳ ಗಾಳಿಯಲ್ಲಿರುವ ಮಾಲಿನ್ಯಕಾರಕ ಪಿಎಂ-2.5 (ಅತಿ ಸೂಕ್ಷ್ಮ) ದೂಳಿನ ಕಣಗಳ ಪ್ರಮಾಣವನ್ನು ವಿಶ್ಲೇಷಿಸಿ ಈ ವರದಿಯನ್ನು ಸಿದ್ಧಪಡಿಸಲಾಗಿದೆ.

ನವದೆಹಲಿಯ ಗಾಳಿಯಲ್ಲಿ ಕಳೆದ ವರ್ಷ ಅತಿಸೂಕ್ಷ್ಮ ದೂಳಿನ ಕಣಗಳ (ಪಿಎಂ–2.5) ಪ್ರಮಾಣದಲ್ಲಿ ಶೇ 14.6ರಷ್ಟು ಹೆಚ್ಚಳ ಕಂಡುಬಂದಿದೆ. 2020ರಲ್ಲಿ ಪಿಎಂ2.5 ಪ್ರಮಾಣ ಪ್ರತಿ ಘನ ಮೀಟರ್ ಗಾಳಿಯಲ್ಲಿ 84 ಮೈಕ್ರೊ ಗ್ರಾಂ ಇತ್ತು. 2021ರಲ್ಲಿ ಈ ಪ್ರಮಾಣ 96.4 ಮೈಕ್ರೊಗ್ರಾಮ್‌ನಷ್ಟಾಯಿತು ಎಂದು ವರದಿಯಲ್ಲಿ ಹೇಳಲಾಗಿದೆ.

> ಭಾರತದಲ್ಲಿ ವಾಹನಗಳ ಮಾರಾಟ ಹೆಚ್ಚುತ್ತಿದೆ. ನಿಯಂತ್ರಣ ಕ್ರಮಕೈಗೊಳ್ಳದಿದ್ದರೆ ವಾಯು ಗುಣಮಟ್ಟದ ಈ ವಿದ್ಯಮಾನ ಪರಿಣಾಮ ಬೀರುವುದು ನಿಶ್ಚಿತ
> **ಅವಿನಾಶ್ ಚಂಚಲ್**, ಗ್ರೀನ್‌ಪೀಸ್ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ (ಅಭಿಯಾನ)

‘ರಾಜಧಾನಿ ನವದೆಹಲಿ ಸೇರಿದಂತೆ ದೇಶದ ವಿವಿಧ ನಗರಗಳಲ್ಲಿನ ವಾಯು ಗುಣಮಟ್ಟಕ್ಕೆ ಸಂಬಂಧಿಸಿದ ಈ ವರದಿಯು ಸರ್ಕಾರ ಹಾಗೂ ಸಂಬಂಧಿಸಿದ ಇಲಾಖೆಗಳಿಗೆ ಎಚ್ಚರಿಕೆಯ ಗಂಟೆಯಾಗಿದೆ’ ಎಂದು ಗ್ರೀನ್‌ಪೀಸ್ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ (ಅಭಿಯಾನ) ಅವಿನಾಶ್ ಚಂಚಲ್ ಹೇಳಿದರು.

ವಿಶ್ವದ ಅತ್ಯಂತ ಕಲುಷಿತ ನಗರ: ವಿಶ್ವದ ಅತ್ಯಂತ ಕಲುಷಿತ ನಗರಗಳ ಪಟ್ಟಿಯಲ್ಲಿ ರಾಜಸ್ಥಾನದ ಭಿವಾಡಿ ಮೊದಲ ಸ್ಥಾನದಲ್ಲಿ ಹಾಗೂ ಉತ್ತರ ಪ್ರದೇಶದ ಗಾಜಿಯಾಬಾದ್ ಎರಡನೇ ಸ್ಥಾನದಲ್ಲಿದೆ.

ದೆಹಲಿ ನಾಲ್ಕನೇ ಸ್ಥಾನದಲ್ಲಿದ್ದರೆ, ಉತ್ತರ ಪ್ರದೇಶದ ಜೋನ್‌ಪುರ ಐದನೇ ಸ್ಥಾನದಲ್ಲಿದೆ. ಈ ಪಟ್ಟಿಯ ಮೊದಲ ಐವತ್ತು ನಗರಗಳ ಪೈಕಿ 35 ಭಾರತದ ನಗರಗಳಾಗಿವೆ.

ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲು ಕೊರತೆ

ರಾಯಚೂರು: ಬೇಸಿಗೆಯಲ್ಲಿ ಹೆಚ್ಚಳವಾಗುವ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಉತ್ಪಾದಿಸುವುದಕ್ಕೆ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ (ಆರ್‌ಟಿಪಿಎಸ್) ಕಲ್ಲಿದ್ದಲು ಕೊರತೆ ಎದುರಾಗಿದೆ.

ಸಾಮಾನ್ಯವಾಗಿ ಬೇಸಿಗೆ ಆರಂಭದಲ್ಲಿ 1.5 ಲಕ್ಷ ಟನ್‌ವರೆಗೂ ಕಲ್ಲಿದ್ದಲು ದಾಸ್ತಾನು ಮಾಡಲಾಗುತ್ತಿತ್ತು. ಈ ವರ್ಷ ದಾಸ್ತಾನು ವಿಭಾಗದಲ್ಲಿ ಕೇವಲ 10 ಸಾವಿರ ಟನ್ ಕಲ್ಲಿದ್ದಲು ಇದೆ. ಇದು ಕನಿಷ್ಠ ಒಂದು ದಿನದ ಬಳಕೆಗೂ ಸಾಕಾಗುವುದಿಲ್ಲ.

ತೆಲಂಗಾಣದ ಸಿಂಗರೇಣಿ ಕೋಲ್ ಕಂಪನಿ, ಆಂಧ್ರಪ್ರದೇಶದ ಮಹಾನದಿ ಕೋಲ್ ಕಂಪನಿ ಮತ್ತು ಮಹಾರಾಷ್ಟ್ರದ ವೆಸ್ಟರ್ನ್ ಕೋಲ್‌ಫೀಲ್ಡ್ ಕಂಪನಿಗಳಿಂದ ಕಲ್ಲಿದ್ದಲು ಪೂರೈಕೆಯಾಗುತ್ತಿದೆ. ಈ ಮೂಲಗಳಿಂದ ಬೇಡಿಕೆಯ ಅರ್ಧದಷ್ಟು ಮಾತ್ರ ಬರುತ್ತಿದೆ. ಸದ್ಯ ಆರ್‌ಟಿಪಿಎಸ್‌ನಲ್ಲಿ ನಾಲ್ಕು ಘಟಕಗಳು ಮಾತ್ರ ವಿದ್ಯುತ್ ಉತ್ಪಾದಿಸುತ್ತಿವೆ.

> **ಸದ್ಯಕ್ಕೆ ಪ್ರತಿದಿನ 2 ರಿಂದ 3 ರೇಕ್ ಕಲ್ಲಿದ್ದಲು ಪೂರೈಕೆ ಆಗುತ್ತಿದೆ. ಮುಂದಿನ ಎರಡು ದಿನಗಳಲ್ಲಿ 4 ರಿಂದ 6 ರೇಕ್‌ವರೆಗೂ ಕಲ್ಲಿದ್ದಲು ಪೂರೈಕೆ ಆಗಬಹುದು ಎನ್ನುವ ನಿರೀಕ್ಷೆಯಲ್ಲಿದ್ದೇವೆ**
> **ಶಶಿಕಾಂತ್**, ಆರ್‌ಟಿಪಿಎಸ್ ಕಾರ್ಯನಿರ್ವಾಹಕ ನಿರ್ದೇಶಕ

ಎಂಟು ಘಟಕಗಳಿಂದ ಒಟ್ಟು 1,720 ಮೆಗಾವಾಟ್ ವಿದ್ಯುತ್ ಉತ್ಪಾದಿಸಬಹುದು. ಸದ್ಯ ಚಾಲನೆಯಲ್ಲಿರುವ ನಾಲ್ಕು ಘಟಕಗಳಿಂದ 800 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವಿದ್ದರೂ, 674 ಮೆಗಾವಾಟ್ ಮಾತ್ರ ವಿದ್ಯುತ್ ಉತ್ಪಾದಿಸಲಾಗುತ್ತಿದೆ.

ಎಂಟು ಘಟಕಗಳಿಂದ ವಿದ್ಯುತ್ ಉತ್ಪಾದಿಸಲು ಪ್ರತಿನಿತ್ಯ 12 ರಿಂದ 15 ಸಾವಿರ ಟನ್ ಕಲ್ಲಿದ್ದಲು ಬೇಕಾಗುತ್ತದೆ. ಸದ್ಯ ನಾಲ್ಕು ರೇಕ್ (ಒಂದು ರೇಕ್‌ನಲ್ಲಿ ಸುಮಾರು 2,500 ಟನ್) ವರೆಗೂ ಮಾತ್ರ ಕಲ್ಲಿದ್ದಲು ಬರುತ್ತಿದೆ.

‘60 ಕಿ.ಮೀ ಪರಿಮಿತಿಗೆ ಒಂದೇ ಟೋಲ್’

ನವದೆಹಲಿ (ಪಿಟಿಐ): ‘ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರತಿ 60 ಕಿ.ಮೀ ಮಿತಿಯಲ್ಲಿ ಒಂದು ಟೋಲ್ ಪ್ಲಾಜಾ ಕಾರ್ಯನಿರ್ವಹಿಸಲಿದೆ. ಹೆಚ್ಚುವರಿ ಇದ್ದಲ್ಲಿ ಮುಂದಿನ ಮೂರು ತಿಂಗಳಲ್ಲಿ ಅವುಗಳನ್ನು ತೆಗೆಯಲಾಗುವುದು’ ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಅವರು ಮಂಗಳವಾರ ಲೋಕಸಭೆಯಲ್ಲಿ ಈ ವಿಷಯ ತಿಳಿಸಿದರು. ‘ಗರಿಷ್ಠ 8 ಪ್ರಯಾಣಿಕರು ಇರುವ ವಾಹನನಗಳಲ್ಲಿ ಸುರಕ್ಷತೆಗೆ ಒತ್ತುನೀಡಲು, ಅಂಥ ವಾಹನಗಳಲ್ಲಿ ಕನಿಷ್ಠ 6 ಏರ್‌ಬ್ಯಾಗ್ ಇರುವುದನ್ನು ಕಡ್ಡಾಯಗೊಳಿಸಲಾಗಿದೆ’ ಎಂದು ತಿಳಿಸಿದರು.

‘ವಿದ್ಯುತ್ ಚಾಲಿತ ವಾಹನಗಳ ದರ ಎರಡು ವರ್ಷದಲ್ಲಿ ಇಳಿಕೆ’: ತಂತ್ರಜ್ಞಾನದ ಪ್ರಗತಿಯಿಂದಾಗಿ ವಿದ್ಯುತ್‌ಚಾಲಿತ ವಾಹನಗಳ ಉತ್ಪಾದನೆ ವೆಚ್ಚವು ತಗ್ಗಲಿದ್ದು, ಎರಡು ವರ್ಷದಲ್ಲಿ ಪೆಟ್ರೋಲ್ ಆಧರಿತ ವಾಹನಗಳಿಗೆ ಸಮನಾಗಿ ಇರಲಿದೆ ಎಂದು ನಿತಿನ್ ಗಡ್ಕರಿ ಹೇಳಿದ್ದಾರೆ. ‘ಎರಡು ವರ್ಷದಲ್ಲಿ ವಿದ್ಯುತ್ ಚಾಲಿತ ಸ್ಕೂಟರ್, ಕಾರು, ಆಟೊರಿಕ್ಷಾಗಳ ದರವು ಪೆಟ್ರೋಲ್ ಆಧರಿತ ವಾಹನಗಳಿಗೆ ಸರಿಸಮಾನವಾಗಿ ಇರಲಿದೆ. ಲಿಥಿಯಂ ಐಯಾನ್ ಬ್ಯಾಟರಿ ದರವೂ ಭವಿಷ್ಯದಲ್ಲಿ ಇಳಿಕೆಯಾಗಲಿದೆ’ ಎಂದು ತಿಳಿಸಿದರು.

ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಅನುದಾನ ಬೇಡಿಕೆ ಕುರಿತ ಪ್ರಶ್ನೆಗೆ ಉತ್ತರಿಸುತ್ತಿದ್ದ ಅವರು, ‘ಝಿಂಕ್ ಐಯಾನ್, ಅಲ್ಯುಮೀನಿಯಂ ಐಯಾನ್, ಸೋಡಿಯಂ ಐಯಾನ್ ಬ್ಯಾಟರಿಗಳ ಸಂಯೋಜನೆಯನ್ನು ಈಗ ಅಭಿವೃದ್ಧಿಪಡಿಸಲಾಗುತ್ತಿದೆ’ ಎಂದು ತಿಳಿಸಿದರು.

‘ಪೆಟ್ರೋಲ್‌ಗೆ ನೀವು ₹ 100 ವ್ಯಯಿಸುತ್ತಿದ್ದಲ್ಲಿ, ವಿದ್ಯುತ್ ಚಾಲಿತ ವಾಹನ ಬಳಕೆಗೆ ₹ 10 ವ್ಯಯವಾಗಲಿದೆ’ ಎಂದರು. ಇದೇ ಸಂದರ್ಭದಲ್ಲಿ ಅವರು ‘ಆರ್ಥಿಕ ಮಿತವ್ಯಯಿಯಾದ ದೇಶಿ ಇಂಧನಕ್ಕೆ ನಾವು ಬದಲಾಗಬೇಕಿದೆ. ಶೀಘ್ರದಲ್ಲೇ ಇಂತಹ ಇಂಧನ ಸಾಕಾರವಾಗಲಿದೆ’ ಎಂದರು.

ಸಾರಿಗೆ ಉದ್ದೇಶಕ್ಕಾಗಿ ಹೈಡ್ರೋಜನ್ ಟೆಕ್ನಾಲಜಿ ಬಳಸಲು ಸಂಸದರು ಆದ್ಯತೆ ನೀಡಬೇಕು ಎಂದು ಸಲಹೆ ಮಾಡಿದರು. ಪರಿಸರಸ್ನೇಹಿಯಾದ ಜಲಜನಕ ಉತ್ಪಾದನೆಗೆ ಕೊಳಚೆ ನೀರು ಸಂಸ್ಕರಿಸಲು ತಮ್ಮ ಕ್ಷೇತ್ರಗಳಲ್ಲಿ ಕ್ರಮವಹಿಸಬೇಕು ಎಂದೂ ಮನವಿ ಮಾಡಿದರು.

ಜಲಜನಕವು ಶೀಘ್ರದಲ್ಲಿ ಅತ್ಯಂತ ಅಗ್ಗವಾದ ಪರ್ಯಾಯ ಇಂಧನ ಮೂಲವಾಗಲಿದೆ ಎಂದು ಗಡ್ಕರಿ ಅವರು ಪ್ರತಿಪಾದಿಸಿದರು.

ರೈತರಿಗೆ ಸಬ್ಸಿಡಿ ದರದಲ್ಲಿ ರಸಗೊಬ್ಬರ ಪೂರೈಕೆ ಮುಂದುವರಿಕೆ

ಕೇಂದ್ರ ಸರ್ಕಾರ ‘ಬೆಲೆ ಏರಿಕೆಯ ನಡುವೆಯೂ ರೈತರಿಗೆ ಸಬ್ಸಿಡಿ ದರದಲ್ಲಿ ರಸಗೊಬ್ಬರ ಪೂರೈಸುವುದನ್ನು ಮುಂದುವರಿಸಲಾಗುವುದು’ ಎಂದು ಕೇಂದ್ರ ಸರ್ಕಾರ ಮಂಗಳವಾರ ತಿಳಿಸಿದೆ.

‘ಪ್ರತಿ ಚೀಲಕ್ಕೆ ₹ 1,200ರಷ್ಟು ಬೆಲೆ ಏರಿದಾಗಲೂ ಕೇಂದ್ರ ಸರ್ಕಾರವು ರೈತರಿಗೆ ಸಬ್ಸಿಡಿ ದರದಲ್ಲಿ ದೊರೆಯುವಂತೆ ಮಾಡಿದೆ’ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವ ಕೈಲಾಶ್ ಚೌಧರಿ ಅವರು ಮಂಗಳವಾರ ರಾಜ್ಯಸಭೆಗೆ ಮಾಹಿತಿ ನೀಡಿದರು.

ಎಐಎಂಐಎಂ ಸದಸ್ಯ ಇಮ್ತಿಯಾಜ್ ಜಲೀಲ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಕೈಲಾಶ್ ಅವರು, ‘ಪ್ರತಿ ಚೀಲಕ್ಕೆ ₹ 600ರಷ್ಟು ಸಬ್ಸಿಡಿ ಇದೆ. ಇಂದು ಪ್ರತಿ ಚೀಲ ರಸಗೊಬ್ಬರದ ಮೇಲೆ ₹ 4,200ಕ್ಕೆ ತಲುಪಿದೆ. ಆದರೂ, ಕೇಂದ್ರ ಸರ್ಕಾರ ₹ 2,600ರಷ್ಟು ಸಬ್ಸಿಡಿ ನೀಡುವ ಮೂಲಕ ಪ್ರತಿ ಚೀಲಕ್ಕೆ ₹ 1,200 ದರದಲ್ಲಿ ರೈತರಿಗೆ ಪೂರೈಸುತ್ತಿದೆ. ಅಗತ್ಯವಿದ್ದಾಗ, ಎಲ್ಲಿಂದ ತರಬೇಕಾದರೂ ರೈತರಿಗೆ ರಸಗೊಬ್ಬರ ಲಭ್ಯವಾಗುವಂತೆ ಮಾಡಲಾಗುವುದು’ ಎಂದು ವಿವರಿಸಿದರು.

ಭಾರತದ ಗಡಿಗೆ ನುಸುಳಲು ಯತ್ನ: ಲಂಕಾದ 6 ಮಂದಿ ವಶಕ್ಕೆ

ರಾಮೇಶ್ವರ(ಪಿಟಿಐ): ಭಾರತಕ್ಕೆ ಅಕ್ರಮವಾಗಿ ನುಸುಳಲು ಯತ್ನಿಸುತ್ತಿದ್ದ 6 ಮಂದಿ ಶ್ರೀಲಂಕಾ ಪ್ರಜೆಗಳನ್ನು ಭಾರತದ ಕರಾವಳಿ ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ.

ಶ್ರೀಲಂಕಾದ ಜಾಫ್ನಾ ಮತ್ತು ಕೊಕುಪದೈಯನ್ ಮೂಲದ ಈ 6 ಮಂದಿ ನುಸುಳುಕೋರರಲ್ಲಿ ಇಬ್ಬರು ಮಹಿಳೆಯರು, ಮೂವರು ಮಕ್ಕಳು ಇದ್ದಾರೆ. ಲಂಕಾದಿಂದ ಸಮುದ್ರ ಮಾರ್ಗದ ಮೂಲಕ ದೋಣಿಯಲ್ಲಿ ಬಂದಿದ್ದ ಅವರು ತಮಿಳುನಾಡಿನ ಧನುಷ್ಕೋಟಿ ತಲುಪಲು ಯತ್ನಿಸಿದ್ದರು. ಆದರೆ ಅವರನ್ನು ಅಕ್ರಮವಾಗಿ ಭಾರತಕ್ಕೆ ಕರೆತಂದಿದ್ದ ವ್ಯಕ್ತಿಯೋರ್ವ ಮಾರ್ಗಮಧ್ಯೆಯೇ ಬಿಟ್ಟಿದ್ದ. ಹೀಗಾಗಿ ಅವರು ಸಮುದ್ರದ ಮಧ್ಯೆ ಭಾಗದಲ್ಲಿ ಸಿಲುಕಿಕೊಂಡು, ಸಂಕಷ್ಟಕ್ಕೀಡಾಗಿದ್ದರು. ಈ ವೇಳೆ ಪೊಲೀಸರಿಂದ ಮಾಹಿತಿ ಪಡೆದ ಕರಾವಳಿ ಭದ್ರತಾ ಸಿಬ್ಬಂದಿ, ಕಾರ್ಯಾಚರಣೆ ಕೈಗೊಂಡು ರಾಮೇಶ್ವರದ 4ನೇ ದ್ವೀಪ ಪ್ರದೇಶದ ಬಳಿಯಿದ್ದ ಅವರನ್ನು ರಕ್ಷಣೆ ಮಾಡಿದ್ದಾರೆ.

ಹೆಚ್ಚಿನ ವಿಚಾರಣೆ ಮತ್ತು ಕಾನೂನು ಪ್ರಕ್ರಿಯೆಗಾಗಿ ಅವರನ್ನು ಕರಾವಳಿ ಭದ್ರತಾ ಪಡೆಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತಕ್ಕೆ ನುಸುಳಿದ ಇಬ್ಬರು ಮಹಿಳೆಯರ ಪೈಕಿ ಒಬ್ಬ ಮಹಿಳೆ ಪತ್ರಕರ್ತರ ಜೊತೆ ಮಾತನಾಡಿ, 'ಶ್ರೀಲಂಕಾದಲ್ಲಿ ಉದ್ಭವಿಸಿದ ಆರ್ಥಿಕ ಬಿಕ್ಕಟ್ಟಿನ ಪರಿಣಾಮ ಅಗತ್ಯ ವಸ್ತುಗಳು ಸೇರಿದಂತೆ ಮತ್ತಿತ್ತರ ವಸ್ತುಗಳ ಬೆಲೆಗಳು ಗಗನಕ್ಕೇರಿದೆ. ಇದರಿಂದ ಲಂಕಾದಲ್ಲಿ ಜೀವನ ದುಸ್ತರವಾಗಿದ್ದು, ಪರಿಸ್ಥಿತಿ ಹೊಂದಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದೇ ಕಾರಣಕ್ಕೆ ಭಾರತದ ಗಡಿ ಪ್ರವೇಶಿಸಿದ್ದಾಗಿ' ಹೇಳಿದ್ದಾರೆ.

ಮತ್ತೆ ಏರಿಕೆಯತ್ತ ಕೋವಿಡ್

ಯುರೋಪ್ ಹಾಗೂ ಏಷ್ಯಾದ ಕೆಲವು ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಮತ್ತೆ ಏರಿಕೆಯಾಗುತ್ತಿವೆ. ಜನವರಿ ತಿಂಗಳ ಆರಂಭದಲ್ಲಿ ನಿತ್ಯ 30 ಲಕ್ಷ ಸೋಂಕಿತರು ಪತ್ತೆಯಾಗುತ್ತಿದ್ದರು. ಆದರೆ ಫೆಬ್ರುವರಿ ವೇಳೆಗೆ ಈ ಸಂಖ್ಯೆ ಗಣನೀಯವಾಗಿ ಕುಸಿಯಿತು. ಆದರೆ ಮಾರ್ಚ್ ತಿಂಗಳಲ್ಲಿ ಕೆಲವು ದೇಶಗಳಲ್ಲಿ ಏರಿಕೆಯತ್ತ ಮುಖಮಾಡಿದ್ದು, ಓಮೈಕ್ರಾನ್‌ನ ಬಿಎ2 ರೂಪಾಂತರವು ಸೋಂಕು ಪ್ರಸರಣದ ವೇಗವನ್ನು ಹೆಚ್ಚಿಸಿದೆ. ಆದರೆ, ದೈನಂದಿನ ಸೋಂಕಿತರ ಪ್ರಮಾಣ ಹೆಚ್ಚಳವಾಗಿದ್ದರೂ, ಸಾವಿನ ಪ್ರಮಾಣ ಕಡಿಮೆಯೇ ಇದೆ.



ಆಧಾರ: ವರ್ಲ್ಡೋಮೀಟರ್

ಲಸಿಕೆ ಕಡ್ಡಾಯ ಮಾಡಿಲ್ಲ: ಸ್ಪಷ್ಟನೆ

ನವದೆಹಲಿ (ಪಿಟಿಐ): ‘ಜನರು ಕೋವಿಡ್ ಲಸಿಕೆ ಪಡೆಯುವುದನ್ನು ಕಡ್ಡಾಯ ಮಾಡಿಲ್ಲ. ಆದರೆ, ಶೇ 100ರಷ್ಟು ಲಸಿಕೆ ನೀಡಬೇಕು ಎಂದಷ್ಟೇ ತಿಳಿಸಲಾಗಿದೆ’ ಎಂದು ಕೇಂದ್ರ ಸರ್ಕಾರ ಮಂಗಳವಾರ ಸುಪ್ರೀಂ ಕೋರ್ಟ್‌ಗೆ ಸ್ಪಷ್ಟನೆ ನೀಡಿದೆ.

ತಮಿಳುನಾಡುವಿನ ಹೆಚ್ಚುವರಿ ಅಡ್ವೋಕೇಟ್ ಜನರಲ್ ಅಮಿತ್ ಆನಂದ್ ತಿವಾರಿ, ‘ಶೇ 100ರಷ್ಟು ಜನರಿಗೆ ಲಸಿಕೆ ನೀಡುವುದನ್ನು ಕೇಂದ್ರ ಕಡ್ಡಾಯ ಮಾಡಿದೆ’ ಎಂದು ನ್ಯಾಯಮೂರ್ತಿಗಳಾದ ಎಲ್.ನಾಗೇಶ್ವರರಾವ್ ಮತ್ತು ಬಿ.ಆರ್.ಗವಾಯಿ ಅವರಿದ್ದ ಪೀಠಕ್ಕೆ ತಿಳಿಸಿದರು.

ಕೇಂದ್ರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಇದಕ್ಕೆ ಪ್ರತಿಕ್ರಿಯಿಸುತ್ತಾ ಮೇಲಿನಂತೆ ಸ್ಪಷ್ಟನೆ ನೀಡಿದರು.

‘ನ್ಯಾಯಮೂರ್ತಿಗಳೇ ಒಂದು ಸ್ಪಷ್ಟನೆ. ಶೇ 100ರಷ್ಟು ಲಸಿಕೆ ನೀಡಬೇಕು ಎಂದು ತಿಳಿಸಿದ್ದಕ್ಕೇ ತಮಿಳುನಾಡುವಿನಲ್ಲಿ ಕಡ್ಡಾಯ ಮಾಡಲಾಗಿದೆ. ಇದು, ಕಡ್ಡಾಯವಲ್ಲ. ಈ ಬಗ್ಗೆ ಕೇಂದ್ರ ಯಾವುದೇ ಆದೇಶ ನೀಡಿಲ್ಲ’ ಎಂದರು.

‘ನಾಲ್ಕನೇ ಅಲೆ ಅಂದಾಜು ಇಲ್ಲ’

ನವದೆಹಲಿ (ಪಿಟಿಐ): ದೇಶದಲ್ಲಿ ನಾಲ್ಕನೇ ಅಲೆ ಬರುತ್ತದೆ ಎಂದು ಅಂದಾಜು ಮಾಡಿಲ್ಲ ಎಂದು ಐಐಟಿ ಕಾನ್ಪುರ ಸ್ಪಷ್ಟಪಡಿಸಿರುವುದಾಗಿ ಆರೋಗ್ಯ ಖಾತೆ ರಾಜ್ಯ ಸಚಿವೆ ಭಾರತಿ ಪ್ರವೀಣ್ ಅವರು ಹೇಳಿದರು.

ರಾಜ್ಯಸಭೆಯಲ್ಲಿ ಅವರು ಈ ಕುರಿತ ಪ್ರಶ್ನೆಗೆ ಲಿಖಿತ ಉತ್ತರ ನೀಡಿದರು.

ಹಿಜಾಬ್ ಧರಿಸಿ ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿನಿಯರು ಅರ್ಧಕ್ಕೇ ವಾಪಸ್

ಪ್ರಜಾವಾಣಿ ವಾರ್ತೆ

ಕೆಂಭಾವಿ (ಯಾದಗಿರಿ ಜಿಲ್ಲೆ): ಇಲ್ಲಿಯ ಸರ್ಕಾರಿ ಪದವಿ ಕಾಲೇಜಿಗೆ ಹಿಜಾಬ್ ಧರಿಸಿ ಬಂದಿದ್ದ ನಾಲ್ವರು ವಿದ್ಯಾರ್ಥಿನಿಯರಿಗೆ ಪ್ರಾಯೋಗಿಕ ಪರೀಕ್ಷೆ ಬರೆಯಲು ಆರಂಭದಲ್ಲಿ ಅವಕಾಶ ನೀಡಿ, ನಂತರ ಅವರನ್ನು ಅರ್ಧಕ್ಕೇ ವಾಪಸ್ ಕಳಿಸಿದ ಘಟನೆ ಮಂಗಳವಾರ ನಡೆಯಿತು.

ಬಿಎಸ್ಸಿ ಪ್ರಥಮ ಸೆಮಿಸ್ಟರ್‌ನ ಕಂಪ್ಯೂಟರ್ ವಿಜ್ಞಾನದ ಪ್ರಾಯೋಗಿಕ ಪರೀಕ್ಷೆ ನಡೆಯುತ್ತಿದೆ. ಹಿಜಾಬ್ ಧರಿಸಿ ಬಂದಿದ್ದ ನಾಲ್ವರು ವಿದ್ಯಾರ್ಥಿನಿಯರಿಗೆ ಪರೀಕ್ಷೆ ಬರೆಯಲು ಮೊದಲು ಪ್ರವೇಶ ನಿರಾಕರಿಸಲಾಯಿತು. ಪ್ರಾಚಾರ್ಯ ಎಚ್.ಎಂ.ವಗ್ಗಾರ್ ಅವರು ವಿದ್ಯಾರ್ಥಿನಿಯರಿಗೆ ಹೈಕೋರ್ಟ್ ಆದೇಶದ ಬಗ್ಗೆ ತಿಳಿಹೇಳಿ ಹಿಜಾಬ್ ತೆಗೆದಿಟ್ಟು ಪರೀಕ್ಷೆ ಬರೆಯುವಂತೆ ಸೂಚಿಸಿದರು.

ಇದು ವಿದ್ಯಾರ್ಥಿನಿಯರು, ಅವರ ಸಂಬಂಧಿಕರು ಮತ್ತು ಪ್ರಾಚಾರ್ಯರ ಮಧ್ಯೆ ಕೆಲಕಾಲ ವಾಗ್ವಾದಕ್ಕೂ ಕಾರಣವಾಯಿತು. ವಿದ್ಯಾರ್ಥಿನಿಯರು ಹಿಜಾಬ್ ಧರಿಸಿಯೇ ಪರೀಕ್ಷೆಗೆ ಹಾಜರಾದರು.

ವಿಷಯ ತಿಳಿದು ಕಾಲೇಜಿಗೆ ಬಂದ ಪಟ್ಟಣದ ಪೊಲೀಸರು, ಈ ಬಗ್ಗೆ ಪ್ರಾಚಾರ್ಯರನ್ನು ಪ್ರಶ್ನಿಸಿದರು. ‘ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗಿರುವುದು ನನ್ನ ಗಮನಕ್ಕೆ ಬಂದಿಲ್ಲ’ ಎಂದು ವಗ್ಗಾರ್ ಅವರು ಸಮಜಾಯಿಷಿ ನೀಡಿದರು. ಪರೀಕ್ಷಾ ಮೇಲ್ವಿಚಾರಕರನ್ನು ಮಾಧ್ಯಮದವರು ವಿಚಾರಿಸಿದಾಗ, ‘ಮಾನವೀಯತೆಯ ದೃಷ್ಟಿಯಿಂದ ವಿದ್ಯಾರ್ಥಿನಿಯರಿಗೆ ಪರೀಕ್ಷೆ ಬರೆಯಲು ಅನುವು ಮಾಡಿಕೊಡಲಾಯಿತು’ ಎಂದರು.

ಪ್ರಶ್ನೆ ಪತ್ರಿಕೆ ನೀಡಿದ ಒಂದು ಗಂಟೆಯ ಬಳಿಕ ಪರೀಕ್ಷಾ ಕೋಣೆಗೆ ತೆರಳಿದ ಪ್ರಾಚಾರ್ಯರು, ವಿದ್ಯಾರ್ಥಿನಿಯರಿಗೆ ನೀಡಿದ್ದ ಪ್ರಶ್ನೆ ಪತ್ರಿಕೆ ವಾಪಸ್ ಪಡೆದರು. ವಿದ್ಯಾರ್ಥಿನಿಯರು ಪರೀಕ್ಷೆಯನ್ನು ಅರ್ಧಕ್ಕೆ ಬಿಟ್ಟು ವಾಪಸ್ ಮನೆಗೆ ತೆರಳಿದರು.

ಯಾದಗಿರಿ ಜಿಲ್ಲೆಯ ಕೆಂಭಾವಿಯ ಸರ್ಕಾರಿ ಪದವಿ ಕಾಲೇಜಿನಲ್ಲಿ ಮಂಗಳವಾರ ನಡೆದ ಬಿಎಸ್ಸಿ ಪ್ರಥಮ ಸೆಮಿಸ್ಟರ್‌ನ ಪ್ರಾಯೋಗಿಕ ಪರೀಕ್ಷೆಗೆ ಹಿಜಾಬ್ ಧರಿಸಿ ಹಾಜರಾಗಿದ್ದ ವಿದ್ಯಾರ್ಥಿನಿಯರು

> **ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಪರೀಕ್ಷೆ ಬರೆದಿರುವುದಕ್ಕೆ ಪರೀಕ್ಷಾ ಮೇಲ್ವಿಚಾರಕರೆ ಹೊಣೆಗಾರರು. ವಿಷಯ ತಿಳಿದ ನಂತರ ವಿದ್ಯಾರ್ಥಿನಿಯರಿಗೆ ನೀಡಿದ್ದ ಪ್ರಶ್ನೆ ಪತ್ರಿಕೆ ವಾಪಸ್ ಪಡೆಯಲಾಯಿತು**
> **ಎಚ್.ಎಂ.ವಗ್ಗಾರ್,** ಪ್ರಾಚಾರ್ಯ, ಸರ್ಕಾರಿ ಪದವಿ ಕಾಲೇಜು

ದೇವಾಲಯ ನಿರ್ಮಾಣ: ಮುಸ್ಲಿಂ ಕುಟುಂಬದಿಂದ ಭೂದಾನ

ಪಟ್ನಾ: ವಿಶ್ವದ ಅತಿ ದೊಡ್ಡ ಹಿಂದೂ ದೇಗುಲ ನಿರ್ಮಾಣಕ್ಕಾಗಿ ಬಿಹಾರದ ಮುಸ್ಲಿಂ ಕುಟುಂಬವೊಂದು ₹2.5 ಕೋಟಿ ಮೌಲ್ಯದ ಭೂಮಿ ಕೊಡುಗೆ ನೀಡಿದೆ.

ಬಿಹಾರದ ಪೂರ್ವ ಚಂಪಾರಣ್ ಜಿಲ್ಲೆಯ ಕೈಥ್‌ವಲಿಯಾದಲ್ಲಿ ವಿಶ್ವದ ಅತಿ ದೊಡ್ಡ ಹಿಂದೂ ದೇಗುಲ ‘ವಿರಾಟ್ ರಾಮಾಯಣ ಮಂದಿರ’ ನಿರ್ಮಾಣವಾಗಲಿದೆ. ಪಟ್ನಾ ಮೂಲದ ‘ಮಹಾವೀರ್ ಮಂದಿರ್ ಟ್ರಸ್ಟ್’ ದೇಗುಲ ನಿರ್ಮಾಣ ಯೋಜನೆ ಕೈಗೆತ್ತಿಕೊಂಡಿದೆ. ಈ ದೇಗುಲಕ್ಕೆ ಪೂರ್ವ ಚಂಪಾರಣ್ ಜಿಲ್ಲೆಯ ಉದ್ಯಮಿ ಇಶ್ತಿಯಾಕ್ ಅಹಮದ್ ಖಾನ್ ಭೂಮಿ ನೀಡಿದ್ದಾರೆ ಎಂದು ಟ್ರಸ್ಟ್‌ನ ಮುಖ್ಯಸ್ಥ, ಐಪಿಎಸ್ ಮಾಜಿ ಅಧಿಕಾರಿ ಆಚಾರ್ಯ ಕಿಶೋರ್ ಕುನಾಲ್ ತಿಳಿಸಿದ್ದಾರೆ.

ಸಿಬಿಎಸ್‌ಇ ಅವಧಿ–1 ಪರೀಕ್ಷೆ: ಆದ್ಯತೆ ತಗ್ಗಿಸಲು ಖಾಸಗಿ ಶಾಲೆಗಳ ಆಗ್ರಹ

ನವದೆಹಲಿ(ಪಿಟಿಐ): ಸಿಬಿಎಸ್‌ಇಯ ಮೊದಲ ಅವಧಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಗಳಿಸುವ ಅಂಕಗಳ ಪರಿಗಣನೆಯಲ್ಲಿ ಕೆಲವು ಶಾಲೆಗಳು ‘ಅನ್ಯಾಯ ಮತ್ತು ಅಕ್ರಮ’ ಎಸಗಿವೆ ಎಂದು ಆರೋಪಿಸಿರುವ ಕೆಲವು ಖಾಸಗಿ ಶಾಲೆಗಳು, 2021-2022ರ ಅವಧಿಗೆ ಅವಧಿ-1ರ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಅಂಕಗಳ ಪರಿಗಣನೆಯ ಆದ್ಯತೆಯನ್ನು ತಗ್ಗಿಸಬೇಕೆಂದು ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯನ್ನು (ಸಿಬಿಎಸ್‌ಇ) ಒತ್ತಾಯಿಸಿವೆ.

ಈ ಸಂಬಂಧ ನ್ಯಾಷನಲ್ ಪ್ರೋಗ್ರೆಸ್ಸಿವ್ ಸ್ಕೂಲ್ಸ್ ಕಾನ್‌ಫರೆನ್ಸ್ (ಎನ್‌ಪಿಎಸ್‌ಸಿ) ಸಿಬಿಎಸ್‌ಇ ಅಧ್ಯಕ್ಷ ವಿನೀತ್ ಜೋಶಿ ಅವರಿಗೆ ಪತ್ರ ಬರೆದಿದ್ದು, ‘ಅವಧಿ-1ರ ಪರೀಕ್ಷೆಯ ಪರಿಗಣನೆಯನ್ನು ಶೇಕಡಾ 20ರಿಂದ 30ರಷ್ಟು ಕಡಿಮೆ ಮಾಡಬೇಕು. ಹಾಗೆಯೇ ಅವಧಿ–2ರ ಪರೀಕ್ಷೆಯ ಅಂಕಗಳ ಪರಿಗಣನೆಯ ಪ್ರಮಾಣವನ್ನು ಶೇ 70ರಿಂದ 80ರಷ್ಟು ಏರಿಸಬೇಕೆಂದು’ ಎಂದು ಒತ್ತಾಯಿಸಿದೆ.

ಸಿಬಿಎಸ್‌ಇ 10 ಮತ್ತು 12ನೇ ತರಗತಿಗಳ ಮೊದಲ ಅವಧಿಯ ಪರೀಕ್ಷೆಗಳ ಫಲಿತಾಂಶ ಪ್ರಕಟಿಸಿದ ಕೆಲವು ದಿನಗಳ ನಂತರ ಈ ಪತ್ರ ಬರೆಯಲಾಗಿದೆ.

ಮರಿಯುಪೊಲ್‌ಗಾಗಿ ರಷ್ಯಾ ಭೀಕರ ಕಾಳಗ; ಡೊನೆಟ್‌ಸ್ಕ್, ಹಾರ್ಕಿವ್‌ನಲ್ಲಿ 9 ನಾಗರಿಕರು ಸಾವು

ಉಕ್ರೇನ್ ಮೇಲೆ ಬಾಂಬ್ ಸುರಿಮಳೆ

ಉಕ್ರೇನಿನ ಇರ್ಪಿನ್ ನಗರದ ಮೇಲೆ ರಷ್ಯಾ ಪಡೆಗಳು ನಡೆಸಿದ ವೈಮಾನಿಕ ದಾಳಿಗಳಿಗೆ ಕಟ್ಟಡಗಳು ಹೊತ್ತಿ ಉರಿಯುತ್ತಿರುವ ದೃಶ್ಯವನ್ನು ಮಕ್ಸರ್ ಟೆಕ್ನಾಲಜಿ ಉಪಗ್ರಹ ಸೆರೆ ಹಿಡಿದಿದೆ –ಎಪಿ/ಪಿಟಿಐ ಚಿತ್ರ

ಕೀವ್, ಲುವಿವ್, ಮರಿಯುಪೊಲ್ (ಎಎಫ್‌ಪಿ/ರಾಯಿಟರ್ಸ್): ಉಕ್ರೇನ್‌ನ ಯುದ್ಧಪೀಡಿತ ನಗರಗಳ ಮೇಲೆ ರಷ್ಯಾ ನಿರಂತರ ನಡೆಸುತ್ತಿರುವ ವೈಮಾನಿಕ ಮತ್ತು ಕ್ಷಿಪಣಿ ದಾಳಿಯಲ್ಲಿ 9 ನಾಗರಿಕರು ಸಾವನ್ನಪ್ಪಿದ್ದು, 12ಕ್ಕೂ ಹೆಚ್ಚು ಜನರು ಗಾಯಗೊಂಡಿರುವುದಾಗಿ ಕೀವ್‌ನ ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದರು.

ಡೊನೆಟ್‌ಸ್ಕ್ ಪ್ರದೇಶದ ಅವ್‌ಜೀವ್ಕ ನಗರದ ಮೇಲೆ ರಷ್ಯಾ ಪಡೆಗಳಿಂದ ಸೋಮವಾರ ತಡ ರಾತ್ರಿ ವೈಮಾನಿಕ ದಾಳಿ ನಡೆಯಿತು ಎಂದು ಉಕ್ರೇನ್‌ನ ಲೋಕಪಾಲರಾದ ಲ್ಯುಡ್ಮಿಲಾ ಡೆನಿಸೋವಾ ತಿಳಿಸಿದರು.

ಅಲ್ಲದೇ, ಹಾರ್ಕಿವ್‌ನಲ್ಲಿ ರಷ್ಯಾ ಪಡೆಗಳು ನಾಗರಿಕರನ್ನು ಗುರಿಯಾಗಿಸಿ ನಡೆಸಿದ ಟ್ಯಾಂಕ್ ದಾಳಿಯಿಂದ ಒಂದು ಮಗು ಮತ್ತು ಮೂವರು ನಾಗರಿಕರು ಮೃತಪಟ್ಟರು ಎಂದು ಡೆನಿಸೋವಾ ಟೆಲಿಗ್ರಾಂನಲ್ಲಿ ತಿಳಿಸಿದ್ದಾರೆ.

ಕೆರ್ಸಾನ್‌ನಲ್ಲಿ ಉಕ್ರೇನ್ ಪರ ರ‍್ಯಾಲಿ ನಡೆಸುತ್ತಿದ್ದ ಪ್ರತಿಭಟನಕಾರರ ಮೇಲೆ ರಷ್ಯಾ ಪಡೆಗಳು ಮಂಗಳವಾರ ಗ್ರೆನೇಡ್ ಮತ್ತು ಗುಂಡಿನ ದಾಳಿ ನಡೆಸಿವೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ತಿಳಿಸಿದ್ದಾರೆ.

ನಾಗರಿಕರ ಮೇಲಿನ ದಾಳಿಯನ್ನು ಅಲ್ಲಗಳೆದಿರುವ ರಷ್ಯಾ ಪಡೆಗಳು, ಉಕ್ರೇನ್ ಪಡೆಗಳು ನಾಗರಿಕರನ್ನು ಮಾನವ ಗುರಾಣಿಯಂತೆ ಬಳಸಿಕೊಳ್ಳುತ್ತಿವೆ ಎಂದು ಆರೋಪಿಸಿವೆ.

ಕಾರ್ಯತಂತ್ರದ ಪ್ರಮುಖ ಬಂದರು ನಗರ ಮರಿಯುಪೊಲ್ ವಶಕ್ಕಾಗಿ ರಷ್ಯಾ ಭೀಕರ ದಾಳಿ ಮುಂದುವರಿಸಿದೆ. ಈ ನಗರದ ಮೇಲೆ ನಿರಂತರ ಬಾಂಬ್ ದಾಳಿ ಮತ್ತು ಬೀದಿ ಕಾಳಗ ನಡೆಸಿಯೂ ರಷ್ಯಾ ಪಡೆಗಳಿಗೆ ಯಶಸ್ಸು ಸಿಕ್ಕಿಲ್ಲ. ಉಕ್ರೇನ್ ತೀವ್ರ ಪ್ರತಿರೋಧ ತೋರಿ, ಮರಿಯುಪೊಲ್ ರಕ್ಷಿಸಿಕೊಳ್ಳುತ್ತಿದೆ ಎಂದು ಬ್ರಿಟನ್ ರಕ್ಷಣಾ ಸಚಿವಾಲಯ ಹೇಳಿದೆ.

ರಾಜಧಾನಿ ಕೀವ್ ನಗರ ಹೊರ ವಲಯದಉಪನಗರಗಳಮೇಲೂರಷ್ಯಾದಿಂದ ವೈಮಾನಿಕ ಮತ್ತು ರಾಕೆಟ್ ದಾಳಿ ಮುಂದುವರಿದಿದೆ. ಕೀವ್‌ನಲ್ಲಿ ಭಾರೀ ಸ್ಫೋಟದ ಸದ್ದು ಕೇಳಿಸಿತು ಎಂದು ಸ್ಥಳೀಯರು ಹೇಳಿದ್ದಾರೆ. ಹಾನಿಯ ಬಗ್ಗೆ ವಿವರ ಇನ್ನೂ ಸಿಕ್ಕಿಲ್ಲ.

'ರಷ್ಯಾದಿಂದ ಜೈವಿಕ ಅಸ್ತ್ರ ಬಳಕೆ': ನಾಲ್ಕು ವಾರ ಆದರೂ ಉಕ್ರೇನ್‌ನ ಯಾವುದೇ ಪ್ರಮುಖ ನಗರವನ್ನು ರಷ್ಯಾ ಪಡೆಗಳಿಗೆ ವಶಕ್ಕೆ ತೆಗೆದುಕೊಳ್ಳಲು ಆಗಿಲ್ಲ. ಇದರಿಂದ ಹತಾಶರಾಗಿರುವ ಪುಟಿನ್, ಉಕ್ರೇನ್ ಮೇಲೆ ರಾಸಾಯನಿಕ ಮತ್ತು ಜೈವಿಕ ಅಸ್ತ್ರ ಬಳಸುವ ಸಿದ್ಧತೆಯಲ್ಲಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಎಚ್ಚರಿಸಿದ್ದಾರೆ.

ಯುರೋಪಿನಲ್ಲಿ ಮತ್ತು ಉಕ್ರೇನಿನಲ್ಲಿ ಅಮೆರಿಕ ಜೈವಿಕ ಅಸ್ತ್ರಗಳ ಪ್ರಯೋಗಾಲಯ ಹೊಂದಿದೆ ಎಂದು ಪುಟಿನ್ ಮಾಡಿರುವ ಆರೋಪದಲ್ಲಿ ಹುರುಳಿಲ್ಲ ಎಂದರು.

ಅಲ್ಲದೇ, ರಷ್ಯಾದ ಹ್ಯಾಕರ್‌ಗಳಿಂದ ಅಮೆರಿಕದ ಪ್ರಮುಖ ಕಂಪನಿಗಳನ್ನು ಗುರಿಯಾಗಿಸಿಕೊಂಡು ಸೈಬರ್ ದಾಳಿ ನಡೆಯುವ ಸಾಧ್ಯತೆ ಇದೆ. ಕಂಪನಿಗಳು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಬೈಡನ್ ಸೂಚಿಸಿದ್ದಾರೆ.

ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಕೂಡ ಉಕ್ರೇನ್ ಮೇಲೆ ರಷ್ಯಾ ಸೈಬರ್ ದಾಳಿ ನಡೆಸುವ ಸಂಭವ ಇದೆ ಎಂದಿದ್ದಾರೆ. ಸೈಬರ್ ದಾಳಿಯ ಯೋಜನೆಯನ್ನು ರಷ್ಯಾದ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಅಲ್ಲಗಳೆದಿದ್ದಾರೆ.

ಇಂದು ಸಭೆ: ಉಕ್ರೇನ್ ಬಗ್ಗೆ ಚರ್ಚಿಸಲು ಫ್ರಾನ್ಸ್, ಅಮೆರಿಕ, ಬ್ರಿಟನ್ ಸೇರಿ 22 ರಾಷ್ಟ್ರಗಳ ಕೋರಿಕೆಯಂತೆ ಬುಧವಾರ ವಿಶ್ವಸಂಸ್ಥೆಯಲ್ಲಿ ತುರ್ತು ವಿಶೇಷ ಅಧಿವೇಶನ ನಡೆಯಲಿದೆ.

ಭಾರತ ಟೀಕಿಸಿದ ಜೋ ಬೈಡನ್

ಉಕ್ರೇನ್ ಮೇಲಿನ ರಷ್ಯಾದ ಆಕ್ರಮಣವನ್ನು ಖಂಡಿಸದ ಭಾರತದ 'ತಟಸ್ಥ' ನಿಲುವನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಟೀಕಿಸಿದ್ದಾರೆ.

ರಷ್ಯಾ ಆಕ್ರಮಣ ಖಂಡಿಸುವ ವಿಚಾರದಲ್ಲಿ ಭಾರತದ ನಿಲುವು ಅಸ್ಥಿರವಾಗಿದೆ ಎಂದು ಹೇಳಿದ್ದಾರೆ. ಬೈಡನ್ ಟೀಕೆಗೆ ಭಾರತ ಪ್ರತಿಕ್ರಿಯಿಸಿಲ್ಲ.

'ಪುಟಿನ್ ಅವರ ಆಕ್ರಮಣಶೀಲತೆಗೆ ಪ್ರತಿಕ್ರಿಯೆಯಾಗಿ ನಾವು ನ್ಯಾಟೊ ಮತ್ತು ಪೆಸಿಫಿಕ್ ಪ್ರದೇಶದಲ್ಲಿ ಒಗ್ಗಟ್ಟು ಪ್ರದರ್ಶಿಸಿದ್ದೇವೆ. ಕ್ವಾಡ್ ದೇಶಗಳ ಪೈಕಿ ಭಾರತ ಹೊರತುಪಡಿಸಿ ಜಪಾನ್ ಮತ್ತು ಆಸ್ಟ್ರೇಲಿಯಾ ಕೂಡ ಪ್ರಬಲವಾಗಿ ಪುಟಿನ್ ವಿರುದ್ಧ ನಿಂತಿವೆ' ಎಂದರು.

ಅಲೆಕ್ಸಿ ನವಾಲ್ನಿಗೆ 9 ವರ್ಷ ಜೈಲು ಶಿಕ್ಷೆ

ಮಾಸ್ಕೊ (ರಾಯಿಟರ್ಸ್): ರಷ್ಯಾದ ಪ್ರಮುಖ ವಿರೋಧ ಪಕ್ಷದ ನಾಯಕ, 45 ವರ್ಷದ ಅಲೆಕ್ಸಿ ನವಾಲ್ನಿ ಅವರಿಗೆ ವಂಚನೆ ಮತ್ತು ಅವಹೇಳನ ಮಾಡಿದ ಪ್ರಕರಣಗಳಲ್ಲಿ ನ್ಯಾಯಾಲಯವು ಮಂಗಳವಾರ ಒಂಬತ್ತು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಸಮಾಜ ಕಲ್ಯಾಣ ಇಲಾಖೆ

ಜಂಟಿ ನಿರ್ದೇಶಕ ಕಾರ್ಯಾಲಯ, ಧಾರವಾಡ

ಕಛೇರಿ ದೂರವಾಣಿ ಸಂಖ್ಯೆ: 0836-2447201 Email:dswo.dharwad@gmil.com ಫ್ಯಾಕ್ಸ ಸಂಖ್ಯೆ:0836-2435475

ಸಂ: ಜಂನಿ/ಸಕಇ/ಎಸ್-2/ಕ್ರೈಸ್.ಹೊ.ಸಿಂ.-ಟೆಂಡರ್/ ಸಿಆರ್-/2021-22 ದಿನಾಂಕ: 21-03-2022

E-TENDER NOTIFICATION

Inviting the Tender for the year of 2021-22 , for the Man power from Outsource Agencies to Morarji Desai / Kittur Rani Chennamma/Dr. B.R. Ambedkar/ Inidira Ghandi/Atal Bihari Vajapeyi residential school working under KRIES, for the vacant Group -D posts of cook, kitchen servant, cleaners, night wacthman, peons and First Division Clerks for the institution maintaining under Soical Welfare Department in Dharwad District. Calender of Event are as below.

1	Tender Reference No. and date	No.JDSWD/S-2/KRIESOutsource Man Power Tender/CR-/2021-22, Dated : 21/03/2022
2	Amount put toTender	Rs,**1,90,13,785.00/-**
3	Tender Apply start Date	Date: 21/03/2022
4	Last Date & Time for submission of Tender	Date: 19-04-2022 Time: 17:30 P.M
5	Pre Bid Meeting Date, Place and Time	Dated: 29-03-2022 Time: 11:30 A.M JOINT DIRECTOR OFFICE, SOCIAL WELFARE DEPARTMENT, DHARWAD
6	Date & Time of opening of Technical bid	Dated: 21/04/2022 Time : 11:30 AM DC Office, Dharwad (Subject to change)
7	Tentative Date & Time of opening of Commercial bid	Dated: 22/04/2022 Time : 11:30 AM DC Office, Dharwad (Subject to change)
8	EMD Amount	Rs. **2,85,207/-**
9	Venue of opening of tenders & address for communication	JOINT DIRECTOR, SOCIAL WELFARE DEPARTMENT, D.C. COMPOUND, DHARWAD,-580001 PHONE NO. 0836-2447201 EMAIL:dswo.dharwad@gmail.com
10	For E-Tender Technical Information website	http://e-proc.karnataka.gov.in

Prospective suppliers Willing To Participate in this tender can download the bid documents with visiting the web site http://e-proc.karnataka.gov.in

ಸಹಿ/-ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ ಧಾರವಾಡ

ವಾ.ಸಾ.ಇ/ಧಾ/1182/2021-22/ದೇಶಪಾಂಡೆಪಬ್ಲಿಸಿಟಿ

27ನೇ ದಿನದ ಬೆಳವಣಿಗೆಗಳು

- ರಷ್ಯಾ-ಉಕ್ರೇನ್ ಸಂಘರ್ಷದ ಬಗ್ಗೆ ಭಾರತ ಮತ್ತು ಆಸ್ಟ್ರೇಲಿಯಾ ಕಳವಳ ವ್ಯಕ್ತಪಡಿಸಿವೆ. ತಕ್ಷಣವೇ ಯುದ್ಧ ನಿಲ್ಲಿಸುವಂತೆ ಒತ್ತಾಯಿಸಿವೆ.
- ಉಕ್ರೇನ್ ನಿರಾಶ್ರಿತರಲ್ಲಿ 5 ಲಕ್ಷ ಮಂದಿಗೆ ಮಾನಸಿಕ ಸಮಸ್ಯೆ, ಇದರಲ್ಲಿ 30 ಸಾವಿರ ಮಂದಿಗೆ ಗಂಭೀರ ಮಾನಸಿಕ ಕಾಯಿಲೆ ಇದೆ – ವಿಶ್ವ ಆರೋಗ್ಯ ಸಂಸ್ಥೆ
- ರಷ್ಯಾ ಪಡೆಗಳ ನಿಯಂತ್ರಣದಲ್ಲಿರುವ ಚೆರ್ನೊಬಿಲ್ ಅಣು ಸ್ಥಾವರದ (ಇದು ಸದ್ಯ ಕಾರ್ಯನಿರ್ವಹಿಸುತ್ತಿಲ್ಲ) ಬಳಿ ಕಾಳ್ಗಿಚ್ಚು ಹರಡಿದೆ.
- ಉಕ್ರೇನ್ – ರಷ್ಯಾ ಸಂಘರ್ಷ ಶಮನಗೊಳಿಸಲು ಪೋಪ್ ಫ್ರಾನ್ಸಿಸ್ ಮಧ್ಯಸ್ಥಿಕೆ ವಹಿಸುವಂತೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಒತ್ತಾಯ
- ಕೀವ್ ಹೊರ ವಲಯದ ಮಕರೀವ್ ಅನ್ನು ರಷ್ಯಾ ಪಡೆಗಳ ನಿಯಂತ್ರಣದಿಂದ ಮರಳಿ ಪಡೆದಿರುವುದಾಗಿ ಉಕ್ರೇನ್ ರಕ್ಷಣಾ ಸಚಿವಾಲಯ ಹೇಳಿಕೆ
- ರಷ್ಯಾದ ನಗರಗಳಲ್ಲಿ ನಾಗರಿಕರು ಮಾಲ್‌ಗಳಲ್ಲಿ ಗೋಧಿ ಮತ್ತು ಸಕ್ಕರೆಯನ್ನು ಮುಗಿಬಿದ್ದು ಖರೀದಿಸಿದರು
- ಉಕ್ರೇನ್‌ನ ಮಕೆವೆಕಾ ನಗರದ ವಸತಿ ಕಟ್ಟಡಕ್ಕೆ ರಷ್ಯಾ ಕ್ಷಿಪಣಿ ದಾಳಿ ನಡೆಸಿದೆ.
- ಜಪಾನ್ ಜತೆಗಿನ ಕುರ್ಲಿ ದ್ವೀಪ ಸಂಬಂಧದ ಶಾಂತಿ ಮಾತುಕತೆ ಮತ್ತು ಆರ್ಥಿಕ ಪಾಲುದಾರಿಕೆಯನ್ನು ರಷ್ಯಾ ಕಡಿದುಕೊಂಡಿದೆ
- ಉಕ್ರೇನ್‌ನ ನಟರು, ರಂಗಭೂಮಿ ಕಲಾವಿದರು, ಸಿನಿಮಾ ನಿರ್ಮಾಪಕರಲ್ಲಿ ಹಲವು ಮಂದಿ ರಷ್ಯಾ ವಿರುದ್ಧ ಹೋರಾಡಲು ಉಕ್ರೇನ್ ಸೇನೆ ಸೇರಿದ್ದಾರೆ
- ರಷ್ಯಾ- ಉಕ್ರೇನ್ ಯುದ್ಧದ ಪರಿಣಾಮ ಭಾರತ ಮತ್ತು ಆಸ್ಟ್ರೇಲಿಯಾದಿಂದ ಗೋಧಿ ಹಾಗೂ ಇನ್ನಿತರ ಧಾನ್ಯಗಳ ರಫ್ತು ಹೆಚ್ಚಾಗಿದೆ
- ಕಳೆದ ವರ್ಷದ ನೊಬೆಲ್ ಶಾಂತಿ ಪ್ರಶಸ್ತಿಯ ಸಹ ವಿಜೇತರಾದ ರಷ್ಯಾದ ಪತ್ರಕರ್ತ ಡಿಮಿಟ್ರಿ ಮುರಾಟೊವ್ ಉಕ್ರೇನ್ ನಿರಾಶ್ರಿತರಿಗೆ ನಿಧಿ ಸಂಗ್ರಹಕ್ಕೆ ತಮ್ಮ ನೊಬೆಲ್ ಪದಕ ಹರಾಜಿಗೆ ಇಡುವುದಾಗಿ ಘೋಷಿಸಿದ್ದಾರೆ
- ಪೋಲೆಂಡ್‌ನ ಹೋಮ್‌ಗ್ರೋನ್ ಹಾಸ್ಪಿಟಾಲಿಟಿ ತಂತ್ರಜ್ಞಾನ ಕಂಪನಿ ಓಯೊಯಿಂದ ಉಕ್ರೇನ್ ನಿರಾಶ್ರಿತರಿಗೆ ಉಚಿತ ವಸತಿ ಸೌಕರ್ಯ

ಸಂಸದ ಸ್ಥಾನ ತ್ಯಜಿಸಿದ ಅಖಿಲೇಶ್ ಯಾದವ್

ಲಖನೌ: ಉತ್ತರ ಪ್ರದೇಶ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿಗೆ ಕಠಿಣ ಸ್ಪರ್ಧೆ ಒಡ್ಡಿದ್ದ ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಆಜಂಗಡ ಲೋಕಸಭಾ ಕ್ಷೇತ್ರದ ಸದಸ್ಯತ್ವಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಕರ್ಹಾಲ್ ಕ್ಷೇತ್ರದಿಂದ ಅವರು ಗೆದ್ದಿದ್ದಾರೆ.

2017ರ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಎಸ್‌ಪಿ ತನ್ನ ಸ್ಥಿತಿಯನ್ನು ಬಹಳಷ್ಟು ಉತ್ತಮಪಡಿಸಿಕೊಂಡಿದೆ. ಹಾಗಾಗಿ ರಾಜ್ಯ ರಾಜಕಾರಣದಲ್ಲಿಯೇ ಉಳಿಯಲು ಅಖಿಲೇಶ್ ನಿರ್ಧರಿಸಿದ್ದಾರೆ. 2024ರಲ್ಲಿ ಲೋಕಸಭೆಗೆ ನಡೆಯಲಿರುವ ಚುನಾವಣೆ ದೃಷ್ಟಿಯಲ್ಲಿ ಇರಿಸಿಕೊಂಡು ಅವರು ಈ ನಿರ್ಧಾರ ಕೈಗೊಂಡಿದ್ದಾರೆ.

ರಾಂಪುರದ ಲೋಕಸಭಾ ಸದಸ್ಯ ಆಜಂ ಖಾನ್ ಅವರೂ ಸಂಸದ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ವಿವಿಧ ಪ್ರಕರಣಗಳ ಅಡಿಯಲ್ಲಿ ಅವರು ಈಗ ಜೈಲಿನಲ್ಲಿ ಇದ್ದಾರೆ. ಆಜಂ ಖಾನ್ ಅವರೂ ರಾಂಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದಾರೆ. ಅಖಿಲೇಶ್ ರಾಜೀನಾಮೆ ಪತ್ರವನ್ನು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ನೀಡಿದ್ದಾರೆ.

ಆದಿತ್ಯನಾಥ ರಾಜೀನಾಮೆ

ಲಖನೌ (ಪಿಟಿಐ): ಉತ್ತರ ಪ್ರದೇಶದ ನಿಯೋಜಿತ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಆದಿತ್ಯನಾಥ ಅವರು ಗೋರಖಪುರ ನಗರ ಕ್ಷೇತ್ರದಿಂದ ಗೆದ್ದಿದ್ದಾರೆ. ಹಾಗಾಗಿ, ಅವರು ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಅವರ ಸದಸ್ಯತ್ವದ ಅವಧಿ 2022ರ ಜುಲೈ 6ರವರೆಗೆ ಇತ್ತು.

ಜಿ–23 ಮುಖಂಡರ ಜೊತೆ ಸೋನಿಯಾ ಗಾಂಧಿ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಮುಖಂಡ ಗುಲಾಂ ನಬಿ ಆಜಾದ್ ಅವರ ಜೊತೆಗಿನ ಸಭೆ ಬಳಿಕ, ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಜಿ–23 ಗುಂಪಿನ ಸದಸ್ಯರಾದ ಆನಂದ್ ಶರ್ಮಾ, ಮನೀಶ್ ತಿವಾರಿ ಹಾಗೂ ವಿವೇಕ್ ತಂಕಾ ಅವರ ಜತೆ ಮಂಗಳವಾರ ಮಾತುಕತೆ ನಡೆಸಿದರು. ಹಿರಿಯ ಮುಖಂಡ ದಿಗ್ವಿಜಯ ಸಿಂಗ್ ಸಭೆಯಲ್ಲಿ ಇದ್ದರು.

ಹಿಮಾಚಲ ಪ್ರದೇಶದ 20ಕ್ಕೂ ಹೆಚ್ಚು ಮುಖಂಡರ ಜೊತೆ ಸೋನಿಯಾ ಅವರು ಪ್ರತ್ಯೇಕ ಮಾತುಕತೆ ನಡೆಸಿದರು. ಗುಜರಾತ್ ಮುಖಂಡರ ಜೊತೆ ರಾಹುಲ್ ಗಾಂಧಿ ಸಭೆ ನಡೆಸಿದರು. ವಿಧಾನಸಭಾ ಚುನಾವಣೆ ನಡೆಯಲಿರುವ ಈ ಎರಡೂ ರಾಜ್ಯಗಳ ಪರಿಸ್ಥಿತಿಗಳ ಬಗ್ಗೆ ಸಮಾಲೋಚನೆ ನಡೆಸಲಾಯಿತು.

ಪಕ್ಷದಲ್ಲಿ ಆಮೂಲಾಗ್ರ ಬದಲಾವಣೆಗೆ ಆಗ್ರಹಿಸಿರುವ ಜಿ–23 ಮುಖಂಡರು ಪಕ್ಷದ ಮುಂದಿನ ನಡೆಯನ್ನು ಪ್ರಸ್ತಾಪಿಸಿದ್ದರು. ಹೀಗಾಗಿ ಆನಂದ್ ಶರ್ಮಾ, ಮನೀಶ್ ತಿವಾರಿ ಹಾಗೂ ವಿವೇಕ್ ತಂಕಾ ಅವರನ್ನು ಮನೆಗೆ ಕರೆಸಿಕೊಂಡ ಸೋನಿಯಾ, ಅವರೊಂದಿಗೆ ಮಾತುಕತೆ ನಡೆಸಿದರು. ಸೋನಿಯಾ ಅವರು ಜಿ–23 ತಂಡದ ಇನ್ನೂ ಕೆಲವು ಮುಖಂಡರನ್ನು ಭೇಟಿ ಮಾಡುವ ಸಾಧ್ಯತೆಯಿದೆ.

ಎಲ್ಲರಿಗೂ ಸರಿ ಎನಿಸುವ ದಾರಿ ಹುಡುಕುವ ಹಾಗೂ ಪಕ್ಷದಲ್ಲಿ ಶಾಂತಿ ಮರುಸ್ಥಾಪಿಸುವ ಬಗ್ಗೆ ಸೋನಿಯಾ ದೃಢ ವಿಶ್ವಾಸದಲ್ಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಕ್ಷದ ಸಂಘಟನಾತ್ಮಕ ಹುದ್ದೆಗಳು ಹಾಗೂ ಇತರ ಪ್ರಮುಖ ಸ್ಥಾನಮಾನಗಳ ಮೇಲೆ ಜಿ–23 ನಾಯಕರು ಕಣ್ಣಿಟ್ಟಿದ್ದಾರೆ. ಇವರಿಗೆ ಸೂಕ್ತ ಸ್ಥಾನಮಾನ ಕೊಡುವ ಸಾಧ್ಯತೆಯಿದೆ. ಆಜಾದ್ ಅವರನ್ನು ಮತ್ತೆ ರಾಜ್ಯಸಭೆಗೆ ಕಳುಹಿಸುವ ಸಾಧ್ಯತೆ ತಳ್ಳಿಹಾಕುವಂತಿಲ್ಲ ಎಂದು ಮೂಲಗಳು ತಿಳಿಸಿವೆ.

ಈ ಸರಣಿ ಸಭೆಗಳು ಸಿಡಬ್ಲ್ಯುಸಿ ಸಭೆಯ ಮುಂದುವರಿದ ಭಾಗ. ಪಕ್ಷದ ಪುನರುಜ್ಜೀವನಕ್ಕೆ ಕ್ರಮ ಕೈಗೊಳ್ಳಲು ಸೋನಿಯಾ ಅವರಲ್ಲಿ ಮುಖಂಡರು ಮನವಿ ಮಾಡಿದರೆಂದು ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ.49, 4 ಮತ್ತು 5ನೇ ಮಹಡಿ, 'ಈಸ್ಟ್‌ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 001
ದೂರವಾಣಿ ಸಂ: 080-22265383 ಫ್ಯಾಕ್ಸ್: 080-22267901
ವೆಬ್‌ಸೈಟ್: **www.kiadb.in** ಇ-ಮೇಲ್: **ceoemkiadb@gmail.com**

ಸಂಖ್ಯೆ: ಕ.ಕೈ.ಪ್ರ.ಅ.ಮಂ/ಕೇ.ಕ/ಗಣಕ ಸಂ:35940/17381/2021-22 ದಿನಾಂಕ: 22.03.2022

ಅಧಿಸೂಚನೆ

ಮಂಡಳಿಯಿಂದ ಕೈಗಾರಿಕಾ ಪ್ರದೇಶಗಳಲ್ಲಿ ಅಭಿವೃದ್ಧಿಪಡಿಸಿದ ಅಮೆನಿಟಿ ನಿವೇಶನಗಳ ಹಂಚಿಕೆಗಾಗಿ ಅರ್ಜಿಗಳ ಆಹ್ವಾನ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕ.ಕೈ.ಪ್ರ.ಅ.ಮಂ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ 1966 ರಡಿಯಲ್ಲಿ ಸಂಯೋಜಿತವಾದ ಒಂದು ಶಾಸನಬದ್ಧ ಸಂಸ್ಥೆಯಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಭಿವೃದ್ಧಿ ಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ವೃದ್ಧಿಗಾಗಿ ಎಲ್ಲಾ ಮೂಲಸೌಕರ್ಯಗಳೊಂದಿಗೆ ಕ್ರಮಬದ್ಧವಾಗಿ ನಿರ್ಮಾಣ ಮಾಡುವ ಧ್ಯೇಯೋದ್ದೇಶ ಹೊಂದಿದೆ. ಮಂಡಳಿಯು ಅಭಿವೃದ್ಧಿ ಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕೋದ್ಯಮಿಗಳ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಅಮೆನಿಟಿ ನಿವೇಶನಗಳನ್ನು ರಚಿಸುವ ಬಗ್ಗೆ ಕೆಐಎಡಿ ಕಾಯ್ದೆ 1966 ರ ಸೆಕ್ಷನ್ 14 (ಸಿ) ರಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ.ಸಿಐ 86 ಎಸ್‌ಪಿಕ್ಯೂ 90 ಬೆಂಗಳೂರು ದಿನಾಂಕ:13.03.1991 ರಲ್ಲಿ ಕೆಲವು ಚಟುವಟಿಕೆಗಳನ್ನು ಅಮೆನಿಟಿ ಎಂದು ನಿಗದಿಪಡಿಸಿರುತ್ತದೆ. (ಮಂಡಳಿಯ ವೆಬ್‌ಸೈಟ್ **www.kiadb.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ).

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ. ಸಿಐ 180 ಎಸ್‌ಪಿಕ್ಯೂ 2017 ದಿ:08.02.2018 ರಲ್ಲಿ ಪತ್ರ ಸಂಖ್ಯೆ. ಸಿಐ 78 ಎಸ್‌ಪಿಕ್ಯೂ(ಇ) 2021 ದಿ:07.06.2021 ರಲ್ಲಿ ಮಂಡಳಿಯ ಕೈಗಾರಿಕಾ ಪ್ರದೇಶದಲ್ಲಿನ ಅಮೆನಿಟಿ ನಿವೇಶನಗಳನ್ನು 99 ವರ್ಷದ ಗುತ್ತಿಗೆ ಅವಧಿಗೆ ಹಂಚಿಕೆ ಮಾಡಲು ಮಾರ್ಗದರ್ಶನಗಳನ್ನು ತಿಳಿಸಲಾಗಿದೆ (ಮಂಡಳಿಯ ವೆಬ್‌ಸೈಟ್ **www.kiadb.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ)

ಮುಂದುವರೆದು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ಸಿಐ 180 ಎಸ್‌ಪಿಕ್ಯೂ 2017 ದಿ:08.03.2019 ರಲ್ಲಿ ಸದರಿ ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡಲು ಮಾನದಂಡಗಳು ಮತ್ತು ವಿಧಿ ವಿಧಾನಗಳನ್ನು ರೂಪಿಸಿರುತ್ತದೆ. (ಮಂಡಳಿಯ ವೆಬ್‌ಸೈಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ).

ಮೇಲ್ಕಂಡ ಸರ್ಕಾರಿ ಆದೇಶ ಸಂಖ್ಯೆ. ದಿ:08.03.2019 ರನ್ವಯ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ಲಭ್ಯವಿರುವ ಅಮೆನಿಟಿ ನಿವೇಶನಗಳನ್ನು ಹಂಚಿಕೆ ಪಡೆಯಲಿಚ್ಛಿಸುವ ಆಸಕ್ತ, ಅರ್ಹ ಉದ್ದಿಮೆದಾರರಿಂದ ಈ ಅಧಿಸೂಚನೆಯ ಮೂಲಕ ಅರ್ಜಿಗಳನ್ನು ಆಹ್ವಾನಿಸಿದ್ದು, ಅರ್ಜಿ ಶುಲ್ಕ ರೂ.2,000/- ಗಳ ಡಿ.ಡಿ ಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕೆ.ಐ.ಎ.ಡಿ.ಬಿ ಬೆಂಗಳೂರು (CEO & EM, KIADB, Bengaluru) ಇವರಿಗೆ ಸಂದಾಯವಾಗುವಂತೆ ಹಾಗೂ ಸಂಬಂಧಿಸಿದ ಯೋಜನಾ ವರದಿ ಹಾಗೂ ಇತರೆ ಕೆಳಕಂಡ ಮಾಹಿತಿಗಳೊಂದಿಗೆ (ಎಲ್ಲಾ ದಾಖಲಾತಿಗಳ ದೃಢೀಕೃತ ಪ್ರತಿಗಳು) ಅರ್ಜಿಯನ್ನು ಈ ಅಧಿಸೂಚನೆಗೆ ಅನುಬಂಧಿಸಿರುವ ನಮೂನೆಯಲ್ಲಿ ಸಲ್ಲಿಸಬೇಕಾಗಿರುತ್ತದೆ.

a) The objectives and activities of the institution and public cause served by it since its establishment;
b) The length of existence of the institution and its registration under relevant act;
c) The financial position of institution;
d) The present location of the institution;
e) The benefit likely to accrue to the general public of the locality by allotment of the civic amenity site;
f) The Bonafide and genuineness of the institution as made out in the annual reports, audit report etc.;
g) The need of the civic amenity site by the institution for providing the civic amenity in entrepreneurs shall be carried out as per the procedure laid out in:
1. Govt notification No.CI 86 SPQ 90, Bangalore Dated: 13.3.1991
2. Letters Nos: CI 180 SPQ 2017, Dated: 08.02.2018 & No: CI 78 SPQ(E) 2021 dtd.07-06-2021 of the C&I Department, Government of Karnataka.
3. G.O. No.CI 180 SPQ 2017 dated 08.03.2019.

ಹಂಚಿಕೆಗೆ ಅರ್ಜಿ ಆಹ್ವಾನಿಸಿರುವ ನಿವೇಶನಗಳ ವಿವರಗಳು ಮತ್ತು ಉದ್ದೇಶಿತ ಚಟುವಟಿಕೆಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ತಿಳಿಸಲಾಗಿದೆ.

ಕ್ರ. ಸಂ.	ಜಿಲ್ಲೆ	ಕೈಗಾರಿಕಾ ಪ್ರದೇಶ	ನಿವೇಶನ ಸಂಖ್ಯೆ	ವಿಸ್ತೀರ್ಣ (ಎಕರೆಗಳಲ್ಲಿ)	ಉದ್ದೇಶ	ವರ್ಗ
1	ಮೈಸೂರು	ಕೂರ್ಗಳ್ಳಿ	4/ಎ1	0.50	* ಕಾಮನ್ ಸರ್ವಿಸ್ ಸೆಂಟರ್	ಸಾಮಾನ್ಯ
2	ಮೈಸೂರು	ಕೂರ್ಗಳ್ಳಿ	4/ಎ2	1.50	ಹೋಟೆಲ್	ಪ.ಜಾತಿ/ ಪ.ಪಂಗಡ
3	ಮೈಸೂರು	ಕೂರ್ಗಳ್ಳಿ	4/ಬಿ	2.00	ಆಸ್ಪತ್ರೆ	ಸಾಮಾನ್ಯ
4	ಮೈಸೂರು	ಕೂರ್ಗಳ್ಳಿ	4/ಸಿ	3.00	ಶೈಕ್ಷಣಿಕ ಸಂಸ್ಥೆಗಾಗಿ	ಸಾಮಾನ್ಯ
5	ಮೈಸೂರು	ಕೂರ್ಗಳ್ಳಿ	4/ಡಿ	2.00	ಸ್ಕಿಲ್ ಟ್ರೈನಿಂಗ್ ಸೆಂಟರ್/ ಟೆಕ್ನಿಕಲ್ ಎಜುಕೇಷನ್ ಇನ್ಸ್ಟಿಟೂಟ್	ಸಾಮಾನ್ಯ
6	ಮೈಸೂರು	ಕೂರ್ಗಳ್ಳಿ	4/ಇ	1.00	ಆಟೋಮೊಬೈಲ್ ಸರ್ವಿಸ್ ಸ್ಟೇಷನ್	ಸಾಮಾನ್ಯ
7	ಮೈಸೂರು	ಅಡಕನಹಳ್ಳಿ	145-ಎ	3.00	ಶೈಕ್ಷಣಿಕ ಸಂಸ್ಥೆಗಾಗಿ	ಸಾಮಾನ್ಯ
8	ಮೈಸೂರು	ಅಡಕನಹಳ್ಳಿ	145-ಬಿ	3.36	ಸ್ಕಿಲ್ ಟ್ರೈನಿಂಗ್ ಸೆಂಟರ್/ ಟೆಕ್ನಿಕಲ್ ಎಜುಕೇಷನ್ ಇನ್ಸ್ಟಿಟೂಟ್	ಪ.ಜಾತಿ/ ಪ.ಪಂಗಡ
9	ಮೈಸೂರು	ಅಡಕನಹಳ್ಳಿ	195-ಎ	0.70	*ಕಾಮನ್ ಸರ್ವಿಸ್ ಸೆಂಟರ್	ಸಾಮಾನ್ಯ
10	ಮೈಸೂರು	ಅಡಕನಹಳ್ಳಿ	195-ಬಿ	4.46	ಆಸ್ಪತ್ರೆ	ಸಾಮಾನ್ಯ
11	ಮೈಸೂರು	ತಾಂಡ್ಯ 2ನೇ ಹಂತ	104/ಎ	3.30	ಟೆಕ್ನಿಕಲ್ ಇನ್ಸ್ಟಿಟೂಟ್	ಸಾಮಾನ್ಯ
12	ಮೈಸೂರು	ತಾಂಡ್ಯ 2ನೇ ಹಂತ	104/ಬಿ	2.00	ಆಟೋಮೊಬೈಲ್ ಸರ್ವಿಸ್ ಸ್ಟೇಷನ್	ಸಾಮಾನ್ಯ
13	ಮೈಸೂರು	ತಾಂಡ್ಯ 2ನೇ ಹಂತ	41/ಎ	0.45	ಪೆಟ್ರೋಲ್ ಬಂಕ್/ ಆಟೋಮೊಬೈಲ್ ಸರ್ವಿಸ್ ಸ್ಟೇಷನ್	ಪ.ಜಾತಿ/ ಪ.ಪಂಗಡ
14	ಮೈಸೂರು	ತಾಂಡ್ಯ 2ನೇ ಹಂತ	41/ಬಿ	1.00	ಹೋಟೆಲ್	ಸಾಮಾನ್ಯ
15	ಮೈಸೂರು	ತಾಂಡ್ಯ ಮಹಿಳಾ ಪಾರ್ಕ್ 1ನೇ ಹಂತ	32	0.21	*ಕಾಮನ್ ಸರ್ವಿಸ್ ಸೆಂಟರ್	ಸಾಮಾನ್ಯ
16	ಮೈಸೂರು	ಇಮ್ಮಾವು	ಎ-1	5.00	ಹಾಲಿಡೇ ರೆಸಾರ್ಟ್	ಸಾಮಾನ್ಯ
17	ಮೈಸೂರು	ಇಮ್ಮಾವು	ಎ-4	1.00	ಹೋಟೆಲ್	ಸಾಮಾನ್ಯ
18	ಮಂಡ್ಯ	ತೂಬಿನಕೆರೆ	70/ಎ	1.00	ಟ್ರೈನಿಂಗ್ ಇನ್ಸ್ಟಿಟ್ಯೂಟ್	ಸಾಮಾನ್ಯ
19	ಮಂಡ್ಯ	ತೂಬಿನಕೆರೆ	70/ಬಿ	0.73	ಆಟೋಮೊಬೈಲ್ ಸರ್ವಿಸ್ ಸ್ಟೇಷನ್	ಪ.ಜಾತಿ/ ಪ.ಪಂಗಡ
20	ಮಂಡ್ಯ	ಹೆಬ್ಬಾಳ್ 2ನೇ ಹಂತ	2ಪಾರ್ಟ್	1.20	ಹೋಟೆಲ್	ಸಾಮಾನ್ಯ
21	ಚಾಮರಾಜ ನಗರ	ಬದನಗುಪ್ಪೆ- ಕೆಲ್ಲಂಬಳ್ಳಿ	13/ಎ	0.50	ಪೆಟ್ರೋಲ್ ಬಂಕ್	ಸಾಮಾನ್ಯ
22	ಚಾಮರಾಜ ನಗರ	ಬದನಗುಪ್ಪೆ- ಕೆಲ್ಲಂಬಳ್ಳಿ	13/ಬಿ	1.10	ಸ್ಕಿಲ್ ಟ್ರೈನಿಂಗ್/ಸರ್ವಿಸ್ ಸ್ಟೇಷನ್	ಪ.ಜಾತಿ/ ಪ.ಪಂಗಡ
23	ಚಾಮರಾಜ ನಗರ	ಬದನಗುಪ್ಪೆ- ಕೆಲ್ಲಂಬಳ್ಳಿ	22/ಎ	3.00	ಹಾಲಿಡೇ ರೆಸಾರ್ಟ್	ಸಾಮಾನ್ಯ
24	ಚಾಮರಾಜ ನಗರ	ಬದನಗುಪ್ಪೆ- ಕೆಲ್ಲಂಬಳ್ಳಿ	22/ಬಿ	1.00	ಆಟೋಮೊಬೈಲ್ ಸರ್ವಿಸ್ ಸ್ಟೇಷನ್	ಸಾಮಾನ್ಯ
25	ಚಾಮರಾಜ ನಗರ	ಬದನಗುಪ್ಪೆ- ಕೆಲ್ಲಂಬಳ್ಳಿ	22/ಸಿ	5.00	ಮಲ್ಟಿ ಸ್ಪೆಷಾಲಿಟಿ ಹಾಸ್ಪಿಟಲ್	ಸಾಮಾನ್ಯ
26	ಚಾಮರಾಜ ನಗರ	ಬದನಗುಪ್ಪೆ- ಕೆಲ್ಲಂಬಳ್ಳಿ	101	1.00	ಹೋಟೆಲ್	ಪ.ಜಾತಿ/ ಪ.ಪಂಗಡ
27	ಚಾಮರಾಜ ನಗರ	ಬದನಗುಪ್ಪೆ- ಕೆಲ್ಲಂಬಳ್ಳಿ	30 & 31/1	2.00	ಆಸ್ಪತ್ರೆ	ಸಾಮಾನ್ಯ
28	ಹಾಸನ	ಹಾಸನ ಗ್ರೋಥ್ ಸೆಂಟರ್ (ಉಪ ಬಡಾವಣೆ-3)	16-ಬಿ1	0.50	*ಕಾಮನ್ ಸರ್ವಿಸ್ ಸೆಂಟರ್	ಸಾಮಾನ್ಯ
29	ಹಾಸನ	ಹಾಸನ ಗ್ರೋಥ್ ಸೆಂಟರ್ (ಉಪ ಬಡಾವಣೆ-3)	16-ಬಿ2	0.59	ಆಸ್ಪತ್ರೆ	ಸಾಮಾನ್ಯ
30	ಹಾಸನ	ತಿಮ್ಮೇನಹಳ್ಳಿ	1-ಎ	0.50	ಹೋಟೆಲ್	ಪ.ಜಾತಿ/ ಪ.ಪಂಗಡ
31	ಚಿಕ್ಕಮಗಳೂರು	ಅಂಬ್ಲೆ	57	0.20	ವೇ ಬ್ರಿಡ್ಜ್	ಸಾಮಾನ್ಯ

* ಕಾಮನ್ ಸರ್ವಿಸ್ ಸೆಂಟರ್:- ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 86 ಎಸ್‌ಪಿಕ್ಯೂ 90 ಬೆಂಗಳೂರು ದಿನಾಂಕ:13.03.1991 ರಲ್ಲಿನ ಬಹು ಉಪಯೋಗ ಚಟುವಟಿಕೆಗಳು (ಇಂಧನ ಕೇಂದ್ರ, ವೇ ಬ್ರಿಡ್ಜ್, ಗೋದಾಮು, ವೇರ್‌ಹೌಸ್, ಸಿನಿಮಾ ಥಿಯೇಟರ್, ಘನ ತ್ಯಾಜ್ಯ ವಿಲೇವಾರಿ ಘಟಕ/ಸಂಸ್ಕರಣಾ ಘಟಕ ಹೊರತುಪಡಿಸಿ, ಎಲ್.ಪಿ.ಜಿ. ಸಿಲಿಂಡರ್, ಕೆಮಿಕಲ್ಸ್, ಸಾಲ್ವೆಂಟ್ಸ್, ಪೆಟ್ರೋಲ್, ಡೀಸಲ್, ಕೆರೋಸಿನ್ ಮತ್ತು ಇತರೆ ತೈಲಗಳ ಸಂಗ್ರಹಣೆ ಮತ್ತು ಮಾರಾಟ ಇವುಗಳ ಹೊರತುಪಡಿಸಿ).

ಅರ್ಜಿಯ ವಿನ್ಯಾಸ ಮತ್ತು ಅರ್ಜಿ ನಮೂನೆ ಜೊತೆಗೆ ಸಲ್ಲಿಸಬೇಕಾದ ದಾಖಲೆಗಳ ಪಟ್ಟಿಯನ್ನು ಕೆಐಎಡಿಬಿ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಈ ಹಿಂದೆ ದಿನಾಂಕ:15.06.2019 ಮತ್ತು ದಿನಾಂಕ:04.07.2019 ರಂದು ಅಮೆನಿಟಿ ನಿವೇಶನಗಳನ್ನು ಹಂಚಿಕೆಗಾಗಿ ಹೊರಡಿಸಲಾಗಿದ್ದ ಪತ್ರಿಕಾ ಪ್ರಕಟಣೆಯನ್ನು ಪ್ರಕಟಣೆ ಸಂ: ಕಕೈಪ್ರಅಮಂ/ಕೇಂ.ಕ/ಹಂಚಿಕೆ/4338/2020-21 ದಿನಾಂಕ:02.09.2020ರ ಮೂಲಕ ರದ್ದುಪಡಿಸಲಾಗಿದೆ.

ರದ್ದುಗೊಳಿಸಲಾಗಿರುವ ಹಿಂದಿನ ಪ್ರಕಟಣೆಯನ್ವಯ ಸಲ್ಲಿಸಿರುವ ಅರ್ಜಿಗಳು ಈಗ ಹೊರಡಿಸಲಾಗುತ್ತಿರುವ ಅಧಿಸೂಚನೆಗೆ ಅನ್ವಯಿಸುವುದಿಲ್ಲ. ಆದುದರಿಂದ, ಅಂತಹ ಅರ್ಜಿದಾರರೂ ಸಹ ಹೊಸದಾಗಿ ಅರ್ಜಿ ಸಲ್ಲಿಸಬೇಕಿರುತ್ತದೆ.

ಅರ್ಜಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 21.04.2022**. ಅರ್ಜಿದಾರರು ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಮಂಡಳಿ ಕಛೇರಿಗಳಲ್ಲಿಯೂ ಸಹ ಸಂಪರ್ಕಿಸಬಹುದಾಗಿರುತ್ತದೆ.

ಕೆ.ಐ.ಎ.ಡಿ.ಬಿ. ಕಛೇರಿ	ದೂರವಾಣಿ ಸಂ:
ಕೇಂದ್ರ ಕಛೇರಿ, ಬೆಂಗಳೂರು	080-22265383
ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ ವಲಯ ಕಛೇರಿ, ಮೈಸೂರು	0821-2582014/ 4258831/2581802
ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ ವಲಯ ಕಛೇರಿ, ಹಾಸನ	08172-243110/ 243191 / 243658

ಅರ್ಜಿ ಶುಲ್ಕ ಸಲ್ಲಿಸದ ಹಾಗೂ ಇತರೆ ಅಪೂರ್ಣಗೊಂಡ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಹಕ್ಕು ಮಂಡಳಿಗಿರುತ್ತದೆ. ನಿವೇಶನ ಹಂಚಿಕೆಯ ವಿಷಯದಲ್ಲಿ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ ಹಾಗೂ ಅದಕ್ಕೆ ಎಲ್ಲಾ ಅರ್ಜಿದಾರರು ಬದ್ಧರಾಗಿರಬೇಕಾಗಿರುತ್ತದೆ.

ದಿನಾಂಕ: 22-03-2022 **ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು**
ಸ್ಥಳ: ಬೆಂಗಳೂರು **ಮತ್ತು ಕಾರ್ಯನಿರ್ವಾಹಕ ಸದಸ್ಯರು**

ಅರ್ಜಿ ನಮೂನೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕೈಗಾರಿಕಾ ಪ್ರದೇಶಗಳಲ್ಲಿ ಅಭಿವೃದ್ಧಿ ಪಡಿಸಲಾದ ಅಮೆನಿಟಿ ನಿವೇಶನಗಳ ಹಂಚಿಕೆ ಕುರಿತ ಅರ್ಜಿ

ಗೆ,
ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ಸದಸ್ಯರು,
ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
4ನೇ ಮತ್ತು 5ನೇ ಮಹಡಿ, ಈಸ್ಟ್ ವಿಂಗ್,
ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001

1	ಅ) ಅರ್ಜಿದಾರರ ಹೆಸರು: ವೈಯಕ್ತಿಕ / ಸಂಘ ಸಂಸ್ಥೆಗಳು/ ಟ್ರಸ್ಟ್/ ಸೊಸೈಟಿ (ದಪ್ಪ ಅಕ್ಷರಗಳಲ್ಲಿ) ಆ) ಪದಾಧಿಕಾರಿಗಳ ವಿವರ: ಇ) ನೋಂದಣಿ ಸಂಖ್ಯೆ ಮತ್ತು ದಿನಾಂಕ: (ಪತ್ರ ಲಗತ್ತಿಸಿಬೇಕು)	
2	ಅಮೆನಿಟಿ ನಿವೇಶನ ಹಂಚಿಕೆ ಪಡೆಯಲು ತೀರ್ಮಾನಿಸಿದ ಗೊತ್ತುವಳಿ (ಪ್ರತಿ ಲಗತ್ತಿಸುವುದು):	
3.	ಅರ್ಜಿದಾರರ ವಿಳಾಸ :	
4.	ಪ್ರವರ್ಗ: ಸಾಮಾನ್ಯ/ ಪ.ಜಾತಿ/ ಪ.ಪಂಗಡ/ ಒಬಿಸಿ	
5.	ಅರ್ಜಿ ಶುಲ್ಕದ ಮೊತ್ತ: ಡಿ.ಡಿ. ಸಂಖ್ಯೆ ಮತ್ತು ದಿನಾಂಕ:	
6.	ಅ) ಕೋರಲಾದ ಅಮೆನಿಟಿ ನಿವೇಶನದ ಸಂಖ್ಯೆ : ಆ) ಕೈಗಾರಿಕಾ ಪ್ರದೇಶದ ಹೆಸರು: ಇ) ಉದ್ದೇಶ :	
7	ಅಮೆನಿಟಿ ನಿವೇಶನದಲ್ಲಿ ನಿಗದಿಪಡಿಸಲಾದ ಉದ್ದೇಶ ಕೈಗೊಳ್ಳಲು ವಹಿಸಬಹುದಾದ ಕ್ರಮಗಳ ವಿವರಗಳು:	
8	ಅರ್ಜಿದಾರರ/ ಸಂಘ ಸಂಸ್ಥೆಗಳ ಈವರೆಗಿನ ಚಟುವಟಿಕೆಗಳು/ ಸೇವಾ ವಿವರಗಳು (ವಾರ್ಷಿಕ ವರದಿ) ಸಲ್ಲಿಸುವುದು:	
9	ಅರ್ಜಿದಾರರ/ಸಂಘ ಸಂಸ್ಥೆಗಳ ಹಣಕಾಸು ವಿವರಗಳು (ಕಳೆದ 3 ವರ್ಷದ ಅಡಿಟ್ ವರದಿಗಳು)	
10	ಅರ್ಜಿದಾರರ/ ಸಂಘ ಸಂಸ್ಥೆಗಳ ಸದ್ಯದ ವಿಳಾಸ:	
11	ಭೂ ಬಳಕೆಯ ರೇಖಾ ಚಿತ್ರದೊಂದಿಗೆ ಈ ಯೋಜನೆಯ ಮೂಲಕ ಸ್ಥಳೀಯರಿಗೆ ಲಾಭಗಳ ಜೊತೆಗೆ ನಾಗರಿಕ ಸೌಕರ್ಯದ ಅಗತ್ಯಗಳಿಗಾಗಿ ಸಂಕ್ಷಿಪ್ತ ಬರಹ/ಮುಚ್ಚಳಿಕೆ	

ಮೇಲೆ ತಿಳಿಸಲಾದ ಎಲ್ಲಾ ವಿವರಗಳು ನನಗೆ/ ನಮಗೆ ತಿಳಿದ ಮಟ್ಟಿಗೆ ಸತ್ಯದಿಂದ ಕೂಡಿದ್ದು, ಒಂದು ವೇಳೆ ಸುಳ್ಳಾಗಿರುವುದು ಕಂಡುಬಂದಲ್ಲಿ, ನನ್ನ/ ನಮ್ಮ ಅರ್ಜಿಯನ್ನು ತಿರಸ್ಕರಿಸಬಹುದಾಗಿದ್ದು, ಅರ್ಜಿ ಶುಲ್ಕವನ್ನು ಸಹ ಮಂಡಳಿಗೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ.

ಸ್ಥಳ: **ಅರ್ಜಿದಾರರ ಸಹಿ**
ದಿನಾಂಕ: **ಮತ್ತು ಮೊಹರು**

ಅಜಿರ್ಯ ಜೊತೆಗೆ ಸಲ್ಲಿಸಬೇಕಾದ ದಾಖಲೆಗಳ ಪಟ್ಟಿ

1. ನೋಂದಣಿ ಪ್ರಮಾಣ ಪತ್ರ
2. ಪ.ಜಾತಿ/ಪ.ಪಂಗಡ/ಇತರೆ ಹಿಂದುಳಿದ ವರ್ಗಗಳ ಅರ್ಜಿದಾರರ ಜಾತಿ ಪ್ರಮಾಣ ಪತ್ರ
3. ಹಂಚಿಕೆ ಕೋರಿ ಅಂಗೀಕರಿಸಿದ ನಿರ್ಣಯದ ಪುರಾವೆ
4. ಅರ್ಜಿ ಶುಲ್ಕ
5. ಲೆಟರ್‌ಹೆಡ್‌ನಲ್ಲಿ ಸಂಸ್ಥೆಯ ಸಾಮರ್ಥ್ಯದ ಕುರಿತು ಸಂಕ್ಷಿಪ್ತ ಬರಹ
6. ಸಂಸ್ಥೆಯ ಚಟುವಟಿಕೆಗಳಾದ ಕಿರುಹೊತ್ತಿಗೆ, ವಾರ್ಷಿಕ ವರದಿಯ ಪ್ರತಿ ಮತ್ತು ಲೆಕ್ಕಪರಿಶೋಧನಾ ವರದಿ ಮುಂತಾದವುಗಳು ಹಾಗೂ ಉದ್ದೇಶಗಳ ಕುರಿತು ಸಂಕ್ಷಿಪ್ತ ಬರಹ
7. ಕಳೆದ ಮೂರು ವರ್ಷಗಳಿಗೆ ಲೆಕ್ಕಪರಿಶೋಧನೆಗೊಂಡ ವಾರ್ಷಿಕ ಆಯವ್ಯಯ ಪಟ್ಟಿ
8. ಭೂ ಬಳಕೆಯ ರೇಖಾ ಚಿತ್ರದೊಂದಿಗೆ ಈ ಯೋಜನೆಯ ಮೂಲಕ ಸ್ಥಳೀಯರಿಗೆ ಲಾಭಗಳ ಜೊತೆಗೆ ನಾಗರಿಕ ಸೌಕರ್ಯದ ಅಗತ್ಯಗಳಿಗಾಗಿ ಸಂಕ್ಷಿಪ್ತ ಬರಹ/ಮುಚ್ಚಳಿಕೆ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

VAIKUNTHA SAMARADHANE

PADMANABHA RAJU
(V.P. RAJU, IISc)
10 June 1941 - 11 March 2022
Date: 23-03-2022 Wednesday
You have taught us lifetime values of Respect, Caring, Giving and Forgiving.
Deeply mourned by
Family and Friends

ವೈಕುಂಠ ಸಮಾರಾಧನೆ

ಶ್ರೀ. ಕೆ.ಎ. ಗಂಗಯ್ಯ

ಮೊದಲ ವರ್ಷದ ಪುಣ್ಯಸ್ಮರಣೆ

ಶ್ರೀ ಕೆ.ಸಿ. ಬೆಟ್ಟಸ್ವಾಮಿಗೌಡ
ಸಂಪಂಗಿರಾಮ ಬಸ್ ಮಾಲೀಕರು
ಅಧ್ಯಕ್ಷರು, ಕರ್ನಾಟಕ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ, ಬೆಂಗಳೂರು
ನೀವಿಲ್ಲದಿರುವ ಎಂದೆಂದಿಗೂ ನಮ್ಮ ಮನದಲ್ಲಿ...
ಸದಾ ನಿಮ್ಮ ನೆನಪಿನಲ್ಲಿರುವ: ಪತ್ನಿ, ಮಕ್ಕಳು, ಮೊಮ್ಮಕ್ಕಳು, ಕುಟುಂಬದವರು ಮತ್ತು ಬಂಧುಗಳು

ಷೇರುಪೇಟೆ ವಹಿವಾಟು

696



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,117
ಇಂದಿನ ಅಂತ್ಯ	17,315
▲	197
ದಿನದ ಗರಿಷ್ಠ	17,334

ವಿನಿಮಯ ದರ

$ ಡಾಲರ್	75.26
£ ಪೌಂಡ್	100.72
€ ಯುರೊ	85.54
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹415
12 ಮೊಟ್ಟೆಗೆ	₹58

ಮೈಸೂರು

100 ಮೊಟ್ಟೆಗೆ	₹420

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1565 (1590)
ಸೋಯಾ (ರಿಫೈನ್ಡ್)	₹1495 (1495)
ಸೂರ್ಯಕಾಂತಿ (ರಿಫೈನ್ಡ್)	₹1800 (1820)
ಪಾಮೋಲಿನ್	₹1475 (1484)

ಕೊಬ್ಬರಿ ಧಾರಣೆ

ಪುತ್ತೂರು (ಇತರ)	₹4000-10500
ಕೆ.ಆರ್. ಪೇಟೆ (ಇತರ)	₹9500-9500
ತುರುವೇಕೆರೆ	₹17000-17900

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹18000-20000

2ನೇ ದರ್ಜೆ ₹10000-16000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದೊಡ್ಡ	₹1300-1800
ಮಧ್ಯಮ	₹1000-1300
ಸಣ್ಣ	₹400-1000

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 430- 450
ನಡುಗೋಲು 500-550
ರಾಶಿ 600-650
ರಾಶಿ ಉತ್ತಮ 650-700
ಜರಡಿ 750 - 800
ಹೆರಕಿದ್ದು 1,100-1,150
ಹಸಿರು ಸಾಧಾರಣ 600-700
ಹಸಿರು ಉತ್ತಮ 900-950
ಹಸಿರು ಅತಿ ಉತ್ತಮ 1,200-1,250
ಕಾಳು ಮೆಣಸು - 490
ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-53000
ಚನ್ನಗಿರಿ
ರಾಶಿ 45599-48008
ಕಾರ್ಕಳ
ಹೊಸತು 40000-45000
ಹಳತು 46000-53000
ಕುಮಟಾ
ಚಿಪ್ಪು 24289-29900
ಕೋಕ 20111-25000
ಫ್ಯಾಕ್ಟರಿ 16999-19818
ಹಳೆಚಾಲಿ 47472-47472
ಹೊಸಚಾಲಿ 36900-40000
ಮಂಗಳೂರು
ಕೋಕ 28300-30200
ಪುತ್ತೂರು
ಕೋಕ 11000-26000
ಹೊಸತು 27500-45000
ಸಾಗರ
ಬಿಳಿಗೋಟು 24199-29199
ಚಾಲಿ 36599-37869
ಕೋಕ 25899-25899
ಕೆಂಪುಗೋಟು 34199-37299
ರಾಶಿ 44099-46099
ಸಿಪ್ಪೆಗೋಟು 16899-21399
ಶಿವಮೊಗ್ಗ
ಬೆಟ್ಟೆ 46699-50000
ಗೊರಬಲು 16210-34310
ರಾಶಿ 43169-46991
ಸರಕು 50069-74296
ಸಿದ್ದಾಪುರ
ಬಿಳಿಗೋಟು 23699-31199
ಚಾಲಿ 43344-44099
ಕೋಕ 22099-31899
ಹೊಸಚಾಲಿ 36529-40209
ಕೆಂಪುಗೋಟು 24599-30789
ರಾಶಿ 44099-47199
ತಟ್ಟಿಬೆಟ್ಟೆ 33609-45589
ಶಿರಸಿ
ಬೆಟ್ಟೆ 34619-43999
ಬಿಳಿಗೋಟು 19009-33724
ಚಾಲಿ 35099-40591
ರಾಶಿ 25699-47899
ಸುಳ್ಯ
ಹೊಸತು 25000-45000
ರಾಮನಗರ ರೇಷ್ಮೆ
ಮಿಶ್ರತಳಿ 400-702
ದ್ವಿತಳಿ 651-952

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,750	15,600	15,650	224.65 ಸೆಂಟ್ಸ್
ಎಸಿ	8,120	7,900	8,200	
ಆರ್‌ಪಿ	8,600	8,750	8,750	ಲಂಡನ್
ಆರ್‌ಸಿ	4,120	3,950	4,025	2175 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

22-3-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1575 (1600)
ಒಂದು ವಾರದ ಡೆಲಿವರಿ	1570 (1595)
ಸೋಯಾ ಕಚ್ಚಾ	1475 (1477)
ಪಾಮ್ ವಾರದ ಡೆಲಿವರಿ	1473 (1482)
ಸೂರ್ಯಕಾಂತಿ ಎಣ್ಣೆ ಕಚ್ಚಾ	1740 (-)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	51,200 (51,200)
ಬೆಳ್ಳಿ ಕೆ.ಜಿ	67,700 (67,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎಲ್‌ಪಿಜಿ: ₹50 ನೆಗೆತ

ಒಂದನೇ ಪುಟದಿಂದ

ಎಲ್‌ಪಿಜಿ ಸಬ್ಸಿಡಿ ನೀಡುವುದನ್ನು 2020ರ ಮೇ ತಿಂಗಳಿನಿಂದ ನಿಲ್ಲಿಸಲಾಗಿದೆ. ದೂರದ ಪ್ರದೇಶಗಳ ಎಲ್‌ಪಿಜಿ ಗ್ರಾಹಕರಿಗೆ, ಹೆಚ್ಚಿನ ಸರಕು ಸಾಗಣೆ ವೆಚ್ಚಕ್ಕೆ ಪರಿಹಾರ ರೂಪದಲ್ಲಿ ಸಣ್ಣ ಮೊತ್ತವನ್ನು ಪರಿಹಾರದ ರೂಪದಲ್ಲಿ ನೀಡಲಾಗುತ್ತಿದೆ ಎನ್ನಲಾಗಿದೆ.

5 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆ ₹ 349ಕ್ಕೆ, 10 ಕೆ.ಜಿ. ಸಿಲಿಂಡರ್ ಬೆಲೆ ₹ 669ಕ್ಕೆ ತಲುಪಿದೆ. 19 ಕೆ.ಜಿ. ತೂಕದ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯು ಈಗ ₹ 2,003.50 ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಕಚ್ಚಾ ತೈಲದ ಬೆಲೆಗೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಬೆಲೆ ನಿಗದಿ ಮಾಡುವ ವ್ಯವಸ್ಥೆಯು 2017ರ ಜೂನ್‌ನಲ್ಲಿ ಜಾರಿಗೆ ಬಂತು. ಆದರೆ, 2021ರ ನವೆಂಬರ್ 4ರಿಂದ ಬೆಲೆಯಲ್ಲಿ ಬದಲಾವಣೆ ಮಾಡಿರಲಿಲ್ಲ.

ರಷ್ಯಾ–ಉಕ್ರೇನ್ ಕದನ ಆರಂಭವಾದ ನಂತರದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 13 ವರ್ಷಗಳ ಗರಿಷ್ಠ ಮಟ್ಟವಾದ 140 ಡಾಲರ್‌ಗೆ ತಲುಪಿತ್ತು. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಮಂಗಳವಾರ 113 ಡಾಲರ್ ಆಗಿದೆ. ಕಚ್ಚಾ ತೈಲ ಬೆಲೆಯು ಈ ವರ್ಷದಲ್ಲಿ ಶೇ 60ಕ್ಕಿಂತ ಹೆಚ್ಚಾಗಿರುವುದು ಹಾಗೂ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿದಿರುವುದು ದೇಶದ ಹಣಕಾಸು ಸ್ಥಿತಿಯ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಬಹುದು ಎಂಬ ಆತಂಕ ಎದುರಾಗಿದೆ.

ಜಿಡಿಪಿ ಬೆಳವಣಿಗೆ ಅಂದಾಜು ತಗ್ಗಿಸಿದ ರೇಟಿಂಗ್ಸ್ ಸಂಸ್ಥೆ ಫಿಚ್

ತೈಲ ಬೆಲೆ: ಹಣದುಬ್ಬರ ಹೆಚ್ಚಳದ ಆತಂಕ

• ಅನ್ನಪೂರ್ಣಾ ಸಿಂಗ್

ನವದೆಹಲಿ: ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯು ಗ್ರಾಹಕರು ಬಳಸುವ ಹಲವು ಉತ್ಪನ್ನಗಳ ಬೆಲೆ ಹೆಚ್ಚಾಗುವಂತೆ ಮಾಡುವ ಸಾಧ್ಯತೆ ಇದೆ. ಇದರ ಪರಿಣಾಮವಾಗಿ ಹಣದುಬ್ಬರ ನಿಯಂತ್ರಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬಡ್ಡಿ ದರ ಹೆಚ್ಚಿಸಬೇಕಾಗಬಹುದು ಅಥವಾ ಆರ್ಥಿಕ ಬೆಳವಣಿಗೆಗೆ ಒತ್ತು ನೀಡಲು ಚಿಲ್ಲರೆ ಹಣದುಬ್ಬರ ದರದ ಮಿತಿಯನ್ನು ಮರುನಿಗದಿ ಮಾಡಬೇಕಾಗಬಹುದು ಎನ್ನಲಾಗಿದೆ.

> ಸರ್ಕಾರವು ಬೆಲೆಯನ್ನು ನಿರಂತರವಾಗಿ 'ಅಭಿವೃದ್ಧಿಪಡಿಸಲಿದೆ'. ಹಣದುಬ್ಬರದ ಸಾಂಕ್ರಾಮಿಕದ ಬಗ್ಗೆ ಪ್ರಧಾನಿಯವರನ್ನು ಪ್ರಶ್ನಿಸಿ, ಅವರು 'ಚಪ್ಪಾಳೆ ತಟ್ಟಿ' ಎನ್ನುತ್ತಾರೆ.
> **ರಾಹುಲ್ ಗಾಂಧಿ,** ಕಾಂಗ್ರೆಸ್ ಮುಖಂಡ

ಡೀಸೆಲ್ ಬೆಲೆ ಏರಿಕೆಯ ಕಾರಣದಿಂದಾಗಿ, ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಾಟದ ಅಗತ್ಯ ಇರುವ ಎಲ್ಲ ವಸ್ತುಗಳ ಬೆಲೆಯಲ್ಲಿಯೂ ಹೆಚ್ಚಳ ಆಗುವ ಸಾಧ್ಯತೆ ಇದೆ. ಅಡುಗೆ ಎಣ್ಣೆ ಬೆಲೆಯು ಈಗಾಗಲೇ ಹೆಚ್ಚಳ ಆಗಿದೆ. ಡೀಸೆಲ್ ಬೆಲೆ ಏರಿಕೆಯ ಕಾರಣ ಆಹಾರ ವಸ್ತುಗಳ ಹಣದುಬ್ಬರ ದರವು ಹೆಚ್ಚಿನ ಮಟ್ಟದಲ್ಲಿ ಇರುವ ಸಾಧ್ಯತೆ ಇದೆ. ಇದರ ಜೊತೆಯಲ್ಲಿಯೇ ಎಲ್‌ಪಿಜಿ ಬೆಲೆ ಕೂಡ ಜಾಸ್ತಿ ಆಗಿದ್ದು, ಕೌಟುಂಬಿಕ ಖರ್ಚುಗಳಲ್ಲಿ ತುಸು ಮರುಹೊಂದಾಣಿಕೆಯ ಅಗತ್ಯ ಎದುರಾಗಬಹುದು ಎಂದು ತಜ್ಞರು ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಬಹುಕಾಲ ಇರುವ ಸಾಧ್ಯತೆ ಕಡಿಮೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ದೇಶದಲ್ಲಿ ಅಭಿವೃದ್ಧಿ ದರ ಕಡಿಮೆ ಇರುವ, ಹಣದುಬ್ಬರ ಹೆಚ್ಚಳವಾಗುವ ಸ್ಥಿತಿ ಎದುರಾಗುವ ಸಾಧ್ಯತೆಯನ್ನೂ ಅವರು ಮಂಗಳವಾರ ತಳ್ಳಿಹಾಕಿದ್ದಾರೆ.

ಈ ನಡುವೆ ಫಿಚ್ ಸಂಸ್ಥೆಯು 2022–23ರಲ್ಲಿ ದೇಶದ ಜಿಡಿಪಿ ಬೆಳವಣಿಗೆ ಅಂದಾಜು ದರವನ್ನು ಪರಿಷ್ಕರಿಸಿದ್ದು ಅದನ್ನು ಶೇ 1.8ರಷ್ಟು ತಗ್ಗಿಸಿದೆ. 2022–23ರಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 8.5ರಷ್ಟು ಇರಲಿದೆ ಎಂದು ಫಿಚ್ ಹೇಳಿದೆ.

ಉಕ್ರೇನ್‌-ರಷ್ಯಾ ಯುದ್ಧ ಹಾಗೂ ರಷ್ಯಾದ ಮೇಲೆ ವಿಧಿಸಲಾಗಿರುವ ನಿರ್ಬಂಧಗಳಿಂದಾಗಿ ಜಾಗತಿಕ ಮಟ್ಟದಲ್ಲಿ ತೈಲ ಪೂರೈಕೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗಿರುವುದು ಬೆಳವಣಿಗೆ ಅಂದಾಜನ್ನು ತಗ್ಗಿಸಿರುವುದಕ್ಕೆ ಕಾರಣ ಎಂದು ಫಿಚ್ ಹೇಳಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸುನಿತಾ, ಕುಂದಾಪುರ

• **ಪ್ರಶ್ನೆ: ನನ್ನ ಬಳಿ ₹ 1 ಲಕ್ಷ ಇದೆ. ಇದನ್ನು ನಾನು ಮ್ಯೂಚುವಲ್ ಫಂಡ್‌ನಲ್ಲಿ ತೊಡಗಿಸಬೇಕು ಎಂದು ತೀರ್ಮಾನಿಸಿರುವೆ. ಈ ಮೊತ್ತವನ್ನು ಒಮ್ಮೆಲೇ ತೊಡಗಿಸಲೇ? ಅಥವಾ ಎಸ್‌ಐಪಿ ಮೂಲಕ ತೊಡಗಿಸಲೇ? 'ಒಮ್ಮೆಲೇ ತೊಡಗಿಸಿ, ಯುದ್ಧ ಮುಗಿದ ನಂತರ ಮಾರುಕಟ್ಟೆ ಜಿಗಿಯುತ್ತದೆ, ಆಗ ಒಳ್ಳೆಯ ಲಾಭ ಬರುತ್ತದೆ' ಎಂದು ಆಪ್ತರು ಕೆಲವರು ಹೇಳುತ್ತಿದ್ದಾರೆ. ಎಸ್‌ಐಪಿ ಮಾಡಿದರೆ ಲಾಭ ಕಡಿಮೆ ಎನ್ನುತ್ತಿದ್ದಾರೆ. ಏನು ಮಾಡಲಿ?**

ಉತ್ತರ: ಪ್ರತಿ ವ್ಯಕ್ತಿಯ ಹೂಡಿಕೆ ರೀತಿ, ನಿರೀಕ್ಷಿಸುವ ಲಾಭ, ಹೂಡಿಕೆ ಅವಧಿ ಹಾಗೂ ಯೋಚನಾ ಶೈಲಿ ಭಿನ್ನ. ಹೂಡಿಕೆದಾರರ ಅನುಭವ ಮತ್ತು ಮಾರುಕಟ್ಟೆ ಭಿನ್ನ ಸನ್ನಿವೇಶಗಳಿಗೆ ಹೇಗೆ ಪ್ರತಿಕ್ರಿಯಿಸುತ್ತದೆ ಎನ್ನುವ ಅರಿವು ಎಷ್ಟಿದೆ ಎನ್ನುವುದೂ ಇದಕ್ಕೆ ಕಾರಣ. ನೀವು ಕೇಳಿರುವುದು, ಹೂಡಿಕೆಗೆ ಹೆಚ್ಚುವರಿ ಹಣ ಇದೆ ಎಂದಾಗ ಮೂಡುವ ಸಹಜ ಪ್ರಶ್ನೆಯನ್ನು.

ಹೂಡಿಕೆದಾರ ಪರಿಣತನಾಗಿದ್ದರೆ, ಮ್ಯೂಚುವಲ್ ಫಂಡ್ ಅಷ್ಟೇ ಏಕೆ , ಮ್ಯೂಚುವಲ್ ಫಂಡ್ ಕಂಪನಿಗಳು ಹೂಡಿಕೆ ಮಾಡುವ ಷೇರುಪೇಟೆಯ ಅನೇಕ ಉತ್ಪನ್ನಗಳಲ್ಲಿ ನೇರವಾಗಿ ಹೂಡಿಕೆ ಮಾಡಬಹುದು. ಹೂಡಿಕೆಯು ಆರ್ಥಿಕ ಜಗತ್ತಿನ ತಲ್ಲಣಗಳಿಗೆ ಅನುಗುಣವಾಗಿ ಏರುತ್ತ, ಕುಸಿಯುತ್ತ ಇರುತ್ತದೆ. ಹೂಡಿಕೆದಾರ ತನ್ನ ಅರಿವಿನ ಇತಿಮಿತಿಯೊಳಗೆ, ಹೂಡಿಕೆಯಲ್ಲಿನ ಅಪಾಯಗಳನ್ನು ಅರಿತು ಯಾವುದರಲ್ಲೂ ಹಣ ತೊಡಗಿಸಬಹುದು.

ದೀರ್ಘ ಅವಧಿಯಲ್ಲಿ ಒಳ್ಳೆಯ ಆದಾಯ ಕೊಡಬಲ್ಲ ಕಾರಣಕ್ಕಾಗಿ ಇಂದು ಎಸ್‌ಐಪಿ ಯೋಜನೆಗಳು ಜನಪ್ರಿಯವಾಗಿವೆ. ಪ್ರಪಂಚದ ಹಲವಾರು ವಿಚಾರಗಳು ಆರ್ಥಿಕ ರಂಗದ ಮೇಲೆ ಪರಿಣಾಮ ಬೀರುವ ಕಾರಣ, ಮಾರುಕಟ್ಟೆಯ ಗತಿ ಸುಲಭಕ್ಕೆ ಊಹೆಗೆ ಸಿಗುವುದಿಲ್ಲ.

ಯುದ್ಧದ ಸನ್ನಿವೇಶವು ಹಲವು ಹೂಡಿಕೆದಾರರನ್ನು ಕಂಗೆಡಿಸಿದೆ. ಯುದ್ಧ ಮುಗಿದ ನಂತರ ಮಾರುಕಟ್ಟೆ ಜಿಗಿಯುತ್ತದೆ ಎಂಬ ಊಹೆ ಹೂಡಿಕೆದಾರರಲ್ಲಿ ಬರುವುದು ಸಹಜ. ಯುದ್ಧವಷ್ಟೇ ಅಲ್ಲದೆ, ಅನೇಕ ಸನ್ನಿವೇಶಗಳು ಮಾರುಕಟ್ಟೆಯನ್ನು ಮೇಲಕ್ಕೆ ಅಥವಾ ಕೆಳಕ್ಕೆ ಕೊಂಡೊಯ್ಯಬಾರದೆಂದೇನೂ ಇಲ್ಲ. ಹಣದುಬ್ಬರ, ಬಡ್ಡಿದರ, ಕಂಪನಿಗಳ ಲಾಭಾಂಶದ ಹಿನ್ನಡೆ, ವಹಿವಾಟು ಕುಸಿತ ಹೀಗೆ ಪಟ್ಟಿ ಮಾಡಿದರೆ ಇನ್ನೆಷ್ಟೋ ಕಾರಣಗಳು ಸಿಗುತ್ತವೆ. ಜಾಗತಿಕ, ದೇಶಿ ಮಟ್ಟದಲ್ಲಾಗುವ ಬದಲಾವಣೆಗಳಿಗೆ ಅನುಗುಣವಾಗಿ ಸಾಂಸ್ಥಿಕ ಹೂಡಿಕೆದಾರರು ಹೂಡಿಕೆ ನಿರ್ಧಾರ ತೆಗೆದುಕೊಳ್ಳುತ್ತಾರೆ. ಇದೂ ಅನೇಕ ಬಾರಿ ಮಾರುಕಟ್ಟೆಯನ್ನು ನಿಯಂತ್ರಿಸುತ್ತದೆ. ಸಾಮಾನ್ಯ ಹೂಡಿಕೆದಾರರು ಇಂತಹ ವಿಚಾರಗಳ ಜಾಡು ಹಿಡಿದು ಹೂಡಿಕೆ ಮಾಡುವುದು ತುಸು ಕಷ್ಟ.

ನೀವು ಯಾವ ವರ್ಗದ ಹೂಡಿಕೆದಾರ ಎಂಬುದು ಮುಖ್ಯ. ನೀವು ನಿಮ್ಮ ಅಸಲು ಮೊತ್ತದ ಮೇಲೆ ಆಗಬಹುದಾದ ಸಂಭವನೀಯ ಅಪಾಯವನ್ನು ತಾಳುವ ಶಕ್ತಿ ಹೊಂದಿದವರಾಗಿದ್ದರೆ ಹಾಗೂ ಅಸಲು ಹೂಡಿಕೆ ನಷ್ಟವಾದರೂ, ಮಾರುಕಟ್ಟೆ ಸಮಗ್ರವಾಗಿ ಚೇತರಿಸಿಕೊಳ್ಳುವವರೆಗೆ ಕಾಯುವ ಸಂಯಮ ಉಳ್ಳವರಾಗಿದ್ದರೆ ಒಂದೇ ಬಾರಿ ಹೂಡಿಕೆ ಮಾಡಬಹುದು. ಹೀಗೆ ತಾಳಿಕೊಳ್ಳುವುದು ಕಷ್ಟವಾಗಿದ್ದಲ್ಲಿ, ಮಾರುಕಟ್ಟೆ ಕುಸಿದಾಗ ಹಂತ ಹಂತವಾಗಿ ಹೂಡಿಕೆ ಮಾಡಿ. ಅಥವಾ ಎಸ್‌ಐಪಿ ಮೂಲಕ ನಿಮ್ಮ ಹೂಡಿಕೆಯನ್ನು ಒಳ್ಳೆಯ ಫಂಡ್‌ಗಳಲ್ಲಿ ತೊಡಗಿಸಿ, ದೀರ್ಘಾವಧಿಯಲ್ಲಿ ಲಾಭ ಪಡೆಯಿರಿ.

ರಾಧಾ ಮೋಹನ್, ಬಸವನಗುಡಿ, ಬೆಂಗಳೂರು

• **ಪ್ರಶ್ನೆ: ನಾನು ಒಂದು ಖಾಸಗಿ ಕಂಪನಿಯಲ್ಲಿ ಉದ್ಯೋಗಿ. ಒಂದೆರಡು ತಿಂಗಳ ಹಿಂದೆ ಉದ್ಯೋಗ ಬದಲಾಯಿಸಿದ್ದೇನೆ. ನನ್ನ ಹಳೆಯ ಕಂಪನಿಯ ಎಚ್‌ಆರ್ ವಿಭಾಗದವರು ನನ್ನಿಂದ ತೆರಿಗೆ ಮಾಹಿತಿ ಕೇಳಿದ್ದರು. ಅವರಿಗೆ ಮಾಹಿತಿ ಕೊಟ್ಟಿದ್ದೇನೆ. ಹೊಸ ಕಂಪನಿಯ ಎಚ್‌ಆರ್ ವಿಭಾಗದವರೂ ಕೇಳುತ್ತಿದ್ದಾರೆ. ನಾನು ಈ ಮಾಹಿತಿಯನ್ನು ಕೊಡಬಹುದೇ? ಇದರಿಂದ ತೆರಿಗೆ ಲಾಭ ಇದೆಯೇ? ಒಂದು ವೇಳೆ ತೊಂದರೆ ಇದ್ದರೆ ತಿಳಿಸಿ.**

ಉತ್ತರ: ಯಾವುದೇ ವ್ಯಕ್ತಿ ಉದ್ಯೋಗ ಬದಲಾಯಿಸಿದಾಗ ಕಂಪನಿಯ ಮಾನವ ಸಂಪನ್ಮೂಲ ವಿಭಾಗದವರು ಸಹಜವಾಗಿ ಕೆಲವು ಮಾಹಿತಿ ಕೇಳುತ್ತಾರೆ. ಇದರಲ್ಲಿ 'ಫಾರಂ - 12 ಬಿಬಿ' ಮಹತ್ವದ್ದು. ಇದರಲ್ಲಿ ನಿಮ್ಮ ವಾರ್ಷಿಕ ಹೂಡಿಕೆಗೆ ಸಂಬಂಧಪಟ್ಟ ಮಾಹಿತಿ ಕೊಡಬೇಕಾಗುತ್ತದೆ. ನೀವು ಒಂದೇ ಮಾಹಿತಿಯನ್ನು ಒಂದೇ ವರ್ಷದಲ್ಲಿ ಉದ್ಯೋಗ ಬದಲಾಯಿಸಿದಾಗ ಎರಡೂ ಕಂಪನಿಯವರಿಗೆ ಕೊಟ್ಟರೆ, ನೀವು ಕೊಟ್ಟ ಮಾಹಿತಿಯ ಆಧಾರದ ಮೇಲೆ ಎರಡು ಬಾರಿ ತೆರಿಗೆ ವಿನಾಯಿತಿ ನೀಡಿದಂತಾಗುತ್ತದೆ.

ವಾಸ್ತವವಾಗಿ ಅವರಿಗೆ ನೀವು ಕೊಡುವ ಮಾಹಿತಿಯೇ ಅಂತಿಮ. ಇಂತಹ ಸಂದರ್ಭದಲ್ಲಿ ನಿಮ್ಮ ಒಟ್ಟು ಆದಾಯದ ಮೇಲೆ 'ಸೆಕ್ಷನ್ 80 ಸಿ' ಅಡಿ ಎರಡೂ ಕಂಪನಿಯವರು ತೆರಿಗೆ ವಿನಾಯಿತಿ ನೀಡುವುದರಿಂದ, ನಿಮ್ಮ ಆದಾಯದ ಮೇಲೆ ತೆರಿಗೆ ಕಡಿತ ಮಾಡಬೇಕಾದ ಒಟ್ಟು ಮೊತ್ತಕ್ಕಿಂತ ಬಹಳಷ್ಟು ಕಡಿಮೆ ಕಡಿತ ಆಗಿರುತ್ತದೆ. ಇದು ಮುಂದೆ ನೀವು ಎರಡೂ ಕಂಪನಿಗಳ 'ಫಾರ್ಂ 16' ಸೇರಿಸಿ ತೆರಿಗೆ ವಿವರ ಸಲ್ಲಿಸುವಾಗಲಷ್ಟೇ ನಿಮ್ಮ ತೆರಿಗೆ ಸಲಹೆಗಾರರಿಂದ ಬಾಕಿ ಇರುವ ದೊಡ್ಡ ಮೊತ್ತ ಪಾವತಿಸಬೇಕೆಂಬ ಮಾಹಿತಿ ಗೊತ್ತಾಗುತ್ತದೆ. ಕೊನೆಗೆ, ನೀವು ಬಾಕಿ ಇರುವ ತೆರಿಗೆಯಷ್ಟೇ ಅಲ್ಲದೆ, ಬಡ್ಡಿಯನ್ನೂ ತೆರಬೇಕಾಗುವ ಸನ್ನಿವೇಶ ಎದುರಾಗುತ್ತದೆ.

ಹೀಗಾಗಿ ನೀವು ಮೊದಲ ಕಂಪನಿಗೆ ಹೂಡಿಕೆಯ ಅಂತಿಮ ಮಾಹಿತಿ ನೀಡಿದ್ದರೆ ಮತ್ತು ಅದನ್ನು 'ಫಾರ್ಂ 16'ರಲ್ಲಿ ಅಳವಡಿಸಿಕೊಳ್ಳುವುದಿದ್ದರೆ, ಅದೇ ಮಾಹಿತಿಯನ್ನು ಎರಡನೇ ಕಂಪನಿಗೂ ನೀಡುವ ಅಗತ್ಯವಿಲ್ಲ. ಮಾತ್ರವಲ್ಲ, ನೀವು 'ಫಾರಂ - 12 ಬಿ'ಯನ್ನು ನಿಮ್ಮ ಹೊಸ ಕಂಪನಿಗೆ ಲಿಖಿತ ರೂಪದಲ್ಲಿ ಕೊಡುವುದರಿಂದ ನೀವು ಉಲ್ಲೇಖಿಸಿರುವ ಸಮಸ್ಯೆ ಪರಿಹರಿಸಬಹುದು. ಇದು ನಿಮ್ಮ ಹಿಂದಿನ ಕಂಪನಿಯಿಂದ ಗಳಿಸಿದ ಆದಾಯ, ಹೂಡಿಕೆ ವಿವರ, ಕಡಿತವಾದ ತೆರಿಗೆ ಮಾಹಿತಿ ಇತ್ಯಾದಿ ನಿಖರ ಮಾಹಿತಿ ಹೊಂದಿರುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಸೆನ್ಸೆಕ್ಸ್, ನಿಫ್ಟಿ ಚೇತರಿಕೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮಂಗಳವಾರದ ವಹಿವಾಟಿನಲ್ಲಿ 696 ಅಂಶ ಚೇತರಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 197 ಅಂಶ ಏರಿಕೆ ಕಂಡಿದೆ.

'ಮುಂದಿನ ದಿನಗಳಲ್ಲಿಯೂ ಮಾರುಕಟ್ಟೆಯಲ್ಲಿ ಅಸ್ಥಿರತೆ ಇರಲಿದೆ. ಉಕ್ರೇನ್–ರಷ್ಯಾ ನಡುವಿನ ಸಂಘರ್ಷವು ತಿಳಿಯಾಗುವವರೆಗೆ, ಕಚ್ಚಾ ತೈಲದ ಬೆಲೆಯು ಸ್ಥಿರವಾಗುವವರೆಗೆ ಅಸ್ಥಿರತೆ ಮುಂದುವರಿಯುತ್ತದೆ' ಎಂದು ಈಕ್ವಿಟಿ99 ಸಂಸ್ಥೆಯ ರಾಹುಲ್ ಶರ್ಮ ಹೇಳಿದ್ದಾರೆ.

'ದಿನದ ಆರಂಭದಲ್ಲಿ ಸೂಚ್ಯಂಕಗಳು ಇಳಿಕೆಯ ಹಾದಿಯಲ್ಲಿ ಇದ್ದವು. ಆದರೆ, ಯುರೋಪಿನ ಮಾರುಕಟ್ಟೆಗಳಲ್ಲಿ ತೇಜಿ ವಹಿವಾಟು ನಡೆದ ನಂತರದಲ್ಲಿ, ದೇಶಿ ಮಾರುಕಟ್ಟೆಗಳಲ್ಲಿಯೂ ಸೂಚ್ಯಂಕಗಳು ಏರುಗತಿಯನ್ನು ಕಂಡವು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಟಾಟಾ ವಾಣಿಜ್ಯ ವಾಹನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯು ತನ್ನ ವಾಣಿಜ್ಯ ವಾಹನಗಳ ಬೆಲೆಯನ್ನು ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಶೇಕಡ 2ರಿಂದ ಶೇ 2.5ರವರೆಗೆ ಹೆಚ್ಚಿಸಲಿದೆ. ವಾಹನದ ಮಾದರಿ ಆಧರಿಸಿ ಬೆಲೆ ಹೆಚ್ಚಳದ ಪ್ರಮಾಣ ನಿರ್ಧಾರವಾಗಲಿದೆ ಎಂದು ಕಂಪನಿ ಮಂಗಳವಾರ ತಿಳಿಸಿದೆ.

ಉಕ್ಕು, ಅಲ್ಯುಮಿನಿಯಂ ಮತ್ತು ಇತರ ಲೋಹಗಳ ಬೆಲೆಯಲ್ಲಿ ಹೆಚ್ಚಳ ಆಗಿರುವ ಕಾರಣ ವಾಣಿಜ್ಯ ವಾಹನಗಳ ಬೆಲೆಯನ್ನೂ ಹೆಚ್ಚಿಸಬೇಕಾಗಿದೆ ಎಂದು ಕಂಪನಿಯು ಷೇರು ಮಾರುಕಟ್ಟೆಗೆ ತಿಳಿಸಿದೆ.

ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಎಲ್ಲ ಮಾದರಿಯ ವಾಹನಗಳ ಬೆಲೆಯನ್ನು ಶೇ 3ರಷ್ಟು ಹೆಚ್ಚಿಸುವುದಾಗಿ ಮರ್ಸಿಡೀಸ್ ಬೆಂಜ್ ಕಂಪನಿಯು ಕಳೆದ ವಾರ ಪ್ರಕಟಿಸಿತ್ತು.

ಲಕ್ಷ್ಮಣ ಉಪ್ಪಾರ ಯೂನಿಯನ್ ಬ್ಯಾಂಕ್ ಇಂಡಿಯಾ ನಿರ್ದೇಶಕ



ಧಾರವಾಡ: ಇಲ್ಲಿನ ಕ್ಲಾಸಿಕ್ ಐಎಎಸ್, ಕೆಎಎಸ್ ಸ್ಟಡಿ ಸರ್ಕಲ್ ಸ್ಪರ್ಧಾತ್ಮಕ ತರಬೇತಿ ಕೇಂದ್ರದ ನಿರ್ದೇಶಕ ಲಕ್ಷ್ಮಣ ಎಸ್. ಉಪ್ಪಾರ ಅವರು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ನಿರ್ದೇಶಕರಾಗಿ ನಿಯೋಜಿತರಾಗಿದ್ದಾರೆ. ಅವರ ಅಧಿಕಾರಾವಧಿ ಮೂರು ವರ್ಷ. ಉಪ್ಪಾರ ಅವರು ಸ್ಪರ್ಧಾ ಸ್ಫೂರ್ತಿ ಪ್ರಕಾಶನ, ಕ್ಲಾಸಿಕ್ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆ, ಪದವಿಪೂರ್ವ ಹಾಗೂ ಪದವಿ ಕಾಲೇಜಿನ ಮುಖ್ಯಸ್ಥರಾಗಿದ್ದಾರೆ.

ಹಸಿ ಮೆಣಸಿನಕಾಯಿ: ಕೆ.ಜಿ.ಗೆ ₹240ಕ್ಕೆ ಮಾರಾಟ

ಕೆರೂರ(ಬಾಗಲಕೋಟೆ): ಹಸಿಮೆಣಸಿನ ಕಾಯಿ(ಗಿಡ್ಡ) ದರ ಗಗನಕ್ಕೇರುತ್ತಿದ್ದು, ಮಂಗಳವಾರ ನಡೆಯುವ ಇಲ್ಲಿನ ಸಂತೆಯಲ್ಲಿ ಕೆ.ಜಿ.ಗೆ ₹240ಕ್ಕೆ ಮಾರಾಟವಾಯಿತು. ಬೆಲೆ ಕೇಳಿ ಹೌಹಾರಿದ ಗ್ರಾಹಕರು, ಮಾರಾಟಗಾರರೊಂದಿಗೆ ಚೌಕಾಶಿ ನಡೆಸಿ, ಕೊನೆಗೆ ಉದ್ದ ಮೆಣಸಿನಕಾಯಿ (ದರ ₹100 ಕೆ.ಜಿ) ಖರೀದಿಸಿದರು.

ಆವಕ ಕ್ಷೀಣ: 'ಮುಂಗಾರು ಹಂಗಾಮಿನಲ್ಲಿ ರೈತರು ಹಸಿ ಮೆಣಸಿನಕಾಯಿ ಬೆಳೆದರೆ, ಹಿಂಗಾರಿನಲ್ಲಿ ಬೆಳೆದ ಬ್ಯಾಡಗಿ ತಳಿಯ ಮೆಣಸಿನಕಾಯಿಯನ್ನು ಒಣಗಿಸಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಾರೆ. ಈ ಭಾಗದ ಬಹುಪಾಲು ಕೃಷಿಕರು ಕಬ್ಬು ಬೆಳೆಗೆ ಒತ್ತು ನೀಡಿದ್ದಾರೆ. ಹೀಗಾಗಿ ಹಸಿ ಮೆಣಸಿನಕಾಯಿಯ ಆವಕ ಕ್ಷೀಣಿಸಿದ್ದು, ಬೇಡಿಕೆಗೆ ತಕ್ಕಂತೆ ಪೂರೈಕೆ ಆಗುತ್ತಿಲ್ಲ. ದಿನ ಕಳೆದಂತೆ ಬೆಲೆ ಹೆಚ್ಚುತ್ತಲೇ ಇದೆ' ಎನ್ನುತ್ತಾರೆ ರೈತ ಹಾಗೂ ವರ್ತಕ ಮಲ್ಲಿಕಾರ್ಜುನ ಪೂಜಾರ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ತುಮಕೂರಿನ ಮಹಿಳಾ ಹಾಸ್ಟೆಲ್‌ಗೆ ಅಡುಗೆ ಮಾಡಲು ಗಂಡ ಹೆಂಡತಿ (ಲಿಂಗಾಯತ) ಬೇಕಾಗಿದ್ದಾರೆ . ಸಂಪರ್ಕಿಸಿ : 9900545854 .

ಸಮೃದ್ಧಿ ಗ್ರಾಂಡ್ ಹೋಟೆಲ್ ಗೆ ಜ್ಯೂಸ್ ಮತ್ತು ಚಾಟ್ಸ್ ತಯಾರಿಸುವವರು ಬೇಕಾಗಿದ್ದಾರೆ Kamakshipalya ಬೆಂಗಳೂರು. Contact: 9342552428

General

ಹಸಿರು ಉದ್ಯೋಗ ಮತ್ತು ಉದ್ಯಮಶೀಲತೆ ಮೇಳ 25 ಮಾರ್ಚ್ 2022 ಬೆಂಗಳೂರು ಹೆಚ್ಚಿನ ವಿವರಗಳಿಗಾಗಿ ಕರೆ ಮಾಡಿ 7618778877

✓ ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITI ನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

ಕೆಲಸಕ್ಕೆ ಬೇಕಾಗಿದ್ದಾರೆ:ನಿವೃತ್ತ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು ಹಾಗೂ ಗೃಹಿಣಿಯರು,25 ವರ್ಷ ಮೇಲ್ಪಟ್ಟವರು, SSLC ಹಾಗೂ DEGREE ಪಾಸಾದವರು ಬೇಕಾಗಿದ್ದಾರೆ. ಸಂಬಳ, E.S.I., P.F.ಸೌಲಭ್ಯವಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿರಿ:9663987757.

✓ ಪ್ರತಿಷ್ಠಿತ ಲಿಮಿಟೆಡ್ ಕಂಪನಿಯೊಂದಕ್ಕೆ SSLC ಮೇಲ್ಪಟ್ಟ 800 ಯುವಕ ಯುವತಿಯರು ರಾಜ್ಯಾದ್ಯಂತ ಬೇಕಾಗಿದ್ದಾರೆ. ಉಚಿತ ವಸತಿಯೂಟದೊಂದಿಗೆ ESI, PF, OT ಸೇರಿ 13,000 -37,000/- 9353753194, 9663704915

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

✓ ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಬೆಂಗಳೂರಿನ ಬಾಣಸವಾಡಿ ಮನೆಯಲ್ಲಿ ಅಡುಗೆ (ವೆಜ್ & ನಾನ್ ವೆಜ್) ಕೆಲಸ ಹಾಗೂ ಮನೆಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ವಯಸ್ಸು 30-40 ವರ್ಷ ಸಂಬಳ:10,000/- ಉಚಿತ ಊಟ + ವಸತಿ ಕೊಡಲಾಗುವುದು.ಸಂಪರ್ಕಿಸಿ: 9902817655.

Walk-in

ಫಿಫೋಲ
ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಪ್ರವೇಶ ಸಂದರ್ಶನ
ಮಾರ್ಚ್ 24, ಗುರುವಾರ
ಬೆಳಗ್ಗೆ 9 ರಿಂದ ಸಂಜೆ 6 ರವರೆಗೆ.
ಇನ್ನೂರಕ್ಕು ಹೆಚ್ಚು ಜನ ಕೆಲಸಕ್ಕೆ ಬೇಕಾಗಿದ್ದಾರೆ.
ಶಾಖಾ ವ್ಯವಸ್ಥಾಪಕ BRANCH MANAGER
ಸಹಾಯಕ ಶಾಖಾ ವ್ಯವಸ್ಥಾಪಕ ASST. BRANCH MANAGER
ಗ್ರಾಹಕ ಸೇವಾ ಸಹವರ್ತಿಗಳು CUSTOMER SERVICE ASSOCIATE
ತಂಡದ ನಾಯಕ TEAM LEADER
ಮಾಂಸ, ಕೋಳಿ, ಮೀನು, ಕಡಿಯುವವರು ಬೇಕಾಗಿದ್ದಾರೆ BUTCHER
ತಂದೂರಿ ಮತ್ತು ಗ್ರಿಲ್ ತಯಾರಿ ಮಾಡುವವರು ಬೇಕಾಗಿದ್ದಾರೆ CDP, CHEF
ಕ್ವಾಲಿಟಿ ಕಂಟ್ರೋಲ್ ಅಸೋಸಿಯೇಟ್ಸ್ QUALITY CONTROL ASSOCIATES
ಕ್ವಾಲಿಟಿ ಕಂಟ್ರೋಲ್ ಮ್ಯಾನೇಜರ್ QUALITY CONTROL MANAGER
ಎಲ್ & ಡಿ ಮ್ಯಾನೇಜರ್ L & D MANAGER
ಎಚ್ ಆರ್ ಎಕ್ಸಿಕ್ಯೂಟಿವ್ HR EXECUTIVE
ಸಹಾಯಕ ಎಚ್ ಆರ್ ಮ್ಯಾನೇಜರ್ ASSISTANT HR MANAGER
ವಸತಿ (ಹೊರವಲಯದ ಅಭ್ಯರ್ಥಿಗಳಿಗೆ ಮಾತ್ರ) STAFF ACCOMODATION AVAILABLE (ONLY FOR OUTSTATION CANDIDATES)
ಮಾಸಿಕ ವೇತನ 30,000 ವರೆಗೆ ಕೊಡಲಾಗುವುದು PF/ESI ಮತ್ತು ಇತರ ಸೌಲಭ್ಯಗಳು ಲಭ್ಯವಿರುತ್ತದೆ
ಐಕಾನ್ ಬೊಟಿಕ್ ಹೋಟೆಲ್
210, 2ನೇ ಮುಖ್ಯ ರಸ್ತೆ, ಇಂದಿರಾನಗರ, 2ನೇ ಹಂತ, ದೊಮ್ಮಲೂರು, ಬೆಂಗಳೂರು - 560071.
ಮೊಬೈಲ್ ನಂ.: 63629 62231
94824 97949 / 080 - 4110 9890

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ಭವಿಷ್ಯ

Astrology

★★ಅಂಭಾಭವಾನಿ★★ ಜ್ಯೋತಿಷ್ಯಾಲಯ ಕೊಳ್ಳೆಗಾಲದ No.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

CONNECT

ಅಲಪ್ಟಿ ಪಾರ್ಸಲ್ ಸರ್ವೀಸ್ ಎಲ್.ಎಲ್.ಪಿ.
ಬೆಂಗಳೂರು ಹೊರಗಡೆ, ಒಳಗಡೆ ಬ್ರಾಂಚ್‌ಗಳು (ಏಜೆನ್ಸಿ) ಕೊಡುವುದಕ್ಕೆ ತೀರ್ಮಾನಿಸಲಾಗಿದೆ. ನಿಮಗೆ ಅವಶ್ಯಕತೆ ಇದ್ದಲ್ಲಿ ನಮ್ಮನ್ನು ಸಂಪರ್ಕಿಸಿ:
E-mail: apsbgrbranch@gmail.com
WhatsApp No. 9019309909

ಕೇರಳ ಹಾಗೂ ಕೊಳ್ಳೆಗಾಲದ ಪ್ರಸಿದ್ಧ ಮಾಂತ್ರಿಕ ವಶೀಕರಣ ಜ್ಯೋತಿಷ್ಯರು ಇವರು ಎಂತಹ ಕಠಿಣ ಗುಪ್ತ ಸಮಸ್ಯೆಗಳಿದ್ದರೂ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ. ಮಂಗಳೂರು, ಮೈಸೂರು,ಚಿತ್ರದುರ್ಗ 9008867041

ವ್ಯಾಪಾರ

Business Offers

Finance

WANT a suggestion? - TRADING ! we offer best investment ideas & advisory/ secured plan on trading. 8884470597, 8341472566

ಪ್ರವಾಸ

Travel

ಸೋಮನಾಥ್, ದ್ವಾರಕಾ, ಮಾತ್ರಗಯಾ ಉಜ್ಜಯಿನಿ, ಓಂಕಾರೇಶ್ವರ್, 08.04.2022 ರಿಂದ 10/15 ದಿನಗಳು. ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರನಾಥ್, ದೆಹಲಿ 29.04.2022, 06.05.2022, 14.05.2022 ರಿಂದ 14/18 ದಿನಗಳು. ಕಾಶಿ,ಗಯಾ, ನೈಮಿಶಾರಣ್ಯ, ಅಯೋಧ್ಯ, ದೆಹಲಿ,ಹರಿದ್ವಾರ್ 08.04.2022, 13.04.2022,23.04.2022 ರಿಂದ 7/13 ದಿನಗಳು. ಸಂಪರ್ಕಿಸಿ: 26508925, 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ, ಬೆಂಗಳೂರು-18

18.04.2022, 05.05.2022, 11ದಿನಗಳ ಕಾಶಿ 13.04.2022 ರಿಂದ ರಾಮೇಶ್ವರ, ಕನ್ಯಾಕುಮಾರಿ, ಮದುರೈ,ಶ್ರೀರಂಗಂ, ನವಗ್ರಹಗಳು 7/10 ದಿನಗಳು 02.05.2022, 18.05.2022, 15ದಿನಗಳ ಚಾರ್ಧಾಮ್‌ಯಾತ್ರೆ. ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಜೂನ್‌ನಲ್ಲಿ ವೈಷ್ಣವಿದೇವಿ, ಅಮರನಾಥಯಾತ್ರೆ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್, ತ್ಯಾಗರಾಜನಗರ, ಬೆಂಗಳೂರು-70. 9342287551, 8050629305

28.04.2022, 8ದಿನಗಳು ವಾರಣಾಸಿ, ಗಯಾ,ಬುದ್ಧಗಯಾ, ಕಲ್ಕತ್ತಾ,ಭುವನೇಶ್ವರ್, ಪೂರಿಜಗನ್ನಾಥ್ ಮತ್ತು ಚಾರ್ ಧಾಮ್‌ಯಾತ್ರೆ. ಆಗಸ್ಟ್‌ನಲ್ಲಿ 12ದಿನಗಳು ಗಂಗೋತ್ರಿ, ಯಮುನೋತ್ರಿ. ಕೇದಾರನಾಥ್, ಬದರಿನಾಥ್. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ, ಬೆಂಗಳೂರು-03. 9448294477

27.04.2022ರಿಂದ ರೈಲು/ಏಸಿ ಬಸ್ಸಿನಲ್ಲಿ 35/22ದಿನಗಳ 'ಚಾರೋಧಾಮ್'ಸಮೇತ ವೈಷ್ಣೋದೇವಿ, ಕೋಲ್ಕತ್ತಾ, ಪುರಿ,ಅಮೃತಸರ್,ಕಾಶಿ, ಗಯಾ,ಹರಿದ್ವಾರ್. 28.05.2022ರಿಂದ ವಿಮಾನ/ಬಸ್ಸಿನಲ್ಲಿ 13ದಿನಗಳ 'ಚಾರೋಧಾಮ್',ಮಸ್ಸೂರಿ, ಗುಪ್ತಕಾಶಿ,ನವದೆಹಲಿ, ಹರಿದ್ವಾರ್. ಜೂನ್/ಜುಲೈ ತಿಂಗಳಲ್ಲಿ ಅಮರನಾಥ್ ಸಮೇತ,ಕಾಶ್ಮೀರ್,ವೈಷ್ಣೋದೇವಿ, ಅಮೃತಸರ್, ಕುರುಕ್ಷೇತ್ರ,ಹರಿದ್ವಾರ್ 19ದಿನಗಳು. ವಿವರಗಳಿಗೆ: ಏಷ್ಯನ್ ಟ್ರಾವೆಲ್ ಲೈನ್ಸ್,#164, ಆರ್.ವಿ.ರಸ್ತೆ (ಮಿನರ್ವ ಬಸ್ ಸ್ಟಾಪ್ ಎದುರು)ಬೆಂಗಳೂರು4. ಫೋನ್:8105657052, 9480182865, 08026565085.

18.04.2022, 18.05.2022 ಶ್ರೀಲಂಕಾ 7ದಿನಗಳು. 12.04.2022, 11.05.2022 ಕಾಶಿ,ಗಯಾ,ಅಯೋಧ್ಯ, ಚಿತ್ರಕೂಟ 7ದಿನಗಳು. 16.04.2022 ಗುಜರಾತ್ 8ದಿನಗಳು. 12.04.2022, 04.05.2022 ಶಿಮ್ಲಾ,ಕುಲುಮನಾಲಿ 7ದಿನಗಳು. 22.04.2022, 16.05.2022 ರಾಮೇಶ್ವರ, ಕುಂಭಕೋಣಂ, ಕನ್ಯಾಕುಮಾರಿ 6ದಿನಗಳು. ಮಲೆನಾಡು ಪ್ರವಾಸ 2/3 ದಿನಗಳು. ಇದಲ್ಲದೆ ಕಸ್ಟಮೈಸ್ ಫ್ಯಾಮಿಲಿ ಪ್ರವಾಸಗಳಿಗಾಗಿ ವಿಚಾರಿಸಿ: ಜೈನ್ ಟ್ರಾವಲ್ಸ್ ಬೆಂಗಳೂರು-03. 9448402248, 7022547922

27.04.2022, 06.05.2022, 22.05.2022 ರಿಂದ 14/20/26 ದಿನಗಳ ಪೂರಿಜಗನ್ನಾಥ್, ಗಯಾ,ಕಾಶಿ,ಪ್ರಯಾಗ, ನೈಮಿಶಾರಣ್ಯ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ದೆಹಲಿ,ಅಮೃತ್‌ಸರ್, ವೈಷ್ಣೋದೇವಿ/ ಹಾಗು ಜುಲೈ, ಅಗಸ್ಟ್ ಸೆಪ್ಟಂಬರ್ ತಿಂಗಳಲ್ಲಿ ಅಮರನಾಥ್‌ಯಾತ್ರೆ/ ಮುಕ್ತಿನಾಥ್, ಗ್ಯಾಂಗ್‌ಟಾಕ್, ಡಾರ್ಜಲಿಂಗ್ ಪ್ರವಾಸಗಳನ್ನು ಏರ್ಪಡಿಸಲಾಗುತ್ತದೆ 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

Pilgrimage Tours

ಶ್ರೀಮಹಾಲಕ್ಷ್ಮೀ ಟ್ರಾವೆಲ್ಸ್. 30/04/22 ದೆಹಲಿ, ವೈಷ್ಣೋದೇವಿ, ಕುಲು, ಮನಾಲಿ. 14/05/22 ಚಾರ್ಧಾಮ್ ಯಾತ್ರಾ, ಕೇದಾರನಾಥ, ಬದ್ರಿನಾಥ್, ಯಮುನೋತ್ರಿ, ಗಂಗೋತ್ರಿ 9591017782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*
For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಮಹಿಳಾ ವಿಶ್ವಕಪ್ ಏಕದಿನ ಕ್ರಿಕೆಟ್: ಯಷ್ಟಿಕಾ, ಸ್ನೇಹಾ ಮಿಂಚು; ಬಾಂಗ್ಲಾ ವಿರುದ್ಧ ಮಿಥಾಲಿ ಬಳಗದ ಜಯಭೇರಿ

ಭಾರತದ ಸೆಮಿಫೈನಲ್ ಆಸೆ ಜೀವಂತ

ಹ್ಯಾಮಿಲ್ಟನ್ (ಪಿಟಿಐ): ಯಷ್ಟಿಕಾ ಭಾಟಿಯಾ ಚೆಂದದ ಅರ್ಧಶತಕ ಮತ್ತು ಸ್ನೇಹಾ ರಾಣಾ ಆಫ್‌ಸ್ಪಿನ್ ಮೋಡಿಯ ಬಲದಿಂದ ಭಾರತ ತಂಡವು ಮಹಿಳಾ ವಿಶ್ವಕಪ್ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಅಮೋಘ ಜಯ ಸಾಧಿಸಿತು.

ಬಾಂಗ್ಲಾದೇಶ ಎದುರು 110 ರನ್‌ಗಳಿಂದ ಗೆದ್ದಿತು. ಇದರೊಂದಿಗೆ ಟೂರ್ನಿಯ ಆರನೇ ಪಂದ್ಯವಾಡಿ ಮೂರನೇ ಜಯಸಾಧಿಸಿದ ಮಿಥಾಲಿ ರಾಜ್ ಬಳಗವು ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು. ಇದರಿಂದಾಗಿ ಸೆಮಿಫೈನಲ್ ಪ್ರವೇಶಿಸುವ ಆಸೆ ಇನ್ನೂ ಜೀವಂತವಾಗಿದೆ. ತಂಡಕ್ಕೆ ಇನ್ನೊಂದು ಲೀಗ್ ಪಂದ್ಯ ಬಾಕಿ ಇದೆ. 27ರಂದು ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.

ಸೆಡಾನ್ ಪಾರ್ಕ್‌ನಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು.

ಸ್ಮೃತಿ ಮಂದಾನ (30. 51ಎ) ಮತ್ತು ಶಫಾಲಿ ವರ್ಮಾ (42; 42ಎ) ಉತ್ತಮ ಆರಂಭ ನೀಡಿದರು. ಯಷ್ಟಿಕಾ (50; 80ಎ) ಅರ್ಧಶತಕದ ಬಲದಿಂದ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 229 ರನ್ ಗಳಿಸಿತು. ಮಿಥಾಲಿ ರಾಜ್ ವೈಫಲ್ಯ ಅನುಭವಿಸಿದ್ದರಿಂದ ದೊಡ್ಡ ಮೊತ್ತ ಗಳಿಸಲು ತಂಡಕ್ಕೆ ಸಾಧ್ಯವಾಗಲಿಲ್ಲ. ಆದರೆ, ಮಧ್ಯಮ ಕ್ರಮಾಂಕದ ರಿಚಾ ಘೋಷ್ ಮತ್ತು ಪೂಜಾ ವಸ್ತ್ರಕರ್ ಮಹತ್ವದ ಕಾಣಿಕೆ ನೀಡಿದರು. ಇದರಿಂದಾಗಿ ತಂಡವು 200ರ ಗಡಿ ದಾಟಿತು. ಬಾಂಗ್ಲಾ ತಂಡದ ರಿತು ಮೋನಿ (37ಕ್ಕೆ3) ಮತ್ತು ನಾಹಿದಾ ಅಖ್ತರ್ (42ಕ್ಕೆ2) ಉತ್ತಮ ಬೌಲಿಂಗ್ ಮಾಡಿದರು. ಸಲ್ಮಾ ಖಾತೂನ್ ಮತ್ತು ರುಮಾನಾ ಅಹಮದ್ ಅವರು ವಿಕೆಟ್ ಗಳಿಸದಿದ್ದರೂ ಬಿಗಿ ಬೌಲಿಂಗ್ ಮಾಡಿ ಬ್ಯಾಟರ್‌ಗಳಿಗೆ ತಡೆಯೊಡ್ಡುವಲ್ಲಿ ಯಶಸ್ವಿಯಾದರು.

ಆದರೆ ಗುರಿ ಬೆನ್ನಟ್ಟಿದ ಬಾಂಗ್ಲಾ ತಂಡವು 40.3 ಓವರ್‌ಗಳಲ್ಲಿ 119 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಲತಾ ಮಂಡಲ್ ಮತ್ತು ಸಲ್ಮಾ ಖಾತೂನ್ ಬ್ಯಾಟಿಂಗ್‌ನಲ್ಲಿಯೂ ಮಿಂಚಿದರು.

ಭಾರತದ ಸ್ನೇಹಾ ರಾಣಾ ಅವರ ಸ್ಪಿನ್ ಮೋಡಿಗೆ ಬಾಂಗ್ಲಾದ ಮಧ್ಯಮ ಮತ್ತು ಕೆಳಕ್ರಮಾಂಕದ ಬ್ಯಾಟರ್‌ಗಳು ವಿಕೆಟ್ ಒಪ್ಪಿಸಿದರು. ಪೂನಮ್ ಯಾದವ್ ಮತ್ತು ಕನ್ನಡತಿ ರಾಜೇಶ್ವರಿ ಗಾಯಕವಾಡ್ ಮೇಲಿನ ಕ್ರಮಾಂಕದ ಬ್ಯಾಟಿಂಗ್ ಪಡೆಗೆ ತಡೆಯೊಡ್ಡಿದರು. ಅನುಭವಿ ಜೂಲನ್ ಮತ್ತು ಪೂಜಾ ತಲಾ ಎರಡು ವಿಕೆಟ್ ಗಳಿಸಿ ಬಾಂಗ್ಲಾಕ್ಕೆ ಪೆಟ್ಟುಕೊಟ್ಟರು.

ಬುಧವಾರದ ಪಂದ್ಯ: ಇಂಗ್ಲೆಂಡ್–ಪಾಕಿಸ್ತಾನ (ಆರಂಭ: ಬೆಳಿಗ್ಗೆ 6.30)

ಭಾರತದ ಯಷ್ಟಿಕಾ ಭಾಟಿಯಾ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಸ್ನೇಹ್ ರಾಣಾ

ಸ್ಕೋರ್ ಕಾರ್ಡ್

ಭಾರತ 7ಕ್ಕೆ 229 (50 ಓವರ್)
ಮಂದಾನ ಸಿ ಫರ್ಜಾನ ಬಿ ನಹೀದಾ 30 (51ಎ, 4X3), ಶೆಫಾಲಿ ಸ್ಟಂಪ್ಡ್ ನಿಗರ್ ಬಿ ರಿತು 42 (42ಎ, 4X6, 6X1), ಯಷ್ಟಿಕಾ ಸಿ ನಹೀದಾ ಬಿ ರಿತು 50 (80ಎ, 4X2), ಮಿಥಾಲಿ ಸಿ ಫಾಹಿಮಾ ಬಿ ರಿತು 0 (1ಎ), ಹರ್ಮನ್‌ಪ್ರೀತ್ ಕೌರ್ ರನೌಟ್ (ಫರ್ಜಾನ) 14 (33ಎ, 4X1), ರಿಚಾ ಸಿ ನಿಗರ್ ಬಿ ನಹೀದಾ 26 (36ಎ, 4X3), ಪೂಜಾ ಔಟಾಗದೆ 30 (33ಎ, 4X2), ಸ್ನೇಹ್ ಸಿ ರಿತು ಬಿ ಜಹಾನಾರ 27 (23ಎ, 4X2), ಜೂಲನ್ ಔಟಾಗದೆ 2 (1ಎ)
ಇತರೆ (ಬೈ 2, ಲೆಗ್‌ಬೈ 4, ವೈಡ್ 2) 8
ವಿಕೆಟ್ ಪತನ: 1-74 (ಸ್ಮೃತಿ ಮಂದಾನ, 14.6), 2-74 (ಶೆಫಾಲಿ ವರ್ಮಾ, 15.3), 3-74 (ಮಿಥಾಲಿ ರಾಜ್, 15.4), 4-108 (ಹರ್ಮನ್‌ಪ್ರೀತ್ ಕೌರ್, 27.2), 5-162 (ರಿಚಾ ಘೋಷ್, 38.5), 6-176 (ಯಷ್ಟಿಕಾ ಭಾಟಿಯಾ, 43.1), 7-224 (ಸ್ನೇಹ್ ರಾಣಾ, 49.3)
ಬೌಲಿಂಗ್: ಸಲ್ಮಾ ಖಾತೂನ್ 8–1–23–0, ಜಹಾನಾರ ಆಲಂ 8–0–52–1, ನಹೀದಾ ಅಖ್ತರ್ 9–0–42–2, ರಿತು ಮೋನಿ 10–2–37–3, ರುಮಾನಾ ಅಹಮ್ಮದ್ 8–1–27–0, ಲತಾ ಮಂಡಲ್ 4–0–20–0, ಫಾಹಿಮಾ ಖಾತೂನ್ 3–0–22–0

ಬಾಂಗ್ಲಾದೇಶ 119 (40.3 ಓವರ್)
ಮುರ್ಶಿದಾ ಸಿ ಹರ್ಮನ್‌ಪ್ರೀತ್ ಬಿ ಪೂನಂ 19 (54ಎ, 4X1, 6X1), ಶರ್ಮಿನ್ ಸಿ ಸ್ನೇಹ್ ಬಿ ರಾಜೇಶ್ವರಿ 5 (17ಎ), ಫರ್ಜಾನ ಎಲ್‌ಬಿಡಬ್ಲ್ಯು ಪೂಜಾ 0 (11ಎ), ನಿಗರ್ ಸಿ ಹರ್ಮನ್‌ಪ್ರೀತ್ ಬಿ ಸ್ನೇಹ್ 3 (11ಎ), ರುಮಾನಾ ಸಿ ಯಷ್ಟಿಕಾ ಬಿ ಸ್ನೇಹ್ 2 (8ಎ), ಲತಾ ಸಿ ಹರ್ಮನ್‌ಪ್ರೀತ್ ಬಿ ಪೂಜಾ 24 (46ಎ, 4X2), ಸಲ್ಮಾ ಸಿ ರಿಚಾ ಬಿ ಜೂಲನ್ 32 (35ಎ, 4X4), ರಿತು ಬಿ ಜೂಲನ್ 16 (36ಎ, 4X1), ಫಾಹಿಮಾ ಎಲ್‌ಬಿಡಬ್ಲ್ಯು ಬಿ ಸ್ನೇಹ್ 1 (5ಎ), ನಹೀದಾ ಸಿ ಮತ್ತು ಬಿ ಸ್ನೇಹ್ 0 (9ಎ), ಜಹಾನಾರ ಔಟಾಗದೆ 11 (11ಎ, 4X2)
ಇತರೆ (ಬೈ 1, ಲೆಗ್‌ಬೈ 3, ವೈಡ್ 2) 6
ವಿಕೆಟ್ ಪತನ: 1- 1-12 (ಶರ್ಮಿನ್ ಅಖ್ತರ್, 5.1), 2-15 (ಫರ್ಜಾನ ಹಕ್, 8.5), 3-28 (ನಿಗರ್ ಸುಲ್ತಾನ, 13.5), 4-31 (ಮುರ್ಶಿದಾ ಖಾತೂನ್, 16.3), 5-35 (ರುಮಾನಾ ಅಹಮ್ಮದ್, 17.2), 6-75 (ಸಲ್ಮಾ ಖಾತೂನ್, 27.4), 7-98 (ಲತಾ ಮಂಡಲ್, 32.5), 8-100 (ಫಾಹಿಮಾ ಖಾತೂನ್, 34.2), 9-104 (ನಹೀದಾ ಅಖ್ತರ್, 36.5), 10-119 (ರಿತು ಮೋನಿ, 40.3)
ಬೌಲಿಂಗ್: ಜೂಲನ್ ಗೋಸ್ವಾಮಿ 7.3–1–19–2, ರಾಜೇಶ್ವರಿ ಗಾಯಕವಾಡ್ 10–4–15–1, ಪೂಜಾ ವಸ್ತ್ರಕರ್ 6–0–26–2, ಸ್ನೇಹ್ ರಾಣಾ 10–2–30–4, ಪೂನಂ ಯಾದವ್ 7–0–25–1

ಫಲಿತಾಂಶ: ಭಾರತ ಮಹಿಳಾ ತಂಡಕ್ಕೆ 110 ರನ್‌ಗಳ ಜಯ
ಪಂದ್ಯಶ್ರೇಷ್ಠ ಆಟಗಾರ್ತಿ: ಯಷ್ಟಿಕಾ ಭಾಟಿಯಾ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಪಾಯಿಂಟ್ಸ್	ನೆಟ್ ರನ್‌ರೇಟ್
ಆಸ್ಟ್ರೇಲಿಯಾ	6	6	0	12	1.287
ದ.ಆಫ್ರಿಕಾ	5	4	1	8	0.092
ಭಾರತ	6	3	3	6	0.768
ವೆಸ್ಟ್ ಇಂಡೀಸ್	6	3	3	6	-0.885
ಇಂಗ್ಲೆಂಡ್	5	2	3	4	0.327
ನ್ಯೂಜಿಲೆಂಡ್	6	2	4	4	-0.229
ಬಾಂಗ್ಲಾದೇಶ	5	1	4	2	-0.754
ಪಾಕಿಸ್ತಾನ	5	1	4	2	-0.878

ಮೆಗ್ ಲ್ಯಾನಿಂಗ್ ಅಜೇಯ ಶತಕ

ವೆಲ್ಲಿಂಗ್ಟನ್ (ಪಿಟಿಐ): ನಾಯಕಿ ಮೆಗ್‌ಲ್ಯಾನಿಂಗ್ (135; 130ಎ, 4X15, 6X1) ಅಜೇಯ ಶತಕದ ಬಲದಿಂದ ಆಸ್ಟ್ರೇಲಿಯಾ ತಂಡವು ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ 5 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ಈ ಟೂರ್ನಿಯಲ್ಲಿ ಆಡಿದ ಎಲ್ಲ ಆರು ಪಂದ್ಯಗಳನ್ನು ಗೆದ್ದ ಸಾಧನೆ ಮಾಡಿದೆ. ಒಟ್ಟು 12 ಅಂಕ ಗಳಿಸಿದೆ.

ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ತಂಡವು 50 ಓವರ್‌ಗಳಲ್ಲಿ 5ಕ್ಕೆ 271 ರನ್ ಗಳಿಸಿತು. ಅದಕ್ಕುತ್ತರವಾಗಿ ಆಸ್ಟ್ರೇಲಿಯಾ ತಂಡವು 45.2 ಓವರ್‌ಗಳಲ್ಲಿ 5ಕ್ಕೆ272 ರನ್ ಗಳಿಸಿ ಜಯಿಸಿತು.
ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 50 ಓವರ್‌ಗಳಲ್ಲಿ 5ಕ್ಕೆ 271 (ಲಿಜೆಲ್ ಲೀ 36, ವೋಲ್ವಾರ್‌ಡತ್ 90, ಸುನಿ ಲ್ಯೂಸ್ 52, ಮರಿಜಾನ್ ಕ್ಯಾಪ್ ಔಟಾಗದೆ 30) ಆಸ್ಟ್ರೇಲಿಯಾ: 45.2 ಓವರ್‌ಗಳಲ್ಲಿ 5ಕ್ಕೆ272 (ಮೆಗ್ ಲ್ಯಾನಿಂಗ್ ಔಟಾಗದೆ 135, ತಹಿಲಾ ಮೆಕ್‌ಗ್ರಾ 32, ಬೆತ್ ಮೂನಿ 21, ಆ್ಯಶ್ಲಿ ಗಾರ್ಡನರ್ 22, ಅನಾಬೆಲ್ ಸದರ್ಲೆಂಡ್ ಔಟಾಗದೆ 22, ಶಬ್ನಿಮ್ ಇಸ್ಮಾಯಿಲ್ 33ಕ್ಕೆ2, ಶೊಲ್ ಟ್ರಯಾನ್ 44ಕ್ಕೆ2) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 5 ವಿಕೆಟ್‌ಗಳ ಜಯ.

ತಸ್ಕಿನ್‌ಗೆ ನಿರಾಕ್ಷೇಪಣಾ ಪತ್ರ ನೀಡಲು ಬಿಸಿಬಿ ನಕಾರ

ನವದೆಹಲಿ (ಪಿಟಿಐ): ವೇಗಿ ತಸ್ಕಿನ್ ಅಹ್ಮದ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಆಡುತ್ತಿಲ್ಲ ಎಂದು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ) ಹೇಳಿದೆ.

ಇಂಗ್ಲೆಂಡ್‌ನ ವೇಗದ ಬೌಲರ್ ಮಾರ್ಕ್ ವುಡ್ ಗಾಯಾಳಾಗಿರುವ ಕಾರಣ ಬದಲಿ ಆಟಗಾರನ ಶೋಧದಲ್ಲಿದ್ದ ಲಖನೌ ಸೂಪರ್ ಜೈಂಟ್ಸ್ ತಂಡ ತಸ್ಕಿನ್ ಅವರನ್ನು ಸಂಪರ್ಕಿಸಿತ್ತು.

ಐಪಿಎಲ್ ಹೊಸ ತಂಡಗಳಲ್ಲಿ ಒಂದಾದ ಸೂಪರ್ ಜೈಂಟ್ಸ್, ವುಡ್ ಅವರಿಗೆ 7.5 ಕೋಟಿ ಕೊಟ್ಟು ಖರೀದಿಸಿತ್ತು. ಆದರೆ ಅವರು ಗಾಯಾಳಾಗಿ ಹಿಂದೆ ಸರಿದಿದ್ದರು. ಐಪಿಎಲ್ ಸಮಯದಲ್ಲೇ ಬಾಂಗ್ಲಾ ತಂಡದ, ದಕ್ಷಿಣ ಆಫ್ರಿಕಾ ಪ್ರವಾಸವೂ ನಡೆಯುತ್ತಿದೆ.

ನವನಾಯಕರ ಉದಯಕ್ಕೆ ಐಪಿಎಲ್ ವೇದಿಕೆ: ರವಿಶಾಸ್ತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯು ಭವಿಷ್ಯದ ನಾಯಕರ ಉದಯಕ್ಕೆ ವೇದಿಕೆಯಾಗಲಿದೆ ಎಂದು ತಂಡದ ಮಾಜಿ ಮುಖ್ಯ ಕೋಚ್ ರವಿಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ.

ಮಂಗಳವಾರ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ವರ್ಚುವಲ್ ಆಗಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ರಿಷಭ್ ಪಂತ್ (ಡೆಲ್ಲಿ ಕ್ಯಾಪಿಟಲ್ಸ್), ಹಾರ್ದಿಕ್ ಪಾಂಡ್ಯ (ಗುಜರಾತ್ ಟೈಟನ್ಸ್), ಶ್ರೇಯಸ್ ಅಯ್ಯರ್ (ಕೋಲ್ಕತ್ತ ನೈಟ್ ರೈಡರ್ಸ್) ಮತ್ತು ಕೆ.ಎಲ್.ರಾಹುಲ್ (ಲಖನೌ ಸೂಪರ್ ಜೈಂಟ್ಸ್) ಈ ಬಾರಿ ಐಪಿಎಲ್ ತಂಡಗಳ ಸಾರಥ್ಯ ವಹಿಸಿದ್ದಾರೆ. ಭಾರತ ತಂಡದ ಭವಿಷ್ಯದ ನಾಯಕತ್ವವನ್ನು ಇವರಲ್ಲಿ ಕಾಣಬಹುದಾಗಿದೆ’ ಎಂದು ರವಿಶಾಸ್ತ್ರಿ ನುಡಿದರು.



ರವಿ ಶಾಸ್ತ್ರಿ– ರಾಯಿಟರ್ಸ್ ಚಿತ್ರ

‘ಭಾರತ ತಂಡದ ನಾಯಕತ್ವವನ್ನು ರೋಹಿತ್ ಶರ್ಮಾ ಅವರೂ ಸದ್ಯ ಉತ್ತಮವಾಗಿಯೇ ನಿಭಾಯಿಸುತ್ತಿದ್ದಾರೆ’ ಎಂದೂ ಅವರು ಹೇಳಿದರು.

‘ಐಪಿಎಲ್ ಎಂದರೆ ಅಚ್ಚರಿಗಳ ಗುಚ್ಛ. ಪ್ರತಿ ಆವೃತ್ತಿಗೂ ಹೊಸತನ ಇದ್ದೇ ಇರುತ್ತದೆ. ಅದೇ ಟೂರ್ನಿಯ ಸೌಂದರ್ಯ. ನಾಯಕತ್ವ ವಹಿಸಿದವರಿಗೆ ಲೀಗ್ ಯಾವಾಗಲೂ ಅಗ್ನಿಪರೀಕ್ಷೆ. ಫ್ರಾಂಚೈಸ್ ಆಧಾರಿತ ಕ್ರಿಕೆಟ್‌ನಲ್ಲಿ ಅವರ ಪಾತ್ರ ಹೆಚ್ಚು’ ಎಂದು ಹೇಳಿದರು.

‘ಈ ಆವೃತ್ತಿಯು ಹೆಚ್ಚು ಪೈಪೋಟಿಯಿಂದ ಕೂಡಿರುವ ನಿರೀಕ್ಷೆ ಇದೆ. ಎರಡು ಹೊಸ ತಂಡಗಳು ಕಣದಲ್ಲಿವೆ. ಆದ್ದರಿಂದ ಸ್ಪರ್ಧೆಯು ಹೆಚ್ಚಾಗುವ ಸಾಧ್ಯತೆ ಇದೆ. ಇದರಿಂದಾಗಿ ಟೂರ್ನಿಯು ಮತ್ತಷ್ಟು ರೋಚಕ ರಸದೌತಣ ನೀಡಬಹುದು. ಈ ಬಾರಿ ಚೆನ್ನೈ ಮತ್ತು ಮುಂಬೈ ಇಂಡಿಯನ್ಸ್ ತಂಡಗಳಲ್ಲಿಯೂ ಹೊಸ ಪ್ರತಿಭೆಗಳಿವೆ’ ಎಂದರು.

ಸುದ್ದಿಗೋಷ್ಠಿಯಲ್ಲಿದ್ದ ಭಾರತ ತಂಡದ ಮಾಜಿ ಆಟಗಾರ ಸುರೇಶ್ ರೈನಾ, ‘ಐಪಿಎಲ್‌ಗೆ ಈ ಬಾರಿ ವೀಕ್ಷಕ ವಿವರಣೆಕಾರನಾಗಿ ಕಾರ್ಯನಿರ್ವಹಿಸಲು ಕಾತರನಾಗಿದ್ದೇನೆ. ಈ ಹೊಸ ಸವಾಲು ಎದುರಿಸಲು ಸಿದ್ಧನಾಗಿರುವೆ. ಮೊದಲ ಅನುಭವ ಇದು’ ಎಂದರು.

ಅಥ್ಲೀಟ್ ವನಿತಾ ನಿಧನ

ಬಿದ್ದಂಡ ವನಿತಾ ಅಯ್ಯಪ್ಪ

ಬೆಂಗಳೂರು: ರಾಷ್ಟ್ರಮಟ್ಟದಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದ ಅಥ್ಲೀಟ್ ಬಿದ್ದಂಡ ವನಿತಾ ಅಯ್ಯಪ್ಪ (ಗಂಗಮ್ಮಾ ಕೆ.ಕೆ.) ಮಂಗಳವಾರ ನಿಧನರಾದರು.

1969–75ರ ಅವಧಿಯಲ್ಲಿ ರಾಷ್ಟ್ರಮಟ್ಟದ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 110 ಮೀಟರ್ಸ್ ಹರ್ಡಲ್ಸ್ ಮತ್ತು 400 ಮೀಟರ್ಸ್‌ಗಳಲ್ಲಿ ಅವರು ಅಗ್ರಸ್ಥಾನ ಗಳಿಸಿದ್ದರು.

ತಂಡ ವಿಭಾಗದಲ್ಲೂ ಕರ್ನಾಟಕಕ್ಕೆ ಚಾಂಪಿಯನ್ ಪಟ್ಟ ತಂದುಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಬೆಂಗಳೂರು ವಿಶ್ವವಿದ್ಯಾಲಯ ತಂಡವನ್ನು ಪ್ರತಿನಿಧಿಸಿದ್ದ ಅವರು ಕುದುರೆಮುಖ ಕಬ್ಬಿಣದ ಅದಿರು ಕಂಪನಿಯ ಉದ್ಯೋಗಿಯಾಗಿ 31 ವರ್ಷ ಕಾರ್ಯನಿರ್ವಹಿಸಿದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಟೆನಿಸ್: ಕ್ವಾರ್ಟರ್‌ಗೆ ರಿತಿಕಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿದ್ದಾಜಿದ್ದಿ ಪೈಪೋಟಿಯಲ್ಲಿ ರಿತಿಕಾ ರವಿ ಅವರು ನಾಲ್ಕನೇ ಶ್ರೇಯಾಂಕದ ತನು ವಿಶ್ವಾಸ್ ಅವರಿಗೆ ಸೋಲುಣಿಸಿ ಎಐಟಿಎ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಶ್ರೀನಾಥ್ ಅಕಾಡೆಮಿ ಟೆನಿಸ್ ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕಿಯರ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಮಂಗಳವಾರ ರಿತಿಕಾ ಅವರಿಗೆ 7-5, 4-6, 6-2ರಿಂದ ಗೆಲುವು ಒಲಿಯಿತು.

ಬಾಲಕಿಯರ ವಿಭಾಗದ ಇನ್ನುಳಿದ ಪ್ರೀಕ್ವಾರ್ಟರ್‌ಫೈನಲ್ ಹಣಾಹಣಿಗಳಲ್ಲಿ ಸಾನ್ವಿ ಮಿಶ್ರಾ 6-1, 6-2ರಿಂದ ಬಿ.ತೇಜಸ್ವಿ ವಿರುದ್ಧ, ಇಶಾ ಮೋಹಿತೆ 6-4, 6-3ರಿಂದ ಶ್ರಾವ್ಯಾ ನಂಬೂರಿ ಎದುರು, ಆದ್ಯಾ ಚೌರಾಸಿಯಾ 7-6 (4), 6-1ರಿಂದ ಎಲಿನ್ ಹರ್ಷಿಣಿ ಎದುರು, ದಿಶಾ ಕುಮಾರ್ 5-7, 7-6 (5), 6-2ರಿಂದ ಅಕ್ಷರಾ ಸೆಂಥಿಲ್ ವಿರುದ್ಧ ಗೆಲುವು ಸಾಧಿಸಿದರು. ಹೇಮಜಾ ರೆಡ್ಡಿ 6-0, 7-5ರಿಂದ ಪಿ. ಪ್ರಿಯಾ ವಿರುದ್ಧ, ಅರ್ಜಾನ್ ಕೊರಾಕಿವಾಲಾ 6-1, 6-0ರಿಂದ ಎಶಿತಾ ಶ್ರೀಯಾಲ ಅವರ ವಿರುದ್ಧ ಗೆದ್ದರು.

ಬಾಲಕರ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಮೀರ್ ಫಜಲ್ ಅಲಿ 6-0, 6-1ರಿಂದ ಆರುಷ್ ಮಲ್ಲಣ್ಣವರ್ ಎದುರು, ಅಖಿಲ್ ಅಯಾಜ್ 6-2, 6-3ರಿಂದ ಅನಿರುದ್ಧ ಪಳನಿಸ್ವಾಮಿ ವಿರುದ್ಧ, ಎಂ. ದಿಗಂತ್ 6-0, 6-1ರಿಂದ ಶ್ರೀರಾಮ್ ಕಿಶೋರ್ ವಿರುದ್ಧ, ವಿ.ಎಸ್. ರಘು 6-4, 6-3ರಿಂದ ಹೃದಯ್ ವಿವೇಕಾನಂದನ್ ಎದುರು ಗೆದ್ದರು.

ಅನಂತಕೃಷ್ಣನ್ 6-0, 6-2ರಿಂದ ಗಿರೀಶ್ ನಾರಾಯಣ್ ಎದುರು, ರಿತಿಕ್ ಜಯಂತ್ 6-2, 6-1ರಿಂದ ಪ್ರಣವ್ ರಾಜೇಶ್ ವಿರುದ್ಧ, ವಿಷ್ಣು ಮೋಹನ್ 7-6 (3), 7-6 (4)ರಿಂದ ಆರ್. ತೇಜಸ್ ವಿರುದ್ಧ, ಚೆನ್ನಮಲ್ಲಿಕಾರ್ಜುನ 6-3, 6-4ರಿಂದ ಸಕ್ಷಮ್ ಭನ್ಸಾಲಿ ವಿರುದ್ಧ ಜಯಿಸಿ ಎಂಟರಘಟ್ಟ ತಲುಪಿದರು.

ಕೋಲ್ಕತ್ತ ರೇಸ್

ಮೊಗಲ್ ಗೆಲ್ಲುವ ನಿರೀಕ್ಷೆ

ಕಿಂಗ್ಸ್ ಅಕಾಡೆಮಿ ಹ್ಯಾಂಡಿಕ್ಯಾಪ್ ಬುಧವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೊಗಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.45ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕ್ರಿಯೇಷನ್ ಆಫ್ ಗಾಡ್ 1, ಕೊಲೊಸಲ್ 2, ವಿಂಡ್ ಚೇಸರ್ 3
2ನೇ ರೇಸ್: ಮೊಗಲ್ 2, ಲೆಜೆಂಡರ್ ಸ್ಟ್ರೈಕರ್ 1, ಫೆನ್ಸಿಯಾ ಮಿಸ್ಟ್ 4
3ನೇ ರೇಸ್: ಜಿನ್ಸೊಕು 2, ಲೈಟ್ ಇನ್ ದಿ ಸ್ಕೈ 10, ಲೆಜೆಂಡರ್ ರಿಟರ್ನ್ಸ್ 6
4ನೇ ರೇಸ್: ಟ್ರೆಸ್ ಬೀನ್ 6, ಕ್ಯಾಸ್ಟಿಲ್ಲೊ 11, ಫಾರ್ ಎವರ್ಮೋರ್ 8
5ನೇ ರೇಸ್: ನಾಮಿಕಿ 3, ಈಸ್ಟ್ ಸೈಡ್ 1, ಕಾರ್ಮೊರಾಂಟ್ 8
6ನೇ ರೇಸ್: ಯುಫ್ರೆಟಸ್ 1, ಡಾರ್ನಿಶ್ 3, ಸಂತಾನ 4

ಉತ್ತಮ ಬೆಟ್: ಕ್ರಿಯೇಷನ್ ಆಫ್ ಗಾಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಗ್ರೀನ್, ಅಲೆಕ್ಸ್ ಅರ್ಧಶತಕ

ಲಾಹೋರ್ (ಪಿಟಿಐ/ಎಎಫ್‌ಪಿ): ಕ್ಯಾಮರೂನ್ ಗ್ರೀನ್ ಮತ್ತು ಅಲೆಕ್ಸ್ ಕ್ಯಾರಿ ಅವರ ಅಮೋಘ ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡವು ಇಲ್ಲಿ ನಡೆಯುತ್ತಿರುವ ಪಾಕಿಸ್ತಾನ ಎದುರಿನ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಪೇರಿಸಿದೆ.

ಗಡಾಫಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನದಾಟದಲ್ಲಿ ಗ್ರೀನ್ (79; 163ಎ) ಮತ್ತು ಅಲೆಕ್ಸ್ (67; 105ಎ) ತಾಳ್ಮೆಯಿಂದ ಆಡಿ ಅರ್ಧಶತಕ ಗಳಿಸಿದರು. ಆದರೆ ಚಹಾ ವಿರಾಮಕ್ಕೂ ಸ್ವಲ್ಪ ಹೊತ್ತು ಮುನ್ನ ಆಸ್ಟ್ರೇಲಿಯಾ ಆಲೌಟ್ ಆಯಿತು. ತಂಡವು 133.3 ಓವರ್‌ಗಳಲ್ಲಿ 391 ರನ್ ಗಳಿಸಿತು.

ಅದಕ್ಕುತ್ತರವಾಗಿ ಪಾಕಿಸ್ತಾನ ತಂಡವು ದಿನದಾಟದ ಕೊನೆಗೆ 39 ಓವರ್‌ಗಳಲ್ಲಿ 1 ವಿಕೆಟ್‌ಗೆ 90 ರನ್ ಗಳಿಸಿದೆ. ಅಬ್ದುಲ್ ಶಫೀಕ್ (ಬ್ಯಾಟಿಂಗ್ 45) ಮತ್ತು ಅಜರ್ ಅಲಿ (ಬ್ಯಾಟಿಂಗ್ 30) ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್ ಆಸ್ಟ್ರೇಲಿಯಾ (ಕ್ಯಾಮರೂನ್ ಗ್ರೀನ್ 79, ಅಲೆಕ್ಸ್ ಕ್ಯಾರಿ 67, ಶಾಹೀನ್ ಶಾಹ ಆಫ್ರಿದಿ 79ಕ್ಕೆ4, ನಸೀಮ್ ಶಾ 58ಕ್ಕೆ4), ಪಾಕಿಸ್ತಾನ: 39 ಓವರ್‌ಗಳಲ್ಲಿ 1 ವಿಕೆಟ್‌ಗೆ 90 (ಅಬ್ದುಲ್ ಶಫೀಕ್ 45, ಅಜರ್ ಅಲಿ ಔಟಾಗದೆ 30, ಪ್ಯಾಟ್ ಕಮಿನ್ಸ್ 27ಕ್ಕೆ1)

ಬ್ಯಾಡ್ಮಿಂಟನ್: ಸುಮಿತ್–ಅಶ್ವಿನಿ ಮುನ್ನಡೆ

ಬಾಸೆಲ್ (ಪಿಟಿಐ): ಭಾರತದ ಬಿ ಸಮಿತ್ ರೆಡ್ಡಿ ಮತ್ತು ಅಶ್ವಿನಿ ಪೊನ್ನಪ್ಪ ಜೋಡಿಯು ಮಂಗಳವಾರ ಆರಂಭವಾದ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಅರ್ಹತಾ ಟೂರ್ನಿಯ ಮಿಶ್ರ ಡಬಲ್ಸ್‌ನಲ್ಲಿ ಎರಡನೇ ಸುತ್ತಿಗೆ ಪ್ರವೇಶಿಸಿದರು.

ಮೊದಲ ಸುತ್ತಿನ ಪಂದ್ಯದಲ್ಲಿ ಭಾರತದ ಜೋಡಿಯು 18–21, 21–16, 21–17ರಿಂದ ಡೆನ್ಮಾರ್ಕಿನ ಮ್ಯಾಡ್ಸ್ ವೆಸ್ಟರ್‌ಗಾರ್ಡ್ ಮತ್ತು ನತಾಜಾ ಪಿ ಅಂತೋನಿಸೆನ್ ವಿರುದ್ಧ ಜಯಿಸಿತು.

ಆದರೆ, ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಸಾಯಿ ಉತ್ತೇಜಿತ ರಾವ್ ಚುಕ್ಕಾ ಅವರು ಜರ್ಮನಿಯ ಸೆಲಿನಾ ಹಬಶ್‌ಗೆ ವಾಕ್ ಓವರ್ ಕೊಟ್ಟರು.

ಅಶ್ವಿನಿ ಪೊನ್ನಪ್ಪ

ಭಾರತದ ಅಗ್ರಶ್ರೇಯಾಂಕದ ಆಟಗಾರರಾದ ಪಿ.ವಿ. ಸಿಂಧು, ಸೈನಾ ನೆಹ್ವಾಲ್ ಮತ್ತು ಕೆ ಶ್ರೀಕಾಂತ್ ಅವರು ಈ ಟೂರ್ನಿಯಲ್ಲಿ ಭಾಗವಹಿಸಿದ್ದಾರೆ.

ಲಕ್ಷ್ಯ ಸೇನ್ ಸ್ವಿಸ್ ಓಪನ್‌ನಲ್ಲಿ ಆಡುತ್ತಿಲ್ಲ. ಅವರು ವಿಶ್ರಾಂತಿ ಪಡೆದಿದ್ದಾರೆ.

ಭಾರತ ಫುಟ್‌ಬಾಲ್ ತಂಡದ 7 ಆಟಗಾರರಿಗೆ ವೀಸಾ ಸಮಸ್ಯೆ

ಮನಾಮಾ (ಪಿಟಿಐ): ಬುಧವಾರ ಬಹರೇನ್ ವಿರುದ್ಧ ಸ್ನೇಹಪರ ಪಂದ್ಯ ಆಡಲಿರುವ ಭಾರತ ತಂಡದ ಏಳು ಆಟಗಾರರು ವೀಸಾ ಸಿಗದೇ ಮುಂಬೈನಲ್ಲಿ ಉಳಿದಿದ್ದಾರೆ. ಇದರಿಂದಾಗಿ ಅವರು ಪಂದ್ಯದಲ್ಲಿ ಆಡುವ ಅವಕಾಶ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ.

ಭಾರತ ತಂಡದಲ್ಲಿ 25 ಆಟಗಾರರನ್ನು ಆಯ್ಕೆ ಮಾಡಲಾಗಿದೆ. ಸೋಮವಾರ ಕೋಚ್ ಇಗೋರ್ ಸ್ಟಿಮ್ಯಾಚ್ ಮತ್ತು 18 ಆಟಗಾರರು ಮನಾಮಾ ತಲುಪಿದರು. ವೀಸಾ ಸಮಸ್ಯೆಯಿಂದಾಗಿ ಗೋಲ್‌ಕೀಪರ್ ಅಮರಿಂದರ್ ಸಿಂಗ್, ಡಿಫೆಂಡರ್ ಚಿಂಗ್ಲೆನ್‌ಸೆನಾನಾ ಸಿಂಗ್, ಆಕಾಶ್ ಮಿಶ್ರಾ, ಮಿಡ್‌ಫೀಲ್ಡರ್ ಅನಿರುದ್ಧ ಥಾಪಾ, ಬ್ರೆಂಡನ್ ಫರ್ನಾಂಡಿಸ್, ಅನಿಕೇತ್ ಯಾದವ್ ಮತ್ತು ಬಿಪಿನ್ ಸಿಂಗ್ ತಮ್ಮ ಸಹ ಆಟಗಾರರೊಂದಿಗೆ ತೆರಳಲಿಲ್ಲ.

‘ಪ್ರಯಾಣದಲ್ಲಿ ತೊಂದರೆ ಅನುಭವಿಸಿದ್ದೇವೆ. ಏಳು ಆಟಗಾರರಿಗೆ ಇನ್ನೂವರೆಗೂ ವೀಸಾ ಸಿಕ್ಕಿಲ್ಲ. ಎರಡು ತಿಂಗಳ ಹಿಂದೆಯೇ ಅರ್ಜಿ ಸಲ್ಲಿಸಿದ್ದರೂ ಈ ಸಮಸ್ಯೆಯಾಗಿದೆ’ ಎಂದು ಕೋಚ್ ಸ್ಟಿಮ್ಯಾಚ್ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

‘ಮಂಗಳವಾರ ಆಟಗಾರರ ವೀಸಾ ಸಿದ್ಧಗೊಂಡಿವೆ. ಅವರೆಲ್ಲರೂ ಬುಧವಾರ ಪ್ರಯಾಣ ಮಾಡಲಿದ್ದಾರೆ’ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಮೂಲಗಳು ತಿಳಿಸಿವೆ.

ನೀರಜ್ ಚೋಪ್ರಾ ಯೂಟ್ಯೂಬ್ ಆರಂಭ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ ಅಥ್ಲೀಟ್ ನೀರಜ್ ಚೋಪ್ರಾ ಯೂಟ್ಯೂಬ್ ವಾಹಿನಿ ಆರಂಭವಾಗಿದೆ.

ಈ ವಾಹಿನಿಯಲ್ಲಿ ನೀರಜ್ ಅವರ ಕ್ರೀಡೆ ಮತ್ತು ಫಿಟ್‌ನೆಸ್ ಕುರಿತ ವಿಡಿಯೊಗಳು ಪ್ರಸಾರವಾಗಲಿವೆ. ಭಾನುವಾರ ಈ ವಾಹಿನಿಯನ್ನು ಆರಂಭಿಸಲಾಯಿತು.

‘ಜಾವೆಲಿನ್ ಥ್ರೋನಲ್ಲಿ ದಿಗ್ಗಜರಾಗಿರುವ ಅಂತರರಾಷ್ಟ್ರೀಯ ಅಥ್ಲೀಟ್‌ಗಳನ್ನು ಮೊದಲಿನಿಂದಲೂ ಯೂಟ್ಯೂಬ್‌ನಲ್ಲಿ ನೋಡಿದ್ದೇನೆ. ಅವರ ಆಟದ ತಂತ್ರಗಳನ್ನು ಕಲಿತಿದ್ದೇನೆ. ಅದರಿಂದಾಗಿ ವಾಹಿನಿ ಆರಂಭಿಸಲು ಸಂತಸವಾಗುತ್ತಿದೆ’ ಎಂದು ನೀರಜ್ ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಬರೆದಿದ್ದಾರೆ.

ಚೀನಾ ವಿಮಾನ ಪತನ: ಮುಂದುವರಿದ ಶೋಧ

ಬೀಜಿಂಗ್ (ಪಿಟಿಐ): ಚೀನಾದ ದಕ್ಷಿಣ ಭಾಗದ ಪರ್ವತ ಪ್ರದೇಶದಲ್ಲಿ ಸೋಮವಾರ ಪತನವಾದ ವಿಮಾನ ದಲ್ಲಿದ್ದ 132 ಪ್ರಯಾಣಿಕರಲ್ಲಿ ಯಾರೊಬ್ಬರೂ ಬದುಕುಳಿದಿರುವುದು ಗೊತ್ತಾಗಿಲ್ಲ. ಆದಾಗ್ಯೂ, ವಿಮಾನ ಪತನ ವಾದ ಸ್ಥಳದಲ್ಲಿ ಮಂಗಳವಾರವೂ ಶೋಧ ಕಾರ್ಯಾಚರಣೆ ಮುಂದುವರಿಯಿತು.

ಜತೆಗೆ ವಿಮಾನದ ಪತನದ ತನಿಖೆಗೆ ಸಹಕಾರಿಯಾಗುವ ಬ್ಲಾಕ್ ಬಾಕ್ಸ್ ಸಹ ಇನ್ನೂ ಪತ್ತೆಯಾಗಿಲ್ಲ. ವಿಮಾನ ಪತನವಾಗುತ್ತಿದ್ದಂತೆ ಸ್ಥಳಕ್ಕೆ ದೌಡಾಯಿಸಿದ ರಕ್ಷಣಾ ಸಿಬ್ಬಂದಿ, ಸೋಮವಾರ ರಾತ್ರಿಯಿಡೀ ಶೋಧ ಕಾರ್ಯಾಚರಣೆ ನಡೆಸಿದರು. ವಿಮಾನ ದುರಂತದ ತನಿಖೆಗೆ ಚೀನಾ ಈಸ್ಟರ್ನ್ ಏರ್‌ಲೈನ್ಸ್ ಜೊತೆ ಸಹಕರಿಸುವುದಾಗಿ ಬೋಯಿಂಗ್ ಸಂಸ್ಥೆ ತಿಳಿಸಿದೆ.

ದುರಂತದ ಹಿನ್ನೆಲೆಯಲ್ಲಿ ತನ್ನಲ್ಲಿರುವ ಎಲ್ಲಾ ಬೋಯಿಂಗ್ 737-800 ವಿಮಾನಗಳ ಹಾರಾಟವನ್ನು ಚೀನಾ ಈಸ್ಟರ್ನ್ ಏರ್‌ಲೈನ್ಸ್ ಸ್ಥಗಿತಗೊಳಿಸಿದೆ.

ಬಾಲಕಿಯರಿಗೆ ಶಿಕ್ಷಣ: ತಾಲಿಬಾನ್ ಸುಳಿವು

ಕಾಬೂಲ್ (ಎಪಿ): ಅಫ್ಗಾನಿಸ್ತಾನದಲ್ಲಿ ಈ ವಾರದಲ್ಲಿ ಎಲ್ಲಾ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಶಾಲೆಗಳನ್ನು ತೆರೆಯಲಾಗುವುದು ಎಂದು ತಾಲಿಬಾನ್ ನೇತೃತ್ವದ ಶಿಕ್ಷಣ ಸಚಿವಾಲಯ ಸೋಮವಾರ ಘೋಷಿಸಿದೆ.

ಈ ಮೂಲಕ ಇಲ್ಲಿಯ ಬಾಲಕಿಯರಿಗೆ ಶಾಲೆಗಳಿಗೆ ಮತ್ತೆ ಪ್ರವೇಶ ನೀಡುವ ಸುಳಿವು ದೊರೆತಿದೆ. ಕಳೆದ ವರ್ಷದ ಆಗಸ್ಟ್‌ನಲ್ಲಿ ಅಫ್ಗಾನಿಸ್ತಾನ ತಾಲಿಬಾನ್ ವಶವಾದ ನಂತರ ಹೆಣ್ಣು ಮಕ್ಕಳಿಗೆ 6ನೇ ತರಗತಿಗಿಂತ ಹೆಚ್ಚಿನ ಶಿಕ್ಷಣವನ್ನು ನಿರಾಕರಿಸಲಾಗಿತ್ತು.

‘ಬುಧವಾರದಿಂದ ತರಗತಿಗಳು ಆರಂಭವಾಗಲಿವೆ. ಶಿಕ್ಷಣ ಸಚಿವಾಲಯವು ಎಲ್ಲಾ ನಾಗರಿಕರ ಶಿಕ್ಷಣ ಹಕ್ಕಿಗೆ ಬದ್ಧವಾಗಿದೆ ಎಂದು ದೇಶಕ್ಕೆ ಭರವಸೆ ನೀಡುತ್ತದೆ’ ಎಂದು ಸಚಿವಾಲಯವು ತಿಳಿಸಿದೆ. ಆದರೆ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಪ್ರಕಟಣೆಯಲ್ಲಿ ಉಲ್ಲೇಖಿಸಿಲ್ಲ.

ಕೊಲಂಬೊದ ಪೆಟ್ರೋಲ್ ಬಂಕ್ ಒಂದರಲ್ಲಿ ಸೇನಾ ಸಿಬ್ಬಂದಿ ನಿಯೋಜನೆಗೊಂಡಿರುವುದು –ಎಎಫ್‌ಪಿ ಚಿತ್ರ

ಶ್ರೀಲಂಕಾ: ಬಂಕ್‌ಗಳಲ್ಲಿ ಸೇನೆ ನಿಯೋಜನೆ

ಕೊಲಂಬೊ (ಎಎಫ್‌ಪಿ): ಶ್ರೀಲಂಕಾದಲ್ಲಿ ಇಂಧನ ಕೊರತೆಯಿಂದ ಪೆಟ್ರೋಲ್ ಬಂಕ್‌ಗಳಲ್ಲಿ ಸರದಿ ಸಾಲು ಉದ್ದವಾಗುತ್ತಿದ್ದು, ದೊಂಬಿಗಳೂ ಆರಂಭವಾಗಿವೆ. ಇದನ್ನು ನಿಯಂತ್ರಿಸಲು ಬಂಕ್‌ಗಳಲ್ಲಿ ಸೇನಾ ಸಿಬ್ಬಂದಿ ನಿಯೋಜಿಸಲಾಗಿದೆ.

ಕಳೆದ ಏಳು ದಶಕಗಳಲ್ಲಿ ಕಂಡರಿಯದಂತಹ ಆರ್ಥಿಕ ಬಿಕ್ಕಟ್ಟನ್ನು ದೇಶ ಎದುರಿಸುತ್ತಿದ್ದು, ಪೆಟ್ರೋಲ್, ಡೀಸೆಲ್ ಜತೆಗೆ ಜತೆಗೆ ಅಡುಗೆ ಅನಿಲ, ಸೀಮೆ ಎಣ್ಣೆಗೂ ತೀವ್ರ ಅಭಾವ ಉಂಟಾಗಿದೆ. ‘ಸೋಮವಾರ ಕೊಲಂಬೊದಲ್ಲಿನ ಮುಖ್ಯ ಇಂಧನ ಪೂರೈಕೆ ಘಟಕಕ್ಕೇ ಪ್ರತಿಭಟನಾಕಾರರು ದಿಗ್ಬಂಧನ ವಿಧಿಸಿದ್ದರು. ಇನ್ನೊಂದು ಪ್ರಕರಣದಲ್ಲಿ ಬಂಕ್ ಒಂದರಲ್ಲಿ ಇಂಧನ ತುಂಬಿಸಲು ಸರದಿಯಲ್ಲಿ ನಿಂತಿದ್ದ ಸವಾರರೊಬ್ಬರನ್ನು ಕೊಲ್ಲಲಾಗಿತ್ತು. ಈ ಹಿನ್ನೆಲೆಯಲ್ಲಿ ಸೇನೆ ನಿಯೋಜಿಸಲು ನಿರ್ಧರಿಸಲಾಗಿದೆ’ ಎಂದು ಸರ್ಕಾರದ ವಕ್ತಾರ ರಮೇಶ್ ಪತಿರಾನ ತಿಳಿಸಿದರು.

ದೇಶದ ವಿದೇಶಿ ವಿನಿಯಮ ಕೊರತೆಯಿಂದಾಗಿ ಜನರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕುವಂತಾಗಿದ್ದು, ಪರೀಕ್ಷೆ ಬರೆಯುವ ಹಾಳೆ, ಶಾಯಿಯ ಕೊರತೆಯಾಗಿರುವುದರಿಂದ ಲಕ್ಷಾಂತರ ವಿದ್ಯಾರ್ಥಿಗಳ ಅವಧಿ ಪರೀಕ್ಷೆಯನ್ನೇ ರದ್ದುಪಡಿಸಲಾಗಿದೆ.

ಶ್ರೀಲಂಕಾದಲ್ಲಿ ಪ್ರವಾಸೋದ್ಯಮವೇ ಪ್ರಮುಖ ಆದಾಯದ ಮೂಲವಾಗಿದ್ದು, ಕೋವಿಡ್ ನಿಂದಾಗಿ ಪ್ರವಾಸೋದ್ಯಮ ಸಂಪೂರ್ಣ ನೆಲಕಚ್ಚಿದೆ. ವಿದೇಶಗಳಲ್ಲಿ ಕೆಲಸ ಮಾಡುವ ಲಂಕಾ ಪ್ರಜೆಗಳ ಪ್ರಮಾಣವೂ ಕಡಿಮೆಯಾಗಿದೆ.

ಮೂರು ಸ್ಪರ್ಧೆಗಳಲ್ಲಿ ಹುಬ್ಬಳ್ಳಿಯ ಪ್ಯಾರಾ ಕ್ರೀಡಾಪಟು ಭಾಗಿ

ಐಎಸ್‌ಎಫ್ ಕ್ರೀಡಾಕೂಟಕ್ಕೆ ಸಿದ್ಧಾರ್ಥ್

• ಪ್ರಮೋದ

ಹುಬ್ಬಳ್ಳಿ: ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಪ್ಯಾರಾ ಕ್ರೀಡಾಕೂಟಗಳಲ್ಲಿ ಹಲವು ಪದಕಗಳನ್ನು ಗೆದ್ದಿರುವ ಹುಬ್ಬಳ್ಳಿಯ ಸಿದ್ಧಾರ್ಥ್ ಬಳ್ಳಾರಿ ಈಗ 19ನೇ ಅಂತರರಾಷ್ಟ್ರೀಯ ಶಾಲಾ ಸ್ಪೋರ್ಟ್ಸ್ ಫೆಡರೇಷನ್ (ಐಎಸ್‌ಎಫ್) ಆಯೋಜಿಸಿರುವ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ಶಾಲಾ ಕ್ರೀಡಾಕೂಟಗಳಲ್ಲಿ ಪ್ಯಾರಾ ಸ್ಪರ್ಧಿಗಳಿಗೆ ಮೊದಲ ಬಾರಿಗೆ ಅವಕಾಶ ನೀಡಲಾಗಿದೆ. ಈ ಕ್ರೀಡಾಕೂಟ ಮೇ 14ರಿಂದ ಫ್ರಾನ್ಸ್‌ನಲ್ಲಿ ಆಯೋಜನೆಯಾಗಿದೆ. 18 ವರ್ಷದ ಒಳಗಿನ ಕ್ರೀಡಾಪಟುಗಳು ಈ ಟೂರ್ನಿಯಲ್ಲಿ ಪಾಲ್ಗೊಳ್ಳಲು ಅರ್ಹರು. ಸಿದ್ಧಾರ್ಥ್ ನಗರದ ಶಾಂತಿನಿಕೇತನ ಕಾಲೇಜಿನಲ್ಲಿ ಪ್ರಥಮ ಪಿಯುಸಿ ಓದುತ್ತಿದ್ದಾರೆ.

ಎರಡೂವರೆ ವರ್ಷಗಳ ಹಿಂದೆ ನಡೆದ ವಿದ್ಯುತ್ ಅವಘಡದಲ್ಲಿ ಸಿದ್ಧಾರ್ಥ್‌ಗೆ 11 ಸಾವಿರ ಕೆ.ವಿ. ವೋಲ್ಟೇಜ್‌ನ ವಿದ್ಯುತ್ ತಂತಿ ತಗುಲಿ ಹೊಟ್ಟೆಯ ಕೆಳಭಾಗವೆಲ್ಲ ಸುಟ್ಟು ಹೋಗಿತ್ತು. ತೊಡೆಯ ಭಾಗದ ಮಾಂಸ ಛಿದ್ರವಾಗಿತ್ತು. ಈಗಲೂ ಎಡಗೈ ಸ್ವಾಧೀನವಿಲ್ಲ. ಇದನ್ನೆಲ್ಲ ಸರಿಪಡಿಸಲು 26 ಬಾರಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಅವರ ದೇಹದಲ್ಲಿ 6,500ಕ್ಕೂ ಹೆಚ್ಚು ಹೊಲಿಗೆಗಳು ಇವೆ.

ಈ ಎಲ್ಲಾ ಸವಾಲುಗಳ ನಡುವೆ ಅರಳಿ ನಿಂತಿರುವ ಸಿದ್ಧಾರ್ಥ್ ಐಎಸ್‌ಎಫ್ ಕ್ರೀಡಾಕೂಟದಲ್ಲಿ 100 ಮೀಟರ್, 400 ಮೀ. ಮತ್ತು ಲಾಂಗ್‌ಜಂಪ್ ವಿಭಾಗದಲ್ಲಿ ದೇಶವನ್ನು ಪ್ರತಿನಿಧಿಸಲಿದ್ದಾರೆ. ತಂಡದ ಆಯ್ಕೆಗಾಗಿ ಭುವನೇಶ್ವರದಲ್ಲಿ ಈಚೆಗೆ ಭಾರತ ಸ್ಕೂಲ್ ಗೇಮ್ಸ್ ಫೆಡರೇಷನ್ (ಎಸ್‌ಜಿಎಫ್‌ಐ) ಆಯೋಜಿಸಿದ್ದ ಆಯ್ಕೆ ಟ್ರಯಲ್ಸ್‌ನಲ್ಲಿ ಅರ್ಹತೆ ಪಡೆದಿದ್ದಾರೆ.

ಸಿದ್ಧಾರ್ಥ್ ಬಳ್ಳಾರಿ

ಸಿದ್ಧಾರ್ಥ್ ಪ್ಯಾರಾ ಕ್ರೀಡೆಗಳಲ್ಲಿ ಪಾಲ್ಗೊಳ್ಳಲು ಆರಂಭಿಸಿ ಮೂರು ವರ್ಷಗಳಷ್ಟೇ ಕಳೆದಿವೆ. 2021ರಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 100 ಹಾಗೂ 200 ಮೀ. ಓಟದಲ್ಲಿ ಚಿನ್ನ ಜಯಿಸಿದ್ದರು. ಕಳೆದ ತಿಂಗಳು ಮೈಸೂರಿನಲ್ಲಿ ರಾಜ್ಯ ತಂಡದ ಆಯ್ಕೆಗೆ ನಡೆದ ಟ್ರಯಲ್ಸ್‌ನಲ್ಲಿ 100, 200 ಮೀ. ಓಟ ಹಾಗೂ ಲಾಂಗ್‌ಜಂಪ್‌ನಲ್ಲಿ ಚಿನ್ನದ ಪದಕಗಳನ್ನು ಗೆದ್ದುಕೊಂಡಿದ್ದರು.

ನನ್ನ ಜೀವನ ಸುಂದರವಾಗಿರುವಂತೆ ಮಾಡಲು ಅಪ್ಪ ಸಾಕಷ್ಟು ಶ್ರಮಿಸಿದ್ದಾರೆ. ವಿಶ್ವಮಟ್ಟದ ಸ್ಪರ್ಧೆಯಲ್ಲಿ ಪದಕ ಗೆದ್ದು ಅವರ ಆಸೆ ಈಡೇರಿಸುವೆ.
ಸಿದ್ಧಾರ್ಥ್ ಬಳ್ಳಾರಿ, ಕ್ರೀಡಾಪಟು

ಅಭ್ಯಾಸ ಆರಂಭಿಸಿದ ಹೊಸದರಲ್ಲಿ ಸಿದ್ಧಾರ್ಥ್ ಚೆನ್ನಾಗಿ ನಡೆದಾಡಿದರೆ ಸಾಕು ಎನ್ನುವ ಸ್ಥಿತಿಯಿತ್ತು. ಕಠಿಣ ಅಭ್ಯಾಸದಿಂದ ಎಲ್ಲರನ್ನೂ ಹಿಂದಿಕ್ಕಿ ಓಡುವುದನ್ನು ಕಲಿತಿದ್ದಾನೆ.
ಸಂತೋಷ ಹೊಸಮನಿ, ಕೋಚ್

ಮಗನ ಆಯ್ಕೆ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ ಸಿದ್ಧಾರ್ಥ್ ತಂದೆ ಮಂಜುನಾಥ ಬಳ್ಳಾರಿ ‘ವಿದ್ಯುತ್ ಅವಘಡವಾದಾಗ ಮಗ ಬದುಕುಳಿದರೆ ಸಾಕು ಎನ್ನುವ ಸ್ಥಿತಿಯಲ್ಲಿ ನಾವಿದ್ದೆವು. ಈಗ ಮರುಜನ್ಮ ಪಡೆದು ಶಾಲಾ ಕ್ರೀಡಾಕೂಟದಲ್ಲಿ ವಿಶ್ವಮಟ್ಟಕ್ಕೆ ಆಯ್ಕೆಯಾಗಿದ್ದು ಹೆಮ್ಮೆಯ ವಿಷಯ. ಇದಕ್ಕಿಂತ ದೊಡ್ಡ ಖುಷಿ ಬೇರೆ ಏನೂ ಇಲ್ಲ. ನನ್ನ ಶ್ರಮಕ್ಕೆ ಫಲ ತಂದುಕೊಡುತ್ತಿದ್ದಾನೆ’ ಎಂದು ಭಾವುಕರಾದರು.

ರಫೆಲ್ ನಡಾಲ್– ಎಎಫ್‌ಪಿ ಚಿತ್ರ

ಟೆನಿಸ್‌ನಿಂದ ಆರು ವಾರ ನಡಾಲ್ ದೂರ

ಮ್ಯಾಡ್ರಿಡ್ (ಎಎಫ್‌ಪಿ): ಪಕ್ಕೆಲುಬಿನಲ್ಲಿ ಉಂಟಾದ ನೋವಿನ ಹಿನ್ನೆಲೆಯಲ್ಲಿ ನಾಲ್ಕರಿಂದ ಆರು ವಾರಗಳ ಕಾಲ ಟೆನಿಸ್‌ನಿಂದ ದೂರ ಇರುವುದಾಗಿ ಸ್ಪೇನ್‌ನ ರಫೆಲ್ ನಡಾಲ್ ಹೇಳಿದ್ದಾರೆ.

‘ಇದು ಒಳ್ಳೆಯ ಸುದ್ದಿಯಲ್ಲ. ಇದನ್ನು ನಾನು ನಿರೀಕ್ಷಿಸಿರಲಿಲ್ಲ’ ಎಂದು ಮಂಗಳವಾರ ನಡಾಲ್ ಟ್ವೀಟ್ ಮಾಡಿದ್ದಾರೆ.

ಮೊಂಟೆ ಕಾರ್ಲೊ ಮತ್ತು ಬಾರ್ಸಿಲೋನಾ ಟೂರ್ನಿಗಳಿಂದ ಅವರು ಹೊರಗುಳಿಯಲಿದ್ದು, ಮೇ 1ರಿಂದ 8ರವರೆಗೆ ನಡೆಯಲಿರುವ ಮ್ಯಾಡ್ರಿಡ್ ಓಪನ್‌ಗೆ ಮರಳುವ ಸಾಧ್ಯತೆಯಿದೆ.

ಮೇ 22ರಿಂದ ಆರಂಭವಾಗುವ ಫ್ರೆಂಚ್ ಓಪನ್ ಟೂರ್ನಿಯ ಮೇಲೆ ನಡಾಲ್ ಕಣ್ಣಿಟ್ಟಿದ್ದಾರೆ.

ಅಪಹರಣಕ್ಕೆ ಪ್ರತಿರೋಧ: ಪಾಕಿಸ್ತಾನದಲ್ಲಿ ಹಿಂದೂ ಯುವತಿ ಹತ್ಯೆ

ಕರಾಚಿ (ಪಿಟಿಐ): ಅಪಹರಣಕ್ಕೆ ಪ್ರತಿರೋಧ ತೋರಿದ ಕಾರಣಕ್ಕೆ 18 ವರ್ಷದ ಹಿಂದೂ ಯುವತಿಯನ್ನು ಗುಂಡಿಟ್ಟು ಹತ್ಯೆ ಮಾಡಿರುವ ಘಟನೆ ಪಾಕಿಸ್ತಾನದ ದಕ್ಷಿಣ ಭಾಗದ ಸಿಂಧ್ ಪ್ರಾಂತ್ಯದಲ್ಲಿ ನಡೆದಿದೆ.

ಸೋಮವಾರ ಪೂಜಾ ಓದ್ ಎಂಬ ಯುವತಿಯನ್ನು ಅಪಹರಣ ಮಾಡಲು ಯತ್ನಿಸಲಾಗಿತ್ತು. ಆದರೆ ಯುವತಿ ಪೂಜಾ ಇದಕ್ಕೆ ಭಾರಿ ಪ್ರತಿರೋಧ ವ್ಯಕ್ತಪಡಿಸಿದ್ದರು. ಇದರಿಂದ ಸಿಟ್ಟಿಗೆದ್ದ ಅಪಹರಣಕಾರರು ಆಕೆಯ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿದ್ದಾರೆ ಎಂದು 'ದಿ ಫ್ರೈಡೇ ಟೈಮ್ಸ್' ಪತ್ರಿಕೆ ವರದಿ ಮಾಡಿದೆ. ಪಾಕಿಸ್ತಾನದಲ್ಲಿ ಪ್ರತಿ ವರ್ಷವೂ ಅಲ್ಪಸಂಖ್ಯಾತ ಸಮು ದಾಯಕ್ಕೆ (ಹಿಂದೂಗಳು) ಸೇರಿದ ಹಲವು ಮಹಿಳೆಯರನ್ನು ಅಪಹರಣ ಮಾಡಲಾಗುತ್ತದೆ. ಧಾರ್ಮಿಕ ಉಗ್ರಗಾಮಿಗಳು ಅವರನ್ನು ಬಲವಂತವಾಗಿ ಮತಾಂತರ ಮಾಡುತ್ತಾರೆ ಎಂದು ವರದಿಗಳು ತಿಳಿಸಿವೆ. ವಿಶೇಷವಾಗಿ ಸಿಂಧ್ ಪ್ರಾಂತ್ಯದಲ್ಲಿ ಹಿಂದೂ ಸಮುದಾಯಗಳ ಮೇಲೆ ಇಂಥ ಘಟನೆಗಳು ಹೆಚ್ಚಾಗಿ ನಡೆಯುತ್ತವೆ ಎಂದು ವರದಿಯಾಗಿದೆ.

2013-2019ರಲ್ಲಿ 156 ಬಲವಂತದ ಮತಾಂತರ ಪ್ರಕಣಗಳು ನಡೆದಿವೆ ಎಂದು ಪೀಪಲ್ಸ್ ಕಮಿಷನ್ ಫಾರ್ ಮೈನಾರಿಟೀಸ್ ರೈಟ್ಸ್ ಮತ್ತು ಸೆಂಟರ್ ಫಾರ್ ಸೋಷಿಯಲ್ ಜಸ್ಟಿಸ್ ಸಂಘಟನೆಗಳು ಹೇಳಿವೆ.

ಲಕ್ಷ್ಯ ಸೇನ್ ಅವರೊಂದಿಗೆ ತಾಯಿ ನಿರ್ಮಲಾ ಮತ್ತು ತಂದೆ, ಕೋಚ್ ಡಿ.ಕೆ. ಸೇನ್ –ಪ್ರಜಾವಾಣಿ ಚಿತ್ರ

ಮಗನ ತುಂಟತನ, ಸಾಧನೆ ಬಿಚ್ಚಿಟ್ಟ ತಾಯಿ ನಿರ್ಮಲಾ

ಲಕ್ಷ್ಯನ ಬದ್ಧತೆಗೆ ಒಲಿದ ಯಶಸ್ಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶಕ್ಕಾಗಿ ಮಗ ಪದಕ ಗೆದ್ದಿರುವ ಸಂತಸ ವ್ಯಕ್ತಪಡಿಸಲು ನನ್ನ ಬಳಿ ಪದಗಳ ಕೊರತೆ ಇದೆ. ಪ್ರತಿಭಾವಂತ ಮಗನ ಹೆಮ್ಮೆಯ ತಾಯಿಯಾಗಿರುವೆ ಎಂದಷ್ಟೇ ಹೇಳಬಲ್ಲೆ'–

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಜಯಿಸಿ ಬಂದ ಭಾರತದ ಲಕ್ಷ್ಯ ಸೇನ್ ಅವರ ತಾಯಿ ನಿರ್ಮಲಾ ನುಡಿಗಳಿವು. ಮಂಗಳವಾರ ಪ್ರಕಾಶ್ ಪಡುಕೋಣೆ ಮತ್ತು ರಾಹುಲ್ ದ್ರಾವಿಡ್ ಸ್ಪೋರ್ಟ್ಸ್ ಎಕ್ಸಲೆನ್ಸ್ ಸೆಂಟರ್‌ನಲ್ಲಿ ಮಾಧ್ಯಮ ಪ್ರತಿನಿಧಿಗಳ ಮುಂದೆ ಲಕ್ಷ್ಯ ತಮ್ಮ ಸಾಧನೆಯ ಹಾದಿಯನ್ನು ವಿವರಿಸುವಾಗ, ಅತಿಥಿಗಳ ಸಾಲಿನಲ್ಲಿ ಕುಳಿತಿದ್ದ ನಿರ್ಮಲಾ ಅವರ ಕಣ್ಣಾಲಿಗಳಲ್ಲಿ ಸಂತಸದ ಸೆಲೆ ನಿರಂತರವಾಗಿತ್ತು.

ಈ ಸಂದರ್ಭದಲ್ಲಿ 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು, 'ನಾನು ಇಂಗ್ಲೆಂಡ್‌ಗೆ ಹೋಗಿರಲಿಲ್ಲ. ಇನ್ನೊಬ್ಬ ಮಗನ (ಚಿರಾಗ್) ಜೊತೆಗೆ ನಾನು ಇಲ್ಲಿಯೇ ಇದ್ದೆ. ಸರ್ (ಡಿ.ಕೆ. ಸೇನ್) ಹೋಗಿದ್ದರು. ಲಕ್ಷ್ಯ ಸಾಧನೆಯ ಹಿಂದೆ ತಂದೆಯ ಯೋಗದಾನ ಬಹಳಷ್ಟಿದೆ. ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ ಕೋಚ್ ಆಗಿದ್ದವರು. ಲಕ್ಷ್ಯ ಮತ್ತು ಚಿರಾಗ್ ಪ್ರತಿಭೆಯನ್ನು ಗುರುತಿಸಿದವರು ಅವರೇ. ಲಕ್ಷ್ಯನಿಗೆ 10 ವರ್ಷವಿದ್ದಾಗಲೇ ಪ್ರಕಾಶ್ ಪಡುಕೋಣೆ ಅಕಾಡೆಮಿಗೆ ಕರೆದುಕೊಂಡು ಬಂದರು. ಲಕ್ಷ್ಯ ಜೀವನದ ದಿಕ್ಕು ಬದಲಾಯಿತು' ಎಂದರು.

'ಬಹುತೇಕ ಎಲ್ಲ ಮಕ್ಕಳಂತೆ ಲಕ್ಷ್ಯ ಕೂಡ ತುಂಟಾಟದಲ್ಲಿ ಮುಂದು. ನಾನು ಮಾಡಿದ ತಿನಿಸುಗಳೆಂದರೆ ಹೆಚ್ಚು ಪ್ರೀತಿ. ಆದರೆ ಬ್ಯಾಡ್ಮಿಂಟನ್ ತರಬೇತಿ ಆರಂಭವಾದಾಗಿನಿಂದ ಆಹಾರ ಪರಿಣತರು ನೀಡುವ ಮಾರ್ಗಸೂಚಿಯಂತೆಯೇ ಊಟೋಪಚಾರ ನಡೆಯತ್ತದೆ. ಅಪರೂಪಕ್ಕೊಮ್ಮೆ ಬಿಡುವಿದ್ದಾಗ ಮಾತ್ರ, ನಮ್ಮ ಸಾಂಪ್ರದಾಯಿಕ ತಿನಿಸುಗಳನ್ನು ಮಾಡಿಕೊಡುತ್ತೇನೆ. ಅಭ್ಯಾಸ, ಫಿಟ್‌ನೆಸ್, ಆಹಾರ ಪದ್ಧತಿಯಲ್ಲಿ ಯಾವತ್ತೂ ರಾಜೀ ಇಲ್ಲ. ಚಿಕ್ಕ ವಯಸ್ಸಿನಲ್ಲಿಯೇ ಲಕ್ಷ್ಯ ಇದೆಲ್ಲವನ್ನೂ ರೂಢಿಸಿಕೊಂಡು ಬೆಳೆದಿದ್ದರಿಂದ ಈಗ ಅದರ ಫಲ ಸಿಗುತ್ತಿದೆ' ಎಂದು ನಿರ್ಮಲಾ ತಮ್ಮ ಮಗನ ಬದ್ಧತೆ ಮತ್ತು ಶಿಸ್ತನ್ನು ವಿವರಿಸುತ್ತಾರೆ.

'ಅಪ್ಪನೇ ಮೊದಲ ಕೋಚ್': ಕಳೆದ ಆರು ತಿಂಗಳಲ್ಲಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಅಂಗಳದಲ್ಲಿ ಸುದ್ದಿ ಮಾಡುತ್ತಿರುವ ನವತರುಣ ಲಕ್ಷ್ಯಗೆ ಮೊದಲ ಕೋಚ್ ಅವರ ತಂದೆ ಡಿ.ಕೆ. ಸೇನ್ ಅವರೇ. ಅವರ ನಿರಂತರ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ಲಕ್ಷ್ಯ ಸಾಧನೆಯ ಹಿಂದಿನ ಶಕ್ತಿಯಾಗಿದೆ.

'ಟೂರ್ನಿಗಳ ನಡುವೆ ರಜೆ ಲಭಿಸಿದಾಗ ತಮ್ಮ ಮನೆಗಳಿಗೆ ತೆರಳುವ ಬಹಳಷ್ಟು ಕ್ರೀಡಾಪಟುಗಳು ಮತ್ತೆ ಟ್ರೇನಿಂಗ್‌ಗೆ ಮರಳುವಾಗ ದೇಹತೂಕ ಹೆಚ್ಚಿಸಿಕೊಂಡು ಬಂದಿರುವುದನ್ನು ನೋಡಿದ್ದೇನೆ. ಲಕ್ಷ್ಯ ಈ ಮಾತಿಗೆ ಅಪವಾದ. ಇಲ್ಲಿಂದ ತನ್ನ ತವರು ಉತ್ತರಾಖಂಡದ ಅಲ್ಮೋಡಾಕ್ಕೆ ಹೋಗಿ ರಜೆ ಕಳೆದು ಬಂದಾಗಲೂ ಫಿಟ್‌ನೆಸ್‌ನಲ್ಲಿ ವ್ಯತ್ಯಾಸವಿರುವುದಿಲ್ಲ. ಅಟದಲ್ಲೂ ಅದೇ ವೇಗ ಮತ್ತು ಸಾಮರ್ಥ್ಯ ಉಳಿಸಿಕೊಂಡಿರುತ್ತಾರೆ. ಇದಕ್ಕೆ ಕಾರಣ ಡಿ.ಕೆ. ಸೇನ್ ಮತ್ತು ನಿರ್ಮಲಾ ಅವರು' ಎಂದು ಅನುಭವಿ ಕೋಚ್ ವಿಮಲ್ ಕುಮಾರ್ ಹೇಳಿದರು.

ಪ್ರತಿಷ್ಠಿತವಾದ ಟೂರ್ನಿಯ ಇತಿಹಾಸದಲ್ಲಿ ಪುರುಷರ ಸಿಂಗಲ್ಸ್‌ನಲ್ಲಿ ಫೈನಲ್ ತಲುಪಿದ ಮೂರನೇ ಆಟಗಾರ 20 ವರ್ಷದ ಲಕ್ಷ್ಯ ಸೇನ್. ಈ ಹಿಂದೆ ಪ್ರಕಾಶ್ ಪಡುಕೋಣೆ ಮತ್ತು ಪುಲ್ಲೇಲಾ ಗೋಪಿಚಂದ್ ಚಾಂಪಿಯನ್ ಆಗಿದ್ದರು. ಈ ಸಲ ಅಂತಿಮ ಪಂದ್ಯದಲ್ಲಿ ಡೆನ್ಮಾರ್ಕಿನ ವಿಕ್ಟರ್ ಅಕ್ಸೆಲ್ಸನ್ ವಿರುದ್ಧ ಲಕ್ಷ್ಯ ನಿರಾಶೆ ಅನುಭವಿಸಿದ್ದರು.

'ಕೋವಿಡ್‌ನಿಂದಾಗಿ ಲಾಕ್‌ಡೌನ್ ಆದಾಗ ಫಿಟ್‌ನೆಸ್ ಸವಾಲಾಗಿತ್ತು. ಆದ್ದರಿಂದ ಮನೆಯೊಳಗೇ ವ್ಯಾಯಾಮ, ನೃತ್ಯ ಮಾಡುವುದನ್ನು ರೂಢಿಸಿಕೊಂಡೆವು. ನನ್ನ ಪತ್ನಿ ಯೋಗ ಟ್ರೇನರ್ ಕೂಡ ಹೌದು. ಯೋಗಾಸನ ಮತ್ತು ಧ್ಯಾನ ಹೇಳಿಕೊಡುತ್ತಿದ್ದರು. ಮನೆಯ ಪಡಸಾಲೆಯಲ್ಲಿ ನೆಟ್ ಕಟ್ಟಿದೆ. ಲಕ್ಷ್ಯ ಮತ್ತು ಚಿರಾಗ್ ಇಬ್ಬರೂ ಆಡುತ್ತಿದ್ದರು. ದೇಹ ಮತ್ತು ಮನಸ್ಸು ಉಲ್ಲಸಿತವಾಗಿಡಲು ಎಲ್ಲ ತಂತ್ರ ಅನುಸರಿಸಿದೆವು. ಲಕ್ಷ್ಯ ಸಾಧನೆಯ ಶ್ರೇಯವೆಲ್ಲವೂ ಪಿಪಿಬಿಎಗೆ ಸಲ್ಲಬೇಕು. ಆರ್ಥಿಕವಾಗಿ ನೆರವಾಗಿರುವ ಒಜಿಕ್ಯೂ (ಒಲಿಂಪಿಕ್ ಗೋಲ್ಡ್ ಕ್ವೆಸ್ಟ್)ಗೆ ಆಭಾರಿಯಾಗಿದ್ದೇವೆ' ಎಂದು ಡಿ.ಕೆ. ಸೇನ್ ಹೇಳಿದರು.

ಕೋಚ್ ವಿಮಲ್ ಮೆಚ್ಚುಗೆ



ವಿಮಲ್ ಕುಮಾರ್

ಚಿಕ್ಕ ವಯಸ್ಸಿನಲ್ಲಿಯೇ ಆಟವನ್ನು ಮತ್ತು ವಿದೇಶಗಳ ಅಗ್ರಶ್ರೇಯಾಂಕದ ಆಟಗಾರರನ್ನು ಎದುರಿಸುವ ತಂತ್ರಗಾರಿಕೆಯನ್ನು ರೂಢಿಸಿಕೊಂಡಿರುವುದು ನೋಡಿದರೆ ಸಂತಸವಾಗುತ್ತದೆ. ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಎದುರಾಳಿಯಿಂದ ಗೇಮ್‌ವೊಂದರಲ್ಲಿ ಏಳು ಅಂಕ ಹಿಂದಿದ್ದ ಒತ್ತಡದ ಸನ್ನಿವೇಶದಲ್ಲಿ ತಮ್ಮ ಆಕ್ರಮಣಕಾರಿ ಆಟವನ್ನು ಬದಲಿಸಿ ಕ್ರಾಸ್ ಶಾಟ್‌ಗಳನ್ನು ಪ್ರಯೋಗಿಸಿದ ರೀತಿ ಅಮೋಘವಾಗಿತ್ತು. ಇದು ಸುಲಭವಲ್ಲ ಎಂದು ಕೋಚ್ ವಿಮಲ್ ಕುಮಾರ್ ಹೇಳಿದರು.

ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಆಡಿದ್ದು ನನ್ನ ಆತ್ಮವಿಶ್ವಾಸ ಹೆಚ್ಚಿಸಿದೆ. ಅನುಭವಿ ಮತ್ತು ಅಗ್ರಶ್ರೇಯಾಂಕದ ಆಟಗಾರರನ್ನು ಎದುರಿಸುವ ಬಗೆಯನ್ನು ಕಲಿತೆ

ಲಕ್ಷ್ಯ ಸೇನ್ ಬ್ಯಾಡ್ಮಿಂಟನ್ ಆಟಗಾರ

ವಿಶ್ವ ರ‍್ಯಾಂಕಿಂಗ್: ಅಗ್ರ 10ರೊಳಗೆ ಲಕ್ಷ್ಯ

ನವದೆಹಲಿ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ರ‍್ಯಾಂಕಿಂಗ್‌ನಲ್ಲಿ ಅಗ್ರ 10ರೊಳಗಿನ ಪಟ್ಟಿಗೆ ಪ್ರವೇಶಿಸಿದ್ದಾರೆ. ಸಿಂಗಲ್ಸ್ ವಿಭಾಗದಲ್ಲಿ ಸದ್ಯ ಅವರು ಒಂಬತ್ತನೇ ಸ್ಥಾನಕ್ಕೇರಿದ್ದಾರೆ.

23 ವರ್ಷದ ಲಕ್ಷ್ಯ, ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಸುತ್ತಿಗೆ ತಲುಪಿದ್ದರು. ಸದ್ಯ ಅವರ ಬಳಿ 74,786 ರ‍್ಯಾಂಕಿಂಗ್ ಪಾಯಿಂಟ್‌ಗಳಿದ್ದು, ಹಾಲಿ ವಿಶ್ವ ಚಾಂಪಿಯನ್, ಸಿಂಗಪುರದ ಲೋಹ್ ಕೀನ್ ಯಿವ್ ಅವರನ್ನು ಮೀರಿ ಮುನ್ನಡೆದಿದ್ದಾರೆ. ಲಕ್ಷ್ಯ, ರ‍್ಯಾಂಕಿಂಗ್‌ನಲ್ಲಿ ಭಾರತೀಯರ ಪೈಕಿ ಮೊದಲ ಸ್ಥಾನದಲ್ಲಿರುವ ಆಟಗಾರ ಆಗಿದ್ದಾರೆ. ಈ ಹಾದಿಯಲ್ಲಿ ಅವರು ಕಿದಂಬಿ ಶ್ರೀಕಾಂತ್ (ವಿಶ್ವ ರ‍್ಯಾಂಕಿಂಗ್‌ನಲ್ಲಿ 12ನೇ ಸ್ಥಾನ) ಅವರನ್ನು ಹಿಂದಿಕ್ಕಿದ್ದಾರೆ.

ಮಹಿಳಾ ಡಬಲ್ಸ್ ಜೋಡಿ ತ್ರೀಶಾ ಜೋಲಿ– ಗಾಯತ್ರಿ ಗೋಪಿಚಂದ್ 12 ಸ್ಥಾನಗಳ ಬಡ್ತಿ ಪಡೆದಿದ್ದು, ಸದ್ಯ ಜೀವನಶ್ರೇಷ್ಠ 34ನೇ ಸ್ಥಾನದಲ್ಲಿದ್ದಾರೆ. ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಈ ಜೋಡಿಯು ಸೆಮಿಫೈನಲ್ ತಲುಪಿತ್ತು.